ಪ್ರೊ. ವೀರೇಂದ್ರ ಸಿಂಪಿ ಅವರ ಬದುಕು-ಬರಹ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ.
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಮಹಾನಂದಾ ಶಿವಶರಣಪ್ಪ

ಮಾರ್ಗದರ್ಶಕರು

ಡಾ. ಜಗನ್ನಾಥ ಹೆಬ್ಬಾಳೆ

ನಿರ್ದೇಶಕರು,

ಕ.ರಾ.ಶಿ. ಸಂಸ್ಥೆಯ

ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ ೫೮೩ ೨೭೬

ಜುಲೈ - ೨೦೦೬

ಪ್ರೊ. ವೀರೇಂದ್ರ ಸಿಂಪಿ ಅವರ ಬದುಕು-ಬರಹ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ,
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಮಹಾನಂದಾ ಶಿವಶರಣಪ್ಪ

ಮಾರ್ಗದರ್ಶಕರು

ಡಾ. ಜಗನ್ನಾಥ ಹೆಬ್ಬಾಳೆ

ನಿರ್ದೇಶಕರು,
ಕ.ರಾ.ಶಿ. ಸಂಸ್ಥೆಯ
ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ಜುಲೈ-೨೦೦೬

ಪ್ರಮಾಣ ಪತ್ರ

ಪ್ರೊ. ವೀರೇಂದ್ರ ಸಿಂಪಿ ಅವರ ಬದುಕು-ಬರಹ ಎಂಬ ನಿಬಂಧವನ್ನು ಡಾ. ಜಗನ್ನಾಥ ಹೆಬ್ಬಾಳೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಶಹಬಾದ
ದಿನಾಂಕ:೨೦/೭/೨೦೦೬

ಮಹಾನಂದಾ ಶಿವಶರಣಪ್ಪ
ಎಂ.ಫಿಲ್. ವಿದ್ಯಾರ್ಥಿನಿ
ಕ.ರಾ.ಶಿ.ಸಂಸ್ಥೆಯ
ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ

ಮಾರ್ಗದರ್ಶಕರ ಪ್ರಮಾಣ ಪತ್ರ

ಪ್ರೊ. ವೀರೇಂದ್ರ ಸಿಂಪಿ ಅವರ ಬದುಕು–ಬರಹ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಮಹಾನಂದಾ ಶಿವಶರಣಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಬೀದರ

ದಿನಾಂಕ: ೨೦/೭/೨೦೦೭

ಡಾ. ಜಗನ್ನಾಥ ಹೆಬ್ಬಾಳೆ

ನಿರ್ದೇಶಕರು,

ಕ.ರಾ.ಶಿ. ಸಂಸ್ಥೆಯ

ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ



ಪ್ರೊ. ವೀರೇಂದ್ರ ಸಿಂಪಿ

ಪರಿವಿಡಿ

ಪು. ಸಂ.

****

ಅಧ್ಯಾಯ–ಒಂದು

ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಕನ್ನಡ ಸಾಹಿತ್ಯವು ತುಂಬಾ ವಿಶಿಷ್ಟವಾದ ಸ್ಥಾನ ಹೊಂದಿದೆ. ಕನ್ನಡ ಸಾಹಿತ್ಯವು ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಯುಗದವರೆಗೂ ಹಲವಾರು ಪ್ರಕಾರ ಹಾಗೂ ವೈವಿಧ್ಯಗಳಲ್ಲಿ ಹೊರ ಹೊಮ್ಮಿರುವುದು ಕಂಡುಬರುತ್ತದೆ. ಅಂದಿನಿಂದ ಇಂದಿನವರೆಗೂ ಕನ್ನಡತನವನ್ನು ಉಳಿಸುವಲ್ಲಿ ಕನ್ನಡಕ್ಕೆ ನೀರೆರೆದು ಬೆಳೆಸಿದ ಮಹನೀಯರ ಸಂಖ್ಯೆ ಗಣನೀಯವಾದದ್ದು. ಹೊಸಗನ್ನಡ ಸಾಹಿತ್ಯವು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಿನೂತನ ಅಧ್ಯಾಯವನ್ನೇ ತೆರೆಯಿತು. ಈ ಹೊಸಗನ್ನಡ ಸಾಹಿತ್ಯವು ಆಂಗ್ಲ ಸಾಹಿತ್ಯದ ಸ್ಫೂರ್ತಿಯಿಂದ ತನ್ನದೇ ಆದ ಮಾರ್ಗದಲ್ಲಿ ಭೋರ್ಗರೆಯುತ್ತಾ ತನ್ನ ಪ್ರವಾಹ ಮುಂದುವರೆಸಿತು ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ರೆಂಬೆಕೊಂಬೆಗಳಿಗೆ ಹೊಸ ಚಿಗುರು ಅಂಕುರಿಸಲು ಆರಂಭಿಸಿದವು ಹೀಗಾಗಿ ಆಧುನಿಕ ಕನ್ನಡ ಸಾಹಿತ್ಯ ಯುಗವು ಕನ್ನಡ ಸಾಹಿತ್ಯದ ವಸಂತಕಾಲದ ಪರ್ವಕಾಲವೆನಿಸಿತು.

ಆಧುನಿಕ ಕನ್ನಡ ಸಾಹಿತ್ಯದ ಇಂದು ಒಂದು ಬೃಹದ್ವರವಾಗಿ ಬೆಳೆದುನಿಂತಿದೆ. ಒಂದೊಂದು ಸಾಹಿತ್ಯ ಪ್ರಕಾರವೂ ತನ್ನದೆ ಆದ ಬೆಳವಣಿಗೆಯನ್ನು ದಾಖಲಿಸಿದೆ. ಈ ಸಾಹಿತ್ಯದಲ್ಲಿ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಸಣ್ಣಕಥೆ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧ, ವಿಮರ್ಶೆ ಮಕ್ಕಳಸಾಹಿತ್ಯ, ಅನುವಾದ ಮುಂತಾದ ಪ್ರಕಾರಗಳು ಭರದಿಂದ ಸಾಗಲು ಆರಂಭವಾಯಿತು. ಈ ಸಂದರ್ಭದಲ್ಲಿ ಕಾವ್ಯ ಪ್ರಕಾರವು ಪ್ರಭಾವ ಪೂರ್ಣವಾಗಿ ಹೊರಹೊಮ್ಮಿ ಬಹು ಜನರನ್ನು ಆಕರ್ಷಿಸಿತು. ನಾಡುನುಡಿ, ದೇಶಪ್ರೇಮ, ಸ್ವತಂತ್ರ, ಸಮಾನತೆ, ನಿಸರ್ಗವರ್ಣನೆ, ಪ್ರೀತಿ–ಪ್ರೇಮ, ಸೌಹಾರ್ದತೆ, ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಾ ಕನ್ನಡ ಸಾಹಿತ್ಯ ಉತ್ತುಂಗ ಶಿಖರಕ್ಕೇರಿತು. ಇಂತಹ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಹಲವಾರು ಜನ ಕವಿ ಪುಂಗವರು ಲೇಖಕರು ಅನುಪಮ ಸೇವೆ ಸಲ್ಲಿಸಿ ಅವಿಸ್ಮರಣೀಯರಾಗಿದ್ದಾರೆ. ಅಂಥ ಮಹನೀಯರಲ್ಲಿ ಪ್ರೊ. ವೀರೇಂದ್ರ ಸಿಂಪಿ ಅವರು ಒಬ್ಬರು.

ವೃತ್ತಿಯಲ್ಲಿ ಇಂಗ್ಲೀಷ ಪ್ರಾಧ್ಯಾಪಕರಾಗಿ ಪ್ರವೃತ್ತಿಯಲ್ಲಿ ಕನ್ನಡ ಸಾಹಿತಿ, ಇವರು ಕನ್ನಡ ಸಾಹಿತ್ಯದ ಗಣಿಗೆ ಬೆಲೆಬಾಳುವ ಕೃತಿ, ಲೇಖನ, ಅಂಕಣಬರಹ, ಅನುವಾದ ಸಾಹಿತ್ಯ, ಜೀವನ ಚರಿತ್ರೆ, ವಿಚಾರ ಸಾಹಿತ್ಯ, ಲಲಿತ ಪ್ರಬಂಧ ಅಂಕಣಬರಹ ಕ್ಷೇತ್ರಕ್ಕೆ ಇವರ ಕೊಡುಗೆ ಅಪೂರ್ವವಾದದ್ದು ಈ ಸಾಹಿತ್ಯವು ಬಹುಬೇಗ ಜನರ ಮನ ತಲುಪುವಲ್ಲಿ ಅವರು ಹೊರತಂದ ಲಲಿತ ಪ್ರಬಂಧಗಳೇ ಸಾಕ್ಷಿಯಾಗಿವೆ.

ಪ್ರೊ. ವೀರೇಂದ್ರ ಸಿಂಪಿ ಅವರು ಸಾಹಿತ್ಯ ಕ್ಷೇತ್ರದಲ್ಲಿ ಪಾದರ್ಪಣೆ ಮಾಡಿದ್ದು "ಸಂಗಮ" ಕೈಬರಹ ಪತ್ರಿಕೆಯಲ್ಲಿ ಪ್ರಕಟಿಸಿದ "ಖೊಟ್ಟಿ ನಾಣ್ಯ" ೧೯೫೫ ಎಂಬ ಕಥೆಯ ಮೂಲಕ ಸಾಹಿತ್ಯ ವಿವಿಧ ಪ್ರಕಾರದಲ್ಲಿ ತಮ್ಮ ಪ್ರತಿಭೆ ಹೊರ ಹೊಮ್ಮಿಸಿದ್ದು ಕಂಡು ಬರುತ್ತದೆ. ಸೂಕ್ಷ್ಮ ಸಂವೇದನೆಯ ವಿಮರ್ಶಕರಾಗಿ. ಸಹೃದಯರ ಮನಸೂರೆಗೊಳ್ಳುವ ವಿಚಾರವಾದಿಯಾಗಿ, ಮುದ್ದಿನ ಮಕ್ಕಳ ಸಾಹಿತಿಯಾಗಿ ಪ್ರತಿಭಾಶಾಲಿ ಅನುವಾದಕರಾಗಿ ಪ್ರಜ್ಞಾಶೀಲ ಸಂಪಾದಕರಾಗಿ ಪರಿಣಾಮಕಾರಿ ಅಂಕಣಬರಹಗಾರರಾಗಿ, ಹಾಗೂ ಲಲಿತ ಪ್ರಬಂಧಕರಾಗಿ ಕನ್ನಡ ಸಾಹಿತ್ಯಕ್ಕೆ ಅಪೂರ್ವ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರ ಪ್ರತಿಭೆ ಹಾಗೂ ಅಮೂಲ್ಯ ಸೇವೆಗಾಗಿ ಅರಸಿಬಂದ ಪ್ರಶಸ್ತಿ ಸನ್ಮಾನಗಳು ಸಹ ಅಪಾರ

[illegible]

ಪ್ರೊ. ವಿ. ಸಿ. ಅವರನ್ನು ಬರಹಗಾರ, ವಿಮರ್ಶಕ, ವಿಚಾರವಾದಿ, ಅಂಕಣಕಾರ, ಎನ್ನುವುದಕ್ಕಿಂತಲ್ಲೂ ಒಬ್ಬ ಲಲಿತ ಪ್ರಬಂಧಕರಾಗಿ ಕಂಡುಬರುತ್ತಾರೆ. ಹೀಗಾಗಿ ಇಂತಹ ಅದ್ಭುತ ವ್ಯಕ್ತಿಯ ಬದುಕು ಹಾಗೂ ಬರಹದ ಕುರಿತಾಗಿ ಬೆಳಕು ಚೆಲ್ಲುವುದು ಪ್ರಸ್ತುತ ಕಿರು ಪ್ರಬಂಧಧ (ಎಂ. ಫಿಲ್. ಅಧ್ಯಯನದ) ಉದ್ದೇಶವಾಗಿದೆ. ಒಬ್ಬ ಲೇಖಕ ಅಥವಾ ಬರಹಗಾರನ ಬಗ್ಗೆ ಸಂಶೋಧನೆ ಕೈಗೊಳ್ಳುವಾಗ ಆ ವ್ಯಕ್ತಿಯ ಬರಹದಷ್ಟು ಬದುಕೂ ಸಹ ಮಹತ್ವದ್ದಾಗಿರುತ್ತದೆ. ಅವರು ಸಾಧನೆಯ ಉತ್ತುಂಗ ಶಿಖರಕ್ಕೇರಿ ನಿಂತಾಗ ಆ ಶಿಖರಾರೋಹಣದ ಪ್ರತಿ ಹೆಜ್ಜೆ, ಪ್ರತಿ ಮೆಟ್ಟಿಲೂ ಸಹ ಮುಖ್ಯವಾಗಿರುತ್ತದೆ. ಆದ್ದರಿಂದ ಆ ಪ್ರತಿ ಬೆಳವಣಿಗೆಯ ಅಧ್ಯಯನ ಮಹತ್ವಪೂರ್ಣವಾದದ್ದು.

ಇವರ ಲಲಿತ ಪ್ರಬಂಧ ಹಾಗೂ ಅಂಕಣ ಬರಹ ಸಾಹಿತ್ಯವು ಇನ್ನುಳಿದವರ ಸಾಹಿತ್ಯಕ್ಕಿಂತ ವಿಭಿನ್ನ ದೃಷ್ಟಿಕೋನದಿಂದ ಅಧ್ಯಯನ ಮಾಡುವ ಅನಿವಾರ್ಯವಿದೆ. ಕನ್ನಡ ಸಾಹಿತ್ಯದಲ್ಲಿ ಅವರು ಸಾಧಿಸಿದ ಸಾಹಿತ್ಯಿಕ ಸಾಧನೆ ಶ್ಲಾಘನೀಯವಾದದ್ದು. ಇದು ಉತ್ಪ್ರೇಕ್ಷೆ ಅಥವಾ ಹೊಗಳಿಕೆಯಲ್ಲ ಇದಕ್ಕೆ ಅವರ ಬರಹಗಳೇ ಇದು ಜೀವಂತ ಸಾಕ್ಷಿಯಾಗಿವೆ.

ಪ್ರೊ. ವೀರೇಂದ್ರ ಸಿಂಪಿ ಅವರು ಸಾಹಿತ್ಯ ದೃಷ್ಟಿಯಲ್ಲಿ ವಿಶಿಷ್ಟತೆ ಮರೆದಿದ್ದಾರೆ. ಅವರ ಲಲಿತ ಪ್ರಬಂಧಗಳು ಹಾಗೂ ಅಂಕಣಬರಹವು ವಿಶೇಷ ಪದಗಳ ಕಸಿಗೊಳಿಸಿದ ಜೋಡಣೆಯಿಂದ ಅವರ ಪ್ರತಿಭೆಯನ್ನು ಹೊರ ಚೆಲ್ಲುತ್ತದೆ. ಅವರ ಸುದೀರ್ಘವಾದ ಸಾಹಿತ್ಯವನ್ನು ವೈವಿಧ್ಯಮಯವಾಗಿ ವಿಂಗಡಿಸಿ ಸೂಕ್ಷ್ಮ ದೃಷ್ಟಿಯ ಅಧ್ಯಯನಕ್ಕೊಳಪಡಿಸುವುದು ಅನಿವಾರ್ಯವಾಗಿದೆ. ಹಾಗೇಯೆ ಅವರ ಲಲಿತ ಪ್ರಬಂಧ ಸಾಹಿತ್ಯ ಅಂಕಣಬರಹ, ಸಂಪಾದನೆ ಮುಂತಾದ ಕ್ಷೇತ್ರಗಳನ್ನು ವಿವಿಧ ಆಕಾರಗಳಿಂದ ಸಂಗ್ರಹಿಸಿ ಸಂಶೋದನೆಗೊಳಪಡಿಸಿ ನಿಷ್ಪಕ್ಷವಾದ ಪ್ರಾಮಾಣಿಕವಾದ ಬೆಳಕು ಚೆಲ್ಲುವ ಪ್ರಯತ್ನ ಪ್ರಸ್ತುತ ಪ್ರಬಂಧದಲ್ಲಿ ಮಾಡಲಾಗಿದೆ. ಹಾಗೂ ವೀರೇಂದ್ರ ಸಿಂಪಿ ಅವರ ಪ್ರಕಟಿತ ಅಪ್ರಕಟಿತ ಲೇಖನ, ಕೃತಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಪ್ರಬಂಧ ಸಾಹಿತ್ಯ ಕುರಿತ ಲೇಖನವಂತೂ ಒಂದು ಸಾಹಿತ್ಯ ಚರಿತ್ರೆಯೇ ಆಗಿದೆ. "ಲಲಿತ ಪ್ರಬಂಧ" "ಅಂಕಣ ಬರಹಗಳು" ಕನ್ನಡದ ಒಂದು ಪ್ರಮುಖ ಸಾಹಿತ್ಯ ಪ್ರಕಾರಗಳೆಂದು ನಿರೂಪಿಸುವುದರ ಜೊತೆಗೆ ಅವುಗಳ ಮಹತ್ವವನ್ನು ಗುರುತಿಸುವುದು ಅಧ್ಯಯನದ ಪ್ರಮುಖ ಉದ್ದೇಶಗಳೊಂದು. ಅಲ್ಲದೆ ನಗರೀಕರಣ, ಆಧುನಿಕರಣದ ಸಂದರ್ಭಗಳ ಮಟ್ಟಿಗೂ ಅಧ್ಯಾಯನದ ಪ್ರಸ್ತುತತೆಯನ್ನು ಪರಾಮರ್ಶಿಸಲಾಗುವುದು. (ವೀ.ಸಿ.) ಅವರ ಸಾಹಿತ್ಯ ಪ್ರಕಾರಗಳ ಹಿಂದಿರುವ ಒಟ್ಟು ದರ್ಶವನ್ನು ದಿಗ್ದರ್ಶಿಸುವುದು ಪ್ರಾದೇಶಿಕವಾಗಿ ಇವರ ಸಾಹಿತ್ಯ ಹೇಗೆ ಭಿನ್ನ ಮತ್ತು ಶ್ರೇಷ್ಠ ಎಂಬುದನ್ನು ಪರಿಶೀಲಿಸುವುದು, ಪ್ರೊ. ವೀರೇಂದ್ರ ಸಿಂಪಿಯವರು ಜನಪದ ಜೀವನಕ್ಕೆ ಪ್ರವೇಸಿಸಿದ ಜೀವಸತ್ವದ ಸೆಲೆಯನ್ನು ಗುರುತಿಸುವುದು ಈ ಅಂಶಗಳನ್ನು ಪೂರೈಸುವ ನಿಟ್ಟಿನಲ್ಲಿ ಇಡಿಯಾಗಿ ಪ್ರಬಂಧದ ಸೌದವನ್ನು ಕಟ್ಟಲಾಗಿದೆ.

ಆ ಹಿನ್ನಲೆಯಲ್ಲಿ ಪ್ರೊ. ವಿ. ಸಿ. ಅವರ ಜೀವನದ ಹಂತ ಹಂತಗಳ ವಿವರಗಳ ಮಾಹಿತಿ ಸಂಗ್ರಹ ಹಾಗೂ ಅದನ್ನು ಪ್ರಕಟಪಡಿಸಿದಾಗ ಮಾತ್ರ ಆ ವ್ಯಕ್ತಿಯ ಕುರಿತಾಗಿ ಮಾಡಿದ ಸಂಶೋಧನೆ ಅರ್ಥಪೂರ್ಣವಾಗುತ್ತದೆ. ಈ ದೃಷ್ಟಿಯಿಂದ ಪ್ರೊ. ವೀರೇಂದ್ರ ಸಿಂಪಿ ಅವರ ಮನೆತನ, ಜನನ, ಬಾಲ್ಯ, ಶಿಕ್ಷಣ, ಉದ್ಯೋಗ, ಸಾಹಿತಿಕ ಪ್ರಭಾವ, ಪ್ರೇರಣೆ, ಕೌಟುಂಬಿಕ ಜೀವನ, ಅರಿಯುವುದು

ಮುಖ್ಯವಾಗಿರುತ್ತದೆ. ಕವಿಯ ಬದುಕಿನ ಕುರಿತಾದ ವೃತ್ತಾಂತ ಸಿಂಹಾವಲೋಕನ ಕ್ರಮದಿಂದ ಅಧ್ಯಯನ ಮಾಡುತ್ತಾ ಪ್ರಸ್ತುತ ಕಿರು ಪ್ರಬಂಧ ಮುಂದುವರಿಯುತ್ತದೆ.

ಲೇಖಕರ ಇನ್ನೊಂದು ಮಹತ್ವದ ಭಾಗ ಆ ವ್ಯಕ್ತಿಯ ಬದುಕು ಹಾಗೂ ಬರಹಗಳು ಅವರ ದೇಹ ಮತ್ತು ಜೀವನಕ್ಕಿರುವ ಸಂಬಂಧದಂತೆ ಒಂದು ಬಿಟ್ಟು ಇನ್ನೊಂದಿಲ್ಲ ಎಂಬತೆ ಬದುಕು ಬರಹ ಒಂದು ನಾಣ್ಯದ ಎರಡು ಮುಖಗಳಿದಂತೆ ಇವೆರಡು ಅವಿನಾಭಾವ ಸಂಬಂಧವನ್ನು ಹೊಂದಿರುತ್ತದೆ. ಹೀಗಾಗಿ ಕನ್ನಡದ ಹೆಮ್ಮೆಯ ಲೇಖಕರಾಗಿರುವ ಪ್ರೊ. ವೀರೇಂದ್ರ ಸಿಂಪಿ ಅವರ ಬದುಕು ಬರಹಗಳೆರಡನ್ನು ಸಂಶೋಧನೆಗೊಳಪಡಿಸುವುದು ಅತ್ಯಂತ ಮಹತ್ವದ್ದಾಗಿದೆ. ಅವರು ಸಾಹಿತ್ಯ ಕ್ಷೇತ್ರದಲ್ಲಿ ಬರೆಯಲು ಪ್ರಾರಂಭಿಸಿದಾಗಿನಿಂದ ಪ್ರಸ್ತುತ ಸಂದರ್ಭದವರೆಗೂ ಅವರ ಲೇಖನಿ ವೈವಿಧ್ಯಮಯ ಸಾಹಿತ್ಯ ಕ್ಷೇತ್ರದಲ್ಲಿ ವಿಹರಿಸಿದ ಬಗ್ಗೆ ವಿವರಿಸುವ ಅಗತ್ಯವಿದೆ. ಅವರ ಬರಹಗಳನ್ನು ವಿಶಿಷ್ಟ ದೃಷ್ಟಿಕೋನಗಳಿಂದ ಅಧ್ಯಯನಕೊಳ್ಳಪಡಿಸಿ ವಿಮರ್ಶಾತ್ಮಕವಾಗಿ ವಿಶ್ಲೇಷಿಸುತ್ತಾ ಕಿರು ಪ್ರಬಂಧ ಮುಂದಕ್ಕೆ ಸಾಗುತ್ತದೆ.

ಪ್ರೊ. ವೀರೇಂದ್ರ ಸಿಂಪಿ ಅವರ ಸಾಹಿತ್ಯಕ್ಷೇತ್ರ ಬಹಳ ವಿಶಲವಾದ ವ್ಯಾಪ್ತಿಯುಳ್ಳದ್ದು. ಅವರ ಭಾಷೆಯ ಬಗೆಗೆ ವಿಶೇಷ ಗಮನ ಹರಿಸುವ ಅವಶ್ಯಕತೆಯಿದೆ. ದೇಶಿತನದ, ಉತ್ತರ ಕರ್ನಾಟಕದ ಆಡು ಮಾತಿನ ಸಮರ್ಥ ಬಳಕೆಯನ್ನು ಅವರು ಮಾಡಿದ್ದಾರೆ.

ಅಧ್ಯಾಯ-ಎರಡು

ಪ್ರೊ. ವೀರೇಂದ್ರ ಸಿಂಪಿಯವರ ಜೀವನ ಮತ್ತು ಸಾಧನೆ

ಪ್ರೊ. ವೀರೇಂದ್ರ ಸಿಂಪಿ ಅವರ ಜೀವನ ಮತ್ತು ಸಾಧನೆ

ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಸಾಹಿತ್ಯ ಲೋಕಕ್ಕೆ ಜಗನ್ಮಾನ್ಯತೆ ದೊರಕಿಸಿಕೊಟ್ಟ ಕವಿಗಳು ಹಲವರು ಅಂಥವರಲ್ಲಿ ಕನ್ನಡ ನಾಡು ನುಡಿ ಸಂಸ್ಕೃತಿಗಳಿಗೆ ಹಾಗೂ ಸಾಹಿತ್ಯದ ಏಳ್ಗೆಗಾಗಿ ಅವಿರತವಾಗಿ ಶ್ರಮಿಸಿ ಖ್ಯಾತಿಗೆ ಮಿತ್ರರಾದವರಲ್ಲಿ ಪ್ರೊ. ವೀರೇಂದ್ರ ಸಿಂಪಿ ಅವರು ಒಬ್ಬರು. ಅವರು ಕೇವಲ ಸಾಹಿತ್ಯ ಸೃಷ್ಟಿಯಲ್ಲಿ ತೊಡಗದೆ ಒಳ್ಳೆಯ ಅಧ್ಯಾಪಕರಾಗಿ ಜವಾಬ್ದಾರಿಯುತ ಪ್ರಜೆಯಾಗಿ, ಸಾಹಿತ್ಯೇತರ ಚಟುವಟಿಕೆಗಳಲ್ಲಿ ತೊಡಗಿ ಸಮಾಜದ ಏಳ್ಗೆಗಾಗಿ ದುಡಿದ ಕಟ್ಟಾಳು. ಅವರ ಆದರ್ಶ ಚರಿತ್ರೆ ಓದುತ್ತಾ ಹೋದಂತೆ ಬದುಕಿನ ಒಂದೊಂದು ಅಧ್ಯಾಯಗಳು ತೆರೆಯುತ್ತಾ ಸಾಗುತ್ತವೆ.

ಒಬ್ಬ ಖ್ಯಾತ ಬರಹಗಾರನ ಕುರಿತಾಗಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಆ ಸಾಹಿತ್ಯಕಾರನ ಬದುಕಿನ ಬಗ್ಗೆ ಅರಿತುಕೊಳ್ಳುವುದು ಮಹತ್ವದ ಸಂಗತಿಯಾಗಿದೆ ಅದರಲ್ಲೂ ಪ್ರೊ. ವೀರೇಂದ್ರ ಸಿಂಪಿ ಅವರಂತ ಜನಪ್ರಿಯ ವ್ಯಕ್ತಿಯ ಕುರಿತಾಗಿ ಅಭ್ಯಾಸ ಮಾಡುವಾಗ ಅವರ ಜೀವನದ ಪದರು ಪದರುಗಳ ಕುರಿತು ವಿವರಿಸುವುದು ಅನಿವಾರ್ಯವಾಗಿದೆ. ಅವರ ಮನೆತನ, ಬೆಳೆದ ಪರಿಸರ, ಬಾಲ್ಯ ಶಿಕ್ಷಣ, ಉದ್ಯೋಗ ಸಾಹಿತ್ಯಿಕ ಪರಿಸರ, ಕೌಟುಂಬಿಕ ಜೀವನ, ಸಂದ ಗೌರವಗಳು ಮುಂತಾದ ವಿಷಯಗಳನ್ನು ಅರಿತುಕೊಳ್ಳುವುದು ಆ ವಿಷಯಗಳನ್ನು ಗ್ರಹಿಸುತ್ತಾ ಬರವಣಿಗೆಯ ಮೇಲೆ ಬೆಳಕು ಬೀರುವುದು ಸಮಂಜಸವಾಗುತ್ತದೆ. ಸಮಾಜದ ಬಗೆಗೆ ಟೀಕಿಸುವ ವಿಮರ್ಶಿಸುವ ಮನಸ್ಸುಗಳು ಬೇರಾದಷ್ಟು ಇವೆ. ಅಂತಹ ಚಿಂತನಾಪರ ಮನಸ್ಸು ಪ್ರತಿಭೆ, ಚೇತನ ವ್ಯಕ್ತಿ ಪ್ರೊ. ವೀರೇಂದ್ರ, ಸಿಂಪಿ ಅವರು ಇವರು ಲಲಿತ ಪ್ರಬಂಧ, ಅಂಕಣಬರಹ, ವೈಚಾರಿಕ ಸಾಹಿತ್ಯ, ಜೀವನ ಚರಿತ್ರೆ ಸಂಪಾದನೆ, ಅನುವಾದ, ವಚನ ಸಾಹಿತ್ಯ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿ ರಚಿಸಿ ಅವುಗಳ ವೈಚಾರಿಕ ಅಧ್ಯಯನದ ಶಿಸ್ತಿಗೆ ಅಳವಡಿಸಿದ ರೀತಿ ಅತ್ಯುತ್ತಮ.

ಮನೆತನ

ಪ್ರೊ. ವೀರೇಂದ್ರ ಸಿಂಪಿಯವರ ಹುಟ್ಟೂರು ಬಿಜಾಪುರ ಜಿಲ್ಲೆಯ ಇಂಡಿ ತಾಲುಕನ ಚಡಚಣ. ವಿಜಾಪುರ ಜಿಲ್ಲೆಯು ನೇಕಾರಿಕೆಯ ಊರು ಬಣ್ಣಗಾರರ ಊರು ಎಂದು ಹೇಳಬಹುದು. ಜಾನಪದ ಕಲೆಯ ಜೀವಂತಿಕೆಯನ್ನು ಈ ಗ್ರಾಮದಲ್ಲಿ ನಾವು ಕಾಣುತ್ತೇವೆ. ಮಹಾರಾಷ್ಟ್ರದ ಗಡಿ ಭಾಗದಲ್ಲಿರುವ ಚಡಚಣ ಗ್ರಾಮವು ಪ್ರಕೃತಿಯ ಮಡಿಲಲ್ಲಿ ಕಂಗೊಳಿಸುತ್ತದೆ. ಅದಕ್ಕೆ ಅಲ್ಲಿ ಹರಿಯುವ ಹಳ್ಳವು ಗ್ರಾಮಕ್ಕೆ ಇನಷ್ಟು ಮೆರಗನುಂಟುಮಾಡಿದೆ. ಇವರದು ಕಲಾವಿದರ ಮನೆತನ ಕುಟುಂಬದವರೆಲ್ಲರು ಬಣ್ಣಗಾರಿಕೆ ವೃತ್ತಿಯನ್ನು ಅವಲಂಬಿಸಿದ್ದರು. ಬಣ್ಣಗಾರಿಕೆ ಎಂದರೆ ನೂಲಿಗೆ ಬಣ್ಣ ಹಾಕುವುದು ಇವರ ಕಾಯಕವಾಗಿತ್ತು ಪೂರ್ವಜರೆಲ್ಲರು ಜನಪದ ಕಲೆಗಳಲ್ಲಿ ಆಸಕ್ತರಾದವರಾಗಿದ್ದರು. ಬಡತನದಲ್ಲಿಯೆ ಬೆಳಕನ್ನು ಕಂಡವರು ಪರಿಪೂರ್ಣ ಜೀವನವನ್ನು ನಡೆಸುತ್ತಿದ್ದರು.

ಬಾಲ್ಯ

ತಂದೆ ಲಿಂಗಣ್ಣಾ ಸಿಂಪಿ ತಾಯಿ ಸೊಲಬವ್ವ ಬಹಳ ಸರಳ ಜೀವಿಗಳು ಹಾಗು ಸುಖಮಯ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದರು. ತಂದೆಯ ಪ್ರಭಾವ ವೀರೇಂದ್ರ ಸಿಂಪಿ ಅವರ ಮೇಲೆ ಆಗಿ

ಇವರನ್ನು ಸಾಹಿತ್ಯದತ್ತ ಕರೆದೊಯ್ದಿತ್ತು ಎನ್ನಬಹುದು ಲಿಂಗಣ್ಣ ಸಿಂಪಿ ಅವರು ಮಣ್ಣಿನ ಮಗನಾಗಿ ಜನಪದ ವಿದ್ವಾಂಸರಾಗಿ ಜನಪದ ನಡೆ–ನುಡಿ ಸಂಸ್ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸಿದ ಜನಪದ ತಜ್ಞರಾಗಿದ್ದಾರೆ. ಲಿಂಗಣ್ಣನವರು ಜನಪದ ಬದುಕನ್ನು ಕಂಡುಂಡವರು ಅಂತೆಯೇ ಜನಪದ ನೋವು ನಲಿವು ಅಭೀಪ್ಸೆ ಒಲವು ಅವರ ಸಾಹಿತ್ಯದಲ್ಲಿ ಹೊರಹೊಮ್ಮಿದೆ. ಜನಪ ದರ ಆಚಾರ–ವಿಚಾರ ಸಂಸ್ಕೃತಿ ಮೌಲ್ಯ ಕಾಪಾಡಲು ಇವರು ತಮ್ಮ ಸಾಹಿತ್ಯದ ಮೂಲಕ ಜನಪದ ಆಸಕ್ತಿಯನ್ನು ಕಾಯ್ದಿಟ್ಟಿದ್ದಾರೆ. ಇವರ ಸಾಹಿತ್ಯ ಸೇವೆ ವಿಪುಲವಾದುದು ಹಾಗೆಯೇ ವೈವಿಧ್ಯಪೂರ್ಣವಾದುದು. ನವೋದಯ ಸಾಹಿತ್ಯದಲ್ಲಿ ಬೆರಗುಗೊಳ್ಳಿಸುವಂತಹ ಕೃಷಿಮಾಡಿದ್ದಾರೆ. ಲಿಂಗಣ್ಣನವರ ಜೀವನದೃಷ್ಟಿ ಆರೋಗ್ಯ ಪೂರ್ಣವಾದದ್ದು ಅಂತೆಯೇ ಅವರ ಸಾಹಿತ್ಯವೂ ಕೂಡ ಜೀವನದ ವಾಸ್ತವಿಕತೆಗೆ ಅವರು ಎದೆಯೊಡ್ಡಿದರೇ ವಿನಃ ಎಂದೂ ಬೆನ್ನು ತೋರಿಸಲಿಲ್ಲ. ೧೯೯೨ ಕೊಪ್ಪಳದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದರು ಇಂತಹ ಹಿರಿಯ ಸಾಹಿತಿಯ ಹಾಗೂ ತಂದೆಯ ಸ್ನೇಹಿತರ ವಾತಾವರಣ ವೀರೇಂದ್ರ ಸಿಂಪಿ ಅವರಿಗೆ ನೀತಿ ಪಾಠ ಕಲಿಸಿಕೊಡುವಂತಿತ್ತು. ಇವರದು ೮೮ ವರ್ಷಗಳ ತುಂಬು ಹಾಗೂ ಸಾರ್ಥಕ ಜೀವನವನ್ನು ಬದುಕಿದರು. ಪ್ರೊ. ವೀರೇಂದ್ರ ಸಿಂಪಿ ಅವರು ಕನ್ನಡ ಹಿರಿಯ ಜಾನಪದ ದಿಗ್ಗಜರಾದ ಡಾ॥ ಸಿಂಪಿ ಲಿಂಗಣ್ಣನವರು ಸುಪುತ್ರರಾಗಿ ೧೪೧೦೦ ೧೯೩೮ ರಂದು ಜನಿಸಿದರು. ಇವರದು ಬಡವ ಶ್ರೀಮಂತರೊಂದಿಗೆ ಬೆರೆತ ಜೀವನವಾಗಿತ್ತು. ಸಿಂಪಿ ಅವರದು ನೇಕಾರಿಕೆಯ ಮನೆತನವಾದ್ದರಿಂದ ಬಾಲ್ಯ ಜೀವನ ಯಾವುದೇ ಏರುಪೇರುಗಳಿಲ್ಲದೆ ಸುಮಧುರವಾಗಿ ಸಾಗಿತ್ತು. ಸುಂದರ ಪ್ರಕೃತಿ ಸೌಂದರ್ಯವನ್ನು ಅನುಭವಿಸಿದ ಸುದೈವಿಗಳಾಗಿದ್ದರು. ಇವರ ಬಾಲ್ಯದ ಜೀವನ ತುಂಬಾ ಸಮೃದ್ಧಿಯಿಂದ ಕೂಡಿತ್ತು.

ಶಿಕ್ಷಣ

ವೀರೇಂದ್ರ ಸಿಂಪಿ ಅವರಿಗೆ ಮನೆಯೇ ಮೊದಲ ಪಾಠಶಾಲೆಯಾಗಿತ್ತು. ಅವರು ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಹುಟ್ಟೂರಾದ ಚಡಚಣದಲ್ಲಿ ಅಂದರೆ ಪ್ರಾಥಾಮಿಕ ಶಿಕ್ಷಣವು (೧೯೫೨) ದಲ್ಲಿ ಸರಕಾರಿ ಪ್ರಾಥಾಮಿಕ ಶಾಲೆ ಚಡಚಣದಲ್ಲಿ ಹಾಗೂ ಮಾಧ್ಯಮಿಕ ಶಿಕ್ಷಣವು (೧೯೫೬) ರಲ್ಲಿ ಶ್ರೀ ಸಂಗಮೇಶ್ವರ ಮಾಧ್ಯಮಿಕ ಶಾಲೆ ಚಡಚಣದಲ್ಲಿ ಮುಗಿಸಿ ಪದವಿ ಶಿಕ್ಷಣವನ್ನು (೧೯೬೦) ವಿಜಯ ಕಾಲೇಜ ಬಿಜಾಪೂರದಲ್ಲಿ ಪಡೆದು ಉನ್ನತ ವ್ಯಾಸಂಗವನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರಾವಾಡದಿಂದ ಇಂಗ್ಲೀಷ್ ಸಾಹಿತ್ಯದಲ್ಲಿ ಎಂ.ಎ. ಸ್ನಾತೋಕೋತ್ತರ ಪದವಿಯನ್ನು (೧೯೬೨) ಪಡೆದುಕೊಂಡರು. ಇವರಿಗೆ ಓದುವ ಅಭಿರುಚಿ ಬಿಟ್ಟರೆ ಇವರಿಗೆ ಬೇರೆ ಯಾವುದೇ ಆಕರ್ಷಣೆ ಇರಲಿಲ್ಲ ದೈಹಿಕ ದೌರ್ಬಲ್ಯದಿಂದ ಆಟೋಟಗಳಿಂದ ವಂಚಿತರಾಗಿದ್ದರು. ಆದರೂ ಸಹ ತೃಪ್ತಿಯ ಬಾಳನ್ನು ಸಾಗಿಸುತ್ತಿದ್ದರು. ಇವರ ವಿದ್ಯಾರ್ಥಿ ಜೀವನ ಸುಂದರವಾಗಿತ್ತು ಹಾಗೂ ಸತತಾಭ್ಯಾಸಿಗಳಾಗಿದ್ದರು.

ಸಾಹಿತ್ಯಿಕ ಹಿನ್ನಲೆ ಹಾಗೂ ಪರಿಸರ

ಇವರ ಸಾಹಿತ್ಯಕ್ಕೆ ಹುಟ್ಟಿದ ಮನೆಯಲ್ಲಿಯೇ ಪ್ರೇರಣೆ ಸಿಕ್ಕಿತ್ತು. ಜೊತೆಗೆ ಕೆ.ಎಸ್.ತಂಗಾ. ಚೋಳಕೆ ಇವರ ಮೇಲೆ ಪ್ರಭಾವ ಬೀರಿದ್ದರು. ಹಳ್ಳಿಯ ಪರಿಸರ ಇವರ ಸಾಹಿತ್ಯ ಕೃಷಿಗೆ ಒಳ್ಳೆಯ ಹದವನ್ನು ಉಂಟುಮಾಡಿತ್ತು. ಶಾಲೆಯ ಪರಿಸರವು ಇವರಿಗೆ ಪ್ರಿಯವಾಗಿತ್ತು ತಮ್ಮ ತಂದೆಗೆ [illegible] ಜನ

ಮಕ್ಕಳಿದ್ದ ಕಾರಣ ಬಡತನವನ್ನು ಅವರು ನಗುನಗುತ್ತಾ ಸ್ವೀಕರಿಸಿದರು. ಶಿಷ್ಯವೇತನದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಓದುವ ಹವ್ಯಾಸವೇ ಇವರ ಸಾಹಿತ್ಯಕ್ಕೆ ಸ್ಪೂರ್ತಿ ಒದಗಿಸಿತು. ಇದಲ್ಲದೇ ಶಾಲೆಯ ಪಠ್ಯಕ್ರಮದಲ್ಲಿ ಬರುವ ಅನೇಕ ಹಿರಿಯ ಕವಿಗಳ ಸಾಹಿತಿಗಳ ಪರಿಚಯವಾಯಿತು. ಈ ಸಾಹಿತ್ಯ ಒಂದಂಶದಲ್ಲಿ ವೀರೇಂದ್ರ ಸಿಂಪಿ ಅವರಿಗೆ ಸಾಹಿತ್ಯದೆಡೆ ಸೆಳೆಯಲು ಬಹಳ ಪ್ರಭಾವ ಬೀರಿದವು.

ವೀರೇಂದ್ರ ಸಿಂಪಿ ಅವರಿಗೆ ಕಾವ್ಯದೇವಿ ಒಲಿದದ್ದು ಮಾಧ್ಯಮಿಕ ಹಂತದಲ್ಲಿ (೧೯೫೫) ಖೊಟ್ಟಿನಾಣ್ಯ ಮೂಲಕ ಇವರು ತಮ್ಮ ಸ್ನೇಹಿತ ವರ್ಗದೊಂದಿಗೆ ಯಾವುದೇ ವಿಷಯವನ್ನು ಮುಕ್ತ ಮನಸ್ಸಿನಿಂದ ಚರ್ಚಿಸುತ್ತಿದ್ದರು. ೧೯೫೬ ರಲ್ಲಿ (೧೮ ನೇ ವಯಸ್ಸಿನಲ್ಲಿ) ಏಕಲವ್ಯವೆಂಬ ಹಿಂದಿ ಏಕಾಂಕ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದರು. ಇವರಿಗೆ ಹೈಸ್ಕೂಲಿನಲ್ಲಿ ಬಹಳಷ್ಟು ಪರಿಣಾಮ ಬೀರಿದವರು ಜಾಗಿರದಾರ ಹೆಡ್‌ಮಾಸ್ತರರು. ಇವರು ಸಂಸ್ಕೃತ ಕನ್ನಡ, ಇಂಗ್ಲೀಷ ಭಾಷೆಯ ಪ್ರಕಾಂಡ ಪಂಡಿತರಾಗಿದ್ದರು. ಪದವಿ ಪೂರ್ವ ಶಿಕ್ಷಣವು ಇಂಗ್ಲೀಷ ಮಾಧ್ಯಮದಲ್ಲಿ ಕಲಿಯಬೇಕಾದ ಅನಿವಾರ್ಯ ಪರಸ್ಥಿತಿ ವೀರೇಂದ್ರ ಸಿಂಪಿ ಅವರಿಗೆ ಒದಗಿತ್ತು. ಪರಿಸರವು ಅವರಿಗೆ ಇಂಗ್ಲೀಷ ಸಾಹಿತ್ಯದತ್ತ ಒಲವನ್ನು ಮೂಡಿಸತೊಡಗಿತ್ತು ಆ ಕಾರಣವೇ ಇವರ ಸ್ನಾತಕೋತ್ತರ ಪದವಿ ಇಂಗ್ಲೀಷ ಸಾಹಿತ್ಯದಲ್ಲಿ ಪಡೆದುಕೊಳ್ಳುವಚಿತಾಯಿತು.

೧೯೫೬ "ಇಂದಿನ ವಿದ್ಯಾರ್ಥಿಗಳಲ್ಲಿ ಅಸಂತೋಷವೇಕೆ" ಎಂಬ ವಿಷಯದ ಮೇಲೆ ನಿಬಂಧ ಬರೆದು ಕರ್ನಾಟಕ ವಿಶ್ವವಿದ್ಯಾಲಯ ಮಟ್ಟದ ಅಂತರ ಕಾಲೇಜು ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದರು. ಅದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟವಾಯಿತು. ಮತ್ತು ೧೯೫೬ ರಲ್ಲಿ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಜಯಂತಿಯಲ್ಲಿ ಕಥೆಗಳ ಕುರಿತು ರಸವಿಮರ್ಶೆ ಬರೆದದ್ದು ಬಹು ಮಾರ್ಮಿಕವಾಗಿದೆ. ನಂತರ ೧೯೬೧ ರಲ್ಲಿ ಶ್ರೀನಿವಾಸರ ಸಣ್ಣ ಕಥೆಗಳ ಬಗ್ಗೆ ಕರ್ನಾಟಕ ವಿಶ್ವವಿದ್ಯಾಲಯದ ಹಾಸ್ಟೆಲ್ ಮ್ಯಾಗಝೀನನಲ್ಲಿ ಲೇಖನ ಪ್ರಕಟಿಸಿದರು. ಈ ಕಾರ್ಯಗಳು ಅವರ ಸಾಹಿತ್ಯಕ್ಕೆ ತಳಹದಿಯನ್ನೊದಗಿಸಿದವು. ಹಾಗೂ ಇವುಗಳೆಲ್ಲವು ಸಾಹಿತ್ಯಕ ಚಟುವಟಿಕೆಯ ಪೂರಕ ಅಂಶಗಳಾಗಿದ್ದವು. ಇದರಿಂದ ಕಾಲೇಜು ರಂಗದಿಂದಲೇ ಕಾವ್ಯ ಕ್ಷೇತ್ರದಲ್ಲಿ ಸ್ವಲ್ಪ ಹೆಸರು ಬಂತು. ಅನೇಕ ದಿನಪತ್ರಿಕೆಗಳಿಗೆ ಮಾಸ ಪತ್ರಿಕೆಗೆ ಅಂಕಣಬರಹ ಎಂಬ ಸಾಹಿತ್ಯದ ಪ್ರಕಾರವನ್ನು ಅಳವಡಿಸಿಕೊಂಡು ಸಮಾಜದ ಚಿತ್ರಣ ಜೀವನದ ಬಹುಮುಖಿಗಳ ಪರಿಚಯ ಮಾಡಿಕೊಡುತ್ತಿದ್ದರು. ಇದರಿಂದ ನವ್ಯ ಸಾಹಿತ್ಯದ ಪರಿಚಯವಾಗತೊಡಗಿತು. ನವ್ಯ ಕಾಲ ಘಟ್ಟದ ಸಾಹಿತಿಗಳ ಪರಿಚಯ ಇವರಿಗಾಗತೊಡಗಿತು. ಇವರೆಲ್ಲರ ಸಂಪರ್ಕದಿಂದ ವೀರೇಂದ್ರ ಸಿಂಪಿ ಅವರ ಸಾಹಿತ್ಯ ಕ್ಷೇತ್ರ ಬೆಳೆಯಲು ಸಹಾಯಕವಾಯಿತು.

ಆಯಾ ಕಾಲದ ಸಾಹಿತ್ಯಿಯನ್ನು ಭಾಷೆ ಎಷ್ಟು ಮುಖ್ಯವೋ ಅಂದಂದಿನ ಭಾವವೂ ಕೂಡ ಅಷ್ಟೇ ಮುಖ್ಯ ಭಾಷೆ ಭಾವಗಳ ಸಮ್ಮಿಲನವೇ ಬಹುಪಾಲು ಬರಹಗಾರರ ಬಂಡವಾಳ "ಭಾವ" ಭಕ್ತಿಯಾದರೆ ಭಾಷೆ ಪ್ರಸಾದವೆನಿಸಿದೆ. ಒಂದು ಉತ್ತಮ ಸಾಹಿತ್ಯ ನಿರ್ಮಾಣವಾಗಬೇಕಾದರೆ ಜೀವನ "ದೃಷ್ಟಿ" ಸಾಹಿತ್ಯ "ಧೋರಣ"ಯೊಂದಿಗೆ ಒಳಗೂಡಬೇಕಾಗುತ್ತದೆ. ಅದು ಬಹಳ ನಿರೀಕ್ಷೆಗಳನ್ನು ಹುಟ್ಟಿಸುತ್ತದೆ. ಅದುವೇ ಗಟ್ಟಿ ಸಾಹಿತ್ಯದ ಒಳಗುಟ್ಟು. ವೃತ್ತಿಯಿಂದ ಇಂಗ್ಲೀಷ ಪ್ರಾಧ್ಯಾಪಕರಾದ ವೀರೇಂದ್ರ

ಸಿಂಪಿಯವರು ಪ್ರವೃತ್ತಿಯಿಂದ ಕನ್ನಡ ಗದ್ಯ ಲೇಖಕರು ಲಲಿತ ಪ್ರಬಂಧ ವಿಮರ್ಶೆ ವೈಚಾರಿಕ ಲೇಖನ ಅಂಕಣ ಬರಹಗಳ ಮೂಲಕ ಪ್ರಸಿದ್ಧಿ ಪಡೆದರು. ಮೂಲತಃ ಕನ್ನಡದ ಮಹತ್ವದ ಲಲಿತ ಪ್ರಬಂಧಕಾರೆಂದು ಹೆಸರುಗಳಿಸಿದ ವೀರೇಂದ್ರ ಸಿಂಪಿಯವರು ಇಲ್ಲಿಯವರೆಗೆ ಆರು ಲಲಿತ ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವು ಯಾವುವೆಂದರೆ ಕಾಗದದ ಚೂರು, ಭಾವಮೈದುನ; ಸ್ವಚ್ಛಂದ ಮನದ ಸುಳಿದಾಟ, ಪರಿಸರ ಸ್ಪಂದನ, ಲಲಿತ ಪ್ರಬಂಧಗಳು, ಆಯ್ದು ಲಲಿತ ಪ್ರಬಂಧಗಳು ಇವುಗಳಲ್ಲಿ ಭಾವ ಮೈದುನ ಪುಸ್ತಕಕ್ಕೆ ೧೯೮೧ ರಲ್ಲಿ ಕರ್ನಾಟಕ ರಾಜ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ಇವರ ಸ್ವಚ್ಛಂದ ಮನದ ಸುಳಿದಾಟ ಲಲಿತ ಪ್ರಬಂಧ ಸಂಕಲನ ಕರ್ನಾಟಕ ಗುಲ್ಬರ್ಗಾ ಹಾಗೂ ಶಿವಾಜಿ ವಿಶ್ವವಿದ್ಯಾಲಯಗಳಲ್ಲಿ ಬಿ.ಎ. ಪ್ರಥಮ ವರ್ಷದ ಕಡ್ಡಾಯದ ಪಠ್ಯಪುಸ್ತಕವಾಗಿತ್ತು ಸ್ವತಃ ಪ್ರಬಂಧಕಾರರಾದ ಸಿಂಪಿಯವರು ಕನ್ನಡದಲ್ಲಿ ಲಲಿತ ಪ್ರಬಂಧಗಳು ಬೆಳೆದು ಬಂದ ರೀತಿಯನ್ನು ಕನ್ನಡದಲ್ಲಿ ಲಲಿತ ಪ್ರಬಂಧಗಳು ಪುಸ್ತಕದಲ್ಲಿ ಸಮೀಕ್ಷಿಸಿದ್ದಾರೆ. ಈ ಪುಸ್ತಕ ಇಂದಿಗೂ ಕನ್ನಡದಲ್ಲಿ ಲಲಿತ ಪ್ರಬಂಧಗಳನ್ನು ಕುರಿತ ಅಧಿಕೃತ ಸಮೀಕ್ಷಾ ಗ್ರಂಥವಾಗಿರುವುದರ ಜೊತೆಗೆ ಒಂದು ಒಳ್ಳೆಯ ಆಕರ ಗ್ರಂಥವಾಗಿದೆ. ಆತ್ಮ ವೃತ್ತದ ಎಳೆಗಳೊಡನೆ ಸಾಮಾಜಿಕ ಚಿಂತನೆಯೂ ಇವರ ಪ್ರಬಂಧಗಳಲ್ಲಿ ಒಡಮಾಡಿದೆಯೆಂದು ಪ್ರೊ. ವಿ. ಕೃ ಗೋಕಾಕರು ಗುರುತಿಸಿದ್ದಾರೆ. ಬಹುಶ್ರುತತ ಜೀವನಾನುಭಾವ ಇವರ ಪ್ರಬಂಧಗಳಿಗೆ ಗಟ್ಟಿತನ ನೀಡಿವೆ. ಜೀವನ ಉತ್ಸಾಹ ಇವರ ಪ್ರಬಂಧಗಳ ಜೀವಾಳವಾಗಿದೆ. ಬದುಕಿನ ಸೂಕ್ಷ್ಮ ಅವಲೋಕನ ಇದುರ ಪ್ರಬಂಧಗಳ ಹೂರಣವಾಗಿದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ, ಆಯ್ದಕ್ಕಿ ಮಾರಯ್ಯ, ಚನ್ನಬಸವಣ್ಣ, ಆರ್.ವ್ಹಿ ಬೀಡಪ್, ಹತ್ತು ಸಾಹಿತ್ಯ ಕಾದಂಬರಿಕಾರರು ಇವು ಜೀವನ ಚರಿತ್ರೆಗಳಾಗಿದ್ದಂತೆ ಆಯಾ ಲೇಖಕರ ಸಾಹಿತ್ಯ ಕೃತಿ ಅಥವಾ ಜೀವನ ಸಾಧನೆಗಳ ಸಮೀಕ್ಷೆಗಳೂ ಆಗಿವೆ. ಇವುಗಳಲ್ಲಿ ಚನ್ನಬಸವಣ್ಣ ಪುಸ್ತಕ ಸಿಂಪಿಯವರ ವಚನ ಸಾಹಿತ್ಯದ ಆಳವಾದ ಅಧ್ಯಯನದ ಫಲವಾಗಿದೆ. ಗಾಯ್. ಡಿ. ಮೊಪಾಸಾನ ಕತೆಗಳು ಸಿಂಪಿಲಿಂಗಣ್ಣನವರ ಸಾಹಿತ್ಯ ಈ ಕೃತಿಗಳು ವೀರೇಂದ್ರ ಸಿಂಪಿಯವರು ಗಟ್ಟಿ ವಿಮರ್ಶೆಯು ದ್ಯೋತಕಗಳಾಗಿವೆ. ಕೆರಳ್ಳಿ ಗುರುನಾಥ ರೆಡ್ಡಿ ಜಿ.ಬಿ. ವಿಸಾಜಿ ಪಾಟೀಲ ಜಾವಳಿ ಶಾಂತರಸರ ಕಾವ್ಯದ ಕುರಿತ ವಿಮರ್ಶೆ ಲೇಖನಗಳನ್ನು ಬರೆದಿದ್ದಾರಲ್ಲದೆ ಚನ್ನವೀರ ಕಣವಿಯವರ ಗದ್ಯ ಸಾಹಿತ್ಯ ತೇಜಸ್ವಿಯವರ ಚಿದಂಬರಹಸ್ಯ, ಲಂಕೇಶರ ಕಥಾಸಾಹಿತ್ಯ ಕನ್ನಡ ಸಾಹಿತ್ಯದ ಮೇಲೆ ಇಂಗ್ಲೀಷ ಸಾಹಿತ್ಯದ ಪ್ರಭಾವ ಇತ್ತೀಚಿನ ವಿಮರ್ಶೆ ಸಾಹಿತ್ಯದ ಕುರಿತ ವಿಶೇಷ ವಿಮರ್ಶೆ ಲೇಖನಗಳನ್ನು ಬರೆದಿದ್ದಾರೆ. ಬೀದರ ಜಿಲ್ಲಾ ದರ್ಶನ ಬೀದರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು ಇವು ಸಿಂಪಿಯವರ ಸಂಪಾದಿತ ಕೃತಿಗಳಾಗಿದ್ದು ಬೀದರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು ೧೮೦ ಸ್ವಾತಂತ್ರ್ಯ ಹೋರಾಟಗಾರರ ಸಾಧನೆಯನ್ನು ತುಂಬ ಅಚ್ಚು ಕಟ್ಟಾಗಿ ಸಂಪಾದಿಸಿದ್ದಾರೆ.

ಹತ್ತು ವರ್ಷಗಳ ಕಾಲ ದಿಕ್ಸೂಚಿ ಮಾಸಪತ್ರಿಕೆಯಲ್ಲಿ ಸಾಮಾಜಿಕ ಸಾಂಸ್ಕೃತಿಕ ವಿಷಯಗಳ ಕುರಿತ ೧೧೦ ಕ್ಕೂ ಮೇಲ್ಪಟ್ಟು ವೈಚಾರಿಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಈ ಲೇಖನಗಳು ಜೀವನವೆಂದರೇನು ? ಎಂಬ ಪುಸ್ತಕದಲ್ಲಿ ಬಂದಿವೆ. ನಮ್ಮನ್ನು ಅತ್ಯುತ್ತಮ ನಾಗರಿಕರನ್ನಾಗಿ ರೂಪಿಸುವ ಧ್ಯೇಯವುಳ್ಳ ಅವರು ಯುವ ಜನರನ್ನು ದೃಷ್ಟಿಯಲ್ಲಿರಿಸಿ ತಮ್ಮ ಚಿಂತನಗಳನ್ನು ಹರಿಯಿಸಿದ್ದಾರೆ. ವೀರೇಂದ್ರ ಸಿಂಪಿಯವರ ಗದ್ಯ ಕೃತಿಯನ್ನು ಪಾಟೀಲ ಪುಟ್ಟಪ್ಪನವರು ಕೊಂಡಾಡಿದ್ದಾರೆ ಅವರ ಸುಖ ಸಾದನ

[illegible]

ಬರ್ಟ್ರೆಂಡ್ ರಸೆಲ್‌ರ ವಿಚಾರಗಳನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಇವರಿಗೆ ಕನ್ನಡ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ೧೯೯೭ ರಲ್ಲಿ ದೊರಕಿದೆ.

ಕೌಟುಂಬಿಕ ಜೀವನ

ಪ್ರೊ. ವೀರೇಂದ್ರ ಸಿಂಪಿ ಅವರ ದಾಂಪತ್ಯ ಜೀವನ ಯಾವುದೇ ಏರುಪೇರುಗಳಿಲ್ಲದೆ ಸುಖ ಸಂತೋಷಗಳಿಂದ ಕೂಡಿದೆ. ವೀರೇಂದ್ರ ಸಿಂಪಿ ಅವರು ತಮ್ಮ ಸೋದರಮಾವನ ಮಗಳಾದ ಪಾರ್ವತಿಯೊಂದಿಗೆ ೧೯೬೬ ರಲ್ಲಿ ವಿವಾಹ ಬಂಧನಕೊಳಗಾದರು ಲಿಂಗಣ್ಣಾ ಸಿಂಪಿ ಅವರಿಗೆ ಒಟ್ಟು ಒಂಭತ್ತು ಜನ ಮಕ್ಕಳು

ಅಕ್ಕಂದಿರು ಭುವನೇಶ್ವರಿ ಕತೆಗಾರ್ತಿ ಇನ್ನೊಬ್ಬಳು ಭವತಾರಿಣಿ ದೇವಪ್ಪ ಕೇಶಟ್ಟಿ ಚಡಚಣ

ತಂಗಿಯರು ಮಹಾದೇವಿ ಲೋಣಿ ವಿಜಾಪೂರ ಸರೋಜನಿ ಭೈರಾಮಡಗಿ ಗುಲಬರ್ಗಾ

ತಮ್ಮಂದಿರು ಆಯ್. ಎನ್. ಸಿಂಪಿ ಲೇಖಕರು ಹಾಗೂ ಪ್ರಾಚಾರ್ಯರು ಎಂ.ಜಿ.ವ್ಹಿ.ಜಿ. ಕಾಲೇಜ ಮುದ್ದೇಬಿಹಾಳ

ರಾಜೀವ ಸಿಂಪಿ ಪ್ರಾಧ್ಯಾಪಕರು ಸಂಗಮೇಶ್ವರ ಕಾಲೇಜ ಚಡಚಣ

ಅರುಣ ಸಿಂಪಿ ಇಂಜಿನಿಯರ್ ಬಿಜಾಪೂರ

ಪ್ರಿಯದರ್ಶಿ ಸಿಂಪಿ ಲೆಕ್ಚರರ್ ಪಾಲಿಟೆಕ್ನಿಕ್ ಬಾಗಲಕೋಟಿ.

ತುಂಬು ಕುಟುಂಬ ಪ್ರೊ. ವೀರೇಂದ್ರ ಸಿಂಪಿ ಅವರದಾಗಿದೆ. ಸಿಂಪಿ ಅವರಿಗೆ ಆರತಿಗೊಬ್ಬ ಕೀರ್ತಿಗೊಬ್ಬ ಎನ್ನುವ ಹಾಗೆ ಎರಡು ಮುದ್ದಾದ ಮಕ್ಕಳು ಈಗ ಮಗಳು ರೇಖಾ ಕೇಶಟ್ಟಿ ಬಿ.ಎ. ಬಿ.ಇಡ್. ಮಗ ಡಾ. ಪ್ರವೀಣ ಸಿಂಪಿ ಎಂ.ಡಿ. ಬೀದರ ತಂದೆಯ ಕೀರ್ತಿಯನ್ನು ಮೇಲೆತ್ತರಕ್ಕೆ ಒಯ್ದು ತನ್ನ ಹೆಸರಿಗೆ ತಕ್ಕಂತೆ ನಡೆದುಕೊಳ್ಳುತ್ತಿದ್ದಾನೆ. ಮತ್ತು ಅವನಿಗೆ ಕಾವ್ಯ ಎಂಬುವಳೊಡನೆ ಲಗ್ನವಾಗಿದೆ. ಮೊಮ್ಮಕ್ಕಳು ತೇಜಸ್ವನಿ ಹಾಗೂ ದೀಪಕ ಹೀಗೆ ವೀರೇಂದ್ರ ಸಿಂಪಿ ಅವರದು ತುಂಬು ಜೀವನ ಅವರ ಹೆಂಡತಿಯು ಕೂಡ ಅಷ್ಟೆ ಸಹನಾಮೂರ್ತಿಯು ಆಗಿದ್ದಾರೆ. ಮನೆಯ ಎಲ್ಲ ಜವಾಬ್ದಾರಿ ತಾವೆ ನಿಭಾಯಿಸಿಕೊಂಡು ಸದಾ ಹಸನ್ಮುಖಿಯಾಗಿ ಇರುತ್ತಾರೆ. ಪ್ರೊ. ವೀರೇಂದ್ರ ಸಿಂಪಿ ಅವರು ತಮ್ಮ ಕುಟುಂಬದವರ ಆಗು ಹೋಗುಗಳಲ್ಲಿ ಹೆಚ್ಚಾಗಿ ಬರದೆ ತಮ್ಮ ಓದು ಬರಹದಲ್ಲಿ ತಲ್ಲೀನರಾಗಿರುತ್ತಾರೆ. ಸಹಬಾಳ್ವೆಯ ಜೀವನ ಇವರದ್ದಾಗಿದೆ. ಹೆಂಡತಿಯನ್ನು ದೇವತಾ ಸ್ವರೂಪಿ ಎಂದು ಹೊಗಳುವರು. ಪರಿಸರದಲ್ಲಿ ಬೆಳೆದ ಸಸ್ಯಗಳು ಉತ್ತಮ ಫಲವನ್ನೇ ಕೊಡುತ್ತವೆ ಎಂಬ ಮಾತು ವೀರೇಂದ್ರ ಸಿಂಪಿ ಅವರ ಸಾಹಿತ್ಯ ಕೃಷಿಗೆ ಅನ್ವಯಿಸುತ್ತದೆ. ಇದಕ್ಕೆ ಅವರು ಬೆಳೆದ ಪರಿಸರವೇ ಕಾರಣ.

ಬದುಕಿನುದ್ದಕ್ಕೂ ಪ್ರಾಮಾಣಿಕತೆಯನ್ನು ಅಳವಡಿಸಿಕೊಂಡು ಬಂದ ಇವರ ಬದುಕು ಆದರ್ಶಪ್ರಾಯವಾಗಿದೆ. ವೃತ್ತಿ ಜೀವನವನ್ನು ಬಹು ಸೊಗಸಾಗಿ ಕಳೆದಿದ್ದಾರೆ. ಜೀವನವಾದ ಮೇಲೆ ಸಮಸ್ಯೆಗಳು ಸಹಜ ಅವಕ್ಕೆ ತಕ್ಕ ಪರಿಹಾರೋಪಾಡಿಯಲ್ಲಿ ಸರಿಪಡಿಸಿಕೊಂಡು ಹೋಗುವ ಐಕ್ಯತೆ ಅವರಲ್ಲಿತ್ತು. ವೈವಾಹಿಕ ಜೀವನದಲ್ಲಿ ಮರೆಯಲಾರದ ಬಹು ಗಾಯಗೊಳಿಸಿದ ಘಟನೆ ಎಂದರೆ ತಮ್ಮ

ಮಗ ಉದ್ಯೋಗ (ಎಂ.ಡಿ.) ಯನ್ನು ಸೇರಿಕೊಂಡಾಗ ಕುಟುಂಬದವರೆಲ್ಲರ ಜೊತೆ ಪ್ರಯಾಣ ಕೈಕೊಂಡಾಗ ಪಾಂಡಿಚರಿ ಆಶ್ರಮದಲ್ಲಿ ಇದ್ದ ಸಂದರ್ಭದಲ್ಲಿ ತಮ್ಮ ಹಿರಿಯ ಸಹೋದರ ಹೃದಯಾಘಾತದಿಂದ ತೀರಿಹೋದರು. ಈ ವಿಷಯ ಬಹಳ ತಡವಾಗಿ ತಿಳಿದ ಕಾರಣ ಈ ಕಹಿ ಸುಂದರ್ಭ ಅವರ ಜೀವನದ ಮರೆಯಲಾರದ ಘಟನೆಯಾಗಿದೆ.

ಹವ್ಯಾಸ

ಓದು ಬರಹ ಇವರ ಮುಖ್ಯವಾದ ಹವ್ಯಾಸವಾಗಿದೆ. ಸತತ ಪರಿಶ್ರಮಿಗಳು ಮಹಿಳೆಯರ ಬಗ್ಗೆ ಕಳಕಳಿ ಸ್ತ್ರೀಪರ ಧೋರಣೆ ವ್ಯಕ್ತಪಡಿಸುವುದು ಬೀದರನ ಒಟ್ಟು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು. ಯಾರು ಪ್ರೀತಿಯಿಂದ ಭಾಷಣಕ್ಕಾಗಿ ಆಹ್ವಾನಿಸುವರೋ ಅಲ್ಲಿಗೆ ಹೋಗುವುದು ಇವರ ಮುಖ್ಯ ಹವ್ಯಾಸಗಳಾಗಿವೆ.

ಮನರಂಜನೆಗಾಗಿ ಅವರು ವೈವಿಧ್ಯಮಯ ಪುಸ್ತಕಗಳನ್ನು ಓದುವುದು. ವೀರೇಂದ್ರ ಸಿಂಪಿ ಅವರ ಜೀವನದಲ್ಲಿ ಪ್ರತಿ ಹೆಜ್ಜೆಯೂ ಮರೆಯದ ಕ್ಷಣಗಳಾಗಿವೆ. ಅವುಗಳಲ್ಲಿ ಹೈಸ್ಕೂಲನಲ್ಲಿ ಓದುತ್ತಿದ್ದಾಗ ಪ್ರಕಟವಾದ ಲೇಖನಗಳಿಂದ ಆದ ಸಂತೋಷ ಹೇಳತೀರದು.

ವೃತ್ತಿ ಜೀವನ

ವೀರೇಂದ್ರ ಸಿಂಪಿ ತಮ್ಮ ವೃತ್ತಿ ಜೀವನ ತೃಪ್ತಿಕರವಾಗಿತ್ತು ಎಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಒಳ್ಳೆ ಅಧ್ಯಾಪಕರೆಂದು ಹೆಸರು ಗಳಿಸಿಕೊಂಡಿದ್ದಾರೆ. ಇವರಿಗೆ ಪಾಠ ಹೇಳುವುದೆಂದರೆ ಬಹಳ ಖುಷಿ ಕೊಡುತ್ತಿತ್ತು ಇವರು ವಿದ್ಯಾರ್ಥಿಗಳನ್ನು ತುಂಬಾ ಹತ್ತಿರದಿಂದ ಕಂಡು ಅವರ ಪ್ರೀತಿಗೆ ಪಾತ್ರರಾಗಿದ್ದರು ವೀರೇಂದ್ರ ಸಿಂಪಿ ಬಹಳ ಉತ್ಸಾಹದಿಂದ ಪಾಠ ಮಾಡುತ್ತಿದ್ದರು. ಪ್ರಪ್ರಥಮವಾಗಿ ೧೯೬೨ ರಲ್ಲಿ ಎಂ.ಎ. (ಇಂಗ್ಲೀಷ) ಸ್ನಾತಕೋತ್ತರ ಪದವಿ ನಂತರ ಸಾಂಗಲಿ ಕಾಲೇಜ ಸಾಂಗಲಿ ಇಂಗ್ಲೀಷ ಅಧ್ಯಾಪಕರಾಗಿ ಸೇವೆಸಲ್ಲಿಸಿ ನಂತರ ೧೯೬೨ ರಿಂದ ೧೯೯೭ ರವರೆಗೆ ಬಿ.ವ್ಹಿ. ಭೂಮರೆಡ್ಡಿ ಕಾಲೇಜ ಬೀದರನಲ್ಲಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದರು. ಮನದಲ್ಲಿ ಅಭಿರುಚಿ ಇದ್ದ ಕಾರಣ ೧೯೯೯ ರಿಂದ ೨೦೦೪ರ ವರೆಗೆ ಶ್ರೀ ಚಂದ್ರಪ್ಪಾ ಗೌರಶೆಟ್ಟಿ ಕಾಲೇಜ ಬೀದರನಲ್ಲಿ ಪ್ರಾಚಾರ್ಯರ ವೃತ್ತಿಯನ್ನು ನಿಭಾಯಿಸಿದರು. ತಮಗಿರುವ ಪರಿಮಿತ ಅವಕಾಶಗಳಲ್ಲಿ ಉತ್ತಮ ಕಾರ್ಯ ನಿರ್ವಹಿಸಿದ ಕೀರ್ತಿ ಇವರದಾಗಿದೆ. ವೀರೇಂದ್ರ ಸಿಂಪಿ ಅವರು ಸಾಗಲಿಯಿಂದ ಬೀದರಕ್ಕೆ ೧೯೬೩ ಕ್ಕೆ ಪ್ರಯಾಣ ಬೆಳೆಸಿದಾಗ ಆ ವಾತಾವರಣ ಇವರ ಸಾಹಿತ್ಯ ಕೃಷಿಗೆ ಮತಷ್ಟು ಅನುಕೂಲ ಮಾಡಿಕೊಟ್ಟಿತ್ತು. ಬೀದರಿನಲ್ಲಿ ಯೋಗ್ಯತೆಗೆ ತಕ್ಕಂತೆ ಹೆಚ್ಚಿನ ಗೌರವ ಲಭಿಸಿತು. ವೃತ್ತಿ ಜೀವನದಲ್ಲಿಯೂ ಓದುವ ಹವ್ಯಾಸ ಬಿಡಲಿಲ್ಲ ತಮ್ಮದಾಗಿಸಿಕೊಂಡರು. ಬೀದರ ವಾತಾವರಣದ ಮತ್ತೆ ಸಾಹಿತ್ಯ ಪರಿಸರದಲ್ಲಿ ಬೆರತಂತಾಯಿತು. ಈ ಮಣ್ಣು ಸಾಹಿತ್ಯ ಸೃಷ್ಟಿಗೆ ಸುವರ್ಣಕಾಲವನ್ನುಂಟು ಮಾಡಿತ್ತು. ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಪ್ರೊ. ವೀರೇಂದ್ರ ಸಿಂಪಿಯವರು ನೇರ ನಡೆ ಸರಳ ಸಜ್ಜನಿಕೆಯ, ಮುಕ್ತ ಮನಸ್ಸಿನ ಮೃದುಜೀವಿ. ಅಷ್ಟೇ ತೀವ್ರ ಚುಚ್ಚುನುಡಿಯ ನೈಪುಣ್ಯಗಾರರು ಪ್ರೊ. ವೀರೇಂದ್ರ ಸಿಂಪಿಯವರ ಯಾವುದೇ ಸಾಹಿತ್ಯ ಪ್ರಕಾರವೂ ಅವರು ಉಸಿರಾಡಿದ ನೆಲದ ಭಾಷೆಗೆ ಬಾಯಿಯಾಯಿತು. ಇಲ್ಲಿಯೇ ಅವರಿಂದ ಲಲಿತ ಪ್ರಬಂಧ

ಕಾಗದದ ಚೂರು. ಭಾವ ಮೈದುನ, ಸ್ವಚ್ಛಂದ ಮನದ ಸುಳಿದಾವ, ಪರಸ್ಪರ ಸ್ಪಂದನ ಹಾಗೂ ಅಂಕಣ ಬರಹದಂತೆ ಮಹತ್ವದ ಸಾಹಿತ್ಯ ಪ್ರಕಾರಗಳು ರಚನೆಯಾದವು.

ಬೀದರ ಜನ ಜೀವನ ಸಂಸ್ಕೃತಿ ಅಲ್ಲಿನ ವಾತಾವರಣ ಇವರಿಗೆ ಹಿಡಿಸಿತು. ಬಿ.ಟಿ. ಸಾಸನೂರು ಪ್ರೋತ್ಸಾಹವನ್ನು ಕೊಡುತ್ತಿದ್ದರು. ಅಲ್ಲದೆ ಓದುವಂತಹ ಜನರು ಕೂಡ ಬೆಂಬಲವನ್ನು ಇತ್ತರು ಇವರ ಸಾಹಿತ್ಯ ಕೃಷಿ ನೋಡಿ ಸಂತೋಷ ಪಡುವವರಲ್ಲಿ ತಂದೆ-ತಾಯಿಗಳ ಅಲ್ಲದೆ ಅನೇಕ ಸಹೃದಯರು ಇವರ ಸಾಹಿತ್ಯ ಓದಿ ಚರ್ಚಿಸಿ ಪ್ರೋತ್ಸಾಹಿಸುತ್ತಿದ್ದರು.

ಜೀವನ ಎಂದರೇನು ಎಂಬ ಅಂಕಣ ಬರಹಗಳ ಸಂಗ್ರಹವು ಸಾಹಿತ್ಯ ಪ್ರಕಾರಗಳಲ್ಲಿ ಪ್ರಮುಖವಾದ ಘಟ್ಟ ಎಂದು ಹೇಳಿದರೆ ತಪ್ಪಾಗಲ್ಲಿಕ್ಕಿಲ್ಲ ಸಾದಾ-ಸೀದಾ ವ್ಯಕ್ತಿತ್ವ ವೀರೇಂದ್ರ ಸಿಂಪಿಯವರು ತುಂಬಾ ಸರಳ ಜೀವಿ ಅವರಲ್ಲಿ ಗರ್ವ ದರ್ಪ ಎನ್ನುವುದೇ ಇಲ್ಲ ಆಡಂಬರದ ಬದುಕಿಗೆ ಎಂದೂ ಮರಳಾದವರಲ್ಲ ಹೋರಾಟ ಮನೋಭಾವನೆಯುಳ್ಳ ಇವರು ಬಾಲ್ಯದಿಂದಲೇ ಸಮಾಜದ ಏಳ್ಗೆಗಾಗಿ ಪ್ರಯತ್ನಪಟ್ಟರು. ಸಹಾಕಾರ ಮನೋಭಾವನೆಯುಳ್ಳ ಪ್ರೊ. ವೀರೇಂದ್ರ ಸಿಂಪಿ ಅವರು ಪರೋಪಕಾರಿ ಜೀವಿಗಳು ವಿದ್ಯಾರ್ಥಿಗಳನ್ನು ಬಹುವಾಗಿ ಸಹಕಾರ ನೀಡುತ್ತಿದ್ದರು ಅವರ ಸನಸ್ಯೆಗಳಿಗೆ ತಕ್ಕ ಪರಿಹಾರವನ್ನು ಸೂಚಿಸುತ್ತಿದ್ದರು. ಬಹುಭಾಷಾ ಪಂಡಿತರಾಗಿದ್ದರು. ಇವರದು ಬಹುಮುಖದ ವ್ಯಕ್ತಿತ್ವ.

ವೀರೇಂದ್ರ ಸಿಂಪಿ ಒಬ್ಬ ಆದರ್ಶ ಶಿಕ್ಷಕರು ವೃತ್ತಿಗೆ ಗೌರವ ತಂದು ಕೊಟ್ಟವರು ಆಸ್ಥೆಯಿಂದ ಮನಸಾರೆ ದುಡಿದವರು ಬಿ.ವ್ಹಿ. ಭೂಮರೆಡ್ಡಿ ಕಾಲೇಜ್ ಇಂಗ್ಲೀಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.

ಉದಯೋನ್ಮುಖ ಬರಹಗಾರರಿಗೆ ಪ್ರೋತ್ಸಾಹ ಕೊಡುತ್ತಿದ್ದರು. ಇವತ್ತು ಯಾವತ್ತು ಸಂಘ ಜೀವಿಗಳು ಕನ್ನಡ ನಾಡಿನ ಭಾಷೆಯ ಉಳಿವಿಗಾಗಿ ಬರಹದ ಮೂಲಕ ಹೋರಾಡಿದವರು ಶ್ರಮಿಸಿದರು.

ಯಾವತ್ತು ನಗೆಯ ಸಿರಿಯನ್ನೆ ತುಂಬಿಕೊಂಡು ಸರಳ ಬದುಕಿನ ಸ್ನೇಹ ಜೀವಿಯಾದ ವೀರೇಂದ್ರ ಸಿಂಪಿ ಸಾಂಘಿಕ ಜೀವನದಲ್ಲಿಯ ಹಿಂದೆ ಬಿದ್ದವರಲ್ಲ ವೃತ್ತಿಯಿಂದ ಉಪನ್ಯಾಸಕರಾದರೂ ವಿವಿಧ ಸಾಮಾಜಿಕ ಶೈಕ್ಷಣಿಕ ಸಾಂಸ್ಕೃತಿಕ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಬಂಧವನ್ನು ಪಡೆದಿದ್ದಾರೆ. ಪ್ರಯತ್ನ ಶೀಲ ವ್ಯಕ್ತಿಗಳಾಗಿದ್ದಾರೆ. ಬೋಧನೆಯನ್ನು ಮಾಡುವ ಸಂದರ್ಭದಲ್ಲಿಯೂ ಶಿಸ್ತು ಸಂಯಮವನ್ನು ಕಾಪಾಡಿಕೊಂಡು ಹೋಗುತ್ತಿದ್ದರು. ಬೋಧನೆಗೂ ಮುಂಚೆ ವಿದ್ಯಾರ್ಥಿಗಳಲ್ಲಿ ಶ್ರದ್ಧೆ ಉತ್ಸಾಹವನ್ನು ಮೂಡಿಸಿ ನಂತರ ವಿಷಯವನ್ನು ತಿಳಿಯುವಂತೆ ಬೋಧಿಸುತ್ತಿದ್ದರು. ವಿದ್ಯಾರ್ಥಿಗಳನ್ನು ಬೋಧನೆಯ ಮಾರ್ಗದಿಂದ ತಮ್ಮತ್ತ ಸೆಳೆಯಲು/ವರಿಸಿಕೊಳ್ಳಲು ಸಫಲರಾದರು ೧೯೯೨ ಅಧ್ಯಾಪಕ ವೃತ್ತಿಯಿಂದ ನಿವೃತ್ತಿ ಹೊಂದಿದರು ಅವರು ಇನ್ನು ಕಲಿಸಬೇಕು ವಿದ್ಯಾರ್ಥಿಗಳೊಡನೆ ಕಾಲಹರಣ ಮಾಡಬೇಕೆಂಬ ಅಭಿಲಾಷೆ ಇದ್ದರೂ ಇಷ್ಟು ಬೇಗ ನಿವೃತ್ತಿ ಹೊಂದಬೇಕಲ್ಲ ಎಂದು ಒಂದು ಮನಸ್ಸು ನೊಂದವರು ಇನ್ನೊಂದು ಮನಸ್ಸು ಸೇವೆಯಿಂದ ನಿವೃತ್ತಿಯಾಗಿದ್ದರೂ ಅವರ ಸಹೃದಯ ಸಾಹಿತ್ಯ ಸಾಧನೆಗೆ ನಿವೃತ್ತಿಯೆಂಬುದು ಇಲ್ಲವಲ್ಲ ಎಂದು ಸಮಾಧಾನ ಪಡುತ್ತಾರೆ. ಹೀಗಾಗಿ ಈಗಲೂ ಕ್ರಿಯಾಶೀಲರಾಗಿದ್ದಾರೆ.

ಕಡು ಭಕ್ತನಾಗಲಿ ಜಡಧಾರಿಯಾಗಲಿ
ನಡೆವ ವ್ರತ್ತಿಯಲ್ಲಿ ನಡೆಯದೊಡೆ ಅಭಕ್ತಿ
ಹೊಡೆವ ಶಂಖದ ಸರ್ವಜ್ಞ

ಸಮಾಜ ಸಂಜೀವಿನಿಯಾದ ಸರ್ವಜ್ಞನ ವಚನದಂತೆ ವೀರೇಂದ್ರ ಸಿಂಪಿ ತಮ್ಮ ಶಿಕ್ಷಕ ವೃತ್ತಿಯನ್ನು ಬಹುನಿಷ್ಠ ಮತ್ತು ಅತೀ ಆಸಕ್ತಿಯಿಂದ ನಿರ್ವಹಿಸಿದ ಒಬ್ಬ ಆದರ್ಶ ಶಿಕ್ಷಕರು ಬೋಧನೆಯನ್ನು ಪ್ರಮಾಣಿಕ ರಂಗವನ್ನಾಗಿಸಿಕೊಂಡು ಅದರಲ್ಲಿಯೇ ಸಂತೃಪ್ತಿಯನ್ನು ಕಂಡವರು.

ವೀರೇಂದ್ರ ಸಿಂಪಿ ಅವರ ಬೋಧನೆ ಬಹು ವಿಶಿಷ್ಟವಾದುದು ಅವರ ಬೋಧನೆ ಯಾಂತ್ರಿಕವಾದುದಲ್ಲಿ ಯಾವತ್ತೂ ಸಶಕ್ತವಾಗಿರುತಿತ್ತು. ಅವರು ಹೇಳುವ ಗತ್ತು ಗಮ್ಮತ್ತುಗಳನ್ನು ಅದರ ಬೋಧನೆಯಿಂದಲೇ ಅಳೆಯಬೇಕು. ವೀರೇಂದ್ರ ಸಿಂಪಿ ಅವರು ತಮ್ಮ ಬರಹದ ಮೊಡಿನಲ್ಲಿ ಎಲ್ಲರನ್ನು ಹುಚ್ಚೆಬ್ಬಿಸುವಷ್ಟು ಆಕರ್ಷಿಕವಾಗಿರುತಿತ್ತು. ಅದರಲ್ಲಿ ಬರುವ ಪ್ರತಿಯೊಂದು ಪದಗಳನ್ನು ಸುಲಲಿತವಾಗಿ ಅತೀ ಸರಳವಾಗಿ ಹೇಳುವ ಅವರ ವಾಕ್‌ಚಾತುರ್ಯಕ್ಕೆ ವಿದ್ಯಾರ್ಥಿಗಳು ಮಣಿಯಲೇ ಬೇಕಾಗುತಿತ್ತು.

ವಿದ್ಯೆಯೆಂದರೆ ಮೆದುಳಿನಲ್ಲಿ ಕೇವಲ ಮಾಹಿತಿ ತುರುಕುವುದಲ್ಲ ಅಲ್ಲಿ ಜೀರ್ಣವಾಗದೆ ಆಯುಷ್ಯ ವಿಷೀ ಗೊಂದಲವೆಬ್ಬಿಸುವ ಒಣ ಜ್ಞಾನವಲ್ಲ, ವಿದ್ಯೆಯಿಂದಾಗಿ ಉಚ್ಚ ವಿಚಾರಗಳು ರಕ್ತಗತವಾಗಿರಬೇಕು. ಜೀವನದಲ್ಲಿ ಚೈತನ್ಯ ಮಾಡುವಂತಾಗಬೇಕು. ಎಂಬ ವಿವೇಕಾನಂದರ ಹೇಳಿಕೆಯನ್ನು ಅಕ್ಷರಶಃ ಪಾಲಿಸಿದ ಒಬ್ಬ ಆದರ್ಶ ಶಿಕ್ಷಕರೆಂದರೆ ಅತಿಶಯೋಕ್ತಿಯಾಗಲಾರದು. ಬೋಧಕ ವೃತ್ತಿ ಜನಸೇವಾ ಮಾಡುವಚೆಥದು ಎಂಬತೆ ವೀರೇಂದ್ರ ಸಿಂಪಿ ಅವರಿಗೆ ಅಧಿಕಾರದ ದಾಹ ಇರದೆ ಸತತ ಅಭ್ಯಾಸಿಗಳಾಗಿ ಮಂಗಳವನ್ನೇ ಹಾಡುವ ವ್ಯಕ್ತಿಗಳಾಗಿ ಉತ್ತಮ ಪ್ರಜೆಯಾಗಿ ಜ್ಞಾನದ ಪರಮಾನ್ನವನ್ನು ಮಾನವೀಯ ಮೌಲ್ಯಗಳೊಂದಿಗೆ ಉಣಬಡಿಸುವುದರ ಮೂಲಕ ಸಮಾಜ ಸೇವಕರಾಗಿ ಕಾಯಕಯೋಗಿಯಾಗಿ ಸಮಾಜಕ್ಕೆ ಪರೋಪಕಾರಿಜೀವಿಗಳಾಗಿ ಬೋಧಕ ವೃತ್ತಿಗೈದ ಧೀಮಂತರಾಗಿದ್ದಾರೆ. ಹೀಗೆ ಆಕರ್ಷಕ ಬೋಧನಾ ಶೈಲಿಯು ನಿಜಕ್ಕೂ ಪ್ರಶಂಸನೀಯ ಇಂಥ ಬೋಧಕರು ಸಿಕ್ಕಿರುವುದು ಬೋಧಕ ವೃತ್ತಿಗೆ ಒಂದು ಸವಾಲ, ವಿರಳ ಆದರ್ಶ ಶಿಕ್ಷಕರಲ್ಲಿ ವೀರೇಂದ್ರ ಸಿಂಪಿ ಅವರು ಒಬ್ಬರು.

ಜನಪರ ಕಾಳಜಿ

ಪ್ರೊ. ವೀರೇಂದ್ರ ಸಿಂಪಿಯವರು ಜನಪದ ಬದುಕನ್ನು ಕಂಡುಂಡವರು ಅಂತೇಯೇ ಜನಪದ ನೋವು ನಲಿವು ಅಭಿಪ್ಸೆ ಒಲವುಗಳು ಅವರ ಸಾಹಿತ್ಯದಲ್ಲಿ ಹೊರಹೊಮ್ಮಿದೆ ಸಾಹಿತಿಯ ಬದುಕು ತೆರೆದಿಟ್ಟು ಪುಸ್ತಕ ಅದರಲ್ಲಿ ಸಹಜವಾಗಿ ಅವರ ಅನುಭಾವಗಳು ಅಳವಡಿಸಿರುತ್ತವೆ. ಇವರ ಸಾಹಿತ್ಯವು ಎರಡು ಮುಖಗಳಲ್ಲಿ ಅಭಿವ್ಯಕ್ತಗೊಂಡಿದೆ ಒಂದು ಲಲಿತ ಸಾಹಿತ್ಯವಾದರೆ ಇನ್ನೊಂದು ಅಂಕಣ ಸಾಹಿತ್ಯ ಇವರಿಗೆ ಬಡ ಜನರ ಬಗ್ಗೆ ವಿಶೇಷ ಕಾಳಜಿ ಆಸಕ್ತಿ ಅವರ ಅಂತಃಕರಣಕ್ಕೆ ಸ್ಪಂದಿಸುವ ಮಿಡಿಯುವ ನೋವುಗಳನ್ನು ಕಣ್ಣಾರೆ ಕಂಡು ಅನುಭವಿಸಿ ಅವರಿಗಾಗಿ ವ್ಯಥೆಪಟ್ಟವರು ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುವಲ್ಲಿ ಶ್ರಮಿಸಿದ್ದಾರೆ. ಸ್ಪಂದನಾ ಜೀವಿಗಳಾದ ಇವರು ಬಡವರ ಬವಣೆಯ ಕುರಿತಾಗಿ ಮನ ಮಿಡಿಯುವ ಅಂಕಣ ಬರಹಗಳನ್ನು ಬರೆದಿದ್ದಾರೆ.

ಪ್ರತಿಭಟನೆಯ ಧ್ವನಿಯನ್ನು ಬರಹದ ಮೂಲಕ ಕಂಡುಕೊಳ್ಳಬಹುದು ದಲಿತರ ಮೇಲೆ ಅನುಕಂಪ ಉಳ್ಳವರು ಇವರು ಲಲಿತ ಪ್ರಬಂಧ ಸಾಹಿತ್ಯ ಅಂಕಣ ಬರಹ ವಚನ ಅನುವಾದ ಸಂಪಾದನೆ ಇತರ ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿಯೂ ಜಾಲಾಡಿಸಿದ ಪ್ರತಿಭಾನ್ವಿತ ವ್ಯಕ್ತಿ ಹೀಗೆ ಅವರ

[illegible]

ಸಾಹಿತ್ಯ ಹಲವು ಮುಖಗಳಲ್ಲಿ ತಮ್ಮನ್ನು ಪರಿಚಯ ಮಾಡಿಕೊಂಡಿದ್ದಾರೆ. ಲಲಿತ ಪ್ರಬಂಧ ಅಂಕಣ ಬರಹ ಅವರ ಬರಹದ ಜೀವನದ ಜೀವಾಳವಾಗಿದೆ.

ವೀರೇಂದ್ರ ಅವರ ಸಾಹಿತ್ಯದ ಸಾಧನೆ ಒಂದು ತೂಕದ್ದಾದರೆ ಅದರಲ್ಲಿಯ ಲಲಿತ ಪ್ರಬಂಧ ಸಾಹಿತ್ಯ ಒಂದು ಅನನ್ಯ ತೂಕ. ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಪಾದಾರ್ಪಣೆ ಮಾಡಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ ಇವರು ಸಾಹಿತ್ಯ ಕ್ಷೇತ್ರಕ್ಕೆ ಅತಿಮೂಲ್ಯ ಕಾಣಿಕೆ ಇದರಿಂದ ಸಂದಿದೆ.

ಕಾಯಕ ಜೀವಿ

ಕಾಯಕವೇ ಕೈಲಾಸವೆಂಬ ವಚನಕಾರರ ಸೂಕ್ತಿಯನ್ನು ಅನುಸರಿಸಿ ನಡೆದ ಕಾಯಕ ಜೀವಿಗಳು ಸದಾ ಪಾದರಸೆದಂತ ಕಾರ್ಯ ತತ್ಪರರಾಗುವ ಕರ್ತವ್ಯ ನಿಷ್ಠೆ ಪ್ರಾಶಂಸನೀಯ ಸದಾ ಸಾಹಿತ್ಯದ ಹಿತ ಚಿಂತಕರಾಗಿ ಯಾವುದಕ್ಕೂ ಬೇಸರಿಸದೆ ಕೆಲಸ ಮಾಡುವಂಥ ಚೇತನ ಜೀವಿಗಳು ಗುರು–ಲಿಂಗ–ಜಂಗಮ ಪ್ರೇಮಿಗಳಾದ ಶರಣ ತತ್ವಕ್ಕೆ ಬದ್ಧರಾಗಿ ನಡೆದುಕೊಂಡರು ವಚನ ಸಾಹಿತ್ಯವನ್ನು ಆಳವಾಗಿ ಅಭ್ಯಾಸಿಸಿ ಅಲ್ಲಿಯ ಮಹಿಮರ ಬದುಕನ್ನು ಕುರಿತು ಬಸವ ತತ್ವದ ಮೌಲ್ಯಗಳನ್ನು ಎತ್ತಿ ಹಿಡಿದು ಶರಣರ ಬದುಕನ್ನು ಕುರಿತು ಸಾಹಿತ್ಯಕವಾಗಿ ಲೇಖನಿಯಲ್ಲಿ ಒಳಮೂಡಿಸಿದ್ದಾರೆ. ಶರಣರ ಪ್ರೇಮಿಗಳಾಗಿದ್ದ ವೀರೇಂದ್ರ ಸಿಂಪಿ ಅವರು ಅನೇಕ ಶರಣರ ಅನುಪಮ ಚರಿತೆಗಳು ಓದುತ್ತಿದ್ದರು ಇದರ ಗಾಢ ಪರಿಣಾಮ ಬೀರಿದ್ದನ್ನು ಕಾಣಬಹುದು. ಅದಕ್ಕಾಗಿಯೇ ವಚನ ಸಾಹಿತ್ಯದತ್ತ ಆಸಕ್ತಿವಹಿಸಿ ಬಸವ ತತ್ವದ ಮೌಲ್ಯಗಳನ್ನು ಜನತೆಗೆ ತೋರಿಸಿದ ಶರಣ ಪ್ರೇಮಿಗಳು ಇವರಾಗಿದ್ದಾರೆ.

ಸೃಜನ ಶೀಲ ಬರಹಗಾರರು

Crealovity ಎಂಬುದು ವೀರೇಂದ್ರ ಸಿಂಪಿ ಅವರಲ್ಲಿ ಮೈಯತ್ತಿ ನಿಂತಿದೆ ಅವರು ನಿಂತ ನೀರಾಗಲು ಎಂದು ಮನಸ್ಸು ಮಾಡಿದವರಲ್ಲಿ ಹೊಸದಲಿಲ್ಲ ವಿಶೇಷತೆಯನ್ನು ಕಾಣುವ ಸೃಜನ ಜೀವಿಗಳವರು. ಇವರು ಸ್ವಭಾವತಃ ಇನ್ನೊಬ್ಬರಿಗಿಂತ ವಿಶಿಷ್ಟರಾಗಿ ಸಾಹಿತ್ಯ ಸೃಷ್ಟಿಸುವಲ್ಲಿ ಆಶೆಪಟ್ಟವರು ಉತ್ತಮ ಪಾತ್ರಗಳು ಎಲ್ಲಕ್ಕಿಂತ ಮಿಗಿಲಾಗಿ ಉತ್ಸಾಹಗಳು ಅವರು ನಗೆಸುವ ನಗೆಗಾರರು ಹಾಗು ಅಂಕಣ ಬರಹಗಳಂತಹ ದುಃಖ ಸಾಗರದಲ್ಲಿ ಮುಳುಗಿಸುವಂಥಹ ಮೋಡಿಗಾರರು ಇವರಾಗಿದ್ದಾರೆ.

ಅವರ ಸೃಜನ ಶೀಲತೆ ಹಲವು ದಿಕ್ಕುಗಳಲ್ಲಿ ಹರಿದಿದೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ತಮ್ಮ ಪ್ರತಿಭಾ ವ್ಯಾಪಾರ ಹರಿಬಿಟ್ಟಿದ್ದಾರೆ. ಅದಕ್ಕಾಗಿ ಬಳಸಿಕೊಂಡ ಮಾಧ್ಯಮ ವೈವಿಧ್ಯಮಯವಾಗಿದೆ. ಮಣ್ಣಿನ ಮಗನಾದ ಜನಪದ ವಿದ್ವಾಂಸರಾದ ಲಿಂಗಣ್ಣನವರ ಮಗನಾದ ಕಾರಣ ಜನಪದ ನಡೆನುಡಿ ಸಂಸ್ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸಿದ ಬರಹಗಾರರಾಗಿದ್ದಾರೆ. ವಚನ ಸಾಹಿತ್ಯವನ್ನು ಆಳವಾಗಿ ಆಭ್ಯಸಿಸಿ ಅದರಂತೆ ನಡೆದುಕೊಂಡ ಶರಣ ಜೀವಿಗಳು ಹೌದು.

ಒಟ್ಟಾರೆಯಾಗಿ ವೀರೇಂದ್ರ ಸಿಂಪಿ ಅವರ ಸೃಜನಶೀಲತೆ ಅವರ ವ್ಯಕ್ತಿತ್ವವನ್ನು ಎತ್ತರಿಸಿದ ಅವರ ಹಿರಿಮೆ ಗರಿಮೆಗಳನ್ನು ಜನರಲ್ಲಿ ಬಿಂಬಿಸಿದೆ.

ವ್ಯಕ್ತಿತ್ವ

ಇವರ ವ್ಯಕ್ತಿತ್ವ ಬಹುಮುಖವಾದುದು ಅವರ ಬದುಕು ಬರಹದ ಮೂಲಕ ವ್ಯಕ್ತವಾಗುವುದು ಬದುಕು ಪ್ರಾಮಾಣಿಕವಾಗಿದ್ದರೆ ಉತ್ತಮ ಸಾಹಿತ್ಯ ನಿರ್ಮಾಣವಾಗುತ್ತದೆ. ಅವರ ಬದುಕು ತೆರೆದಿಟ್ಟ ಪುಸ್ತಕದಂತೆ ಈ ದಿಶೆಯಲ್ಲಿ ಪ್ರೊ. ವೀರೇಂದ್ರ ಸಿಂಪಿ ಅವರ ವ್ಯಕ್ತಿತ್ವ ಅರ್ಥೈಸಿಕೊಳ್ಳುವುದು ಅವಶ್ಯವೆನಿಸುತ್ತಿದೆ. ಸುಸಂಸ್ಕೃತ ಮನೆತನದಲ್ಲಿ ಜನಸಿದ ಇವರಲ್ಲಿ ಬೆಳವಣಿಗೆಗೆ ಮನೆಯ ಆರೋಗ್ಯಕರ ಪರಿಸರವೂ ಸಹ ಅಷ್ಟು ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಮಹತ್ವ ಸಂಗತಿಯಾಗಿದೆ.

ಸರಳ ವಿನಯ ಪೂರ್ವಕ ಮನೋಭಾವದ ವೀರೇಂದ್ರ ಸಿಂಪಿ ಅವರು ತಮ್ಮ ವಿಶಾಲ ಹೃದಯದಿಂದ ಸರ್ವರ ಮನಸೂರಗೈಯುತ್ತಾರೆ. ಅವರ ನಿರಹಾಕಾರ ಮನೋಭಾವವು ಪ್ರತಿಭೆಗೆ ಹೆಚ್ಚಿನ ಮೆರಗನ್ನು ನೀಡಿದೆ ನಿಷ್ಪಕ್ಷಪಾತ ಪ್ರಾಮಾಣಿಕ ಸ್ವಭಾವದ ವೀರೇಂದ್ರ ಸಿಂಪಿ ಅವರು ಅದ್ಭುತ ಜ್ಞಾನದ ಗಣಿ. ಕ್ರಿಯಾತ್ಮಕ ಬರಹಗಳಿಂದ ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದಂತಹ ವಿಶಿಷ್ಟ ಛಾಪನ್ನು ಮೂಡಿಸಿದವರು ತುಂಬಾ ಉದಾರಗುಣ ಇದ್ದು ಅವನ್ನು ಅವರ ಜೀವನ ಹಾಗೂ ಬರವಣಿಗೆ ಆದರ್ಶಮಯವಾದದ್ದು ಬರಹದಲ್ಲೂ ಸಹ ಅವರ ಆಯ್ಕೆ ವಿಷಯಗಳು ವ್ಯಕ್ತಿಗತ ಚಿತ್ರಣಗಳಿಂದಲೇ ಅವರ ಅಂತರಾಳ ಎಂತಹ ನಿರ್ಮಲ ಹಾಗೂ ಪ್ರಾಂಜಲವಾದದ್ದು ಎಂಬುದನ್ನು ಕಾಣಬಹುದು ನಡೆನುಡಿಯಲ್ಲೂ ಸಹ ಅಷ್ಟು ನೇರವಾದ ಸಾದಾ ಜೀವನ ನಿರಾಡಂಬರ ಮನೋಭಾವದ ಪ್ರೊ. ವೀರೇಂದ್ರ ಸಿಂಪಿ ಅವರ ವ್ಯಕ್ತಿತ್ವ ಅನುಕರ್ಣೀಯವಾದದ್ದು ಆದರಣೀಯವಾದದ್ದು ನಿಸ್ವಾರ್ಥ ಮನೋಭಾವದ ವೀರೇಂದ್ರ ಸಿಂಪಿ ಅವರು ಮಹಾ ಮಾನವತಾವಾದಿಯಾಗಿ ತೋರುತ್ತಾರೆ.

ಸರಳ ಮಾತಿನ ಬಿಚ್ಚು ಮನಸ್ಸಿನ ನಗೆಗಾರರಾಗಿರುವ ಇವರು ತಮ್ಮ ವಾಕ್ ಚಾತುರ್ಯದಿಂದ ಜನರನ್ನು ತಮ್ಮತ್ತ ಯಾವಾಗಲೋ ಎಳೆದುಕೊಂಡಿರುತ್ತಾರೆ. ಅನಿಸಿದ್ದನ್ನು ನಿರ್ಭಡೆಯಿಂದ ಹೇಳುವಂತವರು ಅವರ ಸರಳ ನಡೆ ನುಡಿ ಬಂದವರನ್ನು ಬಹುಬೇಗ ತಮ್ಮವರನ್ನಾಗಿ ಮಾಡಿಕೊಳ್ಳುತ್ತದೆ.

ಅವರ ಸೃಜನಶೀಲತೆ ಹಲವು ದಿಕ್ಕುಗಳಲ್ಲಿ ಹರಿದಿದೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ತಮ್ಮ ಪ್ರತಿಭಾ ವ್ಯಾಪಾರ ಹರಿಬಿಟ್ಟಿದ್ದಾರೆ ಅದಕ್ಕಾಗಿ ಬಳಸಿಕೊಂಡ ಮಾಧ್ಯಮ ವೈವಿಧ್ಯಮಯವಾಗಿದೆ. ಅದರಂತೆ ಉತ್ತಮ ಸಮಾಜ ಸುಧಾರಕರು ವಚನ ಸಾಹಿತ್ಯವನ್ನು ಆಳವಾಗಿ ಅಭ್ಯಾಸಿಸಿ ಅದರಂತೆ ನಡೆದುಕೊಂಡ ಶರಣಜೀವಿಗಳು ಹೌದು.

ವೀರೇಂದ್ರ ಸಿಂಪಿ ಅವರ ವ್ಯಕ್ತಿತ್ವ ಬಹುಮುಖವಾದುದು ಅವರ ಬದುಕು ಮತ್ತು ಕೃತಿಗಳಲ್ಲಿ ಅದು ವ್ಯಕ್ತವಾಗಿದೆ. ಬದುಕು ಪ್ರಮಾಣಿಕವಾಗಿದ್ದರೆ ಉತ್ತಮ ಸಾಹಿತ್ಯ ನಿರ್ಮಾಣವಾಗುತ್ತದೆ. ಅವರ ಬದುಕು ತೆರೆದಿಟ್ಟ ಪುಸ್ತಕದಂತೆ ಈ ದಿಶೆಯಲ್ಲಿ ಪ್ರೊ. ವೀರೇಂದ್ರ ಸಿಂಪಿಯವರನ್ನೂ ಅರ್ಥೈಸಿಕೊಳ್ಳುವುದು ಅವಶ್ಯಕವೆನಿಸುತ್ತದೆ. ಸರಳ ಮಾತಿನ ಬಿಚ್ಚು ಮನಸ್ಸಿನ ನಗೆಗಾರರಾಗಿರುವ ಇವರು ತಮ್ಮ ವಾಕ್ ಚಾತುರ್ಯದಿಂದ ಜನರನ್ನು ತಮ್ಮತ್ತ ಯಾವಗಲೋ ಎಳೆದುಕೊಂಡಿರುತ್ತಾರೆ. ಮನಸ್ಸನ್ನು ಮನದಲ್ಲಿರುವ ದುಗುಡವನ್ನು ದೂರಮಾಡಿ ಸಲಹೆ ನೀಡುವ ಉತ್ಸಾಹ ತುಂಬುವ ಮೋಡಿಕಾರರು ಅವರು ಯಾವುದನ್ನೂ ಸರಳವಾಗಿ, ಬೇಡಾದದ್ದನ್ನೂ ನಿರ್ಭಿಡೆಯಿಂದ ಹೇಳುವಂತವರು. ಅವರ ಸರಳ ನಡೆ–ನುಡಿ ಬಂದವರನ್ನು ಬಹುಬೇಗ ತಮ್ಮವರನ್ನಾಗಿ ಮಾಡಿಕೊಳ್ಳುತ್ತದೆ.

ವೀರೇಂದ್ರ ಸಿಂಪಿ ಅವರ ಸ್ನೇಹ ಜೀವಿಗಳು ಎಲ್ಲರನ್ನು ತನ್ನವರೆಂದು ತಿಳಿದುಕೊಳ್ಳುವ ಉದಾರ ಹೃದಯಿಗಳು ಪ್ರೊ. ವೀರೇಂದ್ರ ಸಿಂಪಿ ಅವರಿಗೆ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನೂರಾರು ಕಡೆಯಿಂದ ಕರೆಗಳು ಬಂದಿವೆ, ಬರುತ್ತಿವೆ, ಇವರಿಗೆ ಗರ್ವ ಎಂಬುದು ಇಲ್ಲ ತಮಗೆಷ್ಟು ಕೆಲಸವಿರಲಿ ಜನಾನುರಾಗಿಗಳಾಗಿ ಅತ್ತಧಾವಿಸುವ ಸರಳ ಜೀವಿಗಳು ಅವರು ಭಾಷಣ ಮಾಡುತ್ತಿದ್ದರೆ ಜನರಿಗೆ ಸಮಯ ಹೋದುದರ ಪರಿವೆಯೇ ಇರುವುದಿಲ್ಲ ಅಂಥ ಮೋಡಿ ಅವರ ಭಾಷಣದಲ್ಲಿದೆ ಸಂದರ್ಭಕ್ಕೆ ತಕ್ಕಂತೆ ಜನರ ಅಭಿರುಚಿಯನ್ನಂತೆ ತಮ್ಮ ಪ್ರತಿಭೆಯನ್ನು ಮರೆಸುವಂಥ ಒಟ್ಟು ಒಳ್ಳೆಯ ಭಾಷಣಕಾರರು ಅವರು ಒಬ್ಬ ಒಳ್ಳೆಯ ವಾಗ್ಮಿಗಳಂತೆ ಜನರ ಮನದಲ್ಲಿ ಜನರ ಮನಸ್ಸನ್ನು ಸೆಳೆದ ಒಬ್ಬ ಪ್ರತಿಭಾ ಸಂಪನ್ನ ಕವಿಗಳಾಗಿದ್ದಾರೆ.

ಗೌರವ ಪ್ರಶಸ್ತಿ

ಯಾವ ಪ್ರಶಸ್ತಿಗೂ ಅವರು ಆಶೆ ಪಟ್ಟವರಲ್ಲ ಅವರಿಗೆ ದೊರೆತ ಪ್ರಶಸ್ತಿಗಳಿಗಿಂತ ಎಷ್ಟೋ ಹೆಚ್ಚು ಗೌರವ ಪ್ರಶಸ್ತಿಗಳು ಪಡೆದುಕೊಂಡಿದ್ದಾರೆ ವಿದ್ಯಾರ್ಥಿಗಳ ಮನ ಮೆಚ್ಚುಗೆ ಪಡೆದಿದ್ದಾರೆ. ಇವರ ವಿದ್ಯಾರ್ಥಿಗಳು ಎಷ್ಟೋ ಜನ ಒಳ್ಳೆಯ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ತಮ್ಮ ಅಪೂರ್ವವಾದ ಬರವಣಿಗೆಯಿಂದ ಜನಮನ ಸೂರೆಗೊಂಡ ಪ್ರೊ. ವೀರೇಂದ್ರ ಸಿಂಪಿ ಅವರಿಗೆ ಅರಸಿ ಬಂದ ಪ್ರಶಸ್ತಿಗಳು ಸನ್ಮಾನಗಳು ದೊರೆತಂತಹ ಸ್ಥಾನಮಾನ ಗೌರವಗಳು ಅಪಾರ.

೧.	ಭಾವಮೈದುನ	ಲಲಿತ ಪ್ರಬಂಧಗಳ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ೧೯೮೧ ರಲ್ಲಿ ಬಹುಮಾನ
೨.	ಸ್ವಚ್ಛಂದ ಮನದ ಸುಳಿದಾಟ	೧೯೮೪ ರಿಂದ ೧೯೮೬ ರವರೆಗೆ ೧೯೮೭ ರಿಂದ ೧೯೯೦ ರವರೆಗೆ ಕರ್ನಾಟಕ ವಿ.ವಿ. ಶಿವಾಜಿ ವಿಶ್ವವಿದ್ಯಾಲಯ ಬಿ.ಎ. ೧ ಹಾಗೂ ಬಿ.ಎಸ್.ಸಿ. ವಿದ್ಯಾರ್ಥಿಗಳಿಗೆ ಕಡ್ಡಾಯದ ಪಠ್ಯ ಪುಸ್ತಕ
೩.	ಪರಿಸರ ಸ್ಪಂದನ	೧೯೮೮ ರಲ್ಲಿ ಗು.ವಿ.ವಿ. ದಿಂದ ಪ್ರೋತ್ಸಾಹ ಬಹುಮಾನ
೪	ಕಾಯಕ ಸನ್ಮಾನ ಪ್ರಶಸ್ತಿ	೨೦೦೦ ಉದಯೋನ್ಮುಖ ಯುವ ಬರಹಗಾರರ ಬಳಗ ಗುಲ್ಬರ್ಗಾದವರಿಂದ
೫.	ಪ್ರಭುರಾವ ಕಂಬಳಿವಾಲೆ. ಪ್ರಶಸ್ತಿ	ಕರ್ನಾಟಕ ಬರಹಗಾರರು ಮತ್ತು ಕಲಾವಿದರ ಸಂಘ ಬೀದರ
೬.	ಗೌರವ ಪ್ರಶಸ್ತಿ	ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ೧೯೯೭ ರ ಗೌರವ ಪ್ರಶಸ್ತಿ
೭.		೧೯೯೦ ರಲ್ಲಿ ಬೀದರ ಜಿಲ್ಲಾ ೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

೮. ೨೦೦೧ ರಲ್ಲಿ ಬಿಜಾಪೂರ ಜಿಲ್ಲಾ ೭ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

೯. ೧೯೯೨ ರಿಂದ ೧೯೯೫ ರವರೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ.

೧೦. ೧೯೯೮ ರಿಂದ ೨೦೦೧ ರವರೆಗೆ ೨ನೇ ಸಾ.ಕ.ಸಾ. ಅಕಾಡೆಮಿಯ ಸದಸ್ಯ

೧೧. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಗೌರವಾಧ್ಯಕ್ಷ ಬೀದರ ಜಿಲ್ಲಾ

೧೨. ಅಖಿಲ ಕರ್ನಾಟಕ ಶಕ್ತಿ ಕೇಂದ್ರದ ಬೀದರ ಜಿಲ್ಲಾ ಗೌರವಾಧ್ಯಕ್ಷ

ಹೀಗೆ ಇವರಿಗೇ ಹುಡುಕಿಕೊಂಡು ಬಂದ ಗೌರವ ಪ್ರಶಸ್ತಿಗಳ ಪಟ್ಟಿಯೇ ಬೆಳೆಯುತ್ತದೆ. ಪ್ರೊ ವೀರೇಂದ್ರ ಸಿಂಪಿ ಅವರು ತಮ್ಮ ಸರಳ ಶೈಲಿಯ ಉದಾತ್ತ ಜೀವನದೊಂದಿಗೆ ತಮ್ಮ ಅಪ್ರತಿಮವಾದ ಬರಹಗಳ ಮೂಲಕ ಅನೇಕ ಸ್ಥಾನಮಾನಗಳು ಗೌರವಗಳನ್ನು ಪಡೆಯುವ ಮುಖಾಂತರ ಕನ್ನಡ ಭಾಷೆಗೆ ಕನ್ನಡ ನಾಡಿಗೆ ಕೀರ್ತಿಯನ್ನು ತಂದಿದ್ದಾರೆ.

ಸಾಹಿತ್ಯ ಸೃಷ್ಟಿ (ಸಾಧನೆ)

ಸಾಹಿತ್ಯಕವಾಗಿ ವೀರೇಂದ್ರ ಸಿಂಪಿ ಅವರ ಸೇವೆ ಸ್ಮರಣೀಯವಾದದ್ದಗಿದೆ. ಮೂಲತಃ ಗದ್ಯ ಲೇಖಕನಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರ ಕಾವ್ಯ ಪ್ರತಿಭೆ ಈ ಕೆಳಗಿನ ಸಾಹಿತ್ಯ ಪ್ರಕಾರಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಸಿಂಪಿಯವರು ಲಲಿತ ಪ್ರಬಂಧ, ಅಂಕಣ ಬರಹ, ವೈಚಾರಿಕ ಸಾಹಿತ್ಯ, ಜೀವನ ಚರಿತ್ರೆ, ಸಂಪಾದನೆ, ಅನುವಾದ, ವಚನ ಸಾಹಿತ್ಯ ಇತರೇ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿ ರಚಿಸಿ ಅವುಗಳ ವೈಜ್ಞಾನಿಕ ಅಧ್ಯಯನದ ಶಿಸ್ತಿಗೆ ಅಳವಡಿಸಿದ ರೀತಿ ಅತ್ಯುತ್ತಮ.

ಲಲಿತ ಪ್ರಬಂಧ ಸಾಹಿತ್ಯ

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಮಟ್ಟಿಗೆ ಹೇಳುವುದಾದರೆ ವಿವಿಧ ಸಾಹಿತ್ಯ ಪ್ರಕಾರಗಳಿಗೆ ಸಿಕ್ಕಷ್ಟು ಮನ್ನಣೆ, ಮರ್ಯಾದೆ ಲಲಿತ ಪ್ರಬಂಧಕ್ಕೆ ದಕ್ಕಿಲ್ಲ. ಉಳಿದ ಸಾಹಿತ್ಯ ಪ್ರಕಾರಗಳಷ್ಟೇ ಹುಲುಸಾಗಿ, ಸತ್ವಯುತವಾದ ಕಾಣಿಕೆ ಲಲಿತ ಪ್ರಬಂಧಗಳೂ ನೀಡಿವೆ. ಇವು ಯಾವುದೇ ಬಗೆಯ ಸಾಹಿತ್ಯ ಪ್ರಕಾರಗಳಿಗೆ ಕಮ್ಮಿಯಿಲ್ಲ

ಪ್ರಬಂಧ ಎಂಬ ಪದವು "ಹರ್ಷ ಚರಿತೆ" "ಲೀಲಾವತಿ" "ಜೈಮಿನಿ ಭಾರತ" ಮೊದಲಾದ ಕೃತಿಗಳಲ್ಲಿ ಮಹಾ ಪ್ರಬಂಧದ ರೀತಿಯಲ್ಲಿ ಅರ್ಥೈಸಲಾಗಿದೆ. ಈ ಶತಮಾನದ ಸಂದರ್ಭದಲ್ಲಿ ಮಾತ್ರ ಪ್ರಬಂಧ ಪದವು ದೊಡ್ಡ ದೊಡ್ಡ ಗ್ರಂಥಗಳಿಂದ ಸರಿದು ಕಡಿಮೆ ಗಾತ್ರದ ಬರವಣಿಗೆಗೆ

ಬಳಸಿಕೊಳ್ಳಲಾಯಿತು. ಅಪ್ಪಟ ಇಂಗ್ಲೀಷನ 'Essay' ಎಂಬ ಪದಕ್ಕೆ ಸಂವಾದಿಯಾಗಿ "ಲಲಿತ ಪ್ರಬಂಧ" ಎಂಬ ಕನ್ನಡದ ಪದವನ್ನು ಬಳಸಲಾಗುತ್ತದೆ.

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನವೋದಯ, ಪ್ರಗತಿಶೀಲ, ನವ್ಯ ದಲಿತ-ಬಂಡಾಯದ ಬೇರುಗಳು ಅಲ್ಲಲ್ಲಿ ಕಾಣಸಿಗುತ್ತವೆ. ಆದರೆ ಲಲಿತ ಪ್ರಬಂಧದ ಬಗೆಗೆ ಯಾವುದೇ ರೀತಿಯ ಹೋಲಿಕೆಯಾಗಲೀ, ಉದಾಹರಣೆಗಳಾಗಲಿ ಸಿಗುವುದಿಲ್ಲ. ಲಲಿತ ಪ್ರಬಂಧ ಪಶ್ಚಿಮದ ಕೊಡುಗೆಯಾದರೂ ಇದು ಅಪ್ಪಟ ನೆಲದ ಗುಣವನ್ನೇ ಹೊಂದಿ ಬೆಳದಿರುವುದು ಮಾತ್ರ ಸತ್ಯ ಈ ಹಿನ್ನಲೆಯಲ್ಲಿ ಪ್ರೊ. ವೀರೇಂದ್ರ ಸಿಂಪಿಯವರ ಲಲಿತ ಪ್ರಬಂಧ ಕೃತಿಗಳಿಗೆ ಐತಿಹಾಸಿಕ ಮಹತ್ವ ಬರುತ್ತದೆ.

೧. ಕಾಗದದ ಚೂರು

೨. ಭಾವ ಮೈದುನ

೩. ಸ್ವಚ್ಛಂದ ಮನದ ಸುಳಿದಾಟ

೪. ಪರಿಸರ ಸ್ಪಂದನ

೫. ಲಲಿತ ಪ್ರಬಂಧಗಳು

೬. ಆಯ್ದ ಲಲಿತ ಪ್ರಬಂಧಗಳು

ಪ್ರೊ. ವೀರೇಂದ್ರ ಸಿಂಪಿಯವರ ಲಲಿತ ಪ್ರಬಂಧಗಳಿಗೆ ವಸ್ತುಗಳ ನಿಯಮವಿಲ್ಲ ನರನಿಂದ ಹರನವರೆಗೆ ಕಡ್ಡಿಯಿಂದ ಗುಡ್ಡದವರೆಗೆ ಎಲ್ಲ ಬಗೆಯ ವ್ಯಕ್ತಿ ವಸ್ತುಗಳಿಗೆ ಧ್ವನಿ ನೀಡಿದ್ದಾರೆ. ಒಂದು ವಸ್ತುವನ್ನೇ ಕೇಂದ್ರವಾಗಿಟ್ಟುಕೊಂಡು ಬೇಕಾದ ಕಡೆಗಳಲೆಲ್ಲ ಸುತ್ತುತ್ತ ಅದರ ಮೂಲಕ ಧಕ್ಕೆ ಬಂದಂತೆ ಕೊನೆಗೆ ಬಂದು ಸೇರುವುದು ಮೋಜಿನದು. ಇಂಥಲ್ಲಿಯೇ ಪ್ರಬಂಧಕಾರರ "ಮತಿ" ಮಾತಾಡುವುದು. ಕೆಲವು ಪ್ರಬಂಧಗಳು ಓದುವಾಗ ಹರಟೆಗಳಂತೆ ಕಂಡರೂ ಒಳಹೊಕ್ಕು ನೋಡಿದಾಗ ಅವುಗಳು ಆತ್ಮ ವಿನೋದದಿಂದ ಕೂಡಿವೆ. ಬಹುವಾಗಿ ಇವರ ಲಲಿತ ಪ್ರಬಂಧಗಳು ವ್ಯಕ್ತಿ ನಿಷ್ಠವಾಗಿವೆ.

ಅಂಕಣ ಸಾಹಿತ್ಯ

ಲಲಿತ ಪ್ರಬಂಧಗಳಂತೆ ಅಂಕಣ ಬರಹಳಲ್ಲಿಯೂ ಪರಿಸರದ ಏರುಪೇರು, ಸಾಮಾಜಿಕ ಅಸಮಾನತೆ ಪ್ರಸಕ್ತ ಸನ್ನಿವೇಶದ ಅವಾಂತರಗಳ ಕಡೆಗೆ ಹೆಚ್ಚು ಮನ ಬಿಚ್ಚುತ್ತಾರೆ. ಈ ನಿಟ್ಟಿನಲ್ಲಿ ಅಂಕಣ ಬರಹಗಳು ಓದುಗರನ್ನೇ ನೇರವಾಗಿ ಪ್ರತಿನಿಧಿಸುತ್ತವೆ. ಅವರೊಳಗೆ ಪ್ರವೇಶಿಸುತ್ತವೆ. ಈ ಗುಣವೇ ಅವರ ಅಂಕಣ ಸಾಹಿತ್ಯದ ಜೀವ ಜೀವಾಳ ಬಹುಮಟ್ಟಿಗೆ ಪ್ರಬಂಧ ಸಾಹಿತ್ಯದ ಹತ್ತಿರಕ್ಕೆ ನಿಲ್ಲುವಂತಿರುವ ಅಂಕಣ ಬರಹ ಡಾ|| ಹಾ.ಮಾ. ನಾಯಕರಿಂದ ಪ್ರಸಿದ್ದಿಗೆ ಬಂತು. "ವಿಶ್ವಕಲ್ಯಾಣ" ವಾರ ಪತ್ರಿಕೆಗೆ ಸುಮಾರು ೮೦ ಕ್ಕಿಂತಲೂ ಅಧಿಕ ಅಂಕಣ ಬರಹಗಳನ್ನು ಬರೆದು ಸಿಂಪಿಯವರು ಈ ಕ್ಷೇತ್ರದಲ್ಲಿಯೂ ಪ್ರಸಿದ್ಧಿ ಪಡೆದರು. ಅವರ ಅಂಕಣ ಬರಹದಿಂದಾಗಿಯೇ ಪತ್ರಿಕೆ ಪ್ರಸಿದ್ದಿ ಪಡೆಯಿತೆಂದು ಹೇಳಬಹುದು. ನಂತರ "ದಿಕ್ಸೂಚಿ" ಮಾಸಿಕ ಪತ್ರಿಕೆಗೆ ಅಂಕಣವನ್ನು ಬರೆದರು. ಅವುಗಳ ಒಂದು ಗುಚ್ಛವೇ "ಜೀವನವೆಂದರೇನು"? ಎಂಬ ಅಂಕಣ ಸಾಹಿತ್ಯ ಕೃತಿ. ಜೀವನವೆಂದರೇನು ? ೬೯ ಅಂಕಣ

ಬರಹಗಳಿರುವ ಅಪರೂಪದ ಕೃತಿ ಬಾಲಕೃಷ್ಣನ ಬಾಯಿಯಲ್ಲಿ ಬ್ರಹ್ಮಾಂಡವೇ ಅಡಗಿದಂತೆ ಈ ಕೃತಿಯಲ್ಲಿ ಜಗತ್ತಿನ ಪ್ರಚಲಿತ ಸಮಸ್ಯೆ, ಸವಾಲುಗಳ ನೋಟವಿದೆ ವ್ಯವಸ್ಥೆಯ ಬೇಡಿಕೆಗೆ ಅಂಕಣ ಬರಹಗಳು ಸ್ಪಂದಿಸಿವೆ.

ವಿಚಾರ ಸಾಹಿತ್ಯ

ವೈಚಾರಿಕ ಬರಹಗಳು ಗ್ರಂಥಗಳು ಮಾನವನ ಮನದ ಮಲೀನತೆ ತೊಳೆಯಲು ಪೂರಕ ಸಾಮಗ್ರಿ ಒದಗಿಸುತ್ತವೆ. ಪ್ರಮುಖವಾಗಿ ಬರ್ಟ್ರಂಡ್ ರಸೆಲ್‌ರ ವಿಚಾರಧಾರೆಗಳನ್ನು ಮೊದಲ ಬಾರಿಗೆ ಕನ್ನಡಕ್ಕೆ ತಂದುಕೊಟ್ಟ ಕೀರ್ತಿ ಪ್ರೊ. ವೀರೇಂದ್ರ ಸಿಂಪಿಯವರಿಗೆ ಸಲ್ಲಿಸಬೇಕು. ಪಾಪ ಪ್ರಜ್ಞೆ, ನೈತಿಕ ಶಿಕ್ಷಣ, ತತ್ವಜ್ಞಾನ, ಜ್ಞಾನದಿಂದ ಚಾರಿತ್ರ್ಯ ನಿರ್ಮಾಣಗಳ ವಿಷಯದಲ್ಲಿ ಗುಟ್ಟಾಗಿ ಮತ್ತು ಅಷ್ಟೇ ಗಟ್ಟಿಯಾದ ಕೊಡುಗೆ ನೀಡಿರುವರು. ಇವುಗಳು ಮಾನವೀಯ ಮೌಲ್ಯಗಳ ಉದ್ದೀಪನವನ್ನು ಮದ್ದಾಗಬೇಕು. ವಾಸ್ತವ ಬದುಕಿನ ಅನಾರೋಗ್ಯಕರ ಬೆಳವಣಿಗೆಗೆ ಮೂಲಾವಾಗಬೇಕು. ಈ ನಿಟ್ಟಿನಲ್ಲಿಯೇ ಅವರ ವಿಚಾರಗಳು ಹರಿದಾಡುತ್ತವೆ. ಶಿಕ್ಷಣದ ಬಗ್ಗೆ ಬರ್ಟ್ರಂಡ ರಸೆಲ್‌ರ ವಿಚಾರಧಾರೆಗಳನ್ನು ವಿಷಯಗಳ ಬೋಧನೆ ಹಾಗೂ ಉತ್ತಮ ಚಾರಿತ್ರ್ಯದ ತರಬೇತಿ ಎಂದು ವಿಂಗಡಿಸಿ ನೋಡಲಾಗಿದೆ. ಅವುಗಳೊಂದಿಗೆ ಮುಖ್ಯವಾಗಿ ದೈಹಿಕ ಶಕ್ತಿ ಧೈರ್ಯ ಸೂಕ್ಷ್ಮ ಸಂವೇದನೆ ಹಾಗೂ ಬುದ್ಧಿಮತ್ತಗಳೆಂಬ ನಾಲ್ಕು ಗುಣಗಳ ವಿಚಾರ ಚರ್ಚೆ ತುಂಬಾ ವೈಜ್ಞಾನಿಕ ನೆಲಗಟ್ಟಿನ ಮೇಲೆ ನಡೆದಿದೆಯಾದರೂ ಇವೆಲ್ಲವುಗಳನ್ನು ಭಾರತೀಯ ಸಂದರ್ಭಕ್ಕನುಸರಿಸಿ ಅಧ್ಯಯನದ ಶಿಸ್ತಿಗೆ ಗುರಿಪ್ಪಡಿಸುವ ಅಗತ್ಯವಿದೆ. ಅಧ್ಯಯನದ ದೃಷ್ಟಿಯಿಂದ ಈ ವಿಚಾರ ದೃಷ್ಟಿಯನ್ನು ....

೧. ಮಾನವ ಜನಾಂಗದ ಕುರಿತ ವಿಚಾರ

೨. ಶಿಕ್ಷಣ ಕುರಿತ ವಿಚಾರ

೩. ಚಾರಿತ್ರ್ಯ ನಿರ್ಮಾಣ ಕುರಿತು ವಿಚಾರ

೪. ಜಾಗತಿಕ ಸರಕಾರ ಹಾಗೂ ಮಾನವ ಶಕ್ತಿಗಳ ವಿರೋಧಾಭ್ಯಾಸ

೫. ನಿಮ್ಮ ಕಾಲದ ತತ್ವಜ್ಞಾನಗಳು

ಇವುಗಳಲ್ಲಿ ಪ್ರಸ್ತುತವಾಗಿರವುದೋ ಅಥವಾ ಕೇವಲ ಪುಸ್ತಕಗಳಿಗೆ ಸೀಮಿತವೋ ಎಂದು ತರ್ಕಿಸುವ ಚಿಂತಿಸುವ ಗುಣ ಹುಡುಕಲಾಗುವುದು.

ವಚನ ಸಾಹಿತ್ಯ

ವೀರೇಂದ್ರ ಸಿಂಪಿ ಅವರು ತಮ್ಮ ಸಂಘಟನಾ ಚಾತುರ್ಯದಿಂದ ಹಲವು ವಿದ್ವನ್ನರ ಸಹಾಯ ಪಡೆದು ಮಹತ್ವ ಪೂರ್ಣವಾದ ಕೃತಿಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಜೀವನ ಚರಿತ್ರೆಗಳಲ್ಲಿ ಸ್ಪಷ್ಟತೆ, ಸಂಪಾದನೆಗಳಲ್ಲಿ ವಿಷಯ ಆಕರ ಪರಿಕರನ್ನು ಪಕ್ಕಾ ಅರಿವು ಅನುವಾದಗಳಲ್ಲಿ ಮೂಲ ಆಶಯಕ್ಕೆ ಕುಂದುಂಟಾಗದಂತೆ ಅಲ್ಲಲ್ಲಿ ತಮ್ಮದೇ ಭಾವ ಶೈಲಿಯಿಂದ ಮೂಲಕ್ಕಿಂತಲೂ ಮೇಲಕ್ಕೆರುತ್ತಾರೆ. ವಚನ

ಸಾಹಿತ್ಯಗಳಲ್ಲಿ ಈ ಹಿಂದಿನ ಎಲ್ಲಾ ಆದಾರಗಳೊಂದಿಗೆ ನವೀನ ರೀತಿಯಲ್ಲಿ ವಚನಗಳಿಗೆ ವಚನಕಾರಿಗೆ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ. ವಚನ ಸಾಹಿತ್ಯಧ್ಯಾಯವು ಮುಖ್ಯವಾಗಿ

ಚನ್ನಬಸವಣ್ಣ ಆಯ್ದಕ್ಕಿ ಮಾರಯ್ಯ ನವರ ವಚನಗಳ ಅಧ್ಯಯನವು ಆಗಿದೆ. ಜೀವನದ ಗುರಿ ಸಾದನೆ ಸಿದ್ದಿಗೆ ಸಾಣೆ ಹಿಡಿಯುವುದಾಗಿದೆ. ಈ ಕೃತಿಗಳು ಅವರವರ ವ್ಯಕ್ತಿ ವಿಶಿಷ್ಟತೆಗಳ ಅಭಿವ್ಯಕ್ತಿಯಾಗಿಸುವಲ್ಲಿಯ ಕೃತಿಕಾರರ ಕಾಳಜಿ, ಕಳಕಳಿಯನ್ನು ಗ್ರಹಿಸುವುದಾಗಿದೆ. ಶರಣರ ಬದುಕು ಹಾಗೂ ವಿಚಾರಗಳನ್ನು ಚಾರಿತ್ರಿಕವಾಗಿ, ವಸ್ತುನಿಷ್ಠವಾಗಿ, ವೈಜ್ಞಾನಿಕವಾಗಿ ಇಂದಿಗೂ ಓದುಗರಿಗೆ ಗ್ರಹಿಸಿಕೊಡಬಲ್ಲ ಸಾಮರ್ಥ್ಯ ಅರ್ಥೈಸುವ ರೀತಿ ಗುರುತಿಸುವುದು. ಒಂದು ಪ್ರಬಲ ಮನೋಧರ್ಮದ ನಿರ್ಮಾಣ ಸಾಮಾನ್ಯರಿಗೆ ಹೇಗೆ ಮಾಡಿಸಿಕೊಡಲಾಗಿದೆ. ಎಂದು ಪರಿಗಣಿಸಿಲಾಗುವುದು ಈ ದೃಷ್ಟಿಯಿಂದ ಚನ್ನಬಸವಣ್ಣ ಆಯ್ದಕ್ಕಿ ಮಾರಯ್ಯ ಕೃತಿಗಳು ಬಹಳ ಮಹತ್ವ ಪಡೆಯುತ್ತವೆ. ಚನ್ನಬಸವಣ್ಣನವರು ಇವರ ಮೊಟ್ಟ ಮೊದಲ ವಚನ ಸಾಹಿತ್ಯ ಸಂಪಾದನ ಗ್ರಂಥವಾಗಿದೆ.

೧. ಮಾಸ್ತಿ ವೆಂಕಟೇಶ ಅಯ್ಯಂಗಾರ

೨. ಸಿಂಪಿ ಲಿಂಗಣ್ಣನವರ ಸಾಹಿತ್ಯ

೩. ಆರ್.ವ್ಹಿ. ಬಿಡಪ್

ಸಣ್ಣ ಕತೆಗಳ ಆಚಾರ್ಯ ಪುರುಶೋತ್ತಮರೆಂದೇ ಖ್ಯಾತನಾಮರಾದ ಮಾಸ್ತಿಯವರ ಜೀವನ ಸಾಧನೆಗಳಿಗೆ ನೇರವಾಗಿ ಸ್ಪಂದಿಸುವ ಪ್ರಯತ್ನ ಈ ಕೃತಿಯಲ್ಲಿ ನಡೆದಿದೆ.

ಸಿಂಪಿ ಲಿಂಗಣ್ಣನವರ ಸಾಹಿತ್ಯ ಕೃತಿಯು ಅವರ ಸಾಹಿತ್ಯ ಕೃಷಿಯ ಕೃತಿಗಳ ಸ್ಥೂಲ ಪರಿಚಯದೊಂದಿಗೆ ಮೇಲು ಹೊದಿಕೆಯನ್ನು ಸ್ವಲ್ಪ ಮಟ್ಟಿಗೆ ಸರಿಸುವ ಪ್ರಯತ್ನ ನಡೆದಿದೆ.

ಇನ್ನು ಆರ್.ವ್ಹಿ. ಬಿಡಪ್‌ನವರ ಕುರಿತ ಜೀವನ ಚರಿತ್ರೆ ಕೃತಿಯು ಸ್ವಲ್ಪ ಮಟ್ಟಿಗೆ ತೃಪ್ತಿ ನೀಡುವಂತಹದು. ಒಂದು ಜೀವನ ಚರಿತ್ರೆ ಹೇಗಿರಬೇಕು. ಎಂಬುದಕ್ಕೆ ಉತ್ತಮ ಉದಾಹರಣೆ ಪ್ರಸ್ತುತ ಕೃತಿ ಒಟ್ಟು ಜೀವನ ಚರಿತ್ರೆಗಳ ದಾಖಲೆಗಳಲ್ಲಿಯೇ ಅತ್ಯುತ್ತಮ ಕೃತಿ ಇದಾಗಿದೆ.

ಸೃಜನ ಸಾಹಿತ್ಯ ಲೇಖಕನ ಪ್ರತಿಭೆಗೆ ಹಿಡಿದ ಕನ್ನಡಿಯಾದರೆ ಸಂಪಾದಿತ ಕೃತಿಗಳು ಅನೇಕ ಪ್ರತಿಭೆಗಳನ್ನು ಹೊರತರಲು ಅವುಗಳಿಗೆ ಬೆಳಕು ನೀಡಲು ಪ್ರಯತ್ನಿಸುತ್ತಿವೆ. ಹಾಗಾಗಿ ಸಂಪಾದಿತ ಕೃತಿಗಳಿಗೂ ವಿಶಿಷ್ಟವಾದ ಸ್ಥಾನವಿದೆ. ಸಂಪಾದಕನಿಗೆ ಮುಖ್ಯವಾಗಿ ಸಹೃದಯತೆ ಇರಬೇಕೆನ್ನುವುದು ಮುಖ್ಯವಾದ ಅಂಶ ಹಾಗಾಗಿ ಸಹೃದಯಿ ವೀರೇಂದ್ರ ಸಿಂಪಿ ಅವರು ಈ ಮೂರು ಕೃತಿಗಳನ್ನು ಸಂಪಾದಿಸಿದ್ದಾರೆ.

೧. ಚನ್ನಬಸವಣ್ಣನವರ ವಚನಗಳು

೨. ಬೀದರ ಜಿಲ್ಲಾ ದರ್ಶನ

೩. ಬೀದರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು

ಸಂಶೋಧನ ಸಂಪಾಧನ ಹಾಗೂ ಸಂಕಲನಗಳು ಮೇಲು ನೋಟಕ್ಕೆ ಬೇರೆ ಬೇರೆಯಾಗಿ ಕಂಡರೂ ಅವು ಮೂರು ಒಂದಕ್ಕೊಂದು ಪೂರಕಗಳು ಎಂದು ಹೇಳಬಹುದು. ಆದ್ದರಿಂದ ಅವುಗಳನ್ನು ಒಂದರಿಂದೊಂದು ಪ್ರತ್ಯೆಕಿಸಿ ನೋಡಲಾಗುವುದಿಲ್ಲ ಸಂಶೋಧನ ಕ್ರಿಯೆಯಲ್ಲಿ ಕ್ರಮಬದ್ದವಾದ ಸಂಶೋಧನ ಮತ್ತು ಸಂಕಲನಗಳು ನಡುವೆ ಇರುತ್ತವೆ. ಹಾಗೆಯೇ ಸಂವೀದನ ಮತ್ತು ಸಂಕಲನ ಕ್ರಿಯೆಗಳಲ್ಲಿ ಸಂಶೋಧನಾತ್ಮಕ ದೃಷ್ಟಿ ಇರಬೇಕಾದುದು ತೀರ ಅವಶ್ಯಕ ಹೀಗಾಗಿ ಅವುಗಳು ಆಂತರಿಕವಾಗಿ ಒಂದಕ್ಕೊಂದು ಸಂಬಂಧ ಹೊಂದಿರುತ್ತವೆ. ಸಂಪಾದಿತ ಕೃತಿಯು ಕಟ್ಟು ತಂದ ಬುತ್ತಿ ಸಂದರ್ಭದ ಕಟ್ಟೆಯ ಮೇಲೆ ಬಿಚ್ಚಿಡಲು ಪ್ರಯತ್ನಿಸುವುದು ಉಣಬಡಿಸಿವುದು. ಈ ಕಾರಣಗಳಿಂದ ಮೇಲಿನ ಕೃತಿಗಳು ಮಹತ್ವ ಪಡೆಯುತ್ತವೆ.

ಅನುವಾದ

ಕನ್ನಡ ಸಾಹಿತ್ಯದಲ್ಲಿ ತಮ್ಮ ವಿಶಿಷ್ಟ ಬರವಣಿಗೆಗಳಿಂದ ಖ್ಯಾತರಾಗಿರುವಂತಹ ಪ್ರೊ. ವೀರೇಂದ್ರ ಸಿಂಪಿ ಅವರು ತುಂಬಾ ಹೆಮ್ಮೆಯ ಬರಹಗಾರರು ಅವರು ಮನೋಹಕ ಗಟ್ಟಿ ಬರಹಗಳಿಂದ ಜನಮನ ಸೂರೆಗೊಂಡವರು ಒಂದು ಭಾಷೆಯ ಕೃತಿಯನ್ನು ಇನ್ನೊಂದು ಭಾಷೆಗೆ ತರ್ಜುಮೆಗಳಾಗುದರಲ್ಲಿ ಆಗುವಂತಹ ಪ್ರಯೋಜನ ಅಪಾರ ಹಾಗೇಯೇ ತರ್ಜುಮೆ ಮಾಡುವಾಗ ಪಡುವ ಕಷ್ಟ ಶ್ರಮ ಶ್ರದ್ಧೆಯಿಂದ ಇಂತಹ ಅನುವಾದ ಕಾರ್ಯ ನೆರವಾಗುತ್ತದೆ.

ಪ್ರೊ. ವೀರೇಂದ್ರ ಸಿಂಪಿ ಅವರು ಪ್ರಭಾವಶಾಲಿ ಕ್ರಿಯಾತ್ಮಕ ಬರಹಗಾರರಾಗಿರುವವರ ಜೊತೆಗೆ ಅನುವಾದದಲ್ಲಿಯೂ ತಾವೇನು ಕಡಿಮೆಯಿಲ್ಲ ಎಂಬತೆ ತಮ್ಮ ವಿಶಿಷ್ಟ ವಿದ್ವತ್ತಿನಿಂದ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೃತಿಗಳನ್ನು

೧. ಯೋಗಾರಂಭ

೨. ಶ್ರೀ ಅರವಿಂದ ಸಮಗ್ರ ಸಾಹಿತ್ಯದ ಅನುವಾದ

೩. ಗಾಯ್ ಡಿ. ಮಾಪಾಸಾನ ಕಥೆಗಳು

ಸಿಂಪಿಯವರು ಮೂಲತಃ ಆಂಗ್ಲ ಭಾಷೆಯ ಪ್ರಾಧ್ಯಾಪಕರಾಗಿರುವುದರಿಂದ ಸಹಜವಾಗಿ ಆ ಕಡೆಗೆ ಸಾಹಿತ್ಯಗಳ ಅಧ್ಯಯನ ಅನುವಾದಗಳ ಕುರಿತು ಚಿಂತಿಸಿದರು. ಗಾಯ್.ಡಿ. ಮಾಪಾಸಾನ ವಿಚಾರಧಾರೆಗಳನ್ನು ಶ್ರೀ ಅರವಿಂದರ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸಿದರು.

ಇತರೆ

೧. ಇಂಡಿ ತಾಲೂಕು ದರ್ಶನ

೨. ಬಣ್ಣಗಾರಿಕೆ

೩. ಹತ್ತು ಪಾಶ್ಚಾತ್ಯ ಕಾದಂಬರಿಕಾರರು

ಇಂಡಿ ತಾಲೂಕು ದರ್ಶನ

"ಇಂಡಿ ತಾಲೂಕು ದರ್ಶನ" ಸಂಕ್ಷಿಪ್ತವಾದ ತಾಲೂಕಿನ ಮಾಹಿತಿಯ ಸಂಗ್ರಹವೇ ಆಗಿದೆ ಇಲ್ಲಿ ಇಂಡಿ ತಾಲೂಕಿನ ಸಂಪೂರ್ಣ ಚಿತ್ರಣವನ್ನು ಪ್ರೊ. ವೀರೇಂದ್ರ ಸಿಂಪಿ ಮಾಡಿಕೊಟ್ಟಿರುವುದು ಕಾಣಬಹುದು.

"ಬಣ್ಣಗಾರಿಕೆ" ಇದು ದೇಶಿಯ ಸೊಗಡನ್ನು ಬಳಸಿಕೊಂಡಿರುವ ಕೃತಿಯಾಗಿದೆ. ಇದರಲ್ಲಿ ದೇಶಿಯ ಉದ್ಯಮಗಳಲ್ಲೊಂದು ಬಣ್ಣಗಾರಿಕೆ ಅಂದರೆ (ಬಟ್ಟೆಯ ನೂಲಿಗೆ ಬಣ್ಣ ಕೂಡಿಸುವುದು ಇದರ ಆಗು ಹೋಗುಗಳ ಸಂಕ್ಷಿಪ್ತ ಪರಿಚಯವನ್ನು ಕಾಣುತ್ತೇವೆ. ಜಾಗತೀಕರಣಗಳ ಚಿಂತೆಗೆ ಸೂಕ್ತ ಸಲಹೆ ಒದಗಿಸುವ ನಿಟ್ಟಿನಲ್ಲಿ ಇದೊಂದು ಅದ್ಭುತ ಪ್ರಯೋಗವಾಗಿದೆ.

ಹತ್ತು ಪಾಶ್ಚತ್ಯ ಕಾದಂಬರಿಕಾರು ಇದು ಪ್ರಕಟಿತ ಕೃತಿಯಾಗಿದೆ ಇದರಲ್ಲಿ ಹತ್ತು ಪಾಶ್ಚತ್ಯ ಕಾದಂಬರಿಕಾರರ ಸಂಕ್ಷಿಪ್ತ ಪರಿಚಯ ಮತ್ತು ಅವರ ಕಾದಂಬರಿಯ ವಿಶೇಷತೆಯನ್ನು ಕಾಣುತ್ತೇವೆ.

ಅಧ್ಯಾಯ–ಮೂರು

ಪ್ರೋ ವೀರೇಂದ್ರ ಸಿಂಪಿ ಅವರ ಸಾಹಿತ್ಯದ ಸಮಗ್ರ ವಿವೇಚನೆ

ಲಲಿತ ಪ್ರಬಂಧ ಸಾಹಿತ್ಯ

ಆಂಗ್ಲ ಸಾಹಿತ್ಯದ ಪ್ರಭಾವದಿಂದಾಗಿ ಹಲವಾರು ಗದ್ಯ ಸಾಹಿತ್ಯ ಪ್ರಕಾರಗಳು ಕನ್ನಡಕ್ಕೆ ಕಾಲಿಟ್ಟವು ಇವುಗಳಲ್ಲಿ ಕತೆ, ಕಾದಂಬರಿ, ಪ್ರವಾಸಕಥನ, ನಾಟಕ, ಲಲಿತ ಪ್ರಬಂದ ಪ್ರಮುಖವಾದವು. ಆಂಗ್ಲ ಭಾಷೆಯಲ್ಲಿರುವ 'Essay' ಎಂಬ ಪದದ ಪರ್ಯಾಯ ಪದವಾಗಿ ನಾವಿಂದು ಪ್ರಬಂಧ ಶಬ್ದವನ್ನು ಪ್ರಯೋಗಿಸುತ್ತಿದ್ದೇವೆ. ಇಂಗ್ಲೀಷನಲ್ಲಿ 'Essay' ಯತ್ನಿಸು (ATTEMPT) ಎಂದರ್ಥ. ಪ್ರಕರಣ ಬಲದಿಂದ ಅದಕ್ಕೆ ಏಕ ವಿಷಯ ನಿಬದ್ಧವಾದ ಲೇಖನ ಎಂಬ ಅಭಿಪ್ರಾಯ ಬಂದಿದೆ. ಪ್ರಬಂಧ ಎಂದರೆ ಕಟ್ಟು, ವಿಷಯಗಳ ಬಂಧ, ಅಥವಾ ಅನಿಜ್ಞಿತಾರ್ಥ ಸಂಬಂಧ, ಈ ಲಕ್ಷಣದಂತೆ ಪರಿವಿಡಿಯೂ ಹೊಂದಿಕೆಯೂ ಕೆಡದಂತೆ ವಿಷಯಗಳನ್ನು ಮಂಡಿಸುವುದು ಪ್ರಬಂಧವೆನಿಸುತ್ತದೆ. ವಸ್ತು ಪ್ರಸಿದ್ಧವಾಗಿರಬಹುದು, ಕಲ್ಪಿತವಾಗಿರಬಹುದು. ಭಾಷೆ ಗದ್ಯ, ಪದ್ಯ, ಚಂಪೂ ಎಂಬ ಯಾವ ರೂಪದಲ್ಲಿಯೂ ಇರಬಹುದು ಗಾತ್ರಕ್ಕೂ ಮಿತಿಯೆಂಬುದಿಲ್ಲ "ಕಾದಂಬರಿ", "ಹರ್ಷಚರಿತೆ, "ಆದಿಪುರಾಣ", "ಲೀಲಾವತಿ", "ಜಗನ್ನಾಥ ವಿಜಯ", "ಜೈಮಿನಿ ಭಾರತ", ಎಲ್ಲವೂ ಪ್ರಬಂಧಗಳೆ ಕೊನೆಗೆ ಯಕ್ಷಗಾನವೂ ಪ್ರಬಂಧ ಪ್ರಬಂಧವು ವಿಶೇಷಾರ್ಥಕವಾಗಿಲ್ಲ, ಸಾಮಾನ್ಯಾರ್ಥಕವಾಗಿದೆ. [೧]

ಲಲಿತ ಪ್ರಬಂದವೆಂದರೆ "ತೂರಿಬಟ್ಟ ಚಿಂತನೆಗಳು" ಎಂದು ಬೇಕನ್‌ನು ಹೇಳಿದರೆ "ಮನಸ್ಸಿನ ಸ್ವಚ್ಛಂದ ಲಹರಿ" ಯೆಂದು ಡಾ|| ಜಾನ್‌ಸನ್ ಹೇಳುತ್ತಾರೆ. ತೀ.ನಂ.ಶ್ರೀ. ಹೇಳುವ ಒಂದೊಂದು ಪ್ರಬಂಧವೂ ಲೇಖಕನ ಒಂದೊಂದು ಚಿತ್ತಲಹರಿಯ ನಿರೂಪಣೆ ಮಾತು ತೀರ ಸಮಂಜಸವಾಗಿದೆ ಒಟ್ಟಿನಲ್ಲಿ ವಸ್ತುವೊಂದು ಲೇಖಕನಲ್ಲಿ ಹುಟ್ಟಿಸುವ ವೈಯಕ್ತಿಕ ಪ್ರತಿಕ್ರಿಯೆ ಅಥವಾ ಭಾವಲಹರಿಯೇ ಲಲಿತ ಪ್ರಬಂಧವಾಗಿದೆ. [೨] ಆಂಗ್ಲ ಭಾಷೆಯ ವಿಶ್ವಕೋಶದಲ್ಲಿ ಪ್ರಬಂಧವನ್ನು A Short literary composition dealing with a single subject usually from a personal point of view and without attempting completeness'' [೩] ಎಂದು ಹೇಳಿದರೆ, ಕೋಲಂಬಿಯಾ ಎನ್ ಸೈಕ್ಲೊಪಿಡಿಯಾದಲ್ಲಿ '' ....The writer persuade the readers to accept a point of view ''[೪] ಎಂಬುದನ್ನು ಸೇರಿಸಿದ್ದಾರೆ.

ಲಲಿತ ಪ್ರಬಂಧದಲ್ಲಿ–ಸಂಕ್ಷಿಪ್ತತೆ, ಆತ್ಮೀಯತೆ, ಗದ್ಯದಲ್ಲಿಯ ಭಾವಗೀತೆ, ಹಗುರಾದ ವಸ್ತು ಮತ್ತು ಶೈಲಿ, ಸುನಿತದ ಏಕಾಗ್ರತೆ ವಾದದ ಚಾತುರ್ಯ, ಜೀವನದಲ್ಲಿ ಆಸಕ್ತಿ, ಜೀವನ ವಿಮರ್ಶೆ, ವ್ಯಕ್ತಿತ್ವ ನಿರೂಪಣ ರಸಿಕತೆ, ಆಕರ್ಷಕ ದೃಷ್ಟಿಕೋನ, ಆಳವಾದ ಜ್ಞಾನ, ಮೋಹಕವಾದ ಶೈಲಿ, ಕಲ್ಪಕತೆ, ಚಮತ್ಕಾರದ ತಿರುವುಗಳು, ಸಾಮಾಜಿಕ ಪ್ರಜ್ಞೆ, ಈ ಲಕ್ಷಣಗಳನ್ನು ನಾವು ಲಲಿತ ಪ್ರಬಂಧದಲ್ಲಿ ಕಾಣಬಹುದು.

---

೧. ಕಡೆಂಗೋಡ್ಲು ಶಂಕರಭಟ್ ವಾಙ್ಮಯ ತಪ್ಪಸ್ಸು ಪುಟ–೪೪ ೧೯೬೭

೨. ಪ್ರೋ ವೀರೇಂದ್ರ ಸಿಂಪಿ ಕನ್ನಡದಲ್ಲಿ ಲಲಿತ ಪ್ರಬಂಧಗಳು ೧೯೭೨

೩. Webster's new twentieth centaury dictionary IInd edition 1978

೪. The concise Columbia Encyclopedia, page-273 1982

ಲಲಿತ ಪ್ರಬಂಧಗಳ ವಸ್ತು ಒಂದೆ ಇದ್ದರೂ ಉದ್ದೇಶ ಮತ್ತು ಶೈಲಿಯ ಭಿನ್ನತೆಯಿಂದಾಗಿ ಅವು ವೈವಿಧ್ಯಮಯವಾಗುತ್ತವೆ. ಪ್ರತಿಯೊಂದು ಪ್ರತಿಯೊಂದು ಪ್ರಬಂದವೂ ಒಂದು ವರ್ಗವೆ ಆಗಬಹುದು ಅಣುವಿನಿಂದ ಬ್ರಹ್ಮಾಂಡದವರೆಗೆ ಇದರ ವ್ಯಾಪ್ತಿ ಇದೆ. ಪ್ರಬಂಧಗಳಲ್ಲಿ ವ್ಯಕ್ತಿತ್ವ ವಯಕ್ತಿಕತೆ ಅಥವಾ 'Personality' ಎನ್ನುವುದು ಓದುಗ ಮತ್ತು ಲೇಖಕನನ್ನು ಆತ್ಮೀಯರನ್ನಾಗಿಸುವ ಅಂಶವಾಗಿದೆ. ಹೀಗಾಗಿ ಪ್ರಬಂಧವೆಂದರೆ ವಿಚಾರ ಹಾಗೂ ಭಾವನೆಗಳ ಕ್ರಮಬದ್ಧ ಮತ್ತು ಲಯ ಪೂರ್ಣ ಹರಿದಾಟಗಳ ಅಭಿವ್ಯಕ್ತಿಯಾಗಿದೆ.

ಭಾರತದ ಬದುಕಿನ ಒಟ್ಟು ಕಲೆ ಮತ್ತು ಜ್ಞಾನಕ್ಕೆ ಸಂಸ್ಕೃತ ಭಾಷೆಯ ವೇದಗಳು ಆಧಾರವಾಗಿರುವಂತೆ ಪ್ರಸ್ತುತ ಪ್ರಬಂಧ ಪದಕ್ಕೂ ಅವೆ ಮೂಲವಾಗಿವೆ. ಪ್ರಬಂಧ ಪದದ ಅರ್ಥ ವೇದಗಳಲ್ಲಿ ಇಷ್ಟು ವ್ಯವಸ್ಥಿತವಾದ ರಚನೆಯುಳ್ಳ ಬರಹ ಎಂದು, ಸಂಸ್ಕೃತ ಪದವಾದ ಪ್ರಬಂಧಕ್ಕೆ ಸಂಸ್ಕೃತ ಶಬ್ದಕೋಶದಲ್ಲಿಯೂ ಇಷ್ಟು ಅರ್ಥವಿದೆ. "ಪ್ರಬಂಧ ಗ್ರಂಥ, ಕೃತಿ, ಕಾವ್ಯ ಮೊದಲಾದ ರಚನೆ" ಎಂದು ಪಂಪಭಾರತ, ಅನಂತನಾಥಪುರಾಣ, ಲೀಲಾವತಿ, ಜೈಮಿನಿಭಾರತ, ಜಗನ್ನಾಥ ವಿಜಯ, ಮೊದಲಾದ ಕನ್ನಡದ ಮೇರು ಕೃತಿಗಳಲ್ಲೂ ಇದೆ ಅರ್ಥದಲ್ಲಿ ಪ್ರಬಂಧ ಪದವನ್ನು ಆಯಾ ಕೃತಿಗಳ ಕವಿಗಳು ಬಳಸಿದ್ದಾರೆ. ಗದ್ಯ-ಪದ್ಯ ಮಿಶ್ರಿತವಾದ ಚಂಪೂ ಶೈಲಿಗೆ ಮಾತ್ರ ಪ್ರಬಂಧ ಪದ ಅನ್ವಯಿಸಲಾಗದು ಓದುವಂತೆ ಹಾಡುವ ರಚನೆಗಳಿಗೂ ಪ್ರಬಂಧವೆನ್ನುತ್ತಿದ್ದರೆಂದು "ಕವಿರಾಜಮಾರ್ಗ" ಪರಿಸರದ ಕನ್ನಡ ಸಾಹಿತ್ಯದಲ್ಲಿ ಎಂ.ಎಂ. ಕಲಬುರ್ಗಿಯವರು ಉಲ್ಲೇಖಿಸಿದ್ದಾರೆ. ಪ್ರಬಂಧವೆಂದರೆ ವ್ಯವಸ್ಥಿತವಾಗಿ ಆದಿ-ಮಧ್ಯ ಅಂತ್ಯಗಳಿಂದ ಕೂಡಿದ, ವಿಷಯ, ವಸ್ತು, ರಸ, ಅಲಂಕಾರಗಳ ದೈವಿಯಿಂದ ಸುಂದರವಾದ ಬರಹ ಎಂದು ಅರ್ಥ ಇದಕ್ಕೆ ಗದ್ಯ, ಪದ್ಯ, ಗಾತ್ರಗಳ ಭೇದವಿಲ್ಲ"[೧]

ಸುಮಾರು ಏಳು ದಶಕಗಳ ಅವಧಿಯ ಈ ಪ್ರಬಂಧ ಕೃಷಿ ಅದ್ಭುತವಾದದ್ದು, ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿಯೆ ತನ್ನದೆ ಆದ ವೈಶಿಷ್ಟ್ಯ ವೈವಿಧ್ಯತೆಯಿಂದ ಕೂಡಿದುದು, ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮುಂತಾದ ರಂಗಗಳ ವಿಚಾರಗಳಿಗೆ ತಕ್ಕಷ್ಟು ಪ್ರಾಮುಖ್ಯ ನೀಡಿ ಉನ್ನತವಾದ ಕಲಾತ್ಮಕ ಪ್ರಜ್ಞೆಯೊಂದಿಗೆ ಅಭಿವ್ಯಕ್ತಿಸಿಕೊಂಡದ್ದು ಪ್ರಾರಂಭದ ಪ್ರಬಂಧಗಳಲ್ಲಿ ಉಪದೇಶವೆ ಹೆಚ್ಚಾಗಿ ಕಾಣಿಸಿಕೊಂಡಿದ್ದರೂ ನಂತರದಲ್ಲಿ ಈ ಪ್ರಕಾರ ಸಾಹಿತ್ಯಾಂಶಗಳನ್ನು ಗಮನಾರ್ಹವಾಗಿ ಅಳವಡಿಸಿಕೊಂಡಿದೆ. ಬದುಕಿನ ವಿವಿಧ ರಂಗಗಳಿಗೆ ಅದು ನೀಡಿದ ಕೊಡುಗೆಗಿಂತ ಸಾಹಿತ್ಯಕ್ಕೆ ಹೆಚ್ಚಾಗಿ ಗದ್ಯ ಪ್ರಕಾರಕ್ಕೆ ನೀಡಿದ ಸೇವೆ, ತಂದ ಬದಲಾವಣೆ ಅಭೂತಪೂರ್ವವಾದದ್ದು.

ರೋಮ್ಯಾಂಟಿಕ್ (ಯುಗ) ಮನೋಭಾವದ ನಂತರ ಸಾಹಿತ್ಯರಂಗದಲ್ಲಿ ಉಂಟಾದ ಹಲವಾರು ಸ್ಥಿತ್ಯಂತರಗಳು ಕಥೆ ಕಾದಂಬರಿ ಕಾವ್ಯಗಳನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಂಡತೆ ಲಲಿತ ಪ್ರಬಂಧ ಪ್ರಕಾರವನ್ನು ಬಳಸಿಕೊಳ್ಳಲಿಲ್ಲ. ಇದಕ್ಕೆ ಕಾರಣ ಬಹುಶಃ ಹೆಸರೆ ಸೂಚಿಸುವಂತೆ ಲಲಿತ ಪ್ರಬಂಧ ಬಹಳ ಕುಸುರಿನ ರಚನೆಯುಳ್ಳದ್ದು, ರಸಿಕದೃಷ್ಟಿ ಸ್ವಚ್ಛಂದ ಮನೋವಿಲಾಸ, ಊಹೆಯ ಪರಾಕಾಷ್ಠೆ, ಸ್ವಾಭಾವಿಕ ಹಾಸ್ಯ ಚಮತ್ಕಾರದ ತಿರುವುಗಳಿಂದ ಕೂಡಿರುವಂತಹುದು. ಹೀಗಾಗಿ ಪ್ರಬಂಧಕಾರನಿಗೆ ಸ್ವಾಭಾವಿಕವಾಗಿಯೆ ಸುಖ ಸಂತೋಷ, ಸ್ವಾತಂತ್ರ್ಯ ವಿರಾಮಗಳು ಬೇಕಾಗುತ್ತವೆ.

---

೧. ಕಡೆಂಗೋಡ್ಲು ಶಂಕರಭಟ್ ವಾಙ್ಮಯ ತಪಸ್ಸು ಪುಟ-೪೪ ೧೯೬೭

ಆದರೆ ದಿನೆ ದಿನೆ ಕಠಿಣವಾಗುತ್ತ ಸಾಗುತ್ತಿರುವ ಈಗಿನ ಒಟ್ಟು ಜೀವನ ಕ್ರಮವೇ ಹಲವಾರು ಸಮಸ್ಯೆಗಳಿಗೆ ಮೂಲವಾಗಿ ವ್ಯಕ್ತಿಯ ನೆಮ್ಮದಿಯನ್ನು ಹಾಳು ಮಾಡುತ್ತಿರುವುದರಿಂದ ಅಶಾಂತಿ ಸಮಾಧಾನಗಳು ವ್ಯಕ್ತಿ ಜೀವನದಿಂದ ಮಾಯವಾಗುತ್ತವೆ. ಇದಕ್ಕಾಗಿಯೇ ಇರಬೇಕು ಇತ್ತೀಚೆಗೆ ಭಾವಗೀತದ ಶಿಖರವನ್ನೇರಬಲ್ಲ ಪ್ರಬಂಧಗಳು ಹೆಚ್ಚಾಗಿ ಕಾಣುತ್ತಿಲ್ಲ. ಇತರ ಸಾಹಿತ್ಯ ಪ್ರಕಾರಗಳ ಪ್ರಾಬಲ್ಯ, ಆಧುನಿಕ ಕಲಾವಿದರು ಹೆಚ್ಚಾಗಿ ಕಥೆ, ಕಾದಂಬರಿ ನಾಟಕಗಳಿಗೆ ಒಲಿದಿರುವುದು ಕೂಡ ಪ್ರಬಂಧ ಸಾಹಿತ್ಯದ ಬೆಳವಣಿಗೆಯನ್ನು ಕುಂಠಿತಗೊಳಿಸಿದೆ. ವೇಗದ ಜೀವನದ ವಿಧಾನದಿಂದಾಗಿ ಕಿರಿದರಲ್ಲೆ ಹಿರಿದನ್ನು ಕೇಳಲು–ಹೇಳಲು ಹಾತೊರೆಯುತ್ತಿರುವ ಇಂದಿನವರೆಗೆ ಪ್ರಬಂಧದಷ್ಟು ಸಮರ್ಥ ಮಾಧ್ಯಮ ಬೇರೊಂದಿರಲಾರದು. ಬದ್ಧತೆಯಿಂದ ದೂರವಾಗಿ ಸಾಕ್ಷಿ ಪ್ರಜ್ಞೆಯಿಂದ ಕೃತಿ ರಚಿಸಿದರೆ ಮಾತ್ರ ಮೌಲಿಕ ಸಾಹಿತ್ಯ ಕೊಡಲು ಸಾಧ್ಯವೆನ್ನುವವರು ಈ ಕಡೆ ಗಮನ ಹರಿಸಿದರೆ ಪ್ರಬಂಧ ಪ್ರಕಾರ ಮತ್ತೊಮ್ಮೆ ತನ್ನ ಎಲ್ಲಾ ಸಾಧ್ಯತೆಯಿಂದ ನಳನಳಿಸಿತು.

ಲಲಿತ ಪ್ರಬಂಧಗಳ ವಸ್ತು ಒಂದೆ ಇದ್ದರೂ ಉದ್ದೇಶ ಮತ್ತು ಶೈಲಿಯ ಭಿನ್ನತೆಯಿಂದಾಗಿ ಅವು ವೈವಿಧ್ಯಮಯವಾಗುತ್ತದೆ. ಪ್ರಬಂಧಕಾರ ವಸ್ತುವಿನ ಹಿಡಿತಲ್ಲಿರದೆ ವಸ್ತುವೆ ಆತನ ಹಿಡಿತದಲ್ಲಿರುತ್ತದೆ. ಆದ್ದರಿಂದ ವಸ್ತುವಿನಕ್ಕಿಂತ ಶೈಲಿ ಮುಖ್ಯವಾಗುತ್ತದೆ. ಶೈಲಿಯ ಕೊರತೆಯಿಂದ ಲಲಿತ ಪ್ರಬಂಧವೆಂದೂ ಜನ್ಮತಾಳದು. ಪ್ರಬಂಧದಲ್ಲಿ ಲಘುತ್ವವೆಂದರೆ ಗಂಭೀರವಾದ ವಸ್ತುನಿಷ್ಠ ಅಭಿವ್ಯಕ್ತಿ ಇಲ್ಲದಿರುವುದು, ಇದರ ವಸ್ತು ವೈವಿಧ್ಯ ಅಗಾಧ. ಪ್ರತಿಯೊಂದು ಪ್ರಬಂಧವೂ ಒಂದು ವರ್ಗವೆ ಆಗಬಹುದು. ಅಣುವಿನಿಂದ ಬ್ರಹ್ಮಾಂಡದವರೆಗೆ ಅದರ ವ್ಯಾಪ್ತಿ ಇದೆ.

"ಕಾಗದದ ಚೂರು"

ಹೊಸಗನ್ನಡ ಸಾಹಿತ್ಯ ಪ್ರಕಾರದಲ್ಲಿ ಬಹುಮುಖ್ಯವಾದುದು "ಲಲಿತ ಪ್ರಬಂಧ" ಕನ್ನಡದ ಕೆಲವೇ ಜನ ಲಲಿತ ಪ್ರಬಂಧಕಾರರಲ್ಲಿ ಪ್ರೊ. ವೀರೇಂದ್ರ ಸಿಂಪಿಯವರು ಪ್ರಮುಖ ಸ್ಥಾನದಲ್ಲಿ ನಿಲ್ಲುತ್ತಾರೆ. ಪ್ರೊ.ವೀರೇಂದ್ರ ಸಿಂಪಿಯವರು ಕನ್ನಡ ಸಾಹಿತ್ಯದ ಲಲಿತ ಪ್ರಬಂಧ ಲೋಕಕ್ಕೆ "ಕಾಗದದ ಚೂರು" ಪ್ರಮುಖ ಕೊಡುಗೆಯಾಗಿದೆ.

"ಕಾಗದದ ಚೂರು" ಪ್ರಬಂಧದಲ್ಲಿ ಕಾಗದದ ಚೂರು ಎಷ್ಟು ಮಹತ್ವದ್ದು ಎಂದು ಹೇಳುತ್ತಾ-ಕಾಗದದ ಚೂರೆಂದರೆ ಲೇಖಕನ ಪ್ರಸವ ವೇದನೆಯನ್ನು ಕೊನೆಗಾಣಿಸಲು ನಿಂತ ಸೂಲಗಿತ್ತಿ ಶೆಟಕವ್ವ ದೇವತೆ ಈ ಪ್ರಬಂದದಲ್ಲಿ ಲೇಖಕರ ಕಲ್ಪನ ಲಹರಿ ಗರಿಗೆದರಿ ಇಳಿ ಹೊತ್ತಿನ ಹೂಬಿಸಿಲಿನಲ್ಲಿ ಸ್ವಚ್ಛಂದವಾಗಿ ವಿಹಾರ ಮಾಡಿದೆ. ಈಐವನದ ಏರು ಪೇರುಗಳ, ಮಾನವ ಸ್ವಭಾವದ ಓರೆಕೋರೆಗಳ ವಿಹಂಗಮ ದರ್ಶನವನ್ನು ಲೇಖಕರು ನಮಗೆ ನೀಡುತ್ತಾರೆ. ಸುತ್ತಲಿನ ಜೀವನವನ್ನು ಸೂಕ್ಷ್ಮವಾಗಿ ನಿರಿಕ್ಷಿಸಿ ರಮ್ಯವಾಗಿ ಬಣ್ಣಿಸುತ್ತಾರೆ. "ಕಾಗದದ ಚೂರು" "ಭಾವಮೈದುನ" ಈಗಾಗಲೆ ಪ್ರಕಟವಾಗಿರುವ ಸಂಕಲನಗಳಿಂದ ಆಯ್ದು ಸಂಕಲಿಸಿ ಪ್ರಕಟಿಸಿದ ಉತ್ತಮ ಲಲಿತ ಪ್ರಬಂಧಗಳಾಗಿವೆ. ಈ ಸಂಕಲನಕ್ಕೆ ಪ್ರಬಂದಗಳನ್ನು ಆಯ್ದುಕೊಟ್ಟವರು ಪ್ರೊ. ವೀರೇಂದ್ರ ಸಿಂಪಿ ಅವರ ಆತ್ಮೀಯ ಮಿತ್ರರು ಮತ್ತು ಕನ್ನಡದ ಪ್ರಮುಖ ವಿಮರ್ಶಕರು ಆಗಿರುವ ಡಾ॥ ಗಿರಿಡ್ಡಿಗೋವಿಂದರಾಜ ಅವರು ಈ ಪ್ರತಿಯೊಂದು ಪ್ರಬಂದಗಳು ಅತ್ಯುತ್ಕೃಷ್ಠವಾದವುಗಳಾಗಿವೆ.

ಈ ಸಂಕಲನವನ್ನು ಕರ್ನಾಟಕ ವಿಶ್ವವಿದ್ಯಾಲಯ ೧೯೮೪-೮೫, ೧೯೮೫-೮೬ ಮತ್ತು ೧೯೮೬-೮೭ನೇ ಸಾಲಿನ ಬಿ.ಎ. ಪ್ರಥಮ ವರ್ಗದ ವಿದ್ಯಾರ್ಥಿಗಳಿಗೆ ಕಡ್ಡಾಯ ಕನ್ನಡ ಪಠ್ಯಪುಸ್ತಕವೆಂದು ನಿಗದಿಮಾಡಿತು. ಹೀಗಾಗಿ ಇಲ್ಲಿನ ಲಲಿತ ಪ್ರಬಂಧಗಳು ಕರ್ನಾಟಕ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಬರುವ ಎಲ್ಲಾ ಕಾಲೇಜುಗಳ ಪ್ರಾಧ್ಯಾಪಕ ಹಾಗೂ ವಿದ್ಯಾರ್ಥಿಗಳ ನಿಖರ ವಿಮರ್ಶೆಗೆ ಒಳಗಾಗಿದವು. ಅರಿಕೆಯಲ್ಲಿ ಪ್ರಬಂಧಕಾರರು ಪ್ರಬಂದಗಳಲ್ಲಿ ನನ್ನ ಬಾಳ ಅನುಭವನ್ನೇ ವ್ಯಕ್ತಪಡಿಸಿದ್ದೇನೆ. ನನ್ನ ಜೀವನದಲ್ಲಿಯ ಯಾವುದೇ ಒಂದು ಅತೃಪ್ತಿ ನನ್ನ ಪ್ರಬಂಧಗಳಿಗೆ ಮುಖ್ಯ ಪ್ರೇರಣೆಯಾಗಿದೆ. ಎಂಬ ಮಾತು ಪ್ರಬಂಧಕಾರನ ದೊಡ್ಡತನವನ್ನು ತೋರಿಸುತ್ತದೆ.

"ಕಾಗದದ ಚೂರು" ಪ್ರಬಂಧದಲ್ಲಿ ಕಾಗದದ ಚೂರು ಎಷ್ಟು ಮಹತ್ವದ್ದು ಎಂದು ಹೇಳುತ್ತಾ ಕಾಗದದ ಚೂರಿನಲ್ಲಿ ಬ್ರಹ್ಮಾಂಡ ಅಡಗಿದೆ. ತೀರಾ ಕ್ಷುಲ್ಲಕ ವಸ್ತುವು ಅನಚೆತತೆಯನ್ನು ಹೊಂದಿರುವ ಸತ್ಯವನ್ನು ಇದು ವಿವರಿಸುತ್ತದೆ. ಕಾಗದದ ಚೂರು ಸಂಸ್ಕೃತಿಯ ಪುರಾತನತೆಯನ್ನು ಸಾರುತ್ತದೆ. ಕವಿಯ ಆಘಾದ ಸ್ಪೂರ್ತಿಯ ಹಿನ್ನಲೆಯೂ ಇದಾಗಬಹುದು ಚಿತ್ರಕಾರನ ಕುಶಲಕುಂಚನ ಕ್ಯಾನ್‌ವಾಸ್ ಕೂಡ ಇದಾಗಲು ಸಾಧ್ಯವಿದೆ.[೧] ಎಂದು ಆರಂಭದಲ್ಲಿಯೇ ಕಾಗದದ ಚೂರಿನ ಮಹಿಮೆಯನ್ನು ಹೇಳುತ್ತಾರೆ. ಕಾಗದದ ಚೂರು ಕೂಸುಧೆಯ ಉಗಮ ಸ್ಥಾನವೂ ಆಗಿದೆ. ಎಂದು ಕಡೆ ನಾನು ಕಾಗದದ ಚೂರು ಅದೇ ಕಾಗಲಿಲ್ಲವೆಂದು ಪರಿತಪಿಸುತ್ತಾ ಪ್ರಕೃತಿಯ ಪ್ರತಿ ಸೃಷ್ಟಿಕರ್ತನಾದ ಕವಿಯ ಬ್ರಹ್ಮಬರಹಗಳನ್ನು ಧರಿಸುವ ಧನ್ಯತೆ ಕಾಗದದ ಚೂರಿಗಲ್ಲದೆ ಇನ್ಯಾರಿಗೆ ದಕ್ಕಿತು? ಕವಿಯ ಕಾಗದದ ಚೂರಿನ ಮೇಲೆ

---

೧. ಪ್ರೊ. ವೀರೇಂದ್ರ ಸಿಂಪಿ ಸ್ವಚ್ಛಂದ ಮನದ ಸುಳಿದಾಟ ಪುಟ ೧-೧೯೮೪

ತಾಯಿಗೆ ತನ್ನ ಪ್ರಥಮ ಶಿಶುವಿನ ಮೇಲೆ ಇರುವಷ್ಟು ವಾತ್ಸಲ್ಯ ಪ್ರೇಮ ಕಾಗದದ ಚೂರೆಂದರೆ ಕೀಳಾಗಿ ಕಾಣುವ ನಾವು ಈ ಪ್ರಬಂಧವನ್ನು ಓದಿದ ಮೇಲೆ ಕಾಗದದ ಚೂರು ಸಹ ನಮ್ಮ ಜೀವನದಲ್ಲಿ ಯಾವ ರೀತಿಯ ಪಾತ್ರವನ್ನು ಬಹಿಸುತ್ತದೆ. ಅದರೊಂದಿಗಿನ ಅವಿನಾಭಾವ ಸಂಬಂಧ ಎಂತದ್ದು ಎಂದು ನಮಗೆ ಅರಿವಾಗುತ್ತದೆ. ಈ ಪ್ರಬಂಧದಲ್ಲಿ ಸಾಚಿದರ್ಶಿಕವಾಗಿ ಜೇಬಿನ ಮಹತ್ವವನ್ನು ಹೇಳುತ್ತಾ ಇಂದಿನ ಪ್ಯಾಶನ್ ಯುಗದಲ್ಲಿ ಜೇಬೊಂದು ಆಭರಣವಿದ್ದಂತೆ, ಕಂಠಾಭರಣದಂತೆ, ಇದೊಂದು ದೇಹಾಭರಣ ಎಂದಿದ್ದಾರೆ ಅದೆ ಕಾಗದದ ಚೂರು ವಕೀಲರಿಗೆ ಕೇಸನ್ನು ಗೆದೆಯಲು ಸಹಾಯ ಮಾಡಬಲ್ಲದು.

ಶಿಕ್ಷಕನಿಗೆ ಕ್ಲಾಸಿನ ಸಮುದ್ರದಲ್ಲಿ ಪಾರಾಗಣಿಸುವ ಈ ಸುಗುಂಬಳ ಕಾಯಿಯೂ ಆಗಬಹುದು ತದ್ವಿರುದ್ಧವಾಗಿ ಹೊತ್ತಿಗಾಗದ ಕಾಗದದ ಚೂರು ನಿರರ್ಥಕ ಈ ಮಾತು ಇಂದಿನ ವಿದ್ಯಾರ್ಥಿಗಳಗಂತೂ ಅಕ್ಷರಶಃ ಮನದಟ್ಟಾಗಿರಬೇಕು ಮಾರ್ಚ ತಿಂಗಳ ಮೊದಲವಾರ ವೆಂದರೆ ಕಾಗದದ ಚೂರುಗಳ ವಸಂತಕಾಲ, ವರ್ಷವೆಲ್ಲ ಸುಖೋಲ್ಲಾಸದಲ್ಲಿ ವೇಳೆಯನ್ನೇ ತೂರಿದ ವಿದ್ಯಾರ್ಥಿ ರೂಮಿನಲ್ಲಿ ಕುಳಿತು ಏನನ್ನೋ ಬರೆಯುತ್ತಿರುವನಲ್ಲ ಇದಕ್ಕಿಂತಲ್ಲೂ ವಿಸ್ಮಯ ಪೂರಿತ ಸಂಗತಿ ಇನ್ನೇನಾದರೂ ಉಂಟೆ? ವಿವಿಧ ವಿಷಯಗಳ ಮೇಲೆ ಅವನದೂ ಗಂಭೀರ ಅಭ್ಯಾಸ ನಡೆದಿರುತ್ತದೆ. ಪರೀಕ್ಷಾ ರಾಕ್ಷಸನನ್ನು ಸದೆ ಬಡಿಯಲು ತಯಾರಿಸಲ್ಪಡುವ ಆಯುಧಗಳೇ ಕಾಗದದ ಚೂರುಗಳು, [೧] ಎಂದಿದ್ದಾರೆ.

"ದೀಪ ತನ್ನ ಬುಡ ಮರೆತಂತೆ" ನಾವು ಕಾಗದದ ಚೂರಿನ ಮಹಿಮೆ ಮರೆಯುತ್ತಿದ್ದೇವಲ್ಲದೆ? ಇಂತಹ ಅನೇಕ ಪರಿಪೂರ್ಣ ಲಲಿತ ಪ್ರಬಂಧಗಳೇ ಪ್ರೊ. ವೀರೇಂದ್ರ ಸಿಂಪಿಯವರ ಅಗಾದ ಪ್ರತಿಭೆಗೆ ಸಾಕ್ಷಿಯೂ ಹೌದು, ಸೂಕ್ತ ವೇದಿಕೆಯೂ ಹೌದು. ಲಲಿತ ಪ್ರಬಂಧಗಳ ಇನ್ನೊಂದು ಮುಖ್ಯ ಗುಣ ಆರಂಭ ಹಾಗೂ ಅಂತ್ಯದಲ್ಲಿ ಓದುಗರನ್ನು ಸೆರೆಹಿಡಿಯುವುದು ಇದಕ್ಕೆ "ಕಾಗದದ ಚೂರು" ಪ್ರಬಂಧದಲ್ಲಿ "ಕಾಗದದ ಚೂರಿನಲ್ಲಿ ಬ್ರಹ್ಮಾಂಡವಿದೆ" ಎಂದು ಆರಂಭಿಸಿ ಕಾಗದದ ಚೂರನ್ನು ನೋಡುತ್ತಿದಂತೆಯೇ ನನಗೆ ಹೇಳಿರುವುದು ಸೋಜಿಗ.

ಕಾಗದದ ಚೂರು ಸೊಗಸಾದ ಹರಟೆಗಳ ಸಂಕಲನ ಇದರ ವಸ್ತುವನ್ನು ಅಮೂಲಾಗ್ರವಾಗಿ ಹಿಂಡಿ ನೋಡುವ ಸಾಮರ್ಥ್ಯ ಶ್ರೀ ವೀರೇಂದ್ರ ಸಿಂಪಿ ಅವರಿಗೆ ಇದೆ. ತಿಳಿಯಾದ ಹಾಸ್ಯ ನಿತ್ಯ ಜೀವನಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ರಸ ಪೂರ್ಣ ಬಣ್ಣದ ಕಚಕುಳಿಯಿಡುವ ಉಪಮೆಗಳು ಕಾಗದ ಚೂರನ್ನು ಕಸದ ಬುಟ್ಟಿಗೆ ಎಸೆಯದಿರುವಂತೆ ಮಾಡುತ್ತದೆ. ಇದರಲ್ಲಿ ಬರುವ ಪ್ರಬಂಧಗಳು ಸಿಂಪಿ ಅವರ ಅನುಭವಗಳ ಪ್ರತೀಕವಾಗಿದೇ ಆತ್ಮಾನುಭವಗಳನ್ನು ವಿಶ್ಲೇಷಿಸುವಲ್ಲಿ ತಮ್ಮದೇ ಆದ ಶೈಲಿಯನ್ನು ಬಳಸಿದ್ದಾರೆ. ಆದ ನಿಷ್ಠುರ ಮಾತಿನ ಮೋಡಿಯಲ್ಲಿ ತಮ್ಮ ವಿಚಾರಗಳನ್ನು ಗರಿಬಿಟ್ಟಿದ್ದಾರೆ. ಇದರಲ್ಲಿ ವಿಶಿಷ್ಠ ಶೈಲಿಯ ಬೆಡಗಿದೆ. ಭಾಷೆಯ ಲಾಲಿತ್ಯವಿದೆ. ಕಾಲೇಜು ವಿದ್ಯಾರ್ಥಿಗಳಿಗೊಂದು ಉಪಯುಕ್ತ ಪ್ರಬಂಧ ಸಂಕಲನವಾಗಿದೆ.

---

೧. ಪ್ರೊ. ವೀರೇಂದ್ರ ಸಿಂಪಿ ಸ್ವಚ್ಛಂದದ ಮನದ ಸುಳಿದಾಟ ಪುಟ-೩-೧೯೮೪

ಭಾವ ಮೈದುನ

ಪ್ರೊ. ವೀರೇಂದ್ರ ಸಿಂಪಿಯರ "ಭಾವ ಮೈದುನ" ಲಲಿತ ಪ್ರಬಂಧವು ಅವರು ಬರೆದ ಶ್ರೇಷ್ಠ ಲಲಿತ ಪ್ರಬಂಧಗಳಲ್ಲಿ ಒಂದು. ಈ ಪ್ರಬಂಧಗಳಲ್ಲಿ ಲೇಖಕರ ಕಲ್ಪನಾಲಹರಿ ಗರಿಗೆದರಿ ಇಳಿಹೊತ್ತಿನ ಹೂ-ಬಿಸಿಲಿನಲ್ಲಿ ಸ್ವಚ್ಛಂದವಾಗಿ ವಿಹಾರ ಮಾಡಿದೆ. ಪ್ರೊ. ಸಿಂಪಿಯವರು ತಮ್ಮ ಈ ಸಂಕಲನದಲ್ಲಿ ಪ್ರತಿಯೊಂದು ಅಂಶವನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ನಡೆಯುವ ಅಹಿತಕರ ಘಟನೆಗಳ ಬಗ್ಗೆ, ಚುನಾವಣೆ ಬಗ್ಗೆ ಹಾಸ್ಯ, ಬಡತನ ರಾಜಕೀಯ ಸಾಮಾಜಿಕ ಈ ಎಲ್ಲಾ ವಿಷಯಗಳನ್ನು ಸೂಕ್ತವಾಗಿ ರೂಪಿಸಿಕೊಂಡು ತಮ್ಮ ಈ ಪ್ರಬಂಧವನ್ನು ಬರೆದಿರುವುದು ತಿಳಿದು ಬರುತ್ತದೆ. ಈ ಪ್ರಬಂಧದಲ್ಲಿ ನಮಗೆ ಎದ್ದು ಕಾಣುವ ಪ್ರಬಂಧಗಳೆಂದರೆ "ಬಾಳವ್ವ" "ಕಾಲೇಜು ಚುನಾವಣಾ ಪ್ರಕರಣ" "ಕಾಲೇಜಿನ ಹಾಸ್ಯ" "ಪ್ರಾಧ್ಯಾಪಕರ ಸಿಟ್ಟು" "ಶ್ಯಾಣಪ್ಪನ ಶ್ಯಾಣ್ಯಾತನ" "ಭಾಷಣಕಾರನ ಬವಣೆ" "ನಾನು ಕಳೆದುಕೊಂಡ ಐದು ರೂಪಾಯಿ" ಕೊನೆಗೂ ಮನೆಗೊಂದು ದೊರೆತಾಗ ಈ ಎಲ್ಲ ಲಲಿತ ಪ್ರಬಂಧಗಳು ಪ್ರಸ್ತುತ ಸ್ಥಿತಿಯಲ್ಲಿ ನಡೆಯುವ ಘಟನೆಯನ್ನು ವಿವರಿಸುತ್ತವೆ. ಇದ್ದಿದನ್ನು ಇದ್ದ ಹಾಗೆ ಹೇಳಲು ಪ್ರೊ. ಸಿಂಪಿಯವರು ಇಲ್ಲಿ ಪ್ರಯತ್ನಿಸಿದ್ದಾರೆ.

ಬಡತನದಿಂದ ಕೂಡಿದ ಶ್ರೀಮಂತ ರಾಷ್ಟ್ರವೆಂದೆ ಹೆಸರುವಾಗಿರುವ ನಮ್ಮ ದೇಶ. ಅನೇಕ ಸಮಸ್ಯೆಗಳಿಂದ ನರಳುತ್ತಿರುವುದ ಲೇಖಕರು ಇಲ್ಲಿ ಎತ್ತಿ ತೋರಿಸಿದ್ದಾರೆ. ಶ್ರೀಮಂತ ಮತ್ತು ಬಡವರ ನಡುವಿನ ಅಂತರವನ್ನು ಪ್ರೊ. ಸಿಂಪಿಯವರು "ಬಾಳವ್ವ" ಎಂಬ ಲಲಿತ ಪ್ರಬಂಧದಲ್ಲಿ ಚಿತ್ರಿಸಿದ್ದಾರೆ. ಇವಳಿಗೆ ತನ್ನದೆ ಆದಂಥಹ ಒಂದು ಮನೆಯಿಲ್ಲ ಇವಳ ಜೀವನ ಸ್ಟೇಡಿಯಮನ್ ಕಟ್ಟೆಯ ಕೆಳಗೆ ನಡೆದಿರುವುದು ಇಲ್ಲಿ ನಾವು ಕಾಣುತ್ತೇವೆ. ಬಡವರಿಂದ ಅನೇಕ ಶ್ರೀಮಂತರು ತಮ್ಮ ಅನೇಕ ಕೆಲಸಗಳನ್ನು ತೆಗೆದುಕೊಂಡು ನಂತರ ಬಡವರಿಗೆ ಬೈವುದು, ತಿರಸ್ಕರಿಸುವುದು ನಾವಿಲ್ಲಿ ನೋಡಬಹುದಾಗಿದೆ. ಈ ದೇಶದಲ್ಲಿ ಶ್ರೀಮಂತರಿಗೆ ಯಾವ ವಸ್ತುವಿನ ಚಿಂತೆಯಿಲ್ಲ. ಇನ್ನೂ ಎಷ್ಟೊ ಸಾಮಾನುಗಳು ಕೊಂಡುಕೊಳ್ಳಬೇಕು. ಎಂಬ ಹಂಬಲ ಕಾಡುತ್ತದೆ. ಆದರೆ ಬಡತನದಿಂದ ಬಳಲುವ ಅನೇಕ ಜನರಿಗೆ ಹೊಟ್ಟೆಗೆ ಊಟವಿಲ್ಲ, ಮೈಗೆ ಬಟ್ಟೆಯಿಲ್ಲ ಅವರ ಜೀವನ ಇಡೀ ಕಷ್ಟದಲ್ಲಿಯೇ ಅಂತ್ಯವಾಗಿರುವದನ್ನು ಪ್ರೊ. ಸಿಂಪಿಯವರು ಇಲ್ಲಿ ಚಿತ್ರಿಸಿದ್ದಾರೆ.

ಎಷ್ಟೆ ಶ್ರೀಮಂತನಿದ್ದರು ಮನುಷ್ಯನಿಗೆ ಮಾನಸಿಕ ನೆಮ್ಮದಿಯನ್ನು ಮುಖ್ಯ. "ಈ ಆರಾಮ ಖುರ್ಚಿಯ ವಿಚಾರಲಹರಿಯಲ್ಲಿ ನಾನಂದು ಮಗ್ನನಾಗಿದ್ದಾಗ ಬಾಳವ್ವನ ಮಕ್ಕಳು ಬೇಳೆ ಕೇಳಲು ಬಂದರು ಆಗ ನನ್ನ ಮಗಳು ನೆರೆಮನೆಯ ಹುಡಗರೊಂದಿಗೆ ಆ ಪಾಪದ ಮಕ್ಕಳಿಗೆ ಕಲ್ಲು ಒಗೆದು ಸ್ವಾಗತಿಸುತ್ತಿರುವದನ್ನು ಕಂಡು ಕೋಪದಿಂದ ಚೀರಾಡಿದೆ. ನನ್ನ ಪೌರುಷಹೀನ ಕೋಪಕ್ಕೆ ಉತ್ತರವೇ ಎನ್ನುವಂತೆ ಚಿರಾಡಿದೆ. ನಾನು ಅಂದು ಮನೆಯಲ್ಲಿ ಸಿಟ್ಟನಿಂದ ಮೌನವ್ರತವನ್ನಾಚರಿಸಿದೆ ಆದರೆ ನನ್ನ ವಿಚಾರ ಲಹರಿಗಳೆಲ್ಲ ಕಾರ್ಯರೂಪಕ್ಕಿಳಿಯದೆ. ಅಳಿದು ಹೋದವೆಂದು ಪರಿತಪಿಸಿದೆ. ನಾನೊಬ್ಬ ಆರಾಮ ಖುರ್ಚಿಯಲ್ಲಿ ವಿರಾಜಮಾನನಾಗಿರುವ ಸಮಾಜ ಸುಧಾರಕ, ದಲಿತೋದ್ಧಾರಕ ಎಂದು ಕೊರಗುತ್ತಾನೆ." [೧] ಈ ಪ್ರಬಂಧದಲ್ಲಿ ಬಾಳವ್ವನ ಸ್ವಚ್ಛಂದ ಮನಸ್ಸನ್ನು ಲೇಖಕರು ಚಿತ್ರಿಸಿದ್ದಾರೆ.

---

೧. ಭಾವಮೈದುನ ಪ್ರೊ. ವೀರೇಂದ್ರ ಸಿಂಪಿ ಪುಟ-೧೩-೧೪೮೧

ಪ್ರಸ್ತುತ ಶಿಕ್ಷಣ ಸಂಸ್ಥೆಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಚುನಾವಣೆಗಳ ಬಗ್ಗೆ ಪ್ರೊ. ಸಿಂಪಿಯವರು ತಮ್ಮ "ಕಾಲೇಜು ಚುನಾವಣ ಪ್ರಕರಣ" ಎಂಬ ಲಲಿತ ಪ್ರಬಂಧದಲ್ಲಿ ಚಿತ್ರಿಸಿದ್ದಾರೆ. ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪ್ರತಿನಿಧಿಯನ್ನು ಚುನಾಯಿಸುವಾಗ ಅವಿರೋಧವಾಗಿ ಆಯ್ಕೆಯಾಗುವುದು ಬಹಳ ಕಡಿಮೆ. ಅದಕ್ಕಾಗಿ ಕಾಲೇಜುಗಳಲ್ಲಿ ಚುನಾವಣೆಗಳು ಅನಿವಾರ್ಯವಾಗಿ ಬಿಟ್ಟವೆ. ಸರಳ ಸ್ವಭಾವದ ಪ್ರಿನ್ಸಿಪಾಲಿದ್ದರೆ ವಿದ್ಯಾರ್ಥಿಗಳ ದಬ್ಬಾಳಿಕೆಗೆ ಹೆದರಬೇಕಾಗುತ್ತದೆ. ಆಗ ಪ್ರಿನ್ಸಿಪಾಲರ ಪರವಾಗಿ ಉಳಿದ ಪ್ರಾಧ್ಯಾಪಕರು "ಏನ್ರಿ ಕಲ್ಲಣ್ಣವರೇ, ಗದ್ದಲಾ ಮಾಡ್ತೀರಿ. ಮುಂದಿನ ತಿಂಗಳು ೧೦ ನೇಯ ತಾರೀಖಿಗೆ ಇಲೆಕ್ಯಷನ್ ಮಾಡಿಸ್ತಾರ ಸಾಹೇಬರು ವಿದ್ಯಾರ್ಥಿ ಮುಖಂಡನೊಡನೆ ಆಪ್ತಾಲೋಚನೆ ನಡೆಸಿದರು." [೨] ಈ ರೀತಿಯಾಗಿ ವಿದ್ಯಾರ್ಥಿಗಳ ಗಲಾಟೆಯನ್ನು ಪ್ರೊ. ಸಿಂಪಿಯವರು ಈ ಪ್ರಬಂಧದಲ್ಲಿ ವಿವರಿಸಿದ್ದಾರೆ. ಚುನಾವಣೆಯಲ್ಲಿ ಸೋತು ವಿದ್ಯಾರ್ಥಿಗಳ ಗುಂಪು ಮತ್ತು ಗೆದ್ದ ವಿಧ್ಯಾರ್ಥಿಗಳ ಗುಂಪು "ರಿಕೌಂಟ ಆಗಬೇಕು ಸಾರ್ ಎಂದು ಸೋತ ಪಾಟೀಲರ ಗುಂಪು ಆಗ ಕೂಡದು ಎಂದು ಗೆದ್ದ ಕಲ್ಲಣ್ಣರವರ ಗುಂಪು ಬೇರೆ ಆಗತೊಡಗಿದವು. ರಿಕೌಂಟ್ ಮಾಡಿದರೆ ನಿಮ್ಮನ್ನು ನೋಡಿಕೊಳ್ಳುತ್ತೇವೆ ಎಂದು ಗೆದ್ದ ಕಲ್ಲಣ್ಣವರ ಗುಂಪು ಹೆಚ್ಚು ಉತ್ಸಾಹದಿಂದ" ಈ ರೀತಿಯಾಗಿ ಪ್ರಿನ್ಸಿಪಾಲರ ಮತ್ತು ಪ್ರಾಧ್ಯಾಪಕರ ಮೇಲೆ ಇಂದಿನ ವಿದ್ಯಾರ್ಥಿಗಳ ದಬ್ಬಾಳಿಕೆ ಮಾಡುತ್ತಿರುವದನ್ನು ಪ್ರೊ. ಸಿಂಪಿಯವರು ತಮ್ಮ ಈ ಸಂಕಲನದಲ್ಲಿ ಎತ್ತಿ ತೋರಿಸಿದ್ದಾರೆ. ಜೊತೆಗೆ ಪ್ರಾಧ್ಯಾಪಕ ಮತ್ತು ಸಿಬ್ಬಂದಿ ವರ್ಗದವರ ಅಲಕ್ಷತನ, ಮೈಗಳ್ಳುತನ, ವಿದ್ಯಾರ್ಥಿಗಳ ಜೊತೆ ಅವರ ಸಂಬಂಧ ಹೇಗಿರಬೇಕು ಎಂಬುದನ್ನು ಇಲ್ಲಿ ಲೇಖಕರು ಎತ್ತಿ ತೋರಿಸಿದ್ದಾರೆ. ಇಂದಿನ ದಿನಗಳಲ್ಲಿ ಕಾಲೇಜುಗಳು ಪದವೀಧರರನ್ನು ತಯಾರುಮಾಡುವದಲ್ಲದೆ ಅನೇಕ ವಿದ್ಯಾರ್ಥಿಗಳಿಗೆ ನಿರುದ್ಯೋಗಿಗಳಾಗಿ ಮಾಡುವ ಕಾರಖಾನೆಯೂ ಸ್ಥಾಪನೆಯಾಗಿರುವುದನ್ನು ಕಾಣುತ್ತೇವೆ.

ಎಷ್ಟೇ ಪದವಿಗಳನ್ನು ಗಳಿಸಿದರೂ ಮುಂದೆ ಉದ್ಯೋಗ ಸಿಗುವುದಿಲ್ಲ ಎಂಬ ನಂಬಿಕೆಯನ್ನು ಹೊತ್ತುಕೊಂಡು ಬಂದ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಹರಟೆ ಹೊಡೆಯುವುದು, ತರಲೆ ಮಾಡುವುದು, ಹಾಸ್ಯ ಮಾಡುವುದು. ಹೀಗೆ ಅನೇಕ ಚಟುವಟಿಕೆಗಳಲ್ಲಿ ವಿಧ್ಯಾರ್ಥಿಗಳು ತೊಡಗುತ್ತಾರೆ. ಇಂಥ ವಿಷಯವನ್ನೇ ಆಯ್ಕೆ ಮಾಡಿಕೊಂಡು ಪ್ರೊ. ಸಿಂಪಿಯವರು "ಕಾಲೇಜಿನಲ್ಲಿ ಹಾಸ್ಯ, ಲಲಿತ ಪ್ರಬಂಧವನ್ನು ನಮ್ಮೆದುರಿಗೆ ಚಿತ್ರಿಸಿದ್ದಾರೆ. ಈ ಲಲಿತ ಪ್ರಬಂಧದಲ್ಲಿ ಗುರು ಮತ್ತು ಶಿಷ್ಯರ ಸಂಬಂಧ ತುಂಬಾ ವಿಡಂಬನಾತ್ಮಕವಾಗಿ ವಿವರಿಸಿದ್ದಾರೆ. ಕಾಲೇಜಿನಲ್ಲಿ ವರ್ಗಗಳು ನಡೆಯುತ್ತಿದ್ದರೆ ಪುಡಾರಿಗಳು, ಪ್ರೇಮಿಗಳು, ದಡ್ಡರು, ಆಕಡೆಯಿಂದ ಈಕಡೆಗೆ ಇಕಡೆಯಿಂದ ಆಕಡೆ ಸುತ್ತುವ ದೃಶ್ಯ ಸರ್ವೇ ಸಾಮಾನ್ಯವಾಗಿದೆ. ಕಾಲೇಜಿನ ಕ್ಲಾಸ ರೂಂ ನಲ್ಲಿ ಯಾವಾಗ ಏನು ಸಂಭವಿಸುತ್ತದೆಂಬುದನ್ನು ಯಾರೂ ಹೇಳಲಾಗುವದಿಲ್ಲ ಒಂದು ತರಹದ ಸ್ಫೋಟಕ ವಾತಾವರಣವಿರುತ್ತದೆಯೆಂದು ಮಾತ್ರ ಧಾರಾಳವಾಗಿ ಹೇಳಬಹುದು. ಉದಾಹರಣೆಗಾಗಿ ಈ ಒಂದು ಘಟನೆ. ಪ್ರಾಧ್ಯಾಪಕರು ಸೂಟು ಬೂಟುಗಳನ್ನು ಧರಿಸಿ ವೇದಿಕೆಯನ್ನು ಹತ್ತಿದರೋ, ವಿದ್ಯಾರ್ಥಿಗಳ ಗುಜುಗುಜು ನಡೆದೇ ಇರುತ್ತದೆ. ಅವರು ಕೆಕ್ಕರಿಸಿ ಹುಡುಗರತ್ತ ನೋಡಿದರೂ ಮತ್ತೆ ಸ್ತಬ್ದವಾಗುತ್ತದೆ. ಹಿಂದಿನ ಪಿರಿಮಿಡ್ಡಿನಲ್ಲಿ ಹೇಳಿ ಮುಗಿಸಿದ ವಿಷಯವನ್ನು ಸಂಕ್ಷಿಪ್ತವಾಗಿ ನೆನೆಪು ಕೊಡುತ್ತ ಕರಿ ಹಲಗೆಯ ಕಡೆ ಮುಖ ತಿರುವಿದರೋ ಆಗ

---

೨. ಭಾವಮೈದುನ ಪ್ರೊ. ವೀರೇಂದ್ರ ಸಿಂಪಿ ಪುಟ – ೧೫ – ೧೯೮೧

[illegible]

ಶಿಷ್ಯೋತ್ತಮ ಆಧುನಿಕ ಅರ್ಜುನನ ಕಾಗದದ ಬಾಣವೊಂದು ಬಂದು ಅವರ ತಲೆಯಲ್ಲಿ ಬಂದು ಸಿಕ್ಕು ಬಿಡುತ್ತದೆ. ಆಗ ಸಿಟ್ಟಿನಿಂದ ಕೈಯಲ್ಲಿಯೂ ಚಾಕ್‌ಪೀಸನ್ನು ಒಗೆದರೂ ಅದು ಮುಂದಿನ ಬೆಂಚ ಮೇಲಿಂದ ಪುಟಿದು ವಿದ್ಯಾರ್ಥಿನಿಯೊಬ್ಬಳ ಎದೆಗೆ ಬಡಿಯುತ್ತದೆ. "ಏನ್ ಗುರಿಯಪ್ಪಾ ಮಗಂದು ಹುಸಿಯೆಂಬುದಿಲ್ಲ" ಎಂಬುದೊಂದು ಅಶರೀರವಾಣಿ ಕೇಳಿ ಕೋಪಾವಿಷ್ಟರಾದ ಪ್ರಾಧ್ಯಾಪಕರು ತಮ್ಮ ಕರ್‍ರಗಿನ ಮುಖವನ್ನು ಕೆಂಪು ಮಾಡಿಕೊಂಡು ಹೋಗುವದೊಂದೇ ಬಾಕಿ" [೧](೨೧-೨೨) ಇಂಥ ಸ್ಥಿತಿಯನ್ನು ಪ್ರೊ. ಸಿಂಪಿಯವರು ಈ ಪ್ರಬಂಧದಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಇತ್ತೀಚೆಗಂತು ಪ್ರತಿಯೊಂದು ಊರಿನಲ್ಲೂ ನಾಯಿಕೊಡೆಗಳಂತೆ ಕಾಲೇಜುಗಳು ಹುಟ್ಟಿಕೊಳ್ಳುವುದು ಕಾಣುತ್ತೆವೆ. ಈ ಎಲ್ಲಾ ಕಾಲೇಜುಗಳಲ್ಲಿ ಶಿಕ್ಷಣ ಸಮರ್ಪಕವಾಗಿ ನೀಡುತ್ತಿದ್ದಾರೆ. ಎಂದು ಹೇಳಲಿಕ್ಕಾಗದು. ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿ ವಿದ್ಯಾಭ್ಯಾಸ ತೊಂದರೆ ಜಾಸ್ತಿಯಾಗಿ ಕ್ಲಾಸಿನಲ್ಲಿ ಹಾಸ್ಯ ಪ್ರವೃತ್ತಿಗಳು ನಡೆದಿರುವುದು ಇಲ್ಲಿ ನಾವು ಕಾಣುತ್ತೇವೆ. ಇವತ್ತಿನ ದಿನಗಳಲ್ಲಿ ಪ್ರಾಧ್ಯಾಪಕರು ಎಷ್ಟರ ಮಟ್ಟಿಗೆ ಪಾಠ ಪ್ರವಚನ ಮಾಡುತ್ತಾರೆ ಎಂದು ಪ್ರಶ್ನಿಸಿಕೊಂಡಾಗ ಅದು ಬರೀ ವಿದ್ಯಾರ್ಥಿಗಳ ಜೊತೆ ಹಾಸ್ಯ ಚಟಾಕಿ ಹೊಡೆಯುವದರಲ್ಲಿಯೇ ಮಗ್ನರಾಗುವ ಗುರುಗಳು ತಮ್ಮ ಸ್ವತಃ ಮಗನನ್ನು ಗುರುತಿಸದೆ ಇರುವುದನ್ನು ಇಲ್ಲಿ ಪ್ರೊ. ವೀರೇಂದ್ರ ಸಿಂಪಿಯವರು ವಿವರಿಸಿದ್ದಾರೆ.

ಇತ್ತಿಚಿನ ದಿನಗಳಲ್ಲಿ ಕಾಲೇಜಿನಲ್ಲಿ ನಡೆಯುವ ಹಾಸ್ಯ ಪ್ರಸಂಗಗಳಿಗೆ ಕೊನೆಯೆಂಬುದೇ ಇಲ್ಲ. ಅದೊಂದು ವಿಚಿತ್ರ ವಿಶ್ವ ಮೊದಲೇ ಮಂಗ ವಿಧ್ಯಾರ್ಥಿಗಳು ಅದರಲ್ಲೂ ತರಣರು, ವಿಶೇಷವಾಗಿ ಯಾವ ಉನ್ನತ ಧ್ಯೇಯಗಳನ್ನಾಗಲಿ, ಗುರಿಗಳನ್ನಾಗಲಿ ಇರಿಸಿಕೊಳ್ಳಲಾರದವರು. ಒಂದಾನೊಂದು ಕಾಲೇಜಿನಲ್ಲಿ ಬೋರ್ಡಿನ ಮೇಲೆ ಐ ಕಿಸ್ ಯು ಎಂದು ಬರೆದಿದ್ದರು. ವೃದ್ದಾಪ್ಯದ ಅಂಚಿನಲ್ಲಿರುವ ಪ್ರಾಧ್ಯಾಪಕರು ಬೋರ್ಡಿನ ಮೇಲೆ ಬರೆದ ಈ ಅಮರ ಸಂದೇಶ ಅಳಿಸಿ ಹಾಕುತ್ತ ಹೇಳುತ್ತಾರೆ. "ನಾನು ಕೂಡ ಒಂದಾನೊಂದು ಕಾಲದಲ್ಲಿ ಮುದ್ದು ಕೊಡುವುದಕ್ಕೆ ಇಷ್ಟ ಪಡುತ್ತಿದ್ದೆ, ಆದರೆ ಈಗ ಮಾತ್ರ ಇಲ್ಲ" ಎಂದು ಹೇಳಿದರು ಹುಡುಗರೆಲ್ಲ ಖೊಳ್ಳೆಂದು ನಕ್ಕರು. ಇಂಥಹ ರಸಮಯ ಪ್ರಸಂಗಗಳನ್ನು ತನ್ನ ಒಡಲಲ್ಲಿರಿಕೊಂಡು ನನ್ನನ್ನು ಹರ್ಷ ಚಿತ್ತನನ್ನಾಗಿ ಮಾಡುತ್ತಿರುವ ಕಾಲೇಜಿಗೆ ನನ್ನ ಹೃತ್ಪೂರ್ವಕ ನಮನಗಳು ಎಂದು ಹೇಳುತ್ತಾ ತಮ್ಮ ಮನದ ನೋವನ್ನು ವ್ಯಕ್ತಪಡಿಸಿದ್ದಾರೆ. ಪ್ರೊ. ಸಿಂಪಿಯವರು.

ವಿದ್ಯಾರ್ಥಿಗಳ ಜೊತೆ ಪ್ರಾಧ್ಯಾಪಕರ ಸಂಬಂಧವನ್ನು ಹೇಗಿಟ್ಟುಕೊಂಡಿರಬೇಕು ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಪ್ರೊ. ವೀರೇಂದ್ರ ಸಿಂಪಿಯವರು "ಪ್ರಾಧ್ಯಾಪಕರ ಸಿಟ್ಟು" ಎಂಬ ಲಲಿತ ಪ್ರಬಂಧವನ್ನು ಇಲ್ಲಿ ಚಿತ್ರಿಸಿದ್ದಾರೆ. ಪ್ರಸ್ತುತ ವಿದ್ಯಾರ್ಥಿಗಳ ಜೊತೆ ಪಾಧ್ಯಾಪಕರು ಒಳ್ಳೆಯ ಸಂಬಂಧವನ್ನು ಇಟ್ಟುಕೊಂಡಿರಬೇಕು. ಇಲ್ಲದಿದ್ದರೆ, ತುಂಬಾ ಅವಮಾನಕ್ಕೆ ಒಳಗಾಗಬೇಕಾಗುತ್ತದೆ. ಎಂದು ಲೇಖಕರು ಇಲ್ಲಿ ವಿವರಿಸಿದ್ದಾರೆ. ಪರೀಕ್ಷೆಯ ಸಮಯದಲ್ಲಿ ವಿಧ್ಯಾರ್ಥಿಗಳಿಗೆ ಚೀಟಿ ಮಾಡಲು ಅವಕಾಶ ನೀಡದೆ ಇದ್ದಾಗ ವಿದ್ಯಾರ್ಥಿ ವಿದ್ಯಾರ್ಥಿಗಳು ಗುರುಗಳಿಗೆ ಹೊಡೆದ ಸಂದರ್ಭಗಳನ್ನು ಈ ಪ್ರಬಂಧದಲ್ಲಿ ಕಾಣುತ್ತೇವೆ.

---

೧. ಭಾವಮೈದುನ ಪ್ರೊ. ವೀರೇಂದ್ರ ಸಿಂಪಿ ಪ್ರಟ - ೨೧ -೧೯೮೧

ಅಂದರೆ ಶಿಕ್ಷಣ ವ್ಯವಸ್ಥೆ ಯಾವ ರೀತಿಯ ವಾಮ ಮಾರ್ಗ ಹಿಡಿದು ಸಾಗುತ್ತಿದೆ. ಎಂದು ನಮ್ಮನೇ ನಾವು ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ. ಇದು ಗುರುಗಳು ಎಷ್ಟೇ ಬುದ್ದಿವಂತನಿದ್ದರು ಅವರಿಗೆ ಬೆಲೆ ಇಲ್ಲ. ಬುದ್ಧಿ ಇಂದ ಶಿಕ್ಷಕರಿಗೆ ವಿದ್ಯಾರ್ಥಿಗಳು ಅಚ್ಚು ಮೆಚ್ಚಿನವರಾಗಿರುತ್ತಾರೆ. ಅದಕ್ಕಾಗಿ ಇಲ್ಲಿ ಪ್ರೊ. ಸಿಂಪಿಯವರು ವಿಧ್ಯಾರ್ಥಿಗಳ ಜೊತೆ ಯಾವ ರೀತಿಯಾಗಿ ಹೊಂದಾಣಿಕೆಯಾಗಬೇಕು. ಎಂಬುದನ್ನ ಮಾರ್ಮಿಕವಾಗಿ ವಿವರಿಸಿದ್ದಾರೆ.

ಪ್ರಪಂಚದಲ್ಲಿ ಒಂದೇ ತರಹನಾದ ವ್ಯಕ್ತಿಗಳು ಇರಲು ಸಾಧ್ಯವಿಲ್ಲ ಅವರ ವಿಚಾರಗಳು, ಆಲೋಚನೆಗಳು, ಹವ್ಯಾಸಗಳು ಹೀಗೆ ಅನೇಕ ರೀತಿಯ ವ್ಯಕ್ತಿತ್ವವನ್ನು ಹೊಂದಿದವರು ಇರುತ್ತಾರೆ. ಎಂದು ಪ್ರೊ. ವೀರೆಂದ್ರ ಸಿಂಪಿಯವರು ತಮ್ಮ ಲಲಿತ ಪ್ರಬಂಧಗಳಲ್ಲಿ ಒಂದಾಗಿರುವ "ಶ್ಯಾಣಪ್ಪನ ಶ್ಯಾಣ್ಯಾತನ" ಎಂಬ ಪ್ರಬಂಧದಲ್ಲಿ ವ್ಯಕ್ತಪಡಿಸಿದ್ದಾರೆ. ಈ ಪ್ರಬಂಧದಲ್ಲಿ ಶ್ಯಾಣಪನ ಹುಚ್ಚತನವನ್ನು ಮತ್ತು ಆತ ಬೆಳೆದು ಬಂದ ಬಗೆಯನ್ನು ಸಿಂಪಿಯವರು ಹಾಸ್ಯದ ರೀತಿಯಲ್ಲಿ ವಿವರಿಸಿದ್ದಾರೆ. ಆತ ಎಷ್ಟರ ಮಟ್ಟಿಗೆ ಶಾಣ್ಯಾ ಇದ್ದ ಅಂದರೆ ಇಷ್ಟು ಮಾತ್ರ ನಿಜ ಶ್ಯಾಣಪ್ಪನಂಥಹ ಶ್ಯಾಣ್ಯಾನನ್ನು ನಾನು ಇಲ್ಲಿಯವರೆಗೂ ಕಂಡಿಲ್ಲ. ಅವನು ತನ್ನ ತಾಯ್ತಂದೆಗಳಿಗೆ ಏಕಮೇವ ಪತ್ರ. ಅದಕ್ಕಾಗಿಯೇ ಏನೋ ಅವನನ್ನು ಅವರು ಬಹು ಮುದ್ದಿನಿಂದ ಬೆಳೆಸಿದರು. ತತ್ಪರಿಣಾಮವಾಗಿ ಅವನಿಂದು ಒಂದಿಷ್ಟು ಮೊದ್ದು ಮೊದ್ದಾಗಿಯೇ ಬೆಳೆದು ನಿಂತಿದ್ದಾನೆ, ತಾಯಿಯ ಮೊಲೆ ಹಾಲು ಕುಡಿಯುತ್ತಿದ್ದ ಶ್ಯಾಣಪ್ಪನಿಗೆ "ಓ ಶ್ಯಾಣೂ ನಿಮ್ಮ ತಾಯಿ ನಿನ್ನನ್ನು ಬಿಟ್ಟು ಊರಿಗೆ ಹೋದಳಲೋ" ಎಂದು ಹೇಳಿದಾಗ ಅವನು ಮೊಲೆ ಕುಡಿಯುವುದನ್ನು ಬಿಟ್ಟು ಬೊಬ್ಬೆಯಿಡುತ್ತಿದ್ದನೆಂದು ಅವನ ತಾಯಿಯೇ ಮೊನ್ನೆ ಹೇಳಿದಳು ಇಲ್ಲಿ ಶ್ಯಾಣಪ್ಪ ತನ್ನ ತನವನ್ನೆ ಮರೆಯುವ ಪ್ರಸಂಗವನೋ ಅಥವಾ ಆತನ ಬಾಲ್ಯದ ಸಣ್ಣತನವನೋ ಎಂಬುವುದು ಲೇಖಕರು ಇಲ್ಲಿ ಸ್ಪಷ್ಟಪಡಿಸಬೇಕಾಗಿತ್ತು. ಈ ಒಂದು ಪ್ರಬಂಧದಲ್ಲಿ ಶ್ಯಾಣಪ್ಪನ ದಡ್ಡತನವನ್ನು ತೋರಿಸುತ್ತದೆ. ಶ್ಯಾಣಪ್ಪನು ಯಥೇಷ್ಟವಾಗಿ ಊಟ ಮಾಡಿ ಶಾಲೆಗೆ ಹೋಗುತ್ತಿದ್ದ, ಶಾಲೆಯಲ್ಲಿ ನಿರ್ಭಯವಾಗಿ ನಿದ್ದೆ ಮಾಡುತ್ತಿದ್ದ ಮಾಸ್ತರರು ಎಲ್ಲೋ ದರಿದ್ರ ಏಳೋ ಎಂದು ಅವನ ಕಿವಿಯನ್ನು ಹಿಡಿದೆತ್ತಿ ಅವನನ್ನು ನೆಲದ ಮೇಲೆ ಅಪ್ಪಳಿಸುತ್ತಿದ್ದರು ಎಲೋ ಶ್ಯಾಣ್ಯಾ ಮಾವಿನ ಗಿಡಗಳಿಗೆ ಯಾವ ಹಣ್ಣುಗಳಾಗುತ್ತವೆ. ಎಂದು ಮಾಸ್ತರರು ಕೇಳಿದರೆ ಬೇಶನ್ ಉಂಡಿಗಳಾಗುತ್ತವೆಂದು ಧಾರಾಳಾವಾಗಿ ಹೇಳಿ ಮತ್ತೆ ಗೊರಕೆ ಹೊಡೆಯುತ್ತಿದ್ದ. ಅವನಿಗಿಷ್ಟು ಎಬ್ಬಿಸಿರೋ ಎಮದು ಉಳಿದ ಹುಡುಗ್ಯಇಗೆ ಆಜ್ಞಾಪಿಸಿ. ಗುರುಗಳು ತಮ್ಮ ಅಸಾಮರ್ಥ್ಯವನ್ನು ವ್ಯಕ್ತಪಡಿಸುತ್ತಿದ್ದರು. ಆದರೂ ಕೂಡ ಶ್ಯಾಣಪ್ಪನ ಮದುವೆ ಆಗೇಬಿಟ್ಟಿತು. ಆ ಕನ್ಯೆಯ ಕೈ ಹಿಡಿದು ಈಗ ಮಾತ್ರ ದಿನಾಲು ಹಕ್ಕಿಗಳಿಗೆ ಮಾತಿನ ಗುಂಡುಗಳನ್ನು ಹಾರಿಸುತ್ತ ಜೀವಿಸಿದ್ದಾನೆ.

ಇಲ್ಲಿ ಪ್ರೊ. ಸಿಂಪಿಯವರು ಬಡವ ಮತ್ತು ಶ್ರೀಮಂತರ ವಿಚಾರಗಳನ್ನು ಕೂಡ ಎತ್ತಿ ತೋರಿಸಿದ್ದಾರೆ ಶ್ಯಾಣಪ್ಪ ಈಗ ಶ್ಯಾಣಪ್ಪನವರು ಆಗಿದ್ದಾರೆ. ಅದಕ್ಕೆ ಅವರ ಧನ ಸಂಪತ್ತೇ ಕಾರಣ, ಮೇಲಾಗಿ ಅವರು ನಮ್ಮೂರ ನಾಯಕರು ಕೂಡ ; ಚಿರಕ್, ಚಿರಕ್, ಎಂದು ಬೂಟು ಸಪ್ಪಳ ಮಾಡುತ್ತ ಅವರು ಹಾದಿಯಲ್ಲಿ ಹೊರಟರೆಂದರೆ ಕಾಮಣ್ಣ ಬರುತ್ತಿದ್ದಾನೆಂದು ನೀರು ತರುವ ಹೆಣ್ಣು ಮಕ್ಕಳು

ಒರೆಯಾಗಿ ಹೋಗುತ್ತಾರೆ. ಅಷ್ಟು ದರ್ಪ ಅವರದು ಅಂದರೆ ಎಷ್ಟೇ ಬುದ್ಧಿವಂತನಿದ್ದರೂ ಕೂಡ ದುಡ್ಡಿನ ಮಹತ್ವವನ್ನು ನಾವು ಇಲ್ಲಿ ನೋಡಬಹುದು. ಒಟ್ಟಿನಲ್ಲಿ ಇಲ್ಲಿ ಶ್ಯಾಣಪ್ಪನ ಬಾಲ್ಯದಿಂದ ಹಿಡಿದು ಮುಂದೆ ರಾಜವೈಭವದ ಕಡೆಗೆ ಹೋಗುವುದನ್ನು ಮತ್ತು ಆತನ ಅದ್ಭುತ ರಮ್ಯವಾದ ಜೀವನ ಚರಿತ್ರೆಯನ್ನು ಬರೆಯುವದಿದೆ ಎಂದು ಲೇಖಕರ ಈ ಪ್ರಬಂಧವನ್ನು ಮುಗಿಸುತ್ತಾರೆ.

೧೨ ನೇ ಶತಮಾನದ ಬಸವಣ್ಣನವರು ಹೇಳಿದಂತೆ ನುಡಿದರೆ ಮುತ್ತಿನ ಹಾರದಂತಿರಬೇಕು...... ಎಂಬ ಮಾತಿನಂತೆ ಇಲ್ಲಿ ಪ್ರೊ. ಸಿಂಪಿಯವರು ತಮ್ಮ ಲಲಿತ ಪ್ರಬಂಧದಲ್ಲಿ "ಭಾಷಣಕಾರ ಬವಣೆ" ಎಂಬ ಪ್ರಬಂಧವನ್ನು ಚಿತ್ರಿಸಿದ್ದಾರೆ. ಮನುಷ್ಯನಲ್ಲಿ ಒಂದಾದರೊಂದು ಕಲೆ ಇದ್ದೇ ಇರುತ್ತದೆ. ಅಂತಹ ಕಲೆಗಳಲ್ಲಿ ಭಾಷಣ ಮಾಡುವ ಕಲೆಯು ಒಂದು. ಪ್ರತಿಯೊಬ್ಬರಿಗೆ ಭಾಷಣದ ಕಲೆ ಬರುವುದಿಲ್ಲ. ಅದು ಅವರ ರೂಡಿಗತವಾದ ಮಹಾಕಲೆಯಾಗಿ ಬಂದು ಬಿಟ್ಟಿರುತ್ತದೆ. ಪ್ರೊ. ವೀರೇಂದ್ರ ಸಿಂಪಿಯವರು ತಮ್ಮ ಈ ಪ್ರಬಂಧದಲ್ಲಿ ಪ್ರಸ್ತುತ ಸಮಾಜದಲ್ಲಿ ನಡೆಯುವ ಕಾರ್ಯಕ್ರಮಗಳ ಬಗ್ಗೆ ಮತ್ತು ಭಾಷಣಕಾರರ ಬಗ್ಗೆ ಎತ್ತಿ ತೋರಿಸಿದ್ದಾರೆ. ಇಂದು ಪ್ರತಿಯೊಂದು ಊರುಗಳಲ್ಲಿ ಕಾರ್ಯಕ್ರಮ ಮಾಡಿ, ಭಾಷಣಕಾರರನ್ನು ಕರೆಸಿ ಅವರಿಂದ ಮಾತುಗಳನ್ನು ಕೇಳಿ ಸಂತೋಷವನ್ನು ಹಂಚಿಕೊಳ್ಳುವುದು ನಾವು ಕಾಣುತ್ತೇವೆ. ಆದರೆ ಸಿಂಪಿಯವರ ಪ್ರಕಾರ ಈ ಪ್ರಬಂಧದಲ್ಲಿ ಭಾಷಣಕಾರರಿಗೆ ಬೆಲೆಯೇ ಇಲ್ಲ. ತಾವು ಎಲ್ಲಾ ಕಾರ್ಯಕ್ರಮದಲ್ಲಿಯೂ ಭಾಗವಹಿಸಿ ಮಾತನಾಡಬೇಕು. ಎಂಬ ಹಂಬಲವನ್ನು ಹೊಂದಿರುವ ಭಾಷಣಕಾರರ ಚಿತ್ರಣವನ್ನು ಇಲ್ಲಿ ನಾವು ಕಾಣುತ್ತೇವೆ.

ಸಮಾಜವನ್ನು ತಿದ್ದುತೇವೆ ಎಂದು ಪ್ರಾರಂಭ ಮಾಡುವ ಭಾಷಣಕಾರರು ಇಂದು ಅನೇಕ ಅಶ್ವಾಸನೆಗಳನ್ನು ಕೊಟ್ಟ ಕೆಲಸವನ್ನು ಮಾಡದೆ ಇರುವ ಪ್ರಸಂಗಗಳನ್ನು ನಾವಿಲ್ಲಿ ಕಾಣುತ್ತೇವೆ. ಅದಕ್ಕಾಗಿಯೇ ಜನರು ಭಾಷಣಕಾರರ ಭಾಷಣವನ್ನು ನಿರಾಕರಿಸಿದ್ದಾರೆ. ಇಂದಿನ ಭಾಷಣಕಾರರು ಎಂಥಹ ಸ್ಥಿತಿಗೆ ಇಳಿದಿದ್ದಾರೆಂದರೆ ಸಭಿಕರು ಇದ್ದರೆ ಒಳಿತಾಯಿತು. ಇಲ್ಲದಿದ್ದರೂ ನಡೆದೀತು. ಎನ್ನುವ ಮಟ್ಟಿಗೆ ತಲುಪಿದ್ದಾರೆ. ಅಂದರೆ ಸಮಾರಂಭಗಳಲ್ಲಿ ನನ್ನ ಭಾಷಣ ಇರಲೇಬೇಕು ಎಂದು ಹೇಳಿ ಅವರನ್ನು ಅಕ್ಕರೆಯಿಂದ ಮಾತಾಡಿದೆ ಕಾರ್ಯಕ್ರಮವನ್ನು ಸಿದ್ದಪಡಿಸಲು ತಯಾರಾಗುತ್ತಾರೆ. ಆಧುನಿಕ ದಿನಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಸಮಾರಂಭಗಳು ನಡೆಯುತ್ತವೆ. ಆದರೆ ಆ ಸಮಾರಂಭದ ಕಡೆ ಯಾರದೂ ಗಮನ ಇರುವುದಿಲ್ಲ ಹೆಸರಿಗೆ ಮಾತ್ರ ಸಮಾರಂಭಗಳನ್ನು ಮಾಡುವುದು ಕಾಣುತ್ತೇವೆ. ಅಂತಹ ಸ್ಥಿತಿಯನ್ನೇ ಪ್ರೊ. ಸಿಂಪಿಯವರು "ಭಾಷಣಕಾರ ಬವಣೆ" ಎಂಬ ಪ್ರಬಂಧದಲ್ಲಿ ಚಿತ್ರಿಸಿ ಓದುಗರಿಗೆ ಭಾಷಣಗಾರರ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸಿದ್ದಾರೆ.

ಕೊನೆಗೆ ಕಾರ್ಯಕ್ರಮದ ಕೊನೆಯ ಹಂತವನ್ನು ಯಾವ ರೀತಿಯಲ್ಲಿ ಸಭಿಕರಿಗಿಂತ ಹೆಚ್ಚು ಕಾಲಾವಧಿ ಹೆಚ್ಚಿನ ತಾಳ್ಮೆಯಿಂದ ವೇದಿಕೆಯ ಮೇಲೆ ಕೊಡಬೇಕಾಗಿರುವ ಅಧ್ಯಕ್ಷರು ಭಾಷಣದ ಲೋಪ ದೋಷಗಳನ್ನೆತ್ತಿ ತೋರಿಸುವ ವಿಮರ್ಶಕರಾಗುತ್ತಾರೆ. ಇಲ್ಲವೆ ಭಾಷಣಕಾರರ ಹೆಸರನ್ನೇ ಎತ್ತದೆ, ತಾವೂ ಒಂದು ಭಾಷಣ ಬಿಗಿದೇ ಬಿಡುತ್ತಾರೆ. ಇಲ್ಲಿಯವರೆಗೆ ನೀವು ತಾಳ್ಮೆಯಿಂದ ವಿಸ್ತಾರವಾದ ಹಾಗೂ ಜಟಿಲವಾದ ಭಾಷಣ ಕೇಳಿದ್ದೀರಿ. ಇಂಥ ಭಾಷಣ ಕೇಳಿದ ನಂತರವೂ ನೀವಿನ್ನೂ ಕುಳಿತಿದ್ದೀರೆಂದರೆ ನಿಮ್ಮ ಸಹನ ಶಕ್ತಿಯು ಅಗಾಧವಾದುದು. ಏನೇ ಇರಲಿ ಭಾಷಣಕಾರರು ಮಾಗಿಸಿದ ವಿಚಾರದಂತೆ ನೀವೆಲ್ಲ

[illegible]

ನಡೆಯುತ್ತಿರೆಂದು ನಂಬಿದೇನೆ. ಅಂಥ ಭರವಸೆಯನ್ನು ನಿಮ್ಮೆಲ್ಲರ ಪರವಾಗಿ ಅತಿಥಿಗಳಿಗೆ ಅರ್ಪಿಸುತ್ತೇನೆ ಅಂತ್ಯ ಮಾಡುತ್ತಾರೆ ಎಂಬುದನ್ನು ಇಲ್ಲಿ ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ.

ಹಣವಿದ್ದರೆ ಹೆಣವು ಮಾತಾಡಬಲ್ಲದು ಎಂಬ ಉಕ್ತಿಯಂತೆ ಪ್ರೊ. ವೀರೇಂದ್ರ ಸಿಂಪಿಯವರು ಹಣದ ವಿಷಯದ ಬಗ್ಗೆ ತಮ್ಮ "ನಾನು ಕಳೆದುಕೊಂಡ ಐದು ರೂಪಾಯಿ" ಲಲಿತ ಪ್ರಬಂಧದಲ್ಲಿ ಎತ್ತಿ ತೋರಿಸಿದ್ದಾರೆ. ಈ ಪ್ರಬಂಧದ ಪ್ರಾರಂಭದಲ್ಲಿ ಸಿದ್ದಣ ಕೈಗಡವೆಂದು ತನ್ನ ಸ್ನೇಹಿತ ಹತ್ತಿರ ಐದು ರೂಪಾಯಿ ತೆಗೆದುಕೊಂಡಿದ್ದಾನೆ ಆದರೆ ಅದನ್ನು ಆತ ಸಣ್ಣ ವಿಷಯವೆಂದು ಬಿಟ್ಟಿದ್ದಾನೆಯೋ ಅಥವಾ ಆ ಐದು ರೂಪಯಿಯನ್ನು ಹಿಂದಿರಿಗಿಸುವುದನ್ನು ಮರೆತಿದ್ದಾನೋ ಎನ್ನುವುದರಲ್ಲಿಯೇ ಪ್ರಬಂಧ ಮುಕ್ತಾಯವಾಗಿದೆ. ಈ ಪ್ರಬಂಧವು ಇಬ್ಬರ ಸ್ನೇಹಿತರ ವಿಚಾರ, ಭಾವನೆಗಳನ್ನು ಎತ್ತಿ ತೋರಿಸುತ್ತದೆ. ಇಲ್ಲಿ ಸಿದ್ದಣ್ಣ ಕೈಗಡ ತೆಗೆದುಕೊಂಡ ಐದು ರೂಪಾಯಿ ದೊಡ್ಡದಲ್ಲ. ಆದರೆ ಆತನ ಸ್ನೇಹಿತ ಆ ದುಡ್ಡಿಗಾಗಿ ಚಡಪಡಿಸುವ ಪರಿ ಮಹತ್ವದಾಗಿದೆ. ಇಲ್ಲಿ ಸಿದ್ದಣ್ಣನಿಗೆ ನೇರವಾಗಿ ದುಡ್ಡು ಕೇಳಲು ಬರುವುದಿಲ್ಲ. "ನೀವು ಕೇಳಬಹುದು ಸ್ಪಷ್ಟವಾಗಿ ಏಕೆ ಕೇಳಬಾರದಾಗಿತ್ತು ಎಂದು, ಆ ರೀತಿ ಕೇಳುವುದು ಸುಸಂಸ್ಕ್ರತರ ಲಕ್ಷಣವಲ್ಲ ಮೇಲಾಗಿ ಸ್ನೇಹ ಸಂಬಂಧ, ಮತ್ತೆ ಸಣ್ಣ ಮೊತ್ತ ಬೇರೆ ಥೂ ಹೋಗಲಿ ಬಿಡು ಎಂದು ನೂರೆಂಟು ಸಾಕಿ ನಿರ್ಧಾರ ಮಾಡಿದರೂ ಮತ್ತೆ ಮತ್ತೆ ಈ ಕೈಗಡ ಹಣ ನನ್ನ ನೆನಪಿಗೆ ಬಂದು ನನ್ನ ಸಣ್ಣತನವನ್ನು ಬೊಟ್ಟು ಮಾಡಿ ತೋರಿಸುತ್ತದ" ಅಂದರೆ ಇಲ್ಲಿ ಸ್ನೇಹದಲ್ಲಿ ಎಂಥ ಶಕ್ತಿ ಇದೆ ಎನ್ನುವುದನ್ನು ಪ್ರೊ. ಸಿಂಪಿಯವರು ಎತ್ತಿ ತೋರಿಸಿದ್ದಾರೆ.

ಮನುಷ್ಯನ ಆಸೆಗಳಿಗೆ ಮತ್ತು ಕನಸುಗಳಿಗೆ ಮಿತಿಯೆಂಬುದಿಲ್ಲ ಎಂಬ ಮಾತಿನಂತೆ ಪ್ರೊ. ಸಿಂಪಿಯವರು ತಮ್ಮ ಪ್ರಬಂಧವಾದ "ಕೊನೆಗೂ ಮನೆಯೊಂದು ದೊರೆತಾಗ" ಎಂಬ ಪ್ರಬಂಧದಲ್ಲಿ ಅತಿ ಸೊಕ್ಷ್ಮವಾಗಿ ಚಿತ್ರಿಸಿದ್ದಾರೆ. ಮನುಷ್ಯ ಮದುವೆಯಾದ ನಂತರ ಒಂದು ಸುಂದರ ಮನೆಗಾಗಿ ಹಾತೊರೆಯುತ್ತಿರುತ್ತಾನೆ. ತನ್ನ ಹೆಂಡತಿಯೊಂದಿಗೆ ಸುಖ ಸಂಸಾರ ನಡೆಸಲು ಆತ ನಗರಕ್ಕೆ ಬಂದು ಮನೆಯನ್ನು ಹುಡುಕುವ ಸಂದರ್ಭ ಇಲ್ಲಿ ಬಹಳ ಸುಂದರವಾಗಿ ಚಿತ್ರಿಸಿದ್ದಾರೆ. ಮನೆಯ ಬಾಡಿಗೆ ವಿಷಯ ಹಿಡಿದು ಎಲ್ಲಾ ಸೌಲಭ್ಯಗಳನ್ನು ಸರಳ ರೀತಿಯಲ್ಲಿ ಇಲ್ಲಿ ಪ್ರೊ. ಸಿಂಪಿಯವರು ವಿವರಿಸಿದ್ದಾರೆ. ಮನುಷ್ಯ ಕನಸು ಕಾಣುವುದರಲ್ಲಿಯೇ ಈ ಲಲಿತ ಪ್ರಬಂಧವನ್ನು ಮುಕ್ತಾಯಗೊಳಿಸುತ್ತಾರೆ.

ಸ್ವಚ್ಛಂದ ಮನದ ಸುಳಿದಾಟ

ಸ್ವಚ್ಛಂದ ಮನದ ಸುಳಿದಾಟ ಈ ಪ್ರಬಂಧವು ಸಂಕಲನವನ್ನು ಪ್ರೊ. ವೀರೇಂದ್ರ ಸಿಂಪಿಯವರು ೧೯೮೪ ರಲ್ಲಿ ಪ್ರಕಟಿಸಿದ್ದಾರೆ. ಈ ಪ್ರಬಂಧದಲ್ಲಿ ಕಾಗದದ ಚೂರ, ಜಡ್ಡಿನ ಜಾಪತ್ರಿ, ಮರೆವಿನ ಮೋಹದಲ್ಲಿ, ಹೊಗಳಿಕೆಯ ಹೊಮ್ಮಾಲಿತನ, ಖಾನಾವಳಿಗಳು, ಸತ್ಯಾಗ್ರಹಗಳು, ಭಾವ ಮೈದುನ, ಮಕ್ಕಳ ಮನಸ್ಸು, ಪರಚಿಂತೆ ನಮಗೇಕಯ್ಯ? ಕವಿಗಳಿಗೊಂದು ಎಚ್ಚರಿಕೆ, ಭೂಮಿಗೆ ಭಾರವಾದವನು, ಬೇಸರ, ನಮ್ಮ ಮಾತುಗಾರರು, ಹಳ್ಳಿಯ ಚಹಾ ಹೊಟೇಲುಗಳು, ಪ್ರೀತಿಯ ಮಿಮಾಂಸೆ ಎಂಬ ಒಟ್ಟು ೧೫ ಲಲಿತ ಪ್ರಬಂಧಗಳಿವೆ.

ಮನುಷ್ಯನ ಜೀವನದಲ್ಲಿ ಕಾಣುವ ಹಲವಾರು ಘಟನೆಗಳಲ್ಲಿ ಅನಾರೋಗ್ಯವು ಒಂದು. ಈ ಅನಾರೋಗ್ಯವೆಂದರೆ ಪ್ರತಿಯೊಬ್ಬರು ಅಂಜುವವರೆ ಅದನ್ನು ಸ್ವಾಗತಿಸುವವರು ಬಹು ವಿರಳ ಅಂಥಹ ಅನಾರೋಗ್ಯದ ಕುರಿತು ಲೇಖಕರು "ಜಡ್ಡಿನ ಜಾಪತ್ರಿ" ಎಂಬ ಲಲಿತ ಪ್ರಬಂಧದಲ್ಲಿ ಅತ್ಯಂತ ವಿಶಿಷ್ಟವಾಗಿ ನಿರೂಪಿಸಿದ್ದಾರೆ ಮನುಷ್ಯನ ಆರೋಗ್ಯದ ವೈರಿಯಾಗಿರುವ ಜಡ್ಡು ಯಾರಿಗುಬೇಕಾಗಿಲ್ಲ, ಆದರೆ ಜಡ್ಡಿನಿಂದಾಗುವ ಅನುಕೂಲತೆಗಳನ್ನು ಕಂಡು ಕೊಂಡಿರುವ ಲೇಖಕರಿಗೆ ಜಡ್ಡು ಒಂದು ಅಧಿಯೆಂತೆ ನಾವು ಆರೋಗ್ಯದಿಂದಿರುವಾಗ ನಮ್ಮನ್ನು ನಮ್ಮ ಬಂಧು ಬಾಂದವರು ಕಣ್ಣೆತ್ತಿಯು ನಮ್ಮನ್ನು ನೋಡುವುದಿಲ್ಲ ಅದೆ ಜಡ್ಡಿನಿಂದ ಬಿದ್ದಾಗ ಬಂಧು ಬಾಂದವರ ಮನೆಯವರ ವರ್ತನೆ ಹೇಗಿರುತ್ತದೆಂಬುದನ್ನು ಈ ಮುಂದಿನಂತೆ ಸುಂದರವಾಗಿ ಚಿತ್ರಿಸಿದ್ದಾರೆ." ಹೀಗೆ ಜಡ್ಡಿನಲ್ಲಿ ಡಾಕ್ಟರರ ಪ್ರಾಣ ಸಂಕಟವನ್ನಷ್ಟೇ ಕಾಣುವ ಭಾಗ್ಯವಲ್ಲದೆ. ಮನೆಯವರ ಅಪಾರ ಕರುಣೆ, ಪ್ರೀತಿ, ಅನುಕಂಪಗಳಿಗೆ ಪಾತ್ರನಾಗುತ್ತೇನೆ. ತಾಯಿ ಬಂದು ಹಣ ಒತ್ತುತ್ತಾಳೆ. ಆದರೆ ಅದೇ ನಾರ್ಮಲ್ ಇದ್ದಾಗ ಚಹ ಮಾಡಲು ಅವಳಿಗೆ ಕೇಳಿದರೆ ಅನ್ನುತ್ತಾಳೆ ಮಾಡಿಕೊಂಡು ಕುಡಿಯಪ್ಪಾ ನಮ್ಮ ಚಹಾ ನಿಮ್ಮ ಮನಸ್ಸಿಗೆ ಬರುವುದಿಲ್ಲ. ಈಗ ಬಂದು ಹತ್ತು ನಿಮಿಷಕ್ಕೊಮ್ಮೆ ಚಹಾ ತರುತ್ತಾಳೆ. ಜುಲುಮೆಯಿಂದ ಕುಡಿಸುತ್ತಾಳೆ. ತಂಗಿ ತಮಂದಿರು ಸುತ್ತು ನೆರೆಯುತ್ತಾರೆ. ಸಣ್ಣ ತಮ್ಮನೊಬ್ಬ ಕಿಸೆಯಲ್ಲಿ ಜಿಗುಟಾದ ಪೆಪ್ಪರಮಿಂಟೊಂದನ್ನು ತೆಗೆದು ನನ್ನ ಬಾಯಿಯಲ್ಲಿ ಹಾಕಿ ವೇಗವನ್ನು ಮಿಕಿ ಮಿಕಿ ನೋಡುತ್ತಾನೆ. ತಂದೆಯವರು ಸಿಟ್ಟಿಗೆ ಬಂದಾಗ ಆ ಮುಖದ ರೌದ್ರತೆಯಲ್ಲಾಗಲಿ, ಅವರ ಮಾತಿನ ರೆಡಿಯಲ್ಲಾಗಲಿ ಸಿಕ್ಕು ಬಿರುಗಾಳಿಗೆ ಸಿಕ್ಕ ಬಳ್ಳಿಯ ಹಾಗೆ ನಡುಗಿ ಹೋಗುತ್ತೇನೆ. ಆದರೆ ಜಡ್ಡಿನಲ್ಲಿ ಅವರ ಪ್ರೀತಿಯನ್ನು ನೋಡಿದಾಗ ಈ ವ್ಯಕ್ತಿಯೂ ಅದೆಷ್ಟು ಪ್ರೇಮರಸವನ್ನು ತುಂಬಿ ಕೊಂಡಿದ್ದಾನಲ್ಲ ಎಂದು ಕೃತಜ್ಞತೆಯಿಂದ ಬಾಗಿ ಹೋಗುತ್ತೇನೆ" [೧] ಅದಕ್ಕಾಗಿಯೇ ಲೇಖಕರು "ಜಡ್ಡು ನನ್ನ ಮನೆಯ ಬಾಗಿಲಿಗೆ ಬಂದು ಸ್ವಾಗತ ಸಿಗುವದೋ ಇಲ್ಲವೋ ಎಂದು ಅನುಮಾನಿಸುತ್ತ ನಿಲ್ಲುತ್ತದೆ. ನಾನೇ ಅದರ ಬರುವಿಕೆಗಾಗಿ ಶಬರಿ ರಾಮನಿಗಾಗಿ ಕಾದಿರುವಂತೆ ಕಾದಿರುತ್ತೇನೆ. ಎಂದು ಬರುವನೋ ನನ್ನ ನಲ್ಲ ಜಡ್ಡಿಂಗರಾಯ ಎಂದು ಕಾತರಿಸುತ್ತೇನೆ ಮನೆಯಲ್ಲಿ ಅದರ ಪ್ರವೇಶವೆಂದರೆ ವಾತಾವರಣವೇ ಬದಲಾಯಿಸಿ ಬಿಡುತ್ತದೆ. ಎಂದಿದ್ದಾರೆ. ಆದರೂ ಲೇಖಕರಿಗೆ ಜಡ್ಡಿನ

---

೧. ಪ್ರೊ. ವೀರೇಂದ್ರ ಸಿಂಪಿ ಸ್ವಚ್ಛಂದ ಮನದ ಸುಳಿದಾಟ – ೧೯೮೪

ಬಗ್ಗೆ ಭಯವಿಲ್ಲದಿಲ್ಲ ವೆಂಬುದನ್ನು ಅತಿಥಿಗಳು ಬಂದಾಗ ಖರ್ಚಿಗೆ ಹೆದರಿ ನಿಲ್ಲುವ ಆಧುನಿಕ ಗೃಹಸ್ಥನಂತೆ ಕೆಲವೊಂದು ಕ್ಷಣ ಭಯಗ್ರಸ್ತನಾಗುತ್ತೇನೆ. ಅದೇ ಕ್ಷಣದಲ್ಲಿ ಕೇಳುತ್ತೇನೆ ನಾನೇನೋ ಕಣ್ಣೀರು ಸುರಿಸುತ್ತೇನೆ. ಎಲೇ ಜಡ್ಡೆ, ಅದನ್ನು ಬರೆಯಿಸುವ ಶಕ್ತಿ ನಿನಗಿದೆಯೇ? ಸಾಕಷ್ಟು ತಾಳ್ಮೆಯಿದೆಯೇ? ಸದ್ದು ಹೊಡೆದು ನಿಂತಾಗ ಜಡ್ಡು ನಾಗಲೋಟದಿಂದ ರೆಡಕಿಯ ಮೂಲಕ ಓಡುವುದನ್ನು ನೋಡಿ ನಾನು ವಿಜಯೋತ್ಸಾಹದಿಂದ ನೆಗೆದು ಬೀಳುತ್ತೇನೆ; ಮತ್ತೆ ಜೀವನ ಚಕ್ರ ಸಾಗುತ್ತದೆ ಈ ಮೇಲಿನ ವಿವರಣೆಯಿಂದ ತಿಳಿದು ಬರುತ್ತದೆ.

ಮನುಷ್ಯನ ಹಲವಾರು ಗುಣಗಳಲ್ಲಿ ಮರೆವು ಸಹವು ಒಂದು. ನೆನಪಿನ ಮತ್ತು ಅರುವಿನ ವೈರಿಯಾಗಿರುವ ಮರೆವನ್ನು ದೂಷಿಸುವವರೆ ಅಧಿಕ. ಅಂಥಹದರಲ್ಲಿ ಪ್ರೊ. ವೀರೇಂದ್ರ ಸಿಂಪಿಯವರು ಮರೆವಿನ ಮೋಹದಲ್ಲಿ ಎಂಬ ತಮ್ಮ ಲಲಿತ ಪ್ರಬಂಧದಲ್ಲಿ ಮರೆವು ಮನುಷ್ಯನಿಗೆ ಯಾವ ರೀತಿ ಪ್ರಯೋಜನಕಾರಿ ಎಂಬುದನ್ನು ತಮ್ಮ ಎಂದಿನ ವಿಡಂಬನಾತ್ಮಕ ಶೈಲಿಯಲ್ಲಿ ಚಿತ್ರಿಸಿದ್ದಾರೆ. ಮರೆವು ತಮ್ಮ ಬಾಲ್ಯವಸ್ಥೆಯಿಂದ ಇಂದಿನವರೆಗೂ ಮಾಡಿದ ಲೀಲೆಗಳನ್ನು ಕೃಷ್ಣನ ಬಾಲಲೀಲೆಗಳಿಗೆ ಹೋಲಿಸುತ್ತಾ ನನ್ನ ಬಾಲ್ಯವೊಂದು ಮರೆವಿನ ಜೊತೆ ಆಡಿದ ಕಣ್ಣು ಮುಚ್ಚಾಲೆ. ಅವ್ವನ ಮೊಲೆಹಾಲನ್ನು ಕುಡಿಯುತ್ತಿರುವಾಗ ಚೇಷ್ಟೆಗೆಂದು ಯಾರಾದರೂ ನಿಮ್ಮ ಅವ್ವ ಊರಿಗೆ ಹೋದಳಲ್ಲೋ ನಿನ್ನ ಬಿಟ್ಟು? ಎಂದಾಗ ಅವ್ವನ ತೊಡೆಯ ಮೇಲೆ ಹಾಯಾಗಿ ಕುಳಿತೇ ಅವಳಿಗಾಗಿ ಶಂಖಕುಟ್ಟಿ ಗುಡುಗು ಸಿಡಿಲುಗಳ ಮಳೆಗರೆದ ದಿನಗಳೂ ಇದ್ದವು. ಊಟಕ್ಕೆ ಕುಳಿತು ಏನನ್ನೋ ದಿಟ್ಟಿಸಿ ನೋಡುತ್ತಿದ್ದಾಗ ನನ್ನ ಎದುರಿನ ಊಟದ ತಟ್ಟೆಯನ್ನೇ ಎತ್ತಿ ಇಟ್ಟು ನಾನು ಅಳುತಿರುವುದನ್ನು ಕಂಡಂತೆಲ್ಲ ನಗುವಿನಲ್ಲಿ ಮರೆತು ಬಿಡುತ್ತಿದ್ದರು ನನ್ನ ಸೋದರ ಮಾವಂದಿರು. ಈಗಲಾದರೂ ಊಟದ ತಟ್ಟೆಯಲ್ಲಿ ಬಾಯಾಡಿಸಿಕೊಳ್ಳಲು ಇಟ್ಟ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ಇವು ಇದ್ದ ಸ್ಥಿತಿಯಲ್ಲಿಯೇ ಉಳಿದು ಬಿಡುತ್ತವೆ. ಎಂದು ಅಭಿವ್ಯಕ್ತಿಸಿದ್ದಾರೆ. ಅಲ್ಲದೆ ಜೀವನ ಸಂಕಷ್ಟದಲ್ಲಿ ಸಿಲುಕಿದಾಗ ಮರೆವು ಮಾಡಬಹುದಾದ ಸಹಾಯವನ್ನು ಜೀವನ ರೋಸಿ ಹೋದಾಗ, ಭಾವನೆಯು ಭಣ ಗುಟ್ಟುವಾಗ ಮರೆವಿನ ಮನುಷ್ಯನ ಭೆಟ್ಟಿಯು ಮನಸ್ಸಿಗೆ ತಂಪನ್ನೆರೆಯುತ್ತದೆ. ಸುಜ್ಞಾನಿಯೆಂದು ತಿಳಿದುಕೊಂಡ ವ್ಯಕ್ತಿಯ ಭೆಟ್ಟಿಯು ಮನಸ್ಸಿನ ಗಾಯದ ಮೇಲೆ ಉದುರಿಸಿದ ಕಾರಮಡಿಯಂತೆ ಉರುಪನ್ನು ಅಧಿಕಗೊಳಿಸುತ್ತದೆ. ಈ ರೀತಿಯಾಗಿ ಉಲ್ಲೇಖಿಸಿದ್ದಾರೆ.

ರಾಜ್ಯ ಗಾಂಭೀರ್ಯದ ಗುಣಗಳಲ್ಲಿ ಒಂದಾಗಿರುವ ಮರೆವು ಇಲ್ಲದ ಜೀವನ ಜೀವನವೇ ಅಲ್ಲ. ಕತ್ತಲೆ ಇಲ್ಲದ ಬೆಳಕಿಲ್ಲದ ಇರುವಂತೆ ಮರೆವು ಜೀವನದಲ್ಲಿ ಬೆರೆಕೆಯಾದಾಗ ಮಾತ್ರ ಜೀವನ ಸಹ್ಯಾವಾಗುತ್ತದೆ. ಮರೆವು ಇಲ್ಲದ ಜೀವನ ಜೀವನವೇ ಅಲ್ಲ. ಎಂಬ ಧೃಡ ಶಿಕ್ಷಯವನ್ನು ಲೇಖಕರು ತಾಳಿದ್ದಾರೆ.

ಮಾನವನ ಜೀವನದಲ್ಲಿ ಹೊಗಳಿಕೆಯು ಯಾವ ರೀತಿಯ ಪಾತ್ರವನ್ನು ನಿರ್ವಹಿಸುತ್ತದೆ. ಎಂಬುದನ್ನು ಸಿಂಪಿಯವರು ತಮ್ಮ ಹೊಗಳಿಕೆಯ ಹೊಯ್ಯಾಲಿತನ ಎಂಬ ಪ್ರಬಂಧದಲ್ಲಿ ಮಂಡಿಸಿದ್ದಾರೆ. ಹೊಗಳಿಕೆಗೆ ಒಳಗಾದವರೂ ಯಾರು ಇಲ್ಲ. ಎಂಬ ತೀರ್ಮಾನಕ್ಕೆ ಬರುವ ಲೇಖಕರು. ದೇಹಾಂಶ ಸಂಭುತರಾದ ರಾಜ ಮಹಾರಾಜರನ್ನು ಹೊಗಳಿಕೆಗೆ ದಾಸಾನು ದಾಸರೆಂದಿದ್ದಾರೆ. ಮುಖಸ್ತುತಿಯನ್ನು

ಇಂಜಕ್ಷನ್‌ಗೆ ಹೋಲಿಸಿದ್ದಾರೆ. ಸೂತ್ರ ಪ್ರಿಯತೆಯನ್ನು ಮನುಷ್ಯನ ರಕ್ತದ ಕಣಕಣದಲ್ಲಿಯೂ ಹರಿಯುತ್ತದೆ. ಎನ್ನುತ್ತಾರೆ. ಸಮಾಜದಲ್ಲಿ ಮಾನವ ಯಾವ ರೀತಿಯ ಹೊಗಳಿಕೆಯನ್ನು ಬಯಸುತ್ತಾನೆನ್ನುವುದನ್ನು ಈ ರೀತಿ ಮಾನವನೊಬ್ಬ ಶಾಪಗ್ರಸ್ತ ಜೀವಿ. ನಾಲ್ಕು ಜನ ತನ್ನನ್ನು ಹೊಗಳಿದರೆ ತೀರಲಿಲ್ಲ. ನಾಲ್ಕು ಜನರ ಮುಂದೆ ಡಂಗುರ ಸಾರುತ್ತ ಇರಬೇಕು. ಹೊಗಳಿಕೆಯು ಎಲ್ಲರ ಕೈಗೆ ನಿಲುಕುವ ಸುಲಭ ಸಾಧ್ಯದ ವಸ್ತುವಲ್ಲ ಎಲ್ಲಿ ಯಾವಾಗ ಎಂತಹ ಹೊಗಳಿಕೆಯ ಮಾತ್ರೆಗಳನ್ನು ಉಪಯೋಗಿಸಬೇಕೆನ್ನುವದನ್ನು ಬಲ್ಲವರೇ ಬಲ್ಲರು ವ್ಯವಹಾರ ಕುಶಲತೆಯ ದ್ಯೋತಕವಾಗಿರುವ ಹೊಗಳಿಕೆಯನ್ನು ಲೇಖಕರು ಮಾನವನಿಗೆ ಇದು ಬಿಡಲಾರದ ಕರ್ಮ ಎಂಬ ನಿಲುವಿಗೆ ಬರುತ್ತಾರೆ.

ಆಧುನಿಕ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಖಾನಾವಳಿಯ ಬಗ್ಗೆ ಸಿಂಪಿಯವರು ಖಾನಾವಳಿ ಎಂಬ ಪ್ರಬಂಧದಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಭೋಲೋಕದ ತಂಗು ಮನೆಗಳಿಗೆ ಖಾನಾವಳಿಗಳನ್ನು ಹೋಲಿಸಿರುವ ಸಿಂಪಿಯವರು ಖಾನಾವಳಿ ಇಲ್ಲದ ಜಗತ್ತಿನ ಕಲ್ಪನೆ ಸಹ ಅಸಾಧ್ಯ ಎಂಬುದನ್ನು"ಆಧುನಿಕ ಜಗತ್ತಿನಲ್ಲಿ ಖಾನಾವಳಿ ಸಂಸ್ಥೆ ತನ್ನ ಪ್ರಭಾವ ವಲಯವನ್ನು ವಿಸ್ತರಿಸಿದೆ. ಇದಿಲ್ಲದ ಜಗತ್ತಿನ ಕಲ್ಪನೆಯೇ ನನ್ನೆದೆಯನ್ನು ನಡುಗಿಸುತ್ತದೆ. ರಾಜ್ಯಗಳುರುಳಿ ಹೋಗಲಿ, ಕಾಂಗ್ರೆಸ್ ಪಕ್ಷ ಕೆಳಗುರುಳಿ ಜನತಾ ಪಕ್ಷ ಅಧಿಕಾರದ ಗದ್ದುಗೆಯೇರಲಿ, ಶಾಲೆ-ಕಾಲೇಜುಗಳು ದೀರ್ಘ ಕಾಲಾವಧಿಯ ವಿಶ್ರಮ ತಕ್ಕೊಳ್ಳಲಿ, ಬ್ಯಾಂಕುಗಳು ದಿವಾಳಿಯೇಳಲಿ, ವೃತ್ತ ಪತ್ರಿಕೆಗಳು ಕೆಲಕಾಲ ಸುದ್ದಿಯ ಗುಡುಗು ಮಿಂಚುಗಳನ್ನು ಸ್ಥಗಿತಗೊಳಿಸಲಿ, ಆಕಾಶ ಹರಿದು ಬೀಳಲಿ ಸಮಾಜ ಚಕ್ರ ಸಾವರಿಸಿಕೊಂಡು ನಡೆದೇ ನಡೆಯುತ್ತದೆ; ಆದರೆ ಒಂದು ಕ್ಷಣದಲ್ಲಿಯೇ ಖಾನಾವಳಿಯಲ್ಲಿಯಿಲ್ಲದ ಆಧುನಿಕ ಜೀವನಕ್ಕೆಂದು ನಿಂತು ಬಿಡುತ್ತದೆ. ಕಾರ್ಮಿಕರು ಖಾಲಿ ಊಟದ ಡಬ್ಬಿಯನ್ನು ನೋಡಿ ಮೂರ್ಛೆ ಬೀಳುತ್ತಾರೆ. ನೌಕರವರ್ಗ ನಿಂತಲ್ಲಿಯೇ ಪ್ರಾಣ ಬಿಡುತ್ತದೆ. ನಿರಂತರ ಪ್ರವಾಸಿವರ್ಗ ಕೂಳಿಲ್ಲದೆ ನೀರಿಲ್ಲದೆ ಒದ್ದಾಡುತ್ತದೆ. ಹೀಗೆಂದು ಖಾನಾವಳಿಯೆಂದರೆ ಸಮಾಜ ಚಕ್ರದ ಕೀಲೆಚಿದೇ ನನ್ನ ಆತ್ಮವಿಶ್ವಾಸ ಇಲ್ಲಿ ವಿವರಿಸಿದ್ದರೆ.

ಖಾನಾವಳಿಯನ್ನು ರಾಷ್ಟ್ರೀಯ ಭಾವೈಕ್ಯತೆಯ ಕೇಂದ್ರ ಬಿಂದುವಿಗೆ ಹೋಲಿಸುವ ಸಿಂಪಿಯವರು ದೇಶದಲ್ಲಿ ಇಂದು ಎಲ್ಲಿಯಾದರೂ ರಾಷ್ಟ್ರೀಯ ಐಕ್ಯತೆ ಬಂಧು-ಭಾವತ್ವ ಸಹಕಾರಿಭಾವ ಏಕತೆಯ ಆದರ್ಶಗಳು ಯಶಸ್ವಿಯಾಗಿದ್ದರೆ ಅದು ಖಾನಾವಳಿಯಲ್ಲಿಯೇ ಎಂದು ಎದೆ ತಟ್ಟಿ ಹೇಳುತ್ತೇನೆ. ಚಹಾ ಹೊಟೇಲುಗಳಲ್ಲಿ ಪ್ರಾರಂಭವಾದ ಈ ಏಕತೆಯ ಬೀಜ ಇಲ್ಲಿ ಖಾನಾವಳಿಯಲ್ಲಿ ಬೆಳೆದು ನಿಂತಿರುತ್ತದೆ. "ಸಹನಾವವತು ಸಹನೌಭುನಕ್ತು ಸಹವೀರ್ಯ ಕರವಾವ ಹೈ" ಎನ್ನುವ ಉಪನಿಷದ್ಮಂತ್ರ ಮಂತ್ರವಾಗಿಯೇ ಉಳಿಯಲಿಲ್ಲ. ಅದು ಇಂದು ಖಾನಾವಳಿಗಳಲ್ಲಿ ಸಿದ್ಧಿಯನ್ನು ಪಡೆದಿದೆ. ಸಂಧ್ಯಾವಂದನೆ, ಲಿಂಗಪೂಜೆ ಮಾಡದೆ ತುತ್ತು ಅನ್ನವನ್ನು ಉಣ್ಣದ ಸನಾತನಿಗಳಿಂದು ಕೀಳು ವರ್ಗವೆಂದು ಕರೆಯಲ್ಪಡುವ ಜನರ ಭುಜಕ್ಕೆ ಭುಜ ಹಚ್ಚಿ ಸಹ ಪಂಕ್ತಿಯಲ್ಲಿ ಉಣ್ಣುತ್ತಿರುವ ದೃಶ್ಯ ರೋಮಾಂಚನಕಾರಿಯಾದುದು. ಆ ಆದರ್ಶಕಾದರೂ ಖಾನಾವಳಿಗೆ, ನಿತ್ಯ ನನಗೆ ನಮೋ ನಮೋ ಎನ್ನಬೇಕೆನಿಸುತ್ತದೆ. ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

ಇಂಥಹ ಭಾವೈಕ್ಯತೆಯ ಬಿಂದುವಾಗಿರುವ ಖಾನಾವಳಿಗೆ ಕೆಲ ಸಂಕುಚಿತ ಸ್ವಭಾವದ ಜನ ಉಡುಪಿ ಬ್ರಾಹ್ಮಣ ಹೊಟೇಲು ವೀರಶೈವ ಲಿಂಗಾಯತ ಖಾನಾವಳಿ ಇಸ್ಲಾಮಿಯಾ ಹೊಟೇಲು ಮರಾಠ ಖಾನಾವಳಿ ಎಂದು ಸಂಕುಚಿತ ಮತಿಯಾ ಹೆಸರನ್ನು ಇಡುವುದನ್ನು ಲೇಖಕರು ಖಾರವಾಗಿಯೇ ಟೀಕಿಸುತ್ತಾ ಅವರನ್ನು ಜಾತ್ಯಂಧರು ಎಂದಿದ್ದಾರೆ ಅಷ್ಟೆ ಅಲ್ಲದೆ ಖಾನಾವಳಿಯನ್ನು ಗುಣವನ್ನು ಜನ್ಮ ಜನ್ಮ ಕಳೆದರೂ ತಿರಿಸಿದಾಗುವುದಿಲ್ಲ ಎಂದಿದ್ದಾರೆ.

ಇಂದು ಪ್ರತಿದಿನ ಬೆಳಗಾದರೆ ಮೇಲಿಂದ ಮೇಲೆ ಕೇಳಿಬರುತ್ತಿರುವ ಮುಸ್ಕರ, ಸಂಪು, ಬಂದ, ಹಡತಾಳ, ಸತ್ಯಾಗ್ರಹ, ಪ್ರತಿಭಟನೆಗಳ ಬಗ್ಗೆ ಪ್ರೊ. ಸಿಂಪಿಯವರು ತಮ್ಮ ಸತ್ಯಾಗ್ರಹಗಳು ಎಂಬ ಕಿರು ಲಲಿತ ಪ್ರಬಂಧದಲ್ಲಿ ನವೂರಾದ ವಿಡಂಬನೆಯೊಂದಿಗೆ ವಿಶ್ಲೇಸಿದ್ದಾರೆ. ವಿಶ್ವ ಮಿತ್ರನನ್ನು ಪ್ರಥಮ ಸತ್ಯಾಗ್ರಹಿ ಎಂದು ಲೇಖಕರು ಹೇಳುತ್ತಾ ಛಲವೇ ಸತ್ಯಾಗ್ರಹದ ಮೂಲಮಂತ್ರವೆನ್ನುತ್ತಾರೆ. ಈ ರೀತಿಯ ಹಠವೇ ಮಿಸ್ಟರ್ ಗಾಂಧಿಯವರ ಮಹಾತ್ಮಗಾಂಧಿಯನ್ನಾಗಿ ಮಾಡಿತು ಎಂದಿದ್ದಾರೆ. ಗಾಂಧಿಜೀಯವರನ್ನು ಸತ್ಯಾಗ್ರಹದ ಜನಕನೆಂದು ಒಪ್ಪದ ಲೇಖಕರು ಈ ಅಸ್ತ್ರವನ್ನು ಗಂಡಂದೆರ ವಿರುದ್ಧ ಯಶಸ್ವಿಯಾಗಿ ಉಪಯೋಗಿಸಿರುವ ಇತಿಹಾಸದ ಕೈಕೆಯಿಯನ್ನು ಉದಾಹರಿಸುತ್ತಾರೆ, ಗಾಂಧಿ ಇವರಲ್ಲಿ ಆತ್ಮ ಶುದ್ಧಿಗಾಗಿ ಉಪಯೋಗಿಸಲಾಗುತ್ತಿದ್ದು ಸತ್ಯಾಗ್ರಹವು ಇಂದು ವಿಕೃತರೂಪಹೊಂದಿರುವುದನ್ನು ಲೇಖಕರಲ್ಲಿ ವಿಶಾದದಿಂದ ಹೇಳಿದ್ದಾರೆ ನಾನು ಸತ್ಯಾಗ್ರಹದ ವಿರೋಧಿಯಲ್ಲ ಸತ್ಯಾಗ್ರಹದ ದುರುಪಯೋಗ ಮಾತ್ರ ನಿಲ್ಲಬೇಕೆನ್ನುವ ಅಭಿಪ್ರಾಯದವನು. ನಮ್ಮ ಈ ರಾಜಕೀಯ ಜೀವನದಲ್ಲಿ ಬೇರು ಬಿಟ್ಟಿರುವ ಈ ಸತ್ಯಾಗ್ರಹದ ಗಿಡ ಇನ್ನೂ ಎಂಥ ಕಹಿ ಫಲಗಳನ್ನು ಕೊಡುವದೋ. ನಾವು ಸ್ವತಂತ್ರ ರಾಷ್ಟ್ರದಲ್ಲಿಲ್ಲ. ಅಂತಂತ್ರವೇ ನಮ್ಮನ್ನಾಳುತ್ತಿದೆ.

ಸಾರಿ ದುನಿಯಾ ಏಕ್‌ತರಫ್ ಝೋರುಕಾ ಬಾಯಿ ಏಕ್ ತರಫ್ ಎಂಬ ಜಾಣ್ನುಡಿಯ ಜಾಡಿನಲ್ಲಿ ಸಿಂಪಿಯವರು ಹೆಂಡತಿಯ ಸೋಹೋದರನ ಉಪಟಳನ್ನು ತಮ್ಮ "ಭಾವಮೈದುನ" ಪ್ರಬಂಧದಲ್ಲಿ ಮಾರ್ಮಿಕವಾಗಿ ಪ್ರೊ. ಸಿಂಪಿಯವರು ನಿರೂಪಿಸಿದ್ದಾರೆ. ಗಂಡಂದಿರನ್ನು ಹೆಂಡತಿಯ ಕೈಯೊಳಗಿನ ಕರ ಪುತಲಿಗಳು ಎನ್ನುವ ಲೇಖಕರು, ಲಗ್ನವಾದ ಕ್ಷಣದಲ್ಲಿಯೆ ಗಂಡೆಂಬ ಪ್ರಾಣಿಯು ಮದುವೆಯ ಮುಂಚಿನ ಸಂಸ್ಕಾರಗಳನ್ನೆಲ್ಲ ಕಳಚಿ ಬಗೆದು ತಂದೆ–ತಾಯಿಗಳನ್ನು ಮರೆತು ಅತ್ತೆ ಮಾವಂದಿರ ಬಳಗಕ್ಕೆ ಸೇರುತ್ತದೆ. ಎನ್ನುತ್ತಾರೆ. ತನ್ನ ಭಾವಮೈದುನನು ಕಿಟಲೆಗಳಿಂದ ಬೆಸತ್ತಿರುವ ಲೇಖಕರು ತಮ್ಮ ಅಸಾಹಾಯಕ ಸ್ಥಿತಿಯನ್ನು ತಲೆಯಿದ್ದೂ ವಿಚಾರ ಮಾಡದ, ಕೈಯಿದ್ದೂ ಹೊಡೆಯಲಾರದ, ಬಾಯಿದ್ದೂ ಮಾತನಾಡದ ಅಸಾಹಾಯಕ ಸ್ಥಿತಿಯಲ್ಲಿದ್ದೇನೆ ಭಾವಮೈದುನ ಕಪಿ ಮುಷ್ಠಿಯಲ್ಲಿ ಸಿಕ್ಕು ಒದ್ದಾಡುತ್ತಿದ್ದೇನೆ. ನನಗೆ ಬಿಡುಗಡೆಯೆಂಬುದಿಲ್ಲ ಈ ರೀತಿಯಾಗಿ ತೋಡಿಕೊಂಡಿದ್ದಾರೆ. ಭಾವ ಮೈದುನರ ಅರ್ಥಾರ್ಥ ಸಾಲೆ ಸಾಹೇಬರ ವಿರುದ್ಧ ಸಂಘ ಬಂದನ್ನು ಕಟ್ಟುಬಯಸುವ ಲೇಖಕರು ತನ್ನ ಹೆಂಡತಿಯೆಂಬ ಸಿ.ಐ.ಡಿ. ಅಥವಾ ಗ್ರಹಮಂತ್ರಿಯೆಂತಿರುವ ಹೆಂಡತಿಗೆ ಹೆದರಿ ಆ ಸಂಘದ ಪದಾಧಿಕಾರಿಏಆಗಲಾರೆ ಎನ್ನುತ್ತಾರೆ.

ಮಕ್ಕಳೆಂದರೆ ಪ್ರೀತಿಸದವರು ಯಾಕೆಂದರೆ ಕಾರಂತರೆ ಹೇಳುವಂತೆ ನಾವು ಮಕ್ಕಳಿಗೆ ತೋರುವ ಅಕ್ಕರತೆಗಿಂತಲ್ಲೂ ಹೆಚ್ಚಾಗಿ ಅವರಿಂದ ಜೀವನದಲ್ಲಿ ಆನಂದವನ್ನು ಪಡೆಯುತ್ತೇವೆ. ಇನ್ನು ಮಗು ಹೆಣ್ಣಾಗಿದರಂತು ಅದರ ನಡೆ ನುಡಿಗಳು ತಂದೆ-ತಾಯಿಂದಿರನ್ನು ಹೆಚ್ಚಾಗಿ ಸಂತೋಷದಲ್ಲಿಡುತ್ತವೆ. "ಮಕ್ಕಳ ಮನಸು" ಎಂಬ ಪ್ರಬಂಧದಲ್ಲಿ ಲೇಖಕರು ತಮ್ಮ ಮಗಳು ರೇಖಾಳ ಎಲ್ಲಾ ರೀತಿಯ ನಡೆನುಡಿ ಹಾವಭಾವಗಳನ್ನು ಎತ್ತಿ ಹೇಳಿದ್ದಾರೆ. ರೇಖಾಳ ಸ್ವಾಭಾವಿಕ ನಗು ದಯಾಗುಣ ಅವಳ ತೋರಿಸಿದ ಚಾಣಕ್ಷತೆ, ಎಲ್ಲವುಗಳನ್ನು ಆಯಾ ಸಂದರ್ಭದ ಮೂಲಕ ಹೇಳಿದ್ದಾರೆ ಮತ್ತೊಬ್ಬರ ಬಗ್ಗೆ ಚಿಂತಿಸದೆ ತಮ್ಮ ಚಿಂತನೆಗಳನ್ನು ಅವರ ಮೇಲೆ ಹೇರಿ ತಾವು ಲಾಭ ಪಡೆಯುವ ಭಾರತದ ಬುದ್ಧಿ ಜೀವಿಗಳನ್ನು ಪ್ರೊ. ಸಿಂಪಿಯವರು, ರಾಜಕಾರಣಿಗಳಿಗಿಂತಲೂ ಬುದ್ಧಿಜೀವಿಗಳು ಅಪಾಯಕಾರಿಗಳು ಎಂಬ ಧೋರಣೆಯನ್ನು ತಾಳಿದ್ದಾರೆ. ಬುದ್ಧಿ ಜೀವಿಗಳಿಗೆ ಮುಖವಾಡವನ್ನು ಹಾಕಿಕೊಂಡವರನ್ನು ನಮ್ಮ ಬುದ್ಧಿ ಜೀವಿಗಳಿಗೆ ಭಾರತವನ್ನು ಮುಕ್ಕಿ ತಿನ್ನುತ್ತಿರುವ ಬಡತನದ ಬಗ್ಗೆ ಯಾವ ಕಳಕಳಿಯೂ ಇಲ್ಲ ಬಡವರ ಬಗ್ಗೆ ಯಾವ ಅನುಕಂಪವೂ ಇಲ್ಲ.

ಸ್ವತಃ ತಾನೂ ಬಡವನೇ ಎಂದು ಬುದ್ಧಿಜೀವಿ ಚಡಪಡಿಸುತ್ತಿದ್ದಾನೆ. ಯಾಕಂದರೆ ಅವನು ಗಳಿಸಿದ್ದು ಮೊಮ್ಮಕ್ಕಳಿಗೆ ಮಾತ್ರ ಸಾಲುತ್ತದೆ. ತನಗೂ ಇರಬೇಕಾದಷ್ಟು ಹಣ ಇನ್ನೂ ಇಲ್ಲವೆಂದೇ ಅವನ ಆಕ್ಷೇಪ. ಬಡತನ ನಿವಾರಣೆಗಾಗಿ ಸರಕಾರ ಕಾರ್ಯ ಮಾಡುತ್ತಿದೆ. ಅದರ ಒಂದು ಅಂಗವಾಗಿ ನಾನೂ ಹಗಲೂ ಇರುಳೂ ದುಡಿಯುತ್ತಾ ಇದ್ದೇನೆ ಇದಕ್ಕಿಂತಲ್ಲೂ ಹೆಚ್ಚಿಗೇನು ಮಾಡಬೇಕಾಗಿದೆ. ಎಂದು ಅವನ ವಾದ ಇನ್ನೂ ಹೆಚ್ಚಿಗೆ ಮಾತಾಡಿಸಿದರೆ ಅದು ಅವರವರ ಕರ್ಮ ಎಂದು ನಾವೇನು ಮಾಡಲಿಕ್ಕಾಗುತ್ತದೆಂದು ಅನ್ನುತ್ತಾನೆ. ಅವನಿಗೆ ಹೊಟ್ಟೆ ತುಂಬಿದೆ ಉಪವಾಸವಿದ್ದವರ ಚಿಂತೆ ಅವನಿಗೇಕೆ ಬೇಕು ಪಾಪ ಈ ರೀತಿ ವ್ಯಂಗ್ಯಾತ್ಮಕವಾಗಿ ವಿಮರ್ಶೆಗೆ ಒಳಪಡಿಸುತ್ತದೆ.

ಸಮಾಜದಲ್ಲಿ ಕವಿಗಳಿಗಿರುವ ಜವಾಬ್ದಾರಿಯನ್ನು ವಿಡಂಬನಾತ್ಮಕ ಶೈಲಿಯಲಿ ಕವಿಗಳಿಗೊಂದು ಎಚ್ಚರಿಕೆ ಎಂಬ ಲಲಿತ ಪ್ರಬಂಧದಲ್ಲಿ ಪ್ರಬಂಧಕಾರರು ಚಿತ್ರಿಸಿದ್ದಾರೆ. ಕವಿತೆಯಿಂದ ಜನ ಸಾಮನ್ಯರಿಗೆ ಆಗುವ ಲಾಭವೇನು ? ಎಂದು ಪ್ರಶ್ನಿಸುವ ಲೇಖಕರು ಕವಿಗಳಿಗಿಂತ ಕ್ರಾಂತಿಕಾರಿ ವಿಚಾರವಾದಿಗಳೇ ಮೇಲು ಎಂಬ ನಿಲುವಿಗೆ ಬರುತ್ತಾರೆ. ಷೇಕ್ಸಪೀಯರ್, ಕಾಳಿದಾಸರಂತಹ ಮಹಾ ಕವಿಗಳನ್ನು ಅವರ ಕಾವ್ಯಗಳನ್ನು ಟೀಕಿಸುತ್ತಾರೆ. ಕವಿಗಳನ್ನು ತನ್ನ ಆದರ್ಶರಾಜ್ಯದಿಂದ ಹೊರದಬ್ಬಿದ ತತ್ವಜ್ಞಾನಿ ಪ್ಲೇಟೋನಿಗೆ ಬೆಂಬಲ ನೀಡುತ್ತಾರೆ. ಕಾವ್ಯವನ್ನು ಓದಿಯೇ ದುಷ್ಟರು ಇನಿಷ್ಟು ವ್ಯವಸ್ಥಿತ ದುಷ್ಟರಾದರು ವ್ಯವಹಾರ ನಿಪುಣರು ಇನಷ್ಟು ನಿಪುಣರಾದರು. ಎನ್ನುತ್ತಾರೆ.

ಭೂಮಿಗೆ ಭಾರವಾದವನು ಪ್ರಬಂಧವು ಆತ್ಮ ಪ್ರಶಂಸೆಯನ್ನು ಮಾಡಿಕೊಳ್ಳುವ ವ್ಯಕ್ತಿಯ ಗುಣದ ಬಗ್ಗೆ ಹೇಳುತ್ತದೆ. ಆತ್ಮ ಪ್ರಶಂಸೆಯನ್ನು ಆತ್ಮ ವಂಚನೆ ಎಂದು ಕರೆದಿರುವ ಲೇಖಕರು ಅದನ್ನು ಕೈಗೆ ನಿಲುಕದ ಹಂಬಲ ಎಂದಿದ್ದಾರೆ. ಪರನಿಂದೆಯ ಬಗೆಯೂ ಲೇಖಕರು ಚರ್ಚಿಸಿದ್ದಾರೆ. ಆತ್ಮ ಪ್ರಶಂಸೆ ಮನದಲ್ಲಿಯೇ ಮಾಡಿದರೆ ಪರನಿಂದೆಯೂ ಬಾಹ್ಯರಂಗದಲ್ಲಿಯೂ ನಡೆಯುವ ಕಾರ್ಯಕ್ರಮ ಎಂದಿದ್ದಾರೆ ಈ ಪ್ರಬಂಧವು ಇತರ ಪ್ರಬಂಧಗಳಿಗೆ ಹೋಲಿಸಿದರೆ ನಿರಸವಾದ ಶೈಲಿಯಲ್ಲಿ ಮಾಡಿ ತಂದಿದೆ.

ಮನುಷ್ಯನ ಮಾನಸಿಕ ಬೇಸರವನ್ನು ನೆಂಟರಿಗೆ ಹೋಲಿಸಿ "ಬೇಸರ" ಎಂಬ ಪ್ರಬಂಧವನ್ನು ರಚಿಸಿದ್ದಾರೆ. ಬೇಸರವೆಂದರೆ ಎಲ್ಲಿಲ್ಲದ ಸಿಟ್ಟಿಗೇಳುವ ಲೇಖಕರು ಸಹ ಬೇಸರದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದಾರೆ. ಶ್ರೀ ಬೇಸರ ರಾಯನು ಪ್ರಭಾವದಲ್ಲಿ ಸಿಕ್ಕಾಗ ತಮ್ಮಗತಿ ಹೇಗಾಗುತ್ತದೆ. ಎಂಬುದನ್ನು ಬೇಸರದ ಸಂದರ್ಭದಲ್ಲಿ ತಾವು ಯಾವ ರೀತಿಯೂ ಚಟುವಟಿಕೆಗಳನ್ನು ಮಾಡುತ್ತೇವೆಂಬ ಬಗ್ಗೆ ಸಿಂಪಿಯವರು ಇಲ್ಲಿ ವಿವರಿಸಿದ್ದಾರೆ. ನಮಗೆ ಬೇಡವಾಗಿದ್ದರೂ, ನಾವು ದಣಿದಿದ್ದರೂ ನಮ್ಮ ಮನೆಗೆ ಬಂದು ನಮ್ಮ ಜೀವ ತಿನ್ನುವರ ಬಗ್ಗೆ ಪ್ರೊ. ಸಿಂಪಿಯರು ತಮ್ಮ ನಮ್ಮ ಮಾತುಗಾರರು ಎಂಬ ಪ್ರಬಂಧದಲ್ಲಿ ಚಿತ್ರಿಸಿದ್ದಾರೆ. ದಿನವೆಲ್ಲ ಈ ಪ್ರಬಂಧದ ನಾಯಕ ದಿನವೆಲ್ಲ ದಣಿದು ರಾತ್ರಿ ಮಲಗುವ ಮಲಗುವ ಸಮಯಕ್ಕೆ ಪಕ್ಕದ ಮನೆಯ ಗೆಳೆಚುರೊರ್ವರು ಬಂದು ಆತನ ನಿದ್ದೆಯನ್ನು ಕೆಡಿಸುತ್ತಾರೆ. ಅಲ್ಲದೆ. ಇಷ್ಟವಿಲ್ಲದಿದ್ದರು ಇಲ್ಲದ ಮಾತಿಗಿಳಿದು ದೇಶಾವರಿ ಚರ್ಚೆ ನಡೆಸುತ್ತಾರೆ. ಹೀಗೆ ಬರುವ ಆಗುಂತಕ ವ್ಯಕ್ತಿಗಳು ತಮ್ಮ ಭಾಷಣವನ್ನು ಕಟ್ಟುತ್ತಾ ಮರುದಿನವರಿಗೆ ತಲೆನೋವನ್ನು ತರುತ್ತಾರೆ. ಈ ರೀತಿಯ ಜನರನ್ನು ಕುರಿತು ನಮ್ಮ ಜನರು ಸಹಜವಾಗಿಯೇ ಮಾತುಗಾರರು. ಅವಕಾಶ ಸಿಕ್ಕರೆ ಮಾತಿನ ಹಂದರವನ್ನೇ ಕಟ್ಟಿ ಬಿಡುತ್ತಾರೆ. ತಿಳಿದ ವಿಷಯ ಕಡ್ಡಿಯಷ್ಟಿದ್ದರೂ ಗುಡ್ಡವನ್ನಾಗಿ ಮಾಡುತ್ತಾರೆ. ಏನನ್ನಾದರೂ ಹೇಳಬೇಕೆನ್ನುವವರು ಬಹಳ ಜನ. ಕೇಳುವವರ ಸಂಖ್ಯೆ ಮಾತ್ರ ತೀರ ಕಡಿಮೆ. ಹತ್ತು ಜನರ ಬಾಯಿಯನ್ನು ಕಟ್ಟಿ ಮಾತನ್ನು ಹೇಳುವವರು ಕಲೆಗಾರರೇ ಸರಿ. ಮಾತೆಂಬ ಅನ್ನಕ್ಕೆ ಬಣ್ಣದ ಮಸಾಲೆಕೊಟ್ಟು ಚಿತ್ರಾನ್ನ ಮಾಡಿದರೆ ನೀಡಿದ್ದವರಿಗೂ ಭೂಷಣ; ಉಂಡವರಿಗೂ ಆನಂದ. ಅದನ್ನು ಬಿಟ್ಟು ಅರೆಬೆಂದ ಅನ್ನವನ್ನು ಹಸಿವಿಲ್ಲದ ಜನರಿಗೆ ಬಡಿಸುವುದು ಅಕ್ಷಮ್ಯ ಅಪರಾಧವೆಂದೇ ಕಾಣುತ್ತಿದೆ. ಹೀಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಭಾರತ ದೇಶವು ಹಳ್ಳಿಗಳ ದೇಶವಾಗಿದೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಚಿಕ್ಕದಾಗಿರಲಿ ದೊಡ್ಡದಾಗಿರಲಿ ಕನಿಷ್ಟ ಒಂದೊಂದಾದರೂ ಹೊಟೇಲ್‌ನ್ನು ಹೊಂದಿರುತ್ತದೆ. ಈ ಹೊಟೇಲ್‌ಗಳು ಹಳ್ಳಿಗಳೂ ನಿತ್ಯ ಜೀವನದಲ್ಲಿ ವಹಿಸುವ ಪಾತ್ರ ಎಂಥದೆಂಬುದನ್ನು ಪ್ರಬಂಧಕಾರರು ಹಳ್ಳಿಯ ಚಹಾ ಹೋಟೆಲುಗಳು ಎಂಬ ಪ್ರಬಂಧದಲ್ಲಿ ತುಂಬಾ ಮಾರ್ಮಿಕವಾಗಿ ಚಿತ್ರಣಗೈದಿದ್ದಾರೆ. ಆರಂಭದಲ್ಲಿ ಚಹಾ ಹೋಟೆಲಿನ ಚಿತ್ರಣವನ್ನು ನೀಡುತ್ತಾ ಮುಂದೆ ಅಲ್ಲಿ ದಿನನಿತ್ಯ ನಡೆಯುವ ಚಟುವಟಿಕೆಗಳನ್ನು ದಾಖಲಿಸುತ್ತಾರೆ. ಹಳ್ಳಿಯ ಚಹಾ ಫಳಾರದ ಅಂಗಡಿಯು ಲೇಖಕರ ದೃಷ್ಟಿಯಲಿ ವಾರ್ತಾ ಇಲಾಖೆ ಇದ್ದಂತೆ. ಇಲ್ಲಿ ನಡೆಯುವ ಚರ್ಚೆಗಳು ಗ್ರಾಮದಿಂದ ಅಂತರ್‌ರಾಷ್ಟ್ರೀಯ ಮಟ್ಟದವರೆಗಿನ ಸುದ್ದಿಯನ್ನು ಒಳಗೊಂಡಿರುತ್ತವೆ. ಅಂತೆಯೇ ಲೇಖಕರು ಪ್ರೀತಿಯಿಂದ ನನಗೆ ಹಳ್ಳಿಯ ಚಹಾ ಫಳಾರದ ಅಂಗಡಿಯೆಂದರೆ ಬಹಳ ಅಭಿಮಾನ; ಅಷ್ಟೆ ಏಕೆ ಪ್ರೀತಿಯೂ ಕೂಡ ಇದೆ.

ಗಾಳಿ ಭರ್‍ರನೆ ಬೀಸುತ್ತಿರಬೇಕು. ಮಳೆ ಧೋ ಎಂದು ಬೀಳುತ್ತಿರಬೇಕು. ಅಂಥ ವೇಳೆಯಲ್ಲಿ ಹಳ್ಳಿಯ ಚಹಾ ಹೊಟೇಲಿನ ಮೂಲೆಯಲ್ಲಿ ಕುಳಿತು ಬಿಸಿಬಿಸಿ ಭಜಿಯನ್ನು ಮೆಲ್ಲುತ್ತ ಚಹವನ್ನು ಗುಟುಗುಟುಕಾಗಿ ಕುಡಿಯುತ್ತ ಕೂಡ್ರಬೇಕು. ಆಗ ನನಗೆ ದೊರೆಯುವ ಸುಖ ಸಂತೋಷಗಳ ಸಮನಾಗಿ ಭೂಲೋಕದ ಯಾವುದೇ ಸಿರಿ ಸಂಪತ್ತು ನಿಲ್ಲಲಾರದು. ಇಷ್ಟೆಲ್ಲ ಕೇಳಿದ ಮೇಲೆ ನೀವೂ ಕೂಡ ನಿಮ್ಮ

ಸಮೀಪದ ಹಳ್ಳಿಯ ಚಹಾ ಫಳಾರದ ಅಂಗಡಿಗೆ ಭೆಟ್ಟಿ ಕೊಟ್ಟೇ ತೀರುತ್ತೀರೆಂದು ನಾನು ನಂಬಿದ್ದೇನೆ ಹಳ್ಳಿಯ ಚಹಾ ಹೊಟೇಲ್‌ಗಳ ಬಗ್ಗೆ ಬರೆದಿದ್ದಾರೆ.

ಮನುಷ್ಯನ ಜೀವನದಲ್ಲಿ ಪ್ರೀತಿಗೆ ಸಮಾನವಾದ ಜೀವನ ಮೌಲ್ಯ ಇನ್ನೊಂದಿಲ್ಲ. ಪ್ರೀತಿ ಇಲ್ಲದ ಜೀವನ ಸ್ಮಶಾನ ಎಂಬ ಮಾತಿನ ಹಿನ್ನಲೆಯಲ್ಲಿ "ಪ್ರೀತಿಯ ಮಿಮಾಂಸೆ" ಪ್ರಬಂಧವು ಮಾಡಿ ಬಂದಿದೆ ಲೇಖಕರು ಇಲ್ಲಿ ತ್ಯಾಗವೇ ಪ್ರೀತಿಯ ತಳಹದಿ ಎಂದಿದ್ದಾರೆ. ಬಹುಶಃ ಜೀವನದಲ್ಲಿ ಪ್ರೀತಿಯೊಂದಿಗೆ ಹೋಗಿದ್ದರೆ ಜೀವನ ಬರಡಾಗಿರುತಿತ್ತು. ಕಾಡು ಮೃಗಗಳ ನಡುವಿನ ಸ್ಪರ್ಧೆಯಾಗಿರುತ್ತಿತ್ತು. ಜೀವನದಲ್ಲಿ ನಾವು ಪಡೆಯುವ ವಾತ್ಸಲ್ಯಕ್ಕೆ ಬೆಲೆ ಕಟ್ಟಲಾಗದು ಅಣ್ಣ–ತಮ್ಮಂದಿರು ಆಸ್ತಿಗಾಗಿ ಕಚ್ಚಾಡಬಾರದು ಆದರೆ ಅನ್ಯರು ಅಣ್ಣನ ಮೇಲೆ ಎರಗಿ ಬಿದ್ದಾಗ ಯಾವ ತಮ್ಮನು ಕೈಕಟ್ಟಿ ಕೂತಿರಲಾರ. ಪತಿ–ಪತ್ನಿಯರ ಪ್ರೇಮ ಅದೊಂದು ಅದ್ಭುತ, ಅನನ್ಯ ಅನುಭವ ಬಿಡಿಸಿ ಹೇಳಿದರೆ ಒಡೆದು ಹೋದಿತೆನ್ನುವಷ್ಟು ಸೂಕ್ಷ್ಮ. ಅಂತಯೇ ಪ್ರೇಮಿಗಳು ಸಾಯಬಹುದು ಆದರೆ ಪ್ರೇಮ ಅಮರವೆಂದು ಶೇಕ್ಸಪೀಯರನ ರೋಮಿಯೋ ಮತ್ತು ಜುಲಿಯೇಟ್ ಹೇಳುತ್ತದೆ. ಪತಿ–ಪತ್ನಿಯರ ಪ್ರೇಮ ಜೀವನಕ್ಕೊಂದು ಬಲವಾದ ಆಧಾರ ಅದರಲ್ಲಿ ಕಾಮವಿದೆ, ಭೋಗವಿದೆ, ತ್ಯಾಗವಿಂದಂತೆ ಸ್ವಾರ್ಥವೂ ಇದೆ. ಕರುಣೆ ಇದಂತೆ ಶೋಷಣೆಯು ಇದೆ. ಮಧುರವಾಗಿದಂತೆ ಯಾತನ ಪೂರ್ಣವೂ ಆಗಿದೆ ಆದರೆ ಬಾಳಿನ ಕುಲುಮೆಯಲ್ಲಿ ಸುಟ್ಟು ಅದೇ ಪರಿಪಕ್ವವಾಗುತ್ತದೆ. ಎಂಬ ಲೇಖಕರ ಮಾತು ಪ್ರೀತಿಯ ಮಹತ್ವವನ್ನು ಎತ್ತಿ ಹೇಳುತ್ತದೆ. ಪ್ರೀತಿಯು ಆತ್ಮ ಸೌಂದರ್ಯದ ಅಭಿವ್ಯಕ್ತಿಯಾಗಿದೆ. ಸೌಂದರ್ಯ ಎನ್ನುವುದು ಅನ್ಯರ ದುಃಖವನ್ನು ಕಂಡು ದ್ರವಿಸುವ ಹೃದಯದಲ್ಲಿದೆ. ಕೊನೆಯಲ್ಲಿ ಲೇಖಕರು ಇಂದಿನ ದ್ವೇಷಪೂರಿತ ವಿಷಮಯ ವಾತಾವರಣದಲ್ಲಿ ಒಬ್ಬರಿಗೊಬ್ಬರು ಕಚ್ಚಾಡಬೇಕೆನ್ನುವ ಮೂಲ ಪ್ರವೃತ್ತಿಯನ್ನು ಬಿಟ್ಟು ಪ್ರೀತಿಯ ಪಾಠವನ್ನು ಅಳವಡಿಸಿಕೊಳ್ಳಲು ಕರೆ ನೀಡುತ್ತಾರೆ.

ಪ್ರೊ. ವೀರೇಂದ್ರ ಸಿಂಪಿ ಅವರ ನಾಲ್ಕನೇ ಪ್ರಬಂಧ ಸಂಕಲನವೇ "ಪರಿಸರ ಸ್ಪಂದನ" ಇದು ೨೫ ಅಧ್ಯಾಯಗಳ ಮೂಲಕ ಅವರ ಬಾಲ್ಯ ಜೀವನದ ಘಟನೆಗಳ ಜೊತೆಗೆ ಸಮಾಜದ ರೀತಿ–ನೀತಿಗಳನ್ನು ಹಾಗೂ ರಾಜಕೀಯ ವ್ಯವಸ್ಥೆಯನ್ನು ತಿಳಿಸುತ್ತದೆ. ಧಾರ್ಮಿಕ ವ್ಯವಸ್ಥೆಯನ್ನು ಸೂಕ್ಷ್ಮತೆಯ ಮೂಲಕ ಹೊರಹಾಕುತ್ತದೆ. ೨೫ ಅಧ್ಯಾಯಗಳಲ್ಲಿ ಒಂದೇ ವಸ್ತು ಇಲ್ಲ. ಭಿನ್ನ ಭಿನ್ನ ಅಂಶಗಳು ವಿಷಯದ ಮಗ್ಗಲನ್ನು ತಿಳಿಸುತ್ತದೆ. ಇದೆ ಲಲಿತ ಪ್ರಬಂಧಗಳ ವಿಶಿಷ್ಟತೆಯೆಂದು ಹೇಳಬಹುದು.

"ಓವರ್ ಎ ಕಪ್ ಆಫ್ ಟೀ" ಎನ್ನುವ ಪ್ರಬಂಧವು ವೀರೇಂದ್ರ ಸಿಂಪಿಯವರು ತಮ್ಮ ಬಾಲ್ಯದಲ್ಲಿ ಚಹಾ ಕುಡಿಯುವುದಕ್ಕಾಗಿ ಮಾಡಿದ ಹಠ ಒಂದು ಕಡೆಯಾದರೆ, ಇನ್ನೊಂದೆಡೆ ಈಗಿನ ಜನರು ಬೆಳಗ್ಗೆ ಎದ್ದ ಕೂಡಲೆ ಚಹಾ ಎಂಬ ರೂಪ ತೊರೆದು ಬೆಡ್ ಕಾಫಿ ಎಂಬ ರೂಪದಲ್ಲಿ ಬಳಸುತ್ತಾ ಮುಖ ತೊಳೆಯಲಾರದೆನೇ ಸೇವಿಸುವುದನ್ನು ಅಂದವಾಗಿ ಚಿತ್ರಿಸಿದ್ದಾರೆ. ಹಿಂದಿನ ಹಾಗೂ ಇಂದಿನ ಚಹಾ ಹಾಕುವ ಕಪ್ಪುಗಳ ವ್ಯವಸ್ಥೆಯ ವ್ಯತ್ಯಾಸವನ್ನು ತಿಳಿಸುವ ರೀತಿ ಬುದ್ಧಿ ಪ್ರಧಾನವಾಗಿದೆ. ಹಿಂದಿನ ಕಾಲದಲ್ಲಿ ಚಹಾ ಕುಡಿಯುವ ಗ್ಲಾಸುಗಳು ಉದ್ದಾಗಿ ಚಹಾ ಬಹಳಷ್ಟು ಹಿಡಿಯುವಂತಿದ್ದವು. ಅಂತಹ ಕಪ್ಪಿನಲ್ಲಿ ಚಹಾ ಕುಡಿಯುವುದೆಂದರೆ ಎಲ್ಲಿಲ್ಲದ ಸಂತೋಷ. ಆ ಚಹಾ ಕುಡಿದರೆ ಊಟವನ್ನೆ ಮಾಡದೆ ಇರುವ ಶಕ್ತಿ ಇತ್ತು. ಆದರೆ ಇವತ್ತಿನ ಕಾಲದಲ್ಲಿ ಸ್ಟೇನ್ ಲೇಸ್ ಸ್ಟೀಲಿನ ಗ್ಲಾಸ್ ಬಂದು, ನೋಡಲು ಚೆನ್ನಾಗಿ ಉದ್ದಾಗಿ ಕಂಡರೂ ಅದರಲ್ಲಿರುವ ಚಹಾ ಮೂರ್ನಾಲ್ಕು ಗುಟ್ಕು ಮಾತ್ರ. ಎಂಬುದನ್ನು ಗಮನಿಸಿದಾಗ ಇಂದಿನ ಕಾಲದ ಗ್ಲಾಸಿನ ಮೇಲೆ ವಿರೋಧ ಕಂಡುಬರುತ್ತದೆ. ಒಂದು ಕಡೆ ಈ ಗ್ಲಾಸಿನಲ್ಲಿ ಚಹಾ ಆರಿದೆ ಎಂದು ಬಾಯಿಗೆ ಹಚ್ಚಿದರೆ ನಾಲಿಗೆಯಲ್ಲ ಸುಟ್ಟು ಬಾಯಿ ರುಚಿಯೆಂಬುದು ಬತ್ತಿ ಹೋಗುತ್ತದೆ. ಆದುದರಿಂದ ಇಂದಿನ ಗ್ಲಾಸಿಗಿಂತ ಹಿಂದಿನ ಕಪ್ಪುಗಳಲ್ಲಿ ಚಹಾ ಸೇವನೆ ಉತ್ತಮ ಎಂಬುದನ್ನು ಇವರ ವಾದವಾಗಿದೆ. ಪ್ರೊ. ಸಿಂಪಿಯವರು ತಮ್ಮ ಬಾಲ್ಯದ ಗುರಿಯನ್ನು ನೆನಪಿಗೆ ತಂದು ಬೆಳ್ಳಿ ಬಟ್ಟಲಿಲ್ಲ ಚಹಾ ಕುಡಿಯುವುದು ಎಂದಿದ್ದಾರೆ. ಇಲ್ಲಿ ಮುಖ್ಯವಾಗಿ ಇವತ್ತಿನ ಕಾಲದ ಚಹಾ ಮತ್ತು ಕಪ್ಪುಗಳ ವ್ಯವಸ್ಥೆಯ ನಾನಾ ರೂಪವನ್ನು ಎತ್ತಿ ತೋರಿಸಿದ್ದಾರೆ.

"ವಿದ್ಯಾರ್ಥಿಗಳ ಟೊಂಕ ಪಟ್ಟಿಯಲ್ಲಿ ಒಂದು ರತ್ನ" ಎನ್ನುವ ಪ್ರಬಂಧದಲ್ಲಿ ಆಧುನಿಕ ಯುಗದ ಶಿಕ್ಷಣ ಪದ್ಧತಿಯ ಆಕ್ರಮವನ್ನು ಬಯಲಿಗೆಳೆದಿದ್ದಾರೆ ವಿದ್ಯಾರ್ಥಿಗಳು ಓದದೇ ಬರೆಯದೆ ಕೇವಲ ಪರೀಕ್ಷೆಗೆಂದು ಕೋಣೆಯೊಳಗೆ ಹೋಗಿ ಬರೆಯಲು ಕುಳಿತಾಗ ಬಂದು ಕಥೆ ಭಯ ಇನ್ನೊಂದು ಕಡೆ ಕಾಪಿ ಬರೆಯಲು ಶಿಕ್ಷಕರು ರೂಂ ಸುಪರ್ ವೈಜರ್‌ರಾಗಿದ್ದಾರೆ. ಎಂಬ ಸಂತೋಷ. ವಿದ್ಯಾರ್ಥಿಗಳ ಜೇಬುಗಳೆಂದರೆ ದ್ರೌಪದಿಯ ವಸ್ತ್ರವಿದಂತೆ ಎನ್ನುವ ಮಾತು ನಿಜಕ್ಕೂ ಸತ್ಯ. ಮೇಲ್ವಿಚಾರಕರು ಅಲ್ಲಲ್ಲಿ ಕೈಹಾಕಿ ಒಂದೆರಡು ಚೀಟಿ ತೆಗೆದರೂ ವಿದ್ಯಾರ್ಥಿಗಳ ಗುಪ್ತ ಸ್ಥಳಗಳಲ್ಲಿರುವ ಅನೇಕ ಚೀಟಿಗಳು ಅಡಗಿರುತ್ತವೆ. ಇಂತಹ ಶಿಕ್ಷಣವನ್ನು ಅಕ್ರಮ ಶಿಕ್ಷಣ ಎನ್ನುವ ಇವರ ಅನಿಸಿಕೆ. ವಾಸ್ತವಿಕವಾದದ್ದು. ಕೇವಲ ವಿದ್ಯಾರ್ಥಿಗಳಲ್ಲದೇ, ಮೇಲ್ವಚಾರಲ್ಲದೇ ದ್ವಾರಪಾಲಕರು ವಿದ್ಯಾರ್ಥಿಗಳ ಸಂರಕ್ಷಣೆಗಾಗಿ ನಿಯಮಿತಗೊಂಡವರು. ವಿದ್ಯಾರ್ಥಿಗಳ ನಿಮಗೆ ನೀವೆ ಜವಾಬ್ದಾರರು ಎನ್ನುವ ಎರಡನೇ ದರ್ಜೆಯ

ಧೃತರಾಷ್ಟ್ರರು. ಇನ್ನು ಮೂರನೇ ವರ್ಗಕ್ಕೆ ಸೇರಿದವನೆಂದರೆ ನಾಗೇಂಗ್ರ ಎಂಬುವನು ವಿದ್ಯಾರ್ಥಿಗಳಿಗೆ ಚೀಟಿ ಸಿಕ್ಕರೆ ಹೊರ ಹಾಕುವೆನೆಂದು ಬುಸುಗುಟ್ಟುವವರೆಂದು ಈ ಪ್ರಬಂಧದಲ್ಲಿ ಪ್ರೊ. ಸಿಂಪಿಯವರು ಹೇಳುತ್ತಾರೆ.

ಈ ರೀತಿಯಾಗಿ ಅಕ್ರಮ ನೀತಿಯಿಂದಾಗಿ ವಿದ್ಯಾರ್ಥಿಗಳ ಭವಿಷ್ಯ ಒಂದು ಕಡೆ ನಿರ್ವಿತವಾದವಾಗಿ ಉಳಿದುಕೊಳ್ಳುತ್ತದೆ. ಇನ್ನೊಂದೆಡೆ ಕಾಫಿ ಹೊಡೆಯಲು ಬಿಡದಿದ್ದರೆ ರೂಮು ಮೇಲ್ವಿಚಾರಕರ ಮೇಲೆ ಆಕ್ರಮ ಮಾಡುವ ವಿದ್ಯಾರ್ಥಿಗಳ ವ್ಯವಸ್ಥೆಯನ್ನು ತಿಳಿಸುತ್ತದೆ. ಈ ಪ್ರಬಂಧದಲ್ಲಿ ವಿದ್ಯಾರ್ಥಿಗಳಲ್ಲಿ ಎರಡು ಗುಂಪು ಇರುವುದನ್ನು ಕಾಣುತ್ತೇವೆ. ಒಂದು ಗುಂಪು ಕಷ್ಟಪಟ್ಟು ಓದುವವರು. ಇನ್ನೊಂದು ಗುಂಪು ಓದದೆನೇ ಕಾಪಿಯಿಂದ ಮುಂದೆ ಬರುವ ಸಮೂಹ. ವಿದ್ಯಾರ್ಥಿನಿಯರು ಜಡಿಗೆ ಹಾಕುವ ರಬ್ಬರನ್ನು ಕಾಳಿಗೆ ಭೇಟಿ ಕಟ್ಟುವ ಸಲುವಾಗಿಯೇ ಬಳಸುವುದುಂಟು. ಇಂತಹ ನಾನಾ ತರಹದ ಆಕ್ರಮ ವ್ಯವಸ್ಥೆಗೆ ಇವತ್ತಿನ ಅಯೋಗ್ಯ ಶಿಕ್ಷಕರು ಮತ್ತು ಸಮಾಜವೇ ಪ್ರಮುಖ ಕಾರಣವೆನ್ನುತ್ತಾರೆ.

ಮೂರನೇ ಲಲಿತ ಪ್ರಬಂಧ "ತಂಗಳೂರಿನ ವಿಧಾನ ಸೌಧದಿಂದ ಒಂದು ಪತ್ರ" ಇದು ರಾಜಕೀಯ ವ್ಯಕ್ತಿಯ ಕುರಿತು ತಿಳಿಸುತ್ತದೆ. ಊರಿನ ಮತದಾರರಿಂದ ಓಟು ಪಡೆದು ಶಾಸಕನಾಗಿ ಜೀವನ ಸಾಗಿಸುವ ವ್ಯಕ್ತಿ ಕಾಲಕ್ಕೆ ತಕ್ಕಂತೆ ಬದಲಾದ ವ್ಯವಸ್ಥೆಯನ್ನು ತಿಳಿಸುತ್ತದೆ. ಪ್ರಮುಖವಾಗಿ ಈ ದೇಶವನ್ನು ಸುಭದ್ರವಾಗಿ ಮಾಡಲು ಸಾಧ್ಯವಿಲ್ಲ. ರಾಜಕಾರಣಿಗಳು ದೇಶವನ್ನು ವಿದೇಶಿಯವರಿಗೆ ಧಾರೆಯೆರೆದರು ಚಿಂತೆಯಿಲ್ಲ. ಆದರೆ ತಮ್ಮ ಮನೆತನ ಸುಭದ್ರವಾಗಿರಲಿ ಎಂಬ ತತ್ವವನ್ನು ಬಿಡುವುದಿಲ್ಲ. ಒಂದು ವೇಳೆ ಮತದಾರ ಕೇಳಿದರೆ ಆಶ್ವಾಸನೆಯ ಭರವಸೆ ಸಾಕಷ್ಟು ಮಹಾಗೋಪುರದಂತೆ ನೀಡುತ್ತಾರೆ. ಇದು ಮಾತ್ರ ಸತ್ಯ. ರಾಜಕಾರಣಿಗಳು ಎಂ.ಎಲ್.ಎ. ಆದ ಮೇಲೆ ವಿಧಾನ ಸೌಧದಿಂದ ಪತ್ರ ಬರೆಯುವ ರೋಚಕ ಶೈಲಿಯೇ ಈ ಪ್ರಬಂಧ ಆಗಿದೆ. ಪಕ್ಷಾಂತರ ಮಾಡುತ್ತಾ, ದುಡ್ಡುಗಳಿಸುತ್ತಾ ತಮ್ಮ ಜೀವನವನ್ನು ಕೇವಲ ಫೋನಿನಲ್ಲಿ ಕಳೆಯುವ ಶಾಸಕರು. ಮತದಾರರಿಗೆ ಪತ್ರ ಬರೆಯುವ ಶೈಲಿ ಎದ್ದು ಕಾಣುತ್ತದೆ. ನಾನು ಒಂದು ವೇಳೆ ಪಕ್ಷಾಂತರ ಬದಲಿ ಮಾಡಿದಲ್ಲಿ ಆಗ ಓಟು ಕೇಳಲು ಬರುತ್ತೇನೆ. ಆಗ ನಿನ್ನ ಚಪ್ಪಲಿಗಳನ್ನು ತಲೆಯ ಮೇಲೆ ಹೊತ್ತು ತಿರುಗುತ್ತೇನೆ. ದಯವಿಟ್ಟು ನಂಬಿ ವಿಶ್ವಾಸ ಮೂಡಿಸುತ್ತಾರೆ. ಒಂದೆಡೆ ಅವರ ಯಶಸ್ವಿನ ಚಟುವಟಿಕೆಗಳು ವಿಶ್ವಾಸಗಳಿಸಿದರೆ ಸುಭದ್ರ. ಸರಕಾರ ಹೊಣೆಗಾರರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿ ಇತಿಹಾಸದ ಪುಟಗಳಲ್ಲಿ ಸೇರುತ್ತೇನೆ. ಎಂಬಲ್ಲಿ ರಾಜಕಾರಣಿಗಳು ಮಾಡುವ ಭ್ರಷ್ಟಾಚಾರ ಈ ಪ್ರಬಂಧದಲ್ಲಿ ಎದ್ದುಕಾಣುತ್ತದೆ.

ಇವರ ನಾಲ್ಕನೇ ಪ್ರಬಂಧ "ಕತ್ತೆಯ ಆತ್ಮಕಥೆ" ಕತ್ತೆ ಎಂಬ ಪ್ರಾಣಿ ಜೀವ ರಾಶಿಗಳಲ್ಲಿ ಒಂದು. ಮನುಷ್ಯನ ಅವಿವೇಕತನವನ್ನು ಕತ್ತೆಯ ಮೂಲಕ ಹೇಳಿಸುವ ಲೇಖಕರ ವಿಚಾರ ಶ್ಲಾಘನೀಯವಾದದ್ದು. ಊರ ಅರಸನ ಮನೆ ಬಿಟ್ಟು ಬಂದ ಕತ್ತೆ. ಅರಸನ ಮನೆ ಬಿಟ್ಟು ಗಂಧರ್ವರಾಜನ ಬಳಿ ಇರುವಾಗ ಕತ್ತೆ ಮತ್ತು ರಾಜನ ನಡುವೆ ಮಾತಿನ ಸಂವಾದ ಏರ್ಪಡುತ್ತದೆ. ಆಗ ರಾಜ ಕತ್ತೆಗೆ ನೀನು ಯಾಕೆ ಅಳುತ್ತಿರುವೆ ? ಎಂದು ಕೇಳಿದಾಗ ಕತ್ತೆ ಹೇಳುತ್ತದೆ. ಹಳ್ಳಿಯಿಂದ ದಿಲ್ಲಿಯವರಿಗೆ ಲಂಚ, ಭ್ರಷ್ಟಾಚಾರ, ಚಾಡಿಕೋರತನ ನಡೆದಿದ್ದರು ಮಾನವರು ಬುದ್ಧಿವಂತರೆಂದು ಹೇಳುತ್ತಿದ್ದಿರಲ್ಲಾ ನೀವು ಹಣದ ಆಸೆಗಾಗಿ

ಏನು ಮಾಡಲು ಹೇಸುವುದಿಲ್ಲ. ವರದಕ್ಷಣೆಗಾಗಿ ಉನ್ನತ ವಿದ್ಯಾಭ್ಯಾಸ ಎಂಬ ಪದವಿಯ ನೆಪ ಒಡ್ಡುತ್ತಿರಿ. ಇದಲ್ಲದೆ ಡಾಕ್ಟರು ಎಂದು ಹೇಳಿ ಸುಣ್ಣ ಬೆರೆಸಿ ಇಂಜೆಕ್ಷನ್ ಮಾಡುತ್ತಿರಿ ಇಂತಹ ಹಲವಾರು ಉದಾಹರಣೆಗಳು ಸಾಕಷ್ಟಿವೆ. ಯಾವುದೇ ಒಂದು ಕೆಲಸ ಮಾಡಲು ಲಂಚಕ್ಕೆ ಕೈ ಒಡ್ಡುತ್ತೀರಿ. ಇದಲ್ಲದೆ ಗುರುಗಳು ಹುಡುಗರಿಗೆ ಪಾಠ ಮಾಡುವುದನ್ನು ಬಿಟ್ಟು ಪರೀಕ್ಷೆಯಲ್ಲಿ ಕಾಪಿ ಮಾಡಲು ಅವಕಾಶ ನೀಡುತ್ತಿರಿ ಎಂತಹ ಕ್ರೂರ ವ್ಯವಸ್ಥೆ ನಿಮ್ಮದು ಎಂದು ಕತ್ತೆ ಕೇಳುತ್ತದೆ. ಇನ್ನೊಂದೆಡೆ ಕನ್ನಡ ಭಾಷೆಯ ಮೇಲೆ ಪ್ರೀತಿ, ಪ್ರೇಮ ಎಂದು ಮುಂಜಾನೆಯಿಂದ ಸಂಜೆಯವರೆಗೆ ಬಡಿದುಕೊಳ್ಳುತ್ತಿರಿ ನಿಮ್ಮ ಮಕ್ಕಳಿಗೆ ಸಂಸ್ಕೃತ, ಇಂಗ್ಲಿಷ ಭಾಷೆಯನ್ನು ಕಲಿಸುತ್ತಿರಿ ಅಲ್ಲದೆ ಹಲವಾರು ಪುಸ್ತಕದ ಗಂಟನ್ನು ಕತ್ತೆಗೆ ಹೇರಿದ ಹಾಗೆ ಮಕ್ಕಳಿಗೆ ಹೇರುತ್ತಿರಿ ಎಂತಹ ಸಂಸ್ಕೃತಿ ನಿಮ್ಮದು ಎಂದು ಕೇಳುವಲ್ಲಿ ವೈಚಾರಿಕತೆ ಎದ್ದು ಕಾಣುತ್ತದೆ. ಇಲ್ಲಿ ಪ್ರಬಂಧಕಾರರ ಉದ್ದೇಶ ಏನೆಂದರೆ ಲಂಚ, ಮೋಸ, ಕಪಟತನ ವರದಕ್ಷಿಣೆ ಮುಂತಾದವುಗಳನ್ನು ವ್ಯಂಗ್ಯವಾಗಿ ವಿರೋಧಿಸಿದ್ದಾರೆ. ಕತ್ತೆಯೆಂದರೆ ಕತ್ತೆ ಅಲ್ಲ. ಅದು ಮನುಷ್ಯ ಆದರೆ ಮನುಷ್ಯನಾಗಿ ಕತ್ತೆಗಿದಷ್ಟು ವಿವೇಕ ಮನುಷ್ಯರಲಿಲ್ಲ ಎಂಬುದು ಈ ಪ್ರಬಂಧದ ಆಶಯಾಗಿದೆ.

"ಸಿಂಹಾಸನ ಕೊಟ್ಟರೂ ಪಕ್ಷಾಂತರ ಇಲ್ಲ" ರಾಜಕೀಯದಲ್ಲಿ ಸುಳ್ಳಿನ ಭರವಸೆಗಳನ್ನು ತಿಳಿಸುವ ಪ್ರಬಂಧ ಇದಾಗಿದೆ. ನಾನು ದೇಶಸೇವಕ, ಸಮಾಜ ರಕ್ಷಕ, ದೇಶ ಸೇವೆಯೇ ನನ್ನ ಜೀವನದ ಉಸಿರು, ನನ್ನ ಪ್ರಾಣ ಎಂದು ಶಾಸಕರು ಬೊಬ್ಬೆ ಹೊಡೆಯುವುದರ ಮೂಲಕ ಪಕ್ಷಾಂತರಕ್ಕೆ ಪಕ್ಷದ ನಾಯಕರಿಂದ ಸಿಂಹಾಸನ ಕೊಟ್ಟರೂ, ನಾನು ಪಕ್ಷ ಬಿಡುವುದ್ದಿಲ್ಲವೆಂದು ಸುಳ್ಳು ಹೇಳುವ ರಾಜಕಾರಣಿಗಳ ಇತಿಹಾಸ ತಿಳಿಸುತ್ತದೆ. ಸುಳ್ಳು ಹೇಳುವುದು ಒಂದು ಕಲೆ ಎಂಬುದು ಈ ಪ್ರಬಂಧದಿಂದ ತಿಳಿದು ಬರುತ್ತದೆ.

"ಭ್ರಷ್ಟಾಚಾರ" ಎನ್ನುವ ಲಂಚ ಪ್ರಬಂಧದಲ್ಲಿ ಭ್ರಷ್ಟಚಾರ ಎಂಬ ವಾತಾವರಣಕ್ಕೆ ಒಳಗಾಗಿದ್ದೇವೆ. ಆದರೆ ನಾವು ಇದನ್ನು ಕಂಡು ಷಚೆಡರಾಗಿದ್ದೆವಲ್ಲ ಎಂಬ ವಾದ ಪ್ರೊ. ಸಿಂಪಿಯವರದಾಗಿದೆ. ಏಕೆಂದರೆ ಮಹಾಭಾರತದಲ್ಲಿ ದ್ರೌಪತಿಯ ಸೀರೆಯನ್ನು ಅಪಹರಣ ಮಾಡುವ ಸಂದರ್ಭದಲ್ಲಿ ಪಾಂಡವರು ಸುಮ್ಮನೆ ಕುಳಿತಂತೆ. ಈಗ ನಾವು ಸುಮ್ಮನೆ ಕುಳಿತು ನೋಡಬೇಕಾಗಿದೆ. ಪ್ರತಿಯೊಂದು ಕ್ಷೇತ್ರದಲ್ಲಿ ಅಂದರೆ ಉದಾಹರಣೆಗಾಗಿ ಎನ್.ಟಿ.ಆರ್. ಭ್ರಷ್ಟಾಚಾರದ ನೀತಿಯಿಂದ ದೂರವಿದ್ದವರಲ್ಲ. ಆದರೆ ಲೇಖಕರು ಅಸಿಸ್ಟೆಂಟ್ ಕಮೀಶನರೊಬ್ಬರ ನಿಯತ್ತನ್ನು ದಾಖಲಿಸಿದ್ದಾರೆ. ಕಮೀಶನರು ಭ್ರಷ್ಟಾಚಾರದಿಂದ ದೂರ ಉಳಿದುಕೊಂಡು ಇರಲು ಮನೆ, ಉಡಲು ಬಟ್ಟೆ ಇಲ್ಲ. ಆದರೆ ಇಂತಹವರಿಗೆ ಜನ ನಾಲಾಯಕರೆಂದು ಕರೆಯುತ್ತಾರೆ. ಇಲ್ಲಿ ಲೇಖಕರ ಉದ್ದೇಶ ಭ್ರಷ್ಟಾಚಾರ ಮಾಡುವ ಜನಕ್ಕೆ ಬೆಲೆ ಇದೆ. ಅದರಿಂದ ಹೊರತಂದ ಜನಕ್ಕೆ ಬೆಲೆ ಇಲ್ಲ. ಜೊತೆಗೆ ಕೆಲಸಕ್ಕೆ ಬಾರದವನೆಂದು, ನಾಲಾಯಕರೆಂದು ಕರೆಸಿಕೊಳ್ಳುತ್ತಾರೆ. ನಿಜವಾದ ಮಾನವೀಯ ಮೌಲ್ಯ ಎಲ್ಲಿದೆ. ಎಂಬುದಾಗಿದೆ. ಈಗ ರೆವಿನ್ಯೂ ಪಿ. ಡ್ಬ್ಲ್ಯೂ.ಡಿ. ಗಳಲ್ಲದೆ, ಶಿಕ್ಷಣ ಇಲಾಖೆಗಳಲ್ಲಿ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆ. ಇಂತಹ ಭ್ರಷ್ಟಾಚಾರವು ನಮ್ಮನ್ನು ಬಲೆಗೆ ಹಾಕಿಕೊಂಡಿದೆ. ಒಂದು ವೇಳೆ ವಿರೋಧ ಮಾಡಿದರೆ, ಆಸ್ಪತ್ರೆಗೆ ಹೋದ ರೋಗಿ ಹೆಣವಾಗಿ ಸ್ಮಶಾನಕ್ಕೆ ಹೋಗುತ್ತದೆ. ಇದನ್ನು ಬಡವರು ವಿರೋಧಿಸಿದರೆ ಶ್ರೀಮಂತರು ಮತ್ತೊಷ್ಟು ಹಣ ನೀಡಿ ಚಾಲನೆ ನೀಡುತ್ತಿದ್ದಾರೆ. ಒಟ್ಟಾರೆಯಾಗಿ ಸಾರ್ವಜನಿಕರು ಬದಲಾಗಬೇಕು. ಆಗ ಸಮಾಜ ಇದರಿಂದ ಮುಕ್ತಿ

ಹೊಂದುತ್ತದೆ. ಆದರೆ ಜನರು ಬದಲಾಗುವುದಿಲ್ಲ. ಭ್ರಷ್ಟಾಚಾರದ ಬೇರು ಭೂಮಿಯಲ್ಲಿ ಇಳಿದು ತನ್ನ ಶಕ್ತಿಯನ್ನ ಪಸರಿಸಿ ಬಿಟ್ಟಿದೆ. ಉನ್ನತ ಮೌಲ್ಯಗಳಿಗೆ ಒಳ್ಳೆಯ ಸ್ಥಾನವಿಲ್ಲ ಭ್ರಷ್ಟಾಚಾರಕ್ಕೆ ಒಳ್ಳೆಯ ಸ್ಥಾನ ಲಭಿಸುತ್ತದೆ. ಎಂಬುದನ್ನು ಪ್ರೊ. ಸಿಂಪಿಯವರು ಈ ಪ್ರಬಂಧದಲ್ಲಿ ಚಿತ್ರಿಸಿದ್ದಾರೆ.

"ಕಿವುಡನ ಮಾಡಯ್ಯ ತಂದೆ" ೧೨ ನೇಯ ಶತಮಾನದ ಶಿವಶರಣ ಬಸವಣ್ಣನವರು ಸಂಆಜದ ಅನೀತಿ ಅನಿಯಮಗಳಿಂದ ನನ್ನ ಕಿವುಡನ ಮಾಡಯ್ಯ ತಂದೆ ಎಂದು ಹೇಳಿದರೆ, ಲೇಖಕರು ಇವತ್ತಿನ ಭಜನೆ, ಮನೆಯ ಉದ್ಘಾಟನೆ, ಟೇಪರಿಕಾರ್ಡರ, ಚುನಾವಣಾ ಪ್ರಚಾರ ಮುಂತಾದ ಸಂದರ್ಭಗಳಲ್ಲಿ ಮೈಕದಿಂದ ಆಗುವ ಶಬ್ದದಿಂದ ನನ್ನ ಕಿವುಡನ ಮಾಡಯ್ಯ ತಂದೆ ಎನ್ನುತ್ತಾರೆ. ಹಿಂದಿನ ಕಾಲದಲ್ಲಿ ಮದುವೆ, ಮುಂತಾದ ಕಾರ್ಯಕ್ರಮಗಳಲ್ಲಿ ನಮ್ಮ ತಾಯಿಂದಿರು ಸುಮಧುರ ಕಂಠದಿಂದ ಜನಪದ ಗೀತೆಗಳನ್ನು ಹಾಡುತ್ತಿದ್ದರು. ಆದರೆ ಇವತ್ತಿನ ಆಧುನಿಕ ತಂತ್ರ ಜ್ಞಾನದಿಂದಾಗಿ ಜನಪದ ಗೀತೆಗಳು ಮಾಯವಾಗಿ ಲೋಡ್ ಸ್ಪೀಕರನ ಮೂಲಕ ಅದ್ಭುತವಾದ ಹಾಡುಗಳು, ರಾತ್ರಿಯಾದರೆ ಓಂ ನಮಃ ಶಿವಾಯ ಎನ್ನುವ ಭಜನೆಯ ಸೌಚಿಡು ವಿಚಿತ್ರವೆನಿಸಿದೆ. ಇಂತಹದರಿಂದ ಮನುಷ್ಯನ ಏಕಾಂತತೆ ಹಾಳಾಗಿ ಹೋಗುತ್ತದೆ. ನಮ್ಮ ಶ್ರೇಷ್ಠತೆ ಊರಿನ ಜನತೆಗೆ ತಿಳಿಯಲೆಂದು ಇನ್ನೊಬ್ಬರ ಅಸ್ತಿತ್ವದ ಮೇಲೆ ಭಾರ ಹಾಕುತ್ತಿದ್ದೇವೆ. ಎನ್ನುವ ಇವರ ವಿಚಾರ ಸೂಕ್ತವಾದುದಾಗಿದೆ.

೯ನೆಯ ಲೇಖನವೇ "ಒಂದು ಕಥೆಯ ಐದು ದೃಶ್ಯಗಳು" ಇದು ಜಗತ್ತಿನಲ್ಲಿ ವಾಸಿಸುವ ಜನರ ಬದುಕಿನ ಐದು ಅಧ್ಯಾಯಗಳ ಮೂಲಕ ಪ್ರಸ್ತಾಪ ಮಾಡುವ ಶ್ರೇಷ್ಠ ಲಲಿತ ಪ್ರಬಂಧವಾಗಿದೆ. ಒಬ್ಬ ವಿದ್ಯಾರ್ಥಿ ಕಾನ್ವೆಂಟ್ ಸ್ಕೂಲಿಗೆ ಹೋಗುವ ಸಂದರ್ಭದಲ್ಲಿ ತಂದೆ-ತಾಯಿಯರು ಮಮತೆ ಹೇಳತೀರದಷ್ಟಿದೆ. ಒಂದೆಡೆ ಅವನು ವಿದ್ಯಾಭ್ಯಾಸ ಮಾಡದೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹಲವಾರು ಸಹಾಯಗಳಿಂದ ಪಾಸಾಗುತ್ತಾನೆ. ನಂತರ ಪ್ರೌಢ ವ್ಯವಸ್ಥೆಗೆ ಕಾಲಿಟ್ಟಾಗ ರಮಣಿಯರ ಬೆನ್ನು ಹತ್ತುತ್ತಾನೆ. ನಂತರ ಪಿ.ಯು.ಸಿ. ಪಾಸಾಗಿ, ಡಿಗ್ರಿ ಪಾಸಾಗಿ ಕೊನೆಗೆ ಇಂಜಿನಿಯರ್ ಸೀಟಿಗೆ ಹಣ ಸುರುವಿ ನೌಕರಿ ಸಿಕ್ಕಾಗ ಅವನ ಉಡುಪ ವೈಯಾರ ನೋಡಬೇಕು. ಇಲ್ಲಿ ಲೇಖಕರು ಆಧುನಿಕ ಯುಗದ ಶಿಕ್ಷಣ ವ್ಯವಸ್ಥೆ ಮತ್ತು ಉಡುಪುಗಳ ವೈಖರಿಯನ್ನು ಕಂಡು ಆಶ್ಚರ್ಯವಾಗಿದ್ದಾರೆ. ಕೊನೆಗೆ ಐದನೇ ದೃಶ್ಯದ ಮೂಲಕ ಓದದನೇ, ಬರೆಯದನೇ ನೌಕರಿ ಗಿಟ್ಟಿಸಿಕೊಂಡು ಲಗ್ನಕ್ಕಾಗಿ ಲಕ್ಷಗಟ್ಟಲೇ ವರದಕ್ಷಿಣೆ ತೆಗೆದುಕೊಂಡು ತನ್ನ ಬೆಳೆಸಿದ ತಂದೆ-ತಾಯಿಯರನ್ನು ಮೂಲೆಗೆ ಸೇರಿಸಿದ್ದಾನೆ. ಈ ರೀತಿಯ ವ್ಯವಸ್ಥೆ ಕಂಡು ಲೇಖಕರು ಮರುಗಿದ್ದಾರೆ.

"ಹೊಟ್ಟೆಕಿಚ್ಚಿನ ಹೀನ ಸುಳಿ" ಎನ್ನುವ ಪ್ರಬಂಧವು ಮನುಷ್ಯ-ಮನುಷ್ಯರ ಮೇಲೆ ಸಾಧಿಸುವ ಹೊಟ್ಟೆಕಿಚ್ಚಿನ ಗುಣದ ವ್ಯವಸ್ಥೆಯನ್ನು ತಿಳಿಸುತ್ತದೆ. ತಾನು ಎಲ್ಲದರಿಂದ ಶ್ರೇಷ್ಠನಾಗಬೇಕು. ನನ್ನ ಸರಿಸಮಾನರೂ ಯಾರು ಇರಬಾರದು, ನಾನು ಮೇಲು ಎಂಬ ಅಹಂದಿಂದ ಪರರ ಶಾಂತಿಯನ್ನು ಹಾಳು ಮಾಡುವ ಮನುಷ್ಯರ ಕೆಟ್ಟ ಗುಣಗಳನ್ನು ಲೇಖಕರು ಇಲ್ಲಿ ಬಯಲಿಗೆಳೆದಿದ್ದಾರೆ. ಉದಾಹರಣೆ ವಕೀಲ-ವಕೀಲರ, ವಿದ್ಯಾರ್ಥಿ-ವಿದ್ಯಾರ್ಥಿಗಳ ಡಾಕ್ಟರ-ಡಾಕ್ಟರುಗಳಲ್ಲಿ ಮತ್ತು ಸಾಹಿತಿ-ಮತ್ತೊಬ್ಬ ಸಾಹಿತಿಯ ಮೇಲೆ ಪಡುವ ಹೊಟ್ಟೆ ಕಿಚ್ಚಿನ ಬಗ್ಗೆ ಲೇಖಕರು ಈ ಪ್ರಬಂಧದಲ್ಲಿ ವೈಚಾರಿಕ ನೆಲಯಾಗಿ ಚಿತ್ರಿಸಿದ್ದಾರೆ.

೧೦ನೆಯ ಲಲಿತ ಪ್ರಬಂಧವೇ "ಹೊಸ ವರ್ಷದ ಪ್ರತಿಜ್ಞೆಗಳು" ಇಲ್ಲಿ ನವಯುಗ ಎಂಬುದು ಒಂದು ವರ್ಷಕ್ಕೊಮ್ಮೆ ಬರುತ್ತದೆ. ಮನುಷ್ಯ ಏನೆಲ್ಲಾ ತಪ್ಪು ಮಾಡಿದರೂ ಹೊಸ ವರ್ಷದಿಂದ ಅವರ ಪ್ರತಿಜ್ಞೆ ಬೇರೆ ಬೇರೆಯಾಗಿ ರೂಪ ತಾಳುತ್ತದೆ ಎನ್ನುವುದಕ್ಕೆ ಅಧಿಕಾರಿ ಲಂಚ, ರಾಜಕಾರಣಿ, ಆಸ್ವಾಸನೆ, ಡಾಕ್ಟರ್–ರೋಗಿಯ ತಂದೆ, ಪಾಲಕ–ಹಣದ ಮಿತವ್ಯಯ, ಶಿಕ್ಷಕ ಶಾಲೆ ಕಲಿಸುವ ನಿರ್ಧಾರ, ನ್ಯಾಯಾವಾದಿ, ನಿಷ್ಠುರವಾದಿ, ವ್ಯಾಪಾರ–ಪ್ರಾಮಾಣಿಕ ಬುದ್ಧಿಜೀವಿ, ದೇಶದ ಚಿಂತೆ, ಮಠಾಧೀಶ್ವರ ಪ್ರಚಲಿತ ಸಮಸ್ಯೆಗಳ ಬಗೆಗೆ ಹೇಳಬೇಕು. ಆದರೆ ವಿದ್ಯಾರ್ಥಿ ಹೊಸ ವರ್ಷದಿಂದ ಓದಲು ಪ್ರಾರಂಭಿಸುವೆ ಎಂಬ ವಿಚಾರಗಳನ್ನು ಕಂಡು ಲೇಖಕರು ಈ ಮೇಲಿನ ಎಲ್ಲರ ಪ್ರತಿಜ್ಞೆಗಳನ್ನು ಹಳೆಚಿಟುದನ್ನು ಬಿಟ್ಟು ಹೊಸ ಲೋಕಕ್ಕೆ ಕಾಲಿಡುವುದನ್ನು ಸುಂದರವಾಗಿ ಚಿತ್ರಿಸಿದ್ದಾರೆ.

"ನಿದ್ರಾ ಪುರಾಣ ಒಂದು ಹಗರಣ" ಎನ್ನುವ ಪ್ರಬಂಧವು ನಿದ್ರೆ ಎನ್ನುವುದು ಮನುಷ್ಯನಿಗೆ ನೀಡಿರುವ ಒಂದು ಪ್ರಕೃತಿ ನಿಯಮದ ಒಂದು ಅಂಗ. ನಿದ್ರೆ ಎನ್ನುವುದು ಅವರವರ ವ್ಯಕ್ತಿತ್ವಕ್ಕೆ ಬಿಟ್ಟಿರುತ್ತದೆ. ಬಡವರು ಊಟ ಮಾಡಿ ಸುಮಾರು ೧೦ ತಾಸುಗಳ ನಿದ್ರೆಗೈದರೆ, ಶ್ರೀಮಂತರ ಪಾಲಿಗೆ ನಿದ್ರೆ ಎಂಬುದು ದೂರದ ವಿಷಯ ಏನೇ ಇರಲಿ ಲೇಖಕರು ಮಂತ್ರಿಯ ನಿದ್ರೆಯ ಬಗ್ಗೆ ಹಾಗೂ ಅವರ ಪದವಿಯ ಬಗ್ಗೆ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ನಿದ್ರಾಹೀನತೆ ಆಧುನಿಕ ಸಂಕೀರ್ಣ ಜಗತ್ತಿನ ಚಳುವಳಿ ಇದು ಇಂದಿನ ಪೀಳಿಗೆಗೆ ಅಂಟಿದ ದೊಡ್ಡ ತೊಂದರೆ ಎನ್ನುತ್ತಾರೆ. ಮುಂದೆ ಲೇಖಕರು ಒಂದು ವೇಳೆ ದೇವರನೇನಾದರೂ ಭೇಟಿಯಾದರೆ ನನಗೆ ೨೪ ವರ್ಷಗಳ ನಿದ್ರೆ ಕರುಣಿಸು ಎನ್ನುತ್ತೇನೆ ಎಂದು ಹೇಳುತ್ತಾರೆ.

"ತತ್ವಜ್ಞಾನ ಹೇಳುವದಕ್ಕೆ" ತತ್ವ ಎಂದರೆ ನಿಯಮ ಎಂದರ್ಥ. ಲೇಖಕರು ಪ್ರಮುಖವಾಗಿ ಇಲ್ಲಿ ಶಿಕ್ಷಕರಾಗಿ ಸೇವೆಸಲ್ಲಿಸುವಾಗ ಬಸವಣ್ಣನವರ ಕಳಬೇಡ, ಕೊಲಬೇಡ ಎಂಬ ವಚನದ ಸೂತ್ರ ನನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದಾಗ. ನನ್ನಲ್ಲಿ ಮೊದಲೆ ಗೊತ್ತಿರದ ಹಾಗೆ ಬೆಂಬಲಿಸಿದವು, ಅತ್ತಲಿತ್ತ ನೋಡದಂತೆ ಕುರುಡನ ಮಾಡಯ್ಯನ ತಂದೆ ಎಂದು ಬಸವಣ್ಣನೆಂದರೆ ಸಮಾಜದಲ್ಲಿ ಪರಸ್ತ್ರೀ, ಪರಧನಕ್ಕಾಗಿ ಇತರರನ್ನು ಸೆಳೆಯುತ್ತೇವೆ. ಹಸಿವಾದರೆ ಎಂದು ಅಕ್ಕಮಹಾದೇವಿ ನುಡಿದರೆ ಭೋಗ ಭಾಗ್ಯಕ್ಕಾಗಿ ನಮ್ಮ ಜೀವನ ಹಂಬಲಿಸುತ್ತದೆ ಎನ್ನುತ್ತಾರೆ. ಸರ್ವಜ್ಞ ದಾನ ಧರ್ಮ ನೀಡು ಎಂದರೆ ನಮ್ಮಲ್ಲಿ ಅಳವಡಿಸಿಕೊಂಡಿಲ್ಲ ನಿನ್ನ ನೆರೆಯವನನ್ನು ಪ್ರೀತಿಸು ಎಂದರೆ ಅವರಿಗೆ ನಾನಾ ತರಹದ ಬೇಸರಗಳನ್ನು ನೀಡುತ್ತಿದೆವೆ. ಕೇವಲ ಶರಣರ, ಸಂತರ ಹೇಳಿಕೆಗಳು ತತ್ವಗಳಾಗಿ ಉಳಿದಿವೆ. ನಾವು ನಿಜ ಜೀವನದಲ್ಲಿ ಅಳವಡಿಸಿಕೊಂಡಿಲ್ಲವೆಂಬುದೇ ಲೇಖಕರ ಆಶಯವಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳ ಬಗ್ಗೆ ಪ್ರೊ. ಸಿಂಪಿಯವರು ತಮ್ಮ "ಶಿಕ್ಷಣ ಕೆಲ ವಿಚಾರಗಳು" ಎಂಬ ಲಲಿತ ಪ್ರಬಂಧದಲ್ಲಿ ಚಿತ್ರಿಸಿದ್ದಾರೆ. ಆಧುನಿಕ ಶಿಕ್ಷಣದ ಡೊನೇಷನ್ ಕ್ರಮದ ಬಗೆಗೆ ಲೇಖಕರು ತಿಳಿಸುವಲ್ಲಿ ಭಿನ್ನ ಬೇದಗಳಿವೆ. ಒಬ್ಬ ಬಡ ಹಾಗೂ ಶ್ರೀಮಂತ ವರ್ಗದ ವಿದ್ಯಾರ್ಥಿಗಳ ಶಿಕ್ಷಣ ಭಿನ್ನವಾಗಿದೆ. ಎನ್ನುತ್ತಾರೆ. ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಮುಂತಾದ ಪರೀಕ್ಷೆಗಳಲ್ಲಿ ಚೀಟಿ ಮಾಡುವ ಶಿಕ್ಷಣ ರೂಪ ತಾಳಿದೆ. ಬಡವರ ಮಕ್ಕಳ ಕಷ್ಟಕ್ಕೆ ತಕ್ಕ ಪ್ರತಿಫಲವಿಲ್ಲ. ಶ್ರೀಮಂತ ವರ್ಗದ ಮಕ್ಕಳು ಹಣ

ಸುರಿದು ಚೀಟಿ ಮಾಡುವುದರ ಮೂಲಕ ಒಳ್ಳೆಯ ಶಿಕ್ಷಣ ಗಿಟ್ಟಿಸಿಕೊಳ್ಳುತ್ತಾರೆ. ಇದೆಂತಹ ಶಿಕ್ಷಣ ಎನ್ನುವುದು ಇಲ್ಲಿನ ಲೇಖಕರ ವಿಚಾರವಾಗಿದೆ.

"ಸ್ತ್ರೀ ಸಮಾನತೆ ಒಂದು ಕನಸು" ಹಿಂದಿನ ಕಾಲದಿಂದಲೂ ಸ್ತ್ರೀಯರಿಗೆ ಪುರುಷರ ಸಮಾನವಾಗಿ ಕಾಣಬೇಕು. ಆಕೆ ಗುಲಾಮಳಲ್ಲ, ಆಟದ ಗೊಂಬೆಯಲ್ಲ ಎಂದು ಹೇಳಿಕೊಂಡು ಬಂದರೂ ಆಕೆಗೆ ಇನ್ನೂ ಮುಕ್ತ ಸ್ವಾತಂತ್ರ ಎಂಬುದೇ ಸಿಕ್ಕಿಲ್ಲ. ಆದರೆ ಈಗಿನ ಸ್ತ್ರೀಯರನ್ನು ಕಂಡಾಗ ಸ್ವಲ್ಪ ತದ್ವಿರುದ್ಧವಾದ ವಿಚಾರವೆನಿಸುತ್ತದೆ. ಕೇವಲ ಸ್ತ್ರೀಗೆ ಸಮಾನತೆ ಎಂಬುದು ಒಂದು ಕನಸಾಗಿ ಉಳಿದಿದೆ. ಎನ್ನುವುದನ್ನು ಪ್ರೊ. ವೀರೇಂದ್ರ ಸಿಂಪಿಯವರು ಈ ಪ್ರಬಂಧದಲ್ಲಿ ವಿಮರ್ಶಾತ್ಮಕವಾಗಿ ಚಿತ್ರಿಸಿದ್ದಾರೆ.

"ವಾರಕ್ಕೆ ಐದಲ್ಲ ನಾಲ್ಕೇ ದಿನ" ಎಂಬ ಈ ಪ್ರಬಂಧದಲ್ಲಿ ಸಿಂಪಿಯವರು ಇಂದಿನ ಸರಕಾರಿ ನೌಕರರ ವ್ಯವಸ್ಥೆ ಕುರಿತು ಸೂಕ್ಷ್ಮವಾಗಿ ಇಲ್ಲಿ ಚಿತ್ರಿಸಿದ್ದಾರೆ. ಸೋಮವಾರ ಸರಕಾರಿ ನೌಕರರು ಊರಿನಿಂದ ಬಂದು ಕೆಲಸ ಮಾಡದ ವಿಶ್ರಾಂತಿಯ ದಿನವಾಗಿ ಪರಿಗಣಿಸಿ, ಮಂಗಳವಾರ ಆ ಕೆಲಸ ಮಾಡಿದರಾಯ್ತು ಎನ್ನುವದಾಗಿದೆ. ಬುದುವಾರ ಇದು ಶುಭವಾರ ಅಲ್ಲ ಗುರುವಾರ ಮತ್ತೆ ಊರಿಗೆ ಹೋಗುವ ತಯಾರಿಯಲ್ಲಿ ತಮ್ಮ ಕನಸನ್ನ ಕಾಣುತ್ತಿರುತ್ತಾರೆ. ಶುಕ್ರುವಾರವಂತೆ ಇಂದು ಊರಿಗೆ ಹೋಗಬೇಕು ಎಂಬುದರಲ್ಲಿಯೇ ಇಡೀ ದಿನ ಕಳೆಯುತ್ತಾರೆ. ಇವರಿಗೆ ಕೈತುಂಬ ಸಂಬಳ ಬೇರೆ ಸಮಾಜದಲ್ಲಿ ಅನೇಕ ಜನ ಬಡವರು ಬಿಸಿಲಲ್ಲಿ, ಚಳಿಯಲ್ಲಿ ಮಳೆಯನ್ನದೇ ದುಡಿದರೂ ಹೊಟ್ಟೆಗೆ ತುತ್ತು ಊಟ ಇಲ್ಲದೆ ಬದುಕುವ ಕೂಲಿಕಾರರನ್ನು ಕಂಡು ಲೇಖಕರು ಮರುಗಿದ್ದಾರೆ. ದೇಶದ ಸಂಪತ್ತೆಲ್ಲ ಕೊಳ್ಳೆ ಹೊಡೆದು ಮುಂದಾಗಿರುವ ರಾಜಕೀಯ ಜನರು ಒಂದೆಡೆ ಆರಾಮವಾಗಿ ಜೀವನ ಸಾಗಿಸುತ್ತಿದ್ದಾರೆ. ಕೊನೆಯಲ್ಲಿ ಲೇಖಕರು ತಮ್ಮ ವಿಚಾರವನ್ನು ಈ ರೀತಿಯಾಗಿ ಮಂಡಿಸಿದ್ದಾರೆ ಎಲ್ಲಾ ಸರಕಾರಿ ನೌಕರರು ಐಷಾರಾಮ ಜೀವನವನ್ನು ತೊರೆದು ಕಷ್ಟಪಡುವ ಎಲ್ಲಾ ಮಾನವ ಕುಲಕ್ಕೆ ಆಸರೆಯಾಗು. ಆವಾಗ ಮಾತ್ರ ಈ ದೇಶ ಉದ್ಧರವಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

"ವೃತ್ತ ಪತ್ರಿಕೆಗಳು ಹಾಗೂ ನಾನು" ಎನ್ನುವ ಪ್ರಬಂಧದಲ್ಲಿ ಹಿಂದಿನ ಪತ್ರಿಕೆಗಳ ವಿಷಯಗಳು ಸ್ವಾತಂತ್ರ್ಯಕ್ಕಾಗಿ ಹಾತೊರೆಯುವಂತೆ ಮಾಡುತ್ತಿದ್ದವು. ಕೆಲವೊಂದು ಸಲ ಪ್ರೇರಣೆ, ಪ್ರಚೋದನೆ ನೀಡುತ್ತಿದ್ದವು. ಲೇಖಕರು ಪತ್ರಿಕೆಯಲ್ಲಿರುವ ಒಂದು ಅಕ್ಷರವನ್ನು ಬಿಡದೆ ಓದಿದರೂ ಭೀಕರ ಸುದ್ದಿಗಳು ಮನ ಮುಟ್ಟುವಂತಿರುವಂತೆ ಕೆಲವೆಡೆ ಮಹಿಳೆಯರ ಶೋಷಣೆ ಅತ್ಯಾಚಾರ, ಆರ್ಥಿಕ ಮುಗಟ್ಟು ಇಲ್ಲಿ ಮುಂತಾದ ವಿಷಯಗಳ ಪ್ರಸ್ತಾಪ ಕಂಡುಬಂದಲೆಲ್ಲಾ ಇವರ ಮನ ಸಿಡಿಯುವಂತಿತ್ತು. ಆದರೆ ಇಂದಿನ ಪತ್ರಿಕೆಗಳು ಹಣದ ದಾಹಕ್ಕಾಗಿ ತಪ್ಪನ್ನು ಸರಿಯೆಂದು ಸರಿಯನ್ನು ತಪ್ಪೆಂದು ಸೃಷ್ಟಿಮಾಡುವ ಚಪಲತೆ ಬೆಳೆದು ಬಂದಿದೆ. ಹಾಗಾದರೆ ಲೇಖಕರು ಪತ್ರಿಕೆಯ ವಿರೋಧಿ ಅಲ್ಲ. ಇದ್ದುದ್ದನ್ನು ಇದ್ದ ಹಾಗೆ ಹೇಳುವ ಪ್ರವೃತ್ತಿ ಪ್ರೊ. ಸಿಂಪಿಯವರಲ್ಲಿ ಎದ್ದು ಕಾಣುತ್ತದೆ.

ಮುಂಜಾನೆಯಿಂದ ಸಂಜೆಯವರೆಗೆ ಮನೆಯಲ್ಲಿ ಕೆಲಸ ಮಾಡುವ ಅವರ ಯಜಮಾನಿಯ ಕುರಿತು ಬರೆದ ಪ್ರಬಂಧವೇ ಮನೆಯ ಯಜಮಾನಿ ಹಾಗೂ ರವಿವಾರ ಸೂಟಿ ಒಂದು ದಿನ ಇದ್ದಕ್ಕಿದ್ದಂತೆ ಸತಿ ತಮ್ಮನ ಊರಿಗೆ ಹೋದಳು ನಾನು ಮನೆಯಲ್ಲಿದ್ದುಕೊಂಡು ಜೀವನ ಸಾಗಿಸುವ ದಿನವಾಗಿತ್ತು. ಏಕೆಂದರೆ

ರವಿವಾರ ರಜೆಯಾಗಿತ್ತು. ನನ್ನ ಮಕ್ಕಳು ಸಹ ಬೇಜಾರದಿಂದ ಮಲಗಿ ಬಿಟ್ಟರು. ನಾ ಕೂಡ ಹಸಿವೆಯ ದಾಹ ನಿಗಿಸಿಕೊಂಡು ಮಲಗಿದೆ. ಆದರೆ ಮನೆಯ ಸ್ವಚ್ಛತೆಯ ಬಗೆಗೆ ಗಮನ ಕೊಡಲಿಲ. ಇಲ್ಲಿ ಪ್ರಮುಖವಾಗಿ ಲೇಖಕರು ಹೇಳುವುದೆನೆಂದರೆ ಯಜಮಾನಿ ಒಂದು ದಿನ ಮನೆಯಲ್ಲಿ ಇಲ್ಲದ ಕಾರಣ ಊಟ, ತಿಂಡಿ ಮನೆಯ ಸ್ವಚ್ಛತೆ ಸರಿಯಾಗಿರಲಿಲ್ಲ ಏನ್ನುವುದಾಗಿದೆ. ಅಂದರೆ ಮಹಿಳೆಯರ ಕೆಲಸ ಗಮನಾರ್ಹವಾದುದಾಗಿದೆ. ಏಂದು ಪ್ರೊ. ಸಿಂಪಿಯವರು ಈ ಪ್ರಬಂಧದಲ್ಲಿ ಸರಳವಾಗಿ ಚಿತ್ರಿಸಿದ್ದಾರೆ.

"**ಧಾರ್ಮಿಕ ಸುಧಾರಣೆಯ ಅವಶ್ಯಕತೆ**" ಏನ್ನುವ ಪ್ರಬಂಧವು ಭಾರತ ದೇಶದ ಹಲವು ಧರ್ಮಗಳ ನಾಡು, ಧರ್ಮ ಏನ್ನುವುದು ಮಾನವ ಜೀವನದ ಒಂದು ಅಂಗ ಇದರ ನೀತಿ ನಿಯಮಗಳಂತೆ ಮನುಷ್ಯ ಬಾಳಬೇಕು. ಮನುಷ್ಯನ ಒಳಿತಿಗಾಗಿ ಧರ್ಮ ರೂಪಗೊಳ್ಳಬೇಕೆಂಬುದಾಗಿದೆ. ಕಾಲಕ್ಕೆ ತಕ್ಕಂತೆ ಧರ್ಮ ಬದಲಾಗುತ್ತಾ ಬಂದಿದೆ. ಆದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತರು ಧರ್ಮ ಏನ್ನುವುದು ತನ್ನ ಕಂದಚಾರಗಳ ಮೂಲಕ ಮನುಷ್ಯ-ಮನುಷ್ಯರಲ್ಲಿ ಭಿನ್ನ ಭೇದ, ವರ್ಗಭೇದ, ರಕ್ತಪಾತ, ಕೊಲೆ, ಸುಲಿಗೆ, ಮುಂತಾದವುಗಳಿಂದ ತುಂಬಿ ತುಳುಕಾಡುತ್ತಿದೆ. ಭಯದ ವಾತಾವರಣ, ಮತಿಯ ಕಲಹಗಳು ದಿನದಿಂದ ದಿನಕ್ಕೆ ಹೆಚ್ಚುತ್ತವೆ. ಆದುದರಿಂದ ಇನ್ನೂ ನಮ್ಮ ದೇಶ ಸುಧಾರಣೆಯಾಗಿಲ್ಲಾ ಸುಧಾರಣೆಯಾಗಬೇಕಾಗಿದೆ. ಅದರ ಅವಶ್ಯಕತೆ ಇದೆ ಏಂಬುದನ್ನು ಪ್ರೊ. ಸಿಂಪಿಯವರು ತಮ್ಮ ಈ ಪ್ರಬಂಧದಲ್ಲಿ ಚಿತ್ರಿಸಿದ್ದಾರೆ.

"**ಹೆಂಡತಿಯನ್ನು ಒಲಿಸುವುದು ಹೇಗೆ**" ಇದು ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುವುದು ಶಿವಂಗೆ ಏಂಬ ಶರಣರ ನುಡಿಯಂತೆ ಪತಿಯು ಸತಿಯನ್ನು ಒಲಿಸಿಕೊಂಡು ತನ್ನ ಜೀವಮಾನದವರೆಗೆ ಜೀವನ ಸಾಗಿಸುವ ದಾರಿಯನ್ನು ತೋರಿಸುವದಾಗಿದೆ. ಇಲ್ಲಿ ಲೇಖಕರು ಪತ್ನಿ ಬಯಕೆ, ಆಕೆಯನ್ನು ಹೊಗಳುವ ರೀತಿ, ಪ್ರೀತಿ-ಪ್ರೇಮಗಳಿಂದ ಕಾಣಿರಿ ಏಮಬ ಮಾತು ತಿಳಿಸಿದ್ದಾರೆ. ನೀನು ಪತ್ನಿಯನ್ನು ಹೇಗೆ ಕಾಣುತ್ತಿಯೋ ಹಾಗೆಯೇ ನಿನ್ನ ಕುಟುಂಬ ಸರಳವಾಗಿ ಸುಖಕರವಾಗಿ ಸಾಗುತ್ತದೆ. ಹೆಣ್ಣು ಮಕ್ಕಳು ಹೊಗಳಿಕೆಯ ಜೀವಿಗಳು, ಅವರನ್ನು ಏಷ್ಟು ಹೋಗುಳಿತ್ತಿಯೋ ಅಷ್ಟು ಕೆಲಸಗಳು ನಿರ್ವಿಘ್ನವಾಗಿ ಸಾಗುತ್ತದೆ. ಹೊಗಳಿಕೆ ಕೇವಲ ಕೆಲಸಕ್ಕೆ ಮಾತ್ರ ಆಗಬಾರದು ಸಂದರ್ಭನುಸಾರವಾಗಿ ಆಗಬೇಕೆಂಬುದೇ ಇವರ ವಿಚಾರವಾಗಿದೆ.

"**ಗ್ರಹಾನ್ವೇಷಣೆ**" ಈ ಪ್ರಬಂಧವು ಕೌಟುಂಬಿಕ ಜೀವನ ಸಾಗಿಸುವ ಮನೆಯ ವಿಷಯ ಕುರಿತು ಪ್ರಸ್ತಾಪ ಮಾಡಿಸುತ್ತದೆ. ಮನೆಯಲ್ಲಿ ನಾನಾ ತರಹದ ವಿಧಗಳಿವೆ. ಇದು ನಮಗೆಲ್ಲ ಗೊತ್ತಿರುವ ವಿಷಯ ಆದರೆ ಲೇಖಕರು ಇಲ್ಲಿ ಮನೆಯ ಅನ್ವೇಷಣೆ ಕುರಿತು ದೀರ್ಘವಾಗಿ ಪ್ರಸ್ತಾಪಿಸಿದ್ದಾರೆ. ತಾವು ಹಿಡಿದ ಮನೆ ಒಂದು ಕಡೆ ಇಲ್ಲಿ ಹೆಗ್ಗಣಗಳ ಮಾಲಿಕರೆ ಆಗಿದ್ದಾರೆ. ಇನ್ನೊಂದೆಡೆ ನಾನು ಆಗುಂತಕ ವ್ಯಕ್ತಿ ಏನ್ನುತ್ತಾರೆ.

"ನನಗಂತೂ ಅರ್ಥವಾಗುತ್ತಿಲ್ಲ" ಪ್ರೊ. ವೀರೇಂದ್ರ ಸಿಂಪಿಯವರ ಈ ಪ್ರಬಂಧವು ಕನ್ನಡ ಭಾಷೆಯ ಅಳಿವು-ಉಳಿವಿನ ಬಗ್ಗೆ ಚಿತ್ರಿಸುತ್ತದೆ. ಯಾವುದೇ ಒಂದು ಸಂದರ್ಭದಲ್ಲಿ ನಾವು ಇಂಗ್ಲೀಷ ಭಾಷೆಗೆ ಮಾರು ಹೋಗಿ ನಮ್ಮತನವನ್ನು ಮರೆಯುತ್ತಿದ್ದೇವೆ. ಮದುವೆಯ ಆಮಂತ್ರಣ ಮತ್ತು ಗೃಹ

ಪ್ರವೇಶದ ಆಮಂತ್ರಣ. ಇವುಗಳಲ್ಲದೆ ಪ್ರತಿಯೊಂದು ಉದ್ಘಾಟನಾ ಸಮಾರಂಭದ ಆಮಂತ್ರಣಗಳು ಇಂಗ್ಲೀಷನಲ್ಲಿ ಪ್ರಕಟವಾಗುತ್ತದೆ. ನಾವು ಒಂದು ವೇದಿಕೆಯ ಮೇಲೆ ನಿಂತು ಇಂಗ್ಲೀಷ ಮಾತನಾಡಿದರೆ ಬುದ್ಧಿವಂತ, ಜ್ಞಾನವಂತ ಎಂದು ತಿಳಿದುಕೊಳ್ಳುತ್ತಾರೆ. ಇಂದು ಕೇವಲ ಮದುವೆ ಕಾರ್ಡಗಳಲ್ಲದೆ ಸಂಸ್ಥೆಯ ವಿಷಯಗಳು ಇಂಗ್ಲೀಷನಲ್ಲಿ ಬಳಕೆಯಾಗುತ್ತಿವೆ. ಹೀಗಿರುವಾಗ ನಮ್ಮ ಕನ್ನಡ ಭಾಷೆ ಉಳಿಯುವುದು ಕಷ್ಟ ಸಾಧ್ಯ ಎನ್ನುತ್ತಾರೆ. ಅವರ ಒಂದು ಉದಾಹರಣೆ "ಭಾರತೀಯ ಸಂಪ್ರದಾಯದ ಈ ವಿವಾಹದ ಆಮಂತ್ರಣ ಇಂಗ್ಲೀಷನಲ್ಲಿ ಪ್ರಕಟವಾಗುವುದೆಂದರೆ ಅಕ್ಕ ತಂಗಿಯರು ಇಂಗ್ಲೀಷ ಸ್ಕರ್ಟ ಉಟ್ಟಂತೆ, ಹಳ್ಳಿಯ ಹುಂಬ ಸೂಟು ಬೂಟುಗಳನ್ನು ಧರಿಸಿದಂತೆ, ನಮ್ಮ ಮನೆಯ ರೊಟ್ಟಿ ಬೇಳೆಗಳನ್ನು ಚಮಚೆಯಲ್ಲಿ ಉಂಡಂತೆ ಅನಿಸುತ್ತದೆ. ಎಂದು ತಿಳಿಸುತ್ತಾರೆ.

ಒಂದು ಕಡೆ ಗೆಳೆಯರಿಗೆ ತಲುಪಿಸುವ ಕಾರ್ಡುಗಳಲ್ಲಿದ್ದರೆ, ಕನ್ನಡ ಭಾಷೆಯ ಆಮಂತ್ರಣಗಳು ಬಂದು ಬಳಗದವರಿಗೆ ತಲುಪಿಸಲು ರದ್ದಿ ಕಾಗದಗಳ ರೂಪದಲ್ಲಿರುತ್ತದೆ. ಇಲ್ಲಿ ಲೇಖಕರು ಅಭಿಪ್ರಾವಿಷ್ಟೆ ನಮ್ಮ ನಾಡು ಕನ್ನಡ ನಾಡು. ನಮ್ಮ ಭಾಷೆ ಕನ್ನಡ. ಕನ್ನಡ ಭಾಷೆಯನ್ನು ಮಾತನಾಡುವವರು ೫ ಕೋಟಿ ಜನರೆಂದು ಬೊಟ್ಟ ಹೊಡೆದು ಮುಂಜಾನೆದ್ದ ಕೂಡಲೆ ಬಾಯ್-ಬಾಯ್ ಎಂದು ಹೇಳುವ ಜನರ ಕುರಿತು ವಿಡಂಬಿಸುತ್ತಾರೆ. ಪರರನ್ನು ಪರಭಾಷೆಯನ್ನು ಪಲ್ಲಕ್ಕಿಯಲ್ಲಿ ಹೊತ್ತು ತಿರುಗುವುದನ್ನು ಬಿಟ್ಟು ನಮ್ಮ ಭಾಷೆಯನ್ನು ನಾವೆಂದು ಕಲಿಯುತ್ತೇವೆಯೋ ನನಗಂತೂ ಅರ್ಥವಾಗುತ್ತಿಲ್ಲ ಎಂದು ಲೇಖಕರು ಭಾಷೆಯ ಅಭಿಮಾನವನ್ನು ಎತ್ತಿ ತೋರಿಸಿದ್ದಾರೆ.

"ಕೂದಲಿಗೆ ಕರಿಯ ಬಣ್ಣ" ಹಿಂದಿನ ಕಾಲದಲ್ಲಿ ಕೂದಲಿಗೆ ಬಣ್ಣ ಹಚ್ಚುವ ಪದ್ಧತಿ ಇರಲಿಲ್ಲ ಇರಲಿಲ್ಲವೆನ್ನುವದುಕ್ಕಿಂತ ಮುಂಚೆ ಬಿಳಿ ಕೂದಲು ವಯಸ್ಸಾದಂತೆ ಬರುತ್ತಿದ್ದವು. ಅದು ಒಟ್ಟತ್ತಿಗಿರಲಿ ಆಧುನಿಕ ಯುಗದಲ್ಲಿ ಹುಟ್ಟುವ ಮಗುವಿಗೆ ಬಿಳಿ ಕೂದಲು ಬರುತ್ತವೆ. ಇದು ಅರ್ಥವಾಗದ ಮಾತು. ಆದರೆ ತತ್ವಜ್ಞಾನ ಯುಗದಲ್ಲಿ ೬೦ ವರ್ಷದ ವ್ಯಕ್ತಿಗಳು ತಲೆ ಕೂದಲಿಗೆ ಕರಿಯ ಬಣ್ಣ ಹಚ್ಚಿ ಯುವಕರಂತೆ ಕಾಣುವ ಹಂಬಲ ಒಂದೆಡೆಯಾದರೆ, ಅದೇ ವಯಸ್ಸಿನ ಸ್ತ್ರೀಯರು ರಂಗಭೂಮಿ ಮೇಲೆ ಕುಣಿಯುವಳಲ್ಲವಾದರೂ ಬಣ್ಣ ಹಚ್ಚುತ್ತಾರೆ. ಯಾಕೆ ? ಎಂಬ ವಾದ ಇವರದ್ದಾಗಿದೆ. ಸ್ವತಃ ಅವರೇ ಹೇಳುವಂತೆ ಕರಿಯ ಕೂದಲಿಗೆ ಹೇಗೆ ತಾರುಣ್ಯದ ಸೌಂದರ್ಯವಿದೆಯೋ ಹಾಗೆ ಬಿಳಿಯ ಕೂದಲಿಗೆ ವೃದ್ಧಾಪ್ಯದ ಸೌಂದರ್ಯ ಎನ್ನುತ್ತಾರೆ. ಬಿಳಿಯ ಕೂದಲು ಇದ್ದರೆ ಹಿರಿಯರು ಎಂದರ್ಥ ಅವರು ಗೌರವಕ್ಕೆ ಪಾತ್ರರಾದವರೆಂದರ್ಥ. ಆದರೆ ಇಗಿನ ಕಾಲದಲ್ಲಿ ಸಣ್ಣ ವಯಸ್ಸಿನವರಿಗೆ ಬಿಳಿ ಕೂದಲು ಬರುತ್ತಿರುವದು ಕಂಡು ಬರುತ್ತದೆ. ಅಂದರೆ ಸಣ್ಣವರಿಗೂ ಗೌರವಿಸುವುದೇ ಆಗಿದೆ ಎಂಬುದನ್ನು ಇಲ್ಲಿ ಲೇಖಕರು ತೋರಿಸಿದ್ದಾರೆ.

"ಬಸ್ಸಿಗಾಗಿ ಕಾಯುವುದರಲ್ಲಿನ ಸುಖ" ಹಿಂದಿನ ಕಾಲದ ಜನರು ಬಸ್ಸಿಗಾಗಿ ಕಾಯುವ ಹಾಗಿರಲಿಲ್ಲ ಕಾಲ್ನಡಿಗೆಯೇ ಅವರ ಗಾಲಿಗಳು ಆದರೆ ಆಧುನಿಕ ಕಾಲದಲ್ಲಿ ಬಸ್ಸು ಬಂದಿರುವುದು ನಮಗೆ ಸಂತೋಷದ ಸುದ್ದಿಯೇ ಸರಿ. ಆದರೆ ಬಸ್ಸು ಬರುವ ವೇಳೆಗೆ ಮಿತಿಯೇ ಇಲ್ಲ. ಮುಂಜಾನೆ ೬ ಗಂಟೆಗೆ ಬಸ್ಸು ಬರುವ ವೇಳೆ ನಿಗದಿಯಾದರೆ ಅದು ೧೦ ಗಂಟೆಗೆ ಬರುತ್ತದೆ. ಕೆಲವು ಜನರು ೪

ತಾಸುಗಳ ಕಾಲ ಬಸ್ಸು ಕಾಯುವುದರಲ್ಲಿಯೇ ಸುಖ ಅನುಭವಿಸುತ್ತಾರೆ. ಆದರೆ ಲೇಖಕರು ಇಲ್ಲಿ ತಮ್ಮ ಜೀವನನುಭವದ ಘಟನೆಯನ್ನು ಮೆಲಕು ಹಾಕಿದ್ದಾರೆ. ಕೆಲವೊಂದು ಜನರು ಬಸ್ಸು ಇನ್ನೂ ಲೇಟಾಗಿ ಬಂದರೆ ಪಾಡ ಎಂಬುವರಿದ್ದಾರೆ. ಅವರಿಗೆ ಯಾವುದೇ ರೀತಿಯ ಜವಾಬ್ದಾರಿಗಳಿರುವುದಿಲ್ಲ. ಲೇಖಕರ ದೃಷ್ಟಿಯಲ್ಲಿ ಐಷಾರಾಮ ಜೀವನದ ಉಸಿರೇ ಬಸ್ಸಿಗಾಗಿ ಕಾಯುವುದಾಗಿದೆ..

"ಅಹಂಕಾರದ ಅಹಮಿಕೆ" ಈ ಪ್ರಬಂಧದಲ್ಲಿ ಲೇಖಕರು ಅಹಂಕಾರದಿಂದ ಬದುಕಬೇಕು ಎನ್ನುತ್ತಾರೆ. ಹಿಂದಿನ ಕಾಲದಲ್ಲಿ ದುರ್ಯೋಧನ ಸ್ಥಿತಿಗತಿ ಏನಾಯಿತು. ಎಂದು ಆಲೋಚಿಸಿದರೆ, ಅದನ್ನೆ ಇವತ್ತಿನ ಕಾಲದಲ್ಲಿ ನಾವು ಅನುಸರಿಸಿದರೆ ಖಂಡಿತಾ ಮೋಸ ಹೋಗುತ್ತೇವೆ. ಆದುದರಿಂದ ಅಹಂಕಾರದಿಂದ ಜೀವಿಸುವಲ್ಲಿ ಒಂದು ಸಿಬಗಿದೆ. ಮುಂದೆ ಏನೇ ಬರಲಿ ಸಾಹಿಸಿದರಾಯ್ತು ಎನ್ನುತ್ತಾರೆ. ಒಟ್ಟಿನಲ್ಲಿ ಇಲ್ಲಿ ಲೇಖಕರು ಅಹಂಕಾರದ ವಿಷಯದ ಬಗ್ಗೆ ಚರ್ಚಿಸಿ ಆದರಿಂದ ಆಗುವ ವಿಷಯಗಳ ಬಗ್ಗೆ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಪ್ರೊ. ವೀರೇಂದ್ರ ಸಿಂಪಿಯವರ ಕೊನೆಯ ಪ್ರಬಂಧವೇ "ಮಾಧ್ಯಮದ ಕಂಟಕ" ಈ ಪ್ರಬಂಧವು ಇಂಗ್ಲೀಷ ಮಾಧ್ಯಮದಿಂದ ಭಾರತೀಯರಲ್ಲಿ ಅಜ್ಞಾನದ ಜೊತೆಗೆ ಸಮಾಜದಲ್ಲಿ ಅಸಮಾನತೆಯ ಬೀಜಗಳನ್ನು ಬಿತ್ತುತ್ತವೆ. ಇಂತಹ ಶಿಕ್ಷಣ ಮಾಧ್ಯಮದಿಂದ ನಮ್ಮ ಭವ್ಯ ಪರಂಪರೆ ನಾಶವಾಗುತ್ತಿದೆ. ಈ ಮಾಧ್ಯಮವು ವಿಶ್ವವಿದ್ಯಾಲಯಗಳನ್ನು ವ್ಯಾಪಾರಿ ಕೇಂದ್ರಗಳನ್ನಾಗಿ ಮಾಡಿ ಬಿಟ್ಟಿದೆ. ಅಶಿಕ್ಷಿತ ಪಾಲಕರು, ಅಶಿಕ್ಷಿತ ಶಿಕ್ಷಕರಿಂದ ನಮ್ಮ ಕನ್ನಡ ಶಿಕ್ಷಣದ ವ್ಯವಸ್ಥೆ ಅಧೋಗತಿಗೆ ತಂದಿದೆ. ಅಂದರೆ ಇಂಗ್ಲೀಷ ಶಿಕ್ಷಣ ಬೇಡ ಏರ್ಥವಲ್ಲ. ಇಂದಿನ ವ್ಯವಸ್ಥೆಯಲ್ಲಿ ಹೇಗೆ ಬದುಕಬೇಕು. ಎಂಬುದನ್ನು ನಾವು ಕಲಿತು. ಕಾಲಕ್ಕೆ ತಕ್ಕಂತೆ ಇರಬೇಕು. ಇಂದು ಎಲ್ಲಾ ವಿದ್ಯಾವಂತರಿಗೆ ಸರಕಾರಿ ನೌಕರ ಸಿಗುವುದಿಲ್ಲ. ಆಗ ಕಾನ್ವೆಂಟ್ ಸ್ಕೂಲ್ ಓಪನ್ ಮಾಡಿದರೆ ತಿಂಗಳಿಗೆ ಕೈತುಂಬ ಸಂಬಳ ದೊರೆಯುತ್ತದೆ. ಅದೇ ಕನ್ನಡ ಶಾಲೆಯು ತೆಗೆದರೆ ತಿಂಗಳಿಗೆ ತಿಪ್ಪೆ ಎತ್ತುವ ತಿರುಕನಾಗಿ ತಿರುಗಬೇಕಾಗುತ್ತದೆ. ಮತ್ತು ಕಾನ್ವೆಂಟ್ ಸ್ಕೂಲ್‌ನಲ್ಲಿ ಓದುವ ಮಕ್ಕಳ ಬುಕ್ಕ ಮತ್ತು ನೊಟ್ ಬುಕ್‌ಗಳ ತುಂಬಾ ಅಂಕಿ ಅಂಶಗಳಿಂದ ಮಾನಸಿಕ ನೆಮ್ಮದಿ ಹಾಳುಮಾಡುತ್ತವೆ. ಇಂತಹ ಶಿಕ್ಷಣ ಮಾಧ್ಯಮದಿಂದ ಯಾವ ಸುಧಾರಣೆಯೂ ಸಾಧ್ಯವಿಲ್ಲ ಎನ್ನುತ್ತಾರೆ.

ಲಲಿತ ಪ್ರಬಂಧಗಳು

ಪ್ರೊ. ವೀರೇಂದ್ರ ಸಿಂಪಿಯವರ ಐದನೇ ಲಲಿತ ಪ್ರಬಂಧಗಳ ಸಂಕಲನವಾಗಿದೆ. ಇದರಲ್ಲಿ ಒಟ್ಟು ೧೧ ಅಧ್ಯಾಯಗಳಿವೆ. ಲಲಿತ ಪ್ರಬಂಧ ಸಾಹಿತ್ಯವು ನವೋದಯ ಸಂದರ್ಭ ಸಕಲ ಸತ್ವ ಮತ್ತೆ ಪಡೆಯುವಂತೆ ಮಾಡುವಲ್ಲಿ ಪ್ರೊ. ವಿಸಿಯವರು ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ಈ ಕಾರಣದಿಂದಲೇ ಅವರೊಬ್ಬ ಪ್ರಮುಖ ಪ್ರಬಂಧಕಾರರೆಂದು ಪರಿಗಣಿಸಲ್ಪಡುವರು ಗೊರುರು ರಾಮಸ್ವಾಮಿ ಅಯ್ಯಂಗಾರರು ಹೇಳುವಂತೆ "ಲಲಿತ ಪ್ರಬಂಧಗಳ ವಿಷಯ ನಿರೂಪಣೆಯಲ್ಲಿ ಸ್ಪಷ್ಟತೆ, ಮರ್ಯಾದೆಯನ್ನು ಮೀರದ ಹಾಸ್ಯ ಕೃತಕವಲ್ಲದ ಚಮತ್ಕಾರ, ಸಹಾನುಭೂತಿ, ಸರಳತೆ, ಸಜ್ಜನಿಕೆ, ಆಕರ್ಷಕ ದೃಷ್ಟಿ, ಆಳವಾದ ಜ್ಞಾನಕ್ಕೆ ಸ್ವಂತ ವ್ಯಕ್ತಿತ್ವವೆಂಬ ಮೆರಗು ಬರಬೇಕು" [೧] ಎಂದು ಲಕ್ಷಣಗಳ ಪಟ್ಟಿ ಮಾಡಿಕೊತ್ತಾರೆ. ಈ ಎಲ್ಲಾ ಲಕ್ಷಣಗಳನ್ನು ತಮ್ಮ ಒಡಲಾಳದಲ್ಲಿಟ್ಟುಕೊಂಡು ಆತ್ಮೀಯ ನಿರೂಪಣೆಯ ಗಂಭೀರ ಪದವಿನ್ಯಾಸಕ್ಕೆ ದಟ್ಟ ಹೊದಿಕೆ ಗಮನಿಸುವಂತಹದು.

ಮೊದಲನೇ ಅಧ್ಯಾಯವೇ ಜೀವನದಲ್ಲಿಯ ಪ್ರತಿಯೊಬ್ಬ ಮನುಷ್ಯನಲ್ಲ ಯಶಸ್ಸಿಯರು ಮನೋಭಾವನೆ ಇರುತ್ತದೆ. ಲೇಖಕರು ಅದನ್ನು ವೈಯಕ್ತಿಕ ವಿಚಾರ ಎನ್ನುತ್ತಾರೆ. ಪ್ರತಿಯೊಬ್ಬನ ಯಶಸ್ಸು ಕಲ್ಪನೆಯ ಮೇಲೆ ಅವಲಂಬಿತವಾಗಿದೆ. ಎಂಬ ಮಾತು ಗಮನಾರ್ಹದ ಸಂಗತಿ ಶ್ರೀಮಂತ-ಬಡವ ಎಂಬ ಎರಡು ವರ್ಗಗಳಿದ್ದು ಶ್ರೀಮಂತನಿಗೆ ೧೦೦ ಎರಿಕೆ ಭೂಮಿಯ ಯಶಸ್ಸು ದೊರಕಿದರೆ ಬಡವನಿಗೆ ೧/೨ ಅಥವಾ ೧ ಎಕರೆ ಭೂಮಿಯಲ್ಲಿ ದುಡಿದು ಯಶಸ್ಸಿನ ಜೀವನ ಸಾಗಿಸುತ್ತಾನೆ. ಲೇಖಕರು ಇಲ್ಲಿ ಟಾಲ್‌ಸ್ಟಾಯನ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಮನುಷ್ಯನೆನ್ನುವ ಬುದ್ದಿ ಜೀವಿಗೆ ಇರಬೇಕಾದದ್ದು ೧೦೦ ಎಕರೆ ಅಲ್ಲ ೧೦೦೦ ಎಕರೆ ಅಲ್ಲ ಕೇವಲ ಮೂರೆ ಮೂರು ಮಳ ಭೂಮಿ ಎಂಬುದನ್ನು ಅರಿಯಬೇಕಾಗಿದೆ. ಆದರೆ ಯಶಸ್ಸು ಜೀವನದಲ್ಲಿ ಕಾಣಬೇಕೆಂಬ ಇಲ್ಲದ ಕನಸು ಕಾಣುವ ಪರಿ ಸರಿಯಲ್ಲ ಎಂಬುದಾಗಿದೆ. ಪ್ರತಿಯೊಬ್ಬ ಮನುಷ್ಯನು ತನ್ನ ಇತಿ ಮಿತಿಯಲ್ಲಿಯೇ ಜೀವನ ಸಾಗಿಸಬೇಕು ಮುಂದೆ ಅವರು ನಾವು ಪಡೆದ ಜ್ಞಾನಕ್ಕೆ ಬೆಲೆ ಇರಬೇಕೆ ಹೊರತು ವಿಶ್ವವಿದ್ಯಾಲಯದಿಂದ ಪಡೆದ ಅಂಕಪಟ್ಟಿಯೆಂದಲ್ಲ ಅದೆನಿದ್ದರೂ ಕೀರ್ತಿಗಾಗಿ ಒಂದೆಡೆ ಹೇಳಿದರೆ ಇನ್ನೊಂದೆಡೆ ಯಶಸ್ಸೆಂಬುದು ಒಂದು ಮರೀಚಿಕೆ ಎನ್ನುತ್ತಾರೆ. ಹಣ, ಧನ, ಕೀರ್ತಿಯಿಂದ ನಮ್ಮ ಜೀವನದ ಯಶಸ್ಸು ಕಾಣಲು ಸಾಧ್ಯವಿಲ್ಲ ನಿಜ ಜೀವನದಲ್ಲಿ ಯಶಸ್ಸಿರುವುದು ಆರೋಗ್ಯ ಪೂರ್ಣ ಆಸಕ್ತಿಯಲ್ಲಿ ನಮ್ಮ ಜೀವನದ ಯಶಸ್ಸಿದೆ ಎನ್ನುತ್ತಾರೆ. ಮುಂದೆ ಅವರು ಜೀವನದ ಯಶಸ್ಸಿರುವುದು ದುಡಿಯುವ ಕೈಗಳಲ್ಲಿ ಮನಸ್ಸಿನ ಔದಾರ್ಯದಲ್ಲಿ ಸುತ್ತಲಿನ ಸಮಾಜದ ಸಾವು ನೋವುಗಳಿಗೆ ತೀವ್ರವಾಗಿ ಸ್ಪಂದಿಸುವ ಹೃದಯವಂತಿಕೆಯಲ್ಲಿ ಅನ್ಯರಿಗೆ ಭಾರವಾಗದೇ ನಾಲ್ಕು ಜನರಿಗೆ ಉಪಯುಕ್ತರಾಗುವಂತೆ ಜೀವಿಸುವುದರಲ್ಲಿಯೇ ಜೀವನದ ಸೌಂದರ್ಯವಿದೆ, ಯಶಸ್ಸು ಸಾಧ್ಯ ಎಂದು ಹೇಳಿದ ಮಾತು ಕಾಲದಿಂದ ಕಾಲಕ್ಕೆ ಉಳಿಯುವುದಿಲ್ಲ ಎರಡು ಮಾತಿಲ್ಲವೆಂದು ಹೇಳಬಹುದು.

---

೧. ಪ್ರೊ. ವೀರೇಂದ್ರ ಸಿಂಪಿ 'ಕನ್ನಡದಲ್ಲಿ ಲಲಿತ ಪ್ರಬಂಧಗಳು' ಪುಟ-೩೬-೧೯೭೨

"ಸಂದರ್ಶನಾಯಣ"

ಆಧುನಿಕ ಯುಗದಲ್ಲಿ ಸಂದರ್ಶನ ಒಂದು ಅಂಗವಾಗಿದೆ. ಇದಿಲ್ಲದೆ ಯಾವ ಕೆಲಸವು ಆಗಲ್ಲ ಇದು ಮಹಾಭಾರತ ರಾಮಾಯಣಗಳಿಗಿಂತ ಹೆಚ್ಚಿನವು ಎಂದು ಲೇಖಕರ ಅಭಿಪ್ರಾಯವಾಗಿದೆ. ಸಂದರ್ಶನ ಎನ್ನುವುದು ಕಾಲಕ್ಕೆ ತಕ್ಕಂತೆ ಪರಿವರ್ತನೆಯಾಗುತ್ತ ಬಂದಿದೆ ಎನ್ನುವುದಕ್ಕೆ ರಾಮಾಯಣ ಮಾಹಾಭಾರತ ಕೆಲವು ಉದಾಹರಣೆಗಳನ್ನು ನೀಡಿದ್ದಾರೆ. ಅಧ್ಯಯನದ ದೃಷ್ಟಿಯಿಂದ ಒಂದು ಉದಾಹರಣೆ "ಮಹಾಭಾರತದಲ್ಲೂ ಸಂದರ್ಶನಗಳು ಹೆಜ್ಜೆ ಹೆಜ್ಜೆಗೆ ಬರುತ್ತದೆ ವನವಾಸದಲ್ಲಿದ್ದಾಗ ನೀರಡಿಸಿದ ಪಾಂಡವರು ಬಾವಿಗೆ ನೀರು ಕುಡಿಯಲು ಹೋದಾಗ ಸಂದರ್ಶನಕಾರ ಯಕ್ಷನ ಪ್ರಶ್ನೆಗೆ ಉತ್ತರಿಸದೆ ಸತ್ತುಬಿದ್ದರು"

ಕೇವಲ ಹಿಂದಿನ ಕಾಲದಲ್ಲಿ ಏಕೆ? ಇವತ್ತಿನ ಕಾಲದಲ್ಲೂ ಸಂದರ್ಶನ ನಮ್ಮ ನಿತ್ಯ ಜೀವನದಲ್ಲಿ ಅನಿವಾರ್ಯವಾಗಿದೆ ಹೌಸಿಂಗ್ ಬೋರ್ಡ್, ಬ್ಯಾಂಕ್, ಲಾಟರಿ ಅಡ್ಮಿಷನ್, ಹಾಸ್ಪಿಟಲ್, ಪತ್ರ ಮುಂತಾದವುಗಳಲ್ಲದೇ ಇನ್ನು ಹಲವಾರು ಸಂದರ್ಶನಗಳು ಹಾದು ಹೋಗುತ್ತವೆ. ವಿದ್ಯಾಭ್ಯಾಸದ ಮೊದಲು ವಿದ್ಯಾಬ್ಯಾಸದ ನಂತರವೂ ಕೂಡ ಸಂದರ್ಶನ ಅವಶ್ಯಕವಾಗಿದೆ. ಆದುದರಿಂದ ಸಂದರ್ಶನವು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ ಎಂದು ಈ ಪ್ರಬಂದದ ಮೂಲಕ ತಿಳಿಯಪಡಿಸುವರು.

"ಹೊಸ ರುಚಿ ಹೊಸ ಪ್ರಯೋಗಗಳು"

ಈ ಪ್ರಬಂಧವು ಗ್ರಾಮದ ಹೊಟ್ಟೆಗೆ ಬೇಕಾಗುವ ಊಟದ ವ್ಯವಸ್ಥೆ ಹಾಗೂ ಪಟ್ಟಣಗಳ ಊಟದ ವ್ಯವಸ್ಥೆಯನ್ನು ತೌಲನಿಕವಾಗಿ ಚರ್ಚಿಸಿದ್ದಾರೆ ಬಾಲ್ಯದಲ್ಲಿ ಅನುಭವಿಸಿದ ಸೇವಿಸಿದ ಊಟ ತಿಂಡಿ ಸೊಪ್ಪು ಮುಂತಾದವುಗಳನ್ನು ತಾಯಿಯು ಮಾಡಿದ ನೆನಪು ಒಂದೆಡೆಯಾದರೆ ಶಿಕ್ಷಣಕೆಂದು ಪಟ್ಟಣಕ್ಕೆ ಹೋದಾಗ ತಿಂಡಿಗಾಗಿ ಬೇರೆ ಬೇರೆ ಸುಪ್ರಸಿದ್ಧ ಹೋಟೆಲ್‌ಗಳು ಇದ್ದದ್ದನ್ನು ಕಂಡರು ನಂತರ ತನ್ನ ಪತ್ನಿ ಪುಸ್ತಕ ಓದುವ ಮೂಲಕ ಅಡುಗೆ ಮಾಡುವುದನ್ನು ಕಂಡು ರುಚಿಯ ನಾನಾ ತರಹದ ಪ್ರಯೋಗಗಳನ್ನು ಚಿತ್ರಿಸಿದ್ದಾರೆ. ಕರಿಕಡಬು, ಸಜ್ಜೆರೊಟ್ಟಿ, ಮೆಂತೆಪಲ್ಲೆ ಬೆಳ್ಳೊಳ್ಳಿಸಾರ ಅವತ್ತಿನ ಕಾಲದಲ್ಲಿದ್ದ ತಿಂಡಿಯ ರುಚಿ ಇವತ್ತಿಗೆ ಯಾಕೆ ಇಲ್ಲ, ಇಡ್ಲಿ ವಡಾ ಬೊಂಡಾ ದೋಸೆ ಮುಂತಾದ ಹೆಸರುಗಳಲ್ಲದೆ ಇನ್ನೂ ಅನೇಕ ತರಹದ ತಿಂಡಿತಿನಿಸುಗಳ ಬಗೆಗೆ ಹೇಳಿಕೊಡುತ್ತಾರೆ. ಒಂದೆಡೇ ಹೆಂಡತಿಯೂ ಅಡುಗೆ ಮಾಡಲು ಬಾರದಿದ್ದರೂ ಅಡುಗೆ ತಯಾರಿಸುವ ಪುಸ್ತಕವನ್ನು ನೋಡಿ ಬಟ್ಟಲು ತುಂಬಿ ಸರಕನ್ನು ಹಾಕುವುದರ ಬದಲು ಚಮಚೆ ತುಂಬ ಹಾಕಿ ಬಾಯಿಯ ರುಚಿಗೆ ನಿರ್ಗ್ರಮನ ನೀಡುತ್ತಾರೆ. ಇಲ್ಲಿ ಲೇಖಕರ ಉದ್ದೇಶ ನಿಷ್ಠೆ ಹಿಂದಿನ ಕಾಲಕ್ಕಿಂತ ಇಂದಿನ ಕಾಲದ ಅಡುಗೆ ಹೊಸ ಹೊಸ ಪ್ರಯೋಗಗಳನ್ನು ಎಂದು ಹೇಳುತ್ತಾರೆ.

"ವಾಕಿಂಗನ್ ಇತಿ ಮಿತಿಗಳು"

ವಾಕಿಂಗ್ ಎನ್ನುವುದು ಇವತ್ತಿನ ಕಾಲದಲ್ಲಿ ಪ್ಯಾಶನ್ ಆಗಿದೆ. ಇಂತಹ ವಾಕಿಂಗ್ ಮಾಡುವಾಗ ಕೆಲವು ಇತಿ–ಮಿತಿಗಳು ಅವಶ್ಯಕವೆಂದು ಲೇಖಕರ ಆಶಯವಾದ. ಇನ್ನು ಅವರು ವಾಕಿಂಗ್ ಆರೋಗ್ಯಕ್ಕೆ ಒಳ್ಳೆಯದು ಎಂಬುದರ ವಿರೋಧವಾಗಿ ಆರೋಗ್ಯವಂಥ ಮಾನುಷ್ಯ ವಾಕಿಂಗ್

ಬಗೆಗೆ ತಲೆಕೆಡಿಸಿಕೊಳ್ಳುವುದಿಲ್ಲ ಬಡವರು ದಿನಾಲು ಮೈಮುರಿದು ದುಡಿದು ಬಂದು ಮಲಗಿದರೆ ಮುಗಿಯಿತು ಅವರ ಶ್ರಮ ದ್ಯೂತಕವಾಗಿರುತ್ತದೆ. ಆದರೆ ಪಟ್ಟಣದಲ್ಲಿರುವ ಜನರು ದುಡಿದರೂ ಕೂಡಾ ಅದು ಪ್ಯಾಶನ್ ಕೆಳಗಡೆ ಅವರಿಗೆ ವಾಕಿಂಗ್ ಒಂದು ನೆಪ ಮಾತ್ರವಲ್ಲದೆ, ಬೂಟು, ವಾಕಿಂಗ್ ಶರ್ಟ ಪ್ಯಾಂಟ್ ಧರಿಸಿ ಪ್ಯಾಶನ್ನಿಗಾಗಿ ಕಾಲಹರಣ ಮಾಡುತ್ತಾರೆ ವಾಕಿಂಗ್ ಎನ್ನುವುದು ಕೇವಲ ಶ್ರೀಮಂತ ಹಾಗೂ ಮಧ್ಯಮ ವರ್ಗಕ್ಕೆ ಸೇರಿದ ಜನಕ್ಕೆ ಸೀಮಿತವಾದುದು ಎನ್ನುತ್ತಾರೆ. ವಾಕಿಂಗ್ ಬಗೆಗೆ ಮುಂದೆ ಅವರು ಕೇವಲ ಖರ್ಚಿಗೆ ಅಂಟಿಕೊಂಡಿರುವ ಕೀಟಗಳಿಗೆ ಮಾತ್ರ ಎಂದು ವ್ಯಂಗ ಆಡಿದ್ದಾರೆ. ಮತ್ತೊಮ್ಮೆ ಅವರು ವಾಕಿಂಗ್ ಮಾಡುವುದು ಶುದ್ಧ ಸ್ವಾರ್ಥಿಗಳೆಂದಿದ್ದಾರ. ವಾಕಿಂಗ್ ಎನ್ನುವುದು ವಂಚಕತನದ ಉದಾಹರಣೆ ಎಂದಿದ್ದಾರೆ. ಎಲ್ಲ ರೀತಿಯ ವಸ್ತುಗಳ ಮೇಲೆ ಸರಕಾರ ಟ್ಯಾಕ್ಸ್ ಹಾಕಿದೆ ವಾಕಿಂಗ್ ಹೋಗಿ ಶುದ್ಧಗಾಳಿ ವಾತಾವರಣ ಸೇವಿಸುವ ಜನರಿಗೆ ಕೂಡ ಶುದ್ಧ ವಾಯುವಿನ ಟ್ಯಾಕ್ಸ್ ಸರಕಾರ ಮಾಡಿದರೆ ಒಳ್ಳೆಯದು ಎಂದು ಅಭಿಪ್ರಾಯ ಇವರದ್ದಾಗಿದೆ. ಆದರೆ ತಾವು ಮಾತ್ರ ವಾಕಿಂಗ್ ಹೋಗದೇ ಹಾಸಿಗೆಯಲ್ಲಿದ್ದುಕೊಂಡು ರೇಡಿಯೋ ಮುಂತಾದವುಗಳನ್ನು ಕೇಳುತ್ತಾ ಮಲಗುವುದರಲ್ಲಿಯೇ ಸುಖವಿದೆ ಎನ್ನುತ್ತಾರೆ.

"ಸಾಲಕ್ಕೆ ಭಯಬೇಡ"

ಇದು ಇವತ್ತಿನ ಕಾಲಕ್ಕೆ ನೂರಕ್ಕೆ ನೂರರಷ್ಟು ಅನ್ವಯಿಸುತ್ತದೆ. ಸಾಲ ತೆಗೆದುಕೊಳ್ಳುವವರೇ ಸಾಲ ಕೊಡುವವರಿಗಿಂತ ಹತ್ತು ಪಟ್ಟು ಹೆಚ್ಚಿನವರೆಂದರೆ ತಪ್ಪೇನಿದೆ ? ಎನ್ನುತ್ತಾರೆ. ಅವರು ಸಾಲ ಪುಣ್ಯದ ಕಾರ್ಯ ಸಾಲಗಾರ ತಾನು ಪಡೆದ ಸಾಲದಿಂದ ತನ್ನ ಕೌಟುಂಬಿಕ ಹಾಗೂ ಇನ್ನಿತರ ಕೆಲಸ ಕಾರ್ಯಗಳನ್ನು ಸುಗಮವಾಗಿ ಸಾಗಿಸಬಹುದು. ಆದರೆ ಸಾಲಗಾರರು ಮನೆಯ ಮುಂದೆ ಸಾಲ ಕೇಳುವಾಗ ನಿಮ್ಮ ಸಾಲ ಕೊಟ್ಟು ನಾನು ಸಾಯುತ್ತೇನೆ ಎಂದು ವೀರಾಗಬಹುದು. ದಾನ ಧರ್ಮ ಎಂಬುದು ಪುಣ್ಯದ ಕೆಲಸ ಶ್ರೀಮಂತರು ದಾನ ದತ್ತಿ ನೀಡುವುದರ ಮೂಲಕ ಪುಣ್ಯ ಲಭಿಸುವುದೆಂದು ದಾನದ ರೂಪದಲ್ಲಿ ದವಸ, ದಾನ್ಯ, ಹಣ, ಒಡವೇ ನೀಡುತ್ತಿದ್ದರು ಟಾಮ್ ಗೊರೂರು ರಾಮಸ್ವಾಮಿ ಅಯ್ಯಂಗಾರ ಚಾರ್ಲೆಸ್ ಡಿಕೆನ್ಸ್‌ನ, ಶೇಕ್ಸಪೀಯರ್ ಮುಂತಾದವರ ಉದಾಹರಣೆಗಳ ಮೂಲಕ ಸಾಲದ ಭಯವನ್ನು ಹೋಗಲಾಡಿಸಲು ಈ ಪ್ರಬಂಧ ಉತ್ತಮ ಉದಾಹರಣೆಯಾಗಿದೆ. "ವಿಶ್ವ ಸಾಹಿತ್ಯದಲ್ಲಿ ಸಾಲ ಪಡೆದವರು ಸ್ಥಾನ ಪಡೆದಿದ್ದಾರೆಯೇ ವಿನಃ ಸಾಲ ಕೊಟ್ಟವರಲ್ಲ ಹೀಗಾಗಿ ಸಾಲಗಾರರೇ ಸಾವುಕಾರರಿಗಿಂತ ನೂರು ಪಟ್ಟು ಶ್ರೇಷ್ಠರೆನ್ನುವುದು ಸ್ಪಷ್ಟವಾಗುತ್ತದೆ". [೧] ಕೊನೆಯಲ್ಲಿ ಅವರು ನಾವು ಜೀವನದಲ್ಲಿ ಸುಖ ಬಯಸುವುದಾದರೆ ನಿಮಗೆ ಯಶಸ್ಸಿನ ಹಂಬಲವಿದ್ದರೆ ಸಾಲ ಮಾಡಿರಿ ಭಯಪಡಬೇಡಿರಿ ಎಂಬ ಮಾತಿನಲ್ಲಿ ಶ್ರೀಮಂತರ ಕೊಳೆತ ನಾರುವ ಹಣವನ್ನು ಕಿತ್ತಿಕೊಳ್ಳಿರಿ. ಎಂದು ಹೇಳುವಲ್ಲಿ ವಿಡಂಬನೆಯಿದೆ ಎಂದೆನಿಸುತ್ತಿದೆ ಹಾಗೆಂದ ಮಾತ್ರಕ್ಕೆ ಬೇಕಾಗಿಲ್ಲವೆಂದರೂ ಸಾಲ ಪಡೆಯುವುದೆಂದರ್ಥವಲ್ಲ. ಬಡವರು, ನಿರ್ಗತಿಕರು, ಮೈಮುರಿದು ದುಡಿದರೂ ಒಂದಪಟ್ಟು ಗಂಜಿಯಿಲ್ಲದೆ ಬದುಕುತ್ತಿದ್ದಾರೆ ಇಲ್ಲಿ ಜೀವನದ ಪಾಠವನ್ನು ಬಹು ಸುಲಭವಾದ ಮಾರ್ಗದ ಮೂಲಕ ಹೇಳಲು ಬಯಸುವರು.

---

೧. ಪ್ರೊ. ವೀರೇಂದ್ರ ಸಿಂಪಿ 'ಲಲಿತ ಪ್ರಬಂಧಗಳು' ಪುಟ-೨೮-೨೦೦೦

"ಅಳಿಯನ ದೃಷ್ಟಿಯಲ್ಲಿ"

ಅಳಿಯ ಮನೆಯ ತೊಳಿಯ ಎಂಬ ಅನುಬಂಧ ಮಾತು ಮನೆಯಲ್ಲಿ ಅಳಿಯ ಇರಬಾರದು ಜಂತಿಯಲ್ಲಿ ಹಾವು ಇರಬಾರದು ಎನ್ನುವ ಮಾತು ಯಾವ ಅಳಿಯನಿಗಾದರೂ ಕೋಪ ತರುವ ಮಾತಾಗಿದೆ. ಅಲ್ಲದೆ ಮತ್ತೊಂದು ಸಮಾದಾನವೆಂದರೆ ಮದುವೆಯ ವಿಷಯದಲ್ಲಿ ಪಾದ ತೊಳೆಯಬೇಕಾಗುತ್ತದೆ. ಎನ್ನುವುದು. ಅಂದರೆ ಅಳಿಯನ ಪ್ರಖ್ಯಾತಿಯನ್ನು ತಿಳಿಯಪಡಿಸಲಟ್ಟಿಸುವರು ಕನ್ಯಾನ್ವೇಷಣೆ ಒಂದು ದುಸ್ತರ ಕಾರ್ಯವೆ ಅಹುದು ಅಂತು ಒಲವಿನ ಚೆಲುವೆ. ಚಲುವಿನ ಚೆಲುಮೆಯಾದ ಮಡದಿಯ ಹುಡುಕಾಟಕ್ಕೆ ಕೊನೆ ಪರಿದೆ ಬಿತ್ತು ಅವಳು ಇಹಪರಗಳ ಮೇಲೆಲ್ಲ ತನ್ನ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿದ ಸಾರ್ವಭೌಮ. ನನ್ನ ಕಾಂಟ್ರ್ಯಾಕ್ಟರ್ ಮಾವ ನನಗೆ ಹೆಣ್ಣು ಕೊಟ್ಟಾಗ ಸಾಕ್ಷಾತ್ ಲಕ್ಷ್ಮಿಪತಿಯಾಗಿ ಕಂಡಿದ್ದ. ಅತ್ತೆ ಮಾವರಲ್ಲಿ ಭಯ ಭಕ್ತಿ ಇದ್ದಂತ ತಾಯ್ತಂದೆಗಳ ನೆನಮು ಹಾರಿ ಹೋಗಿ ಆ ಸ್ಥಾನದಲ್ಲಿ ಹೆಣ್ಣು ಕೊಟ್ಟು. ಅತ್ತೆ ಮಾವಂದಿರು ಆಕ್ರಮಿಸಿ ಬಿಟ್ಟರು. ಪದೇ ಪದೇ ಮಾವನ ಮನೆಯ ಕಡೆಯಿಂದ ನಿರೀಕ್ಷೆಯನ್ನು ಮಾಡುತ್ತ ಸಣ್ಣ ಪುಟ್ಟ ವಿಷಯವನ್ನು ನಿರಸ ಹುಟ್ಟುವುದನ್ನು ಬಹು ಮನೋಮೋಹಕವಾಗಿ ವರ್ಣಿಸಿದ್ದಾರೆ. ಆದರೆ ಅತ್ತಿಯ ಪ್ರೀತಿಯಲ್ಲಿ ಕಡಿಮೆ ಎನ್ನುವುದು ಕಾಣಲಿಲ್ಲ ತನ್ನ ಮಡದಿ ಭಾವ ಮೈದುನ ನಾದಿನಿಯರ ಮೇಲೆ ಇಟ್ಟು ಪ್ರೀತಿ ಅಗಾಧವಾದುದು ನಾದನಿಯ ಕಟಲೆಗಳು ಒಂದು ಕಡೆ ಮನಸ್ಸಿಗೆ ರಾಜನೆಯನ್ನು ಉಂಟು ಮಾಡಿದರೆ ಇನ್ನೊಂದು ಕಡೆ ಮುಖ ಬಾಡುವ ಪರಿಸ್ಥಿತಿ ಉಂಟಾಗುತ್ತಿತ್ತು. ಪತಿ–ಪತ್ನಿಯರ ಪ್ರೇಮಕ್ಕೆ ಸರಸ ಸಲ್ಲಾಪಗಳಿಗೆ ಹುಸಿಮಾತು ಪಿಸುಮಾತುಗಳಿಗೂ ಅಡ್ಡಗೋಡೆಯಾಗಿ ನಿಂತಿರುವ ನಾದಿನಿಯ ಚಿತ್ರಣ ರಾಜನೀಯವಾದುದು. ಹೀಗೆ ಹಲವು ಚೇಷ್ಟೆಗಳಲ್ಲಿ ಯಾವಾಗಲೂ ತೊಡಗಿಕೊಂಡಿರುವ ಎಲ್ಲಿ ಇದ್ದಿಯೇ? ಎಂದು ಕೇಳಿದರೆ ನಾನು ಇಲ್ಲೇ ಇದೀನಿ ಎಂದು ಹೇಳುವ ನಾದಿನಿಯನ್ನು ನಾನು ಮರೆಯುವುದಾದರು ಹೇಗೆ? ಅಳಿಯನ ದೃಷ್ಟಿಯಲ್ಲಿ ಪ್ರತಿಯೊಂದು ಪಾತ್ರ ಚಿತ್ರಣ ಬಹು ವಿಪರ್ಯಾಸವಾಗಿ ಕಾಣುವವು.

"ಉಪದೇಶಗಳು"

ಉಪದೇಶ ಎನ್ನುವುದು ಒಬ್ಬರಿಂದ ಒಬ್ಬರ ಒಳ್ಳೆಯದೇ ಆಗಿರಬಹುದು ಅಥವಾ ಕೆಟ್ಟದ್ದು ಆಗಿರಬಹುದು ಆದರೆ ಉಪದೇಶ ಬಹಳ ಒಳ್ಳೆಯದೇ ಆಗಿರುತ್ತದೆ. ಇದು ಔದಾರ್ಯದ ಸಂಕೇತ ಇದು ಒಬ್ಬರಿಗೆ ಹಿತವೇನಿಸಿದರೆ ಇನ್ನೊಬ್ಬರಿಗೆ ಕಹಿ ಎನಿಸುತ್ತದೆ. ಒಂದು ವೇಳೆ ಉಪದೇಶ ಹೇಳಲು ಹೊರಟರೆ ಮೊದಲು ನಿನ್ನದು ನೋಡಿಕೋ ಆಮೇಲೆ ಇತರರಿಗೆ ಹೇಳು ಎಂಬ ವ್ಯಂಗ ಕಂಡು ಬರುವುದು ಸಹಜಕ್ರಿಯೆ. ಕೆಲವರಂತೂ ಉಪದೇಶ ಮಾಡು ಬಿಡು ಸುಮ್ಮನೆ ತಲೆ ಹಾಕುವವರಿದ್ದಾರೆ. ಲೇಖಕರು ಉಪದೇಶಗಳಲ್ಲಿ ಎರಡು ವರ್ಗಗಳನ್ನು ಗುರುತಿಸುತ್ತಾರೆ. ಕೆಲವರು ಉಪದೇಶ ಕಾರಣರಾದರೆ ಇನ್ನುಳಿದವರು ಉಪದೇಶ ಕೇಳುವವರು, ಈ ಜಗತ್ತು ಹುಟ್ಟನಿಂದ ಜನ ಉಪದೇಶ ಮಾಡುತ್ತಲೇ ಬಂದಿದ್ದಾರೆ ಎಂದು ಹೇಳಿದ್ದಾರೆ. ಒಂದೊಂದು ಸಲ ಕೇವಲ ಸಭೆ ಸಮಾರಂಭಗಳಲ್ಲಾಗಲೀ ಶಿಕ್ಷಕರು ಪಾಠ ಮಾಡುವ ಸಂದರ್ಭದಲ್ಲಾಗಲೀ ಇನ್ನ್ಯಾವ ಸಂದರ್ಭದಲ್ಲಾಗಲೀ ಉಪದೇಶಗಳು ಏನು ಅನ್ನಿಸದಿದ್ದಾರೂ ಕೇಳುಗರ ಮನಸ್ಸನ್ನು ಮುಟ್ಟುತ್ತಿರುತ್ತವೆ. ಉಪದೇಶ ಮಾಡುವ ಹಕ್ಕು

ಗುರುಗಳೆನಿಸಿಕೊಳ್ಳುವವರಿಗೆ ಮಾತ್ರ ಸಂಪೂರ್ಣವಾದ ಹಕ್ಕಿದೆ ಎನ್ನುತ್ತಾರೆ. ಶಾಸ್ತ್ರಗಳು, ಪುರಾಣಗಳು. ವೇದಗಳು ಉಪದೇಶ ಮಾಡುವಲ್ಲಿ ಎತ್ತಿದ ಕೈ ಕೇವಲ ಇವುಗಳಿಂದ ಜನರ ಮನಸ್ಸನ್ನು ಬದಲಾಗುವುದಾದರೆ ಈಗಿನ ರಾಜಕಾರಣಿಗಳು ನಮ್ಮ ದೇಶ ಅಭಿವೃದ್ಧಿ ಹೊಂದಿದ ರಾಷ್ಟ್ರ ಜಾತ್ಯಾತೀತ ರಾಷ್ಟ್ರ ಎಂದು ಬೊಬ್ಬೆ ಹೊಡೆಯುತ್ತಿದ್ದಾರಲ್ಲ ಇದು ಬೇಕಾಗಿರಲಿಲ್ಲ ಗುರುಗಳು, ದೇಶಭಕ್ತರು, ಹಿರಿಯರು ಇವರ ಸಾಲಿನಲ್ಲಿ ಸುಪ್ರಸಿದ್ಧ ಭಾಷಣಕಾರರೂ ಉಪದೇಶದ ಮಾತಿನ ಮಂಟಪ ಕಟ್ಟುತ್ತಲೆ ಹೋಗುತ್ತಾರೆ. ಇದನ್ನು ತಾವು ಅನುಸರಿಸಿದ್ದಾರೆಯೇ ? ಎಂಬ ಮಾತು ಹಾಗೆ ಉಳಿಯುತ್ತದೆ. ಏನು ಇರಲಿ ಲೇಖಕರು ಮಾತಿನಿಂದ ತತ್ವ ಸೋರಿ ಹೋಗಿ ಕೇವಲ ಆಡಂಬರ ಉಳಿದು ಬಿಟ್ಟರೆ, ಅಂತೆಯೇ ಉಪದೇಶ ಎಂದು ಮುಖ ಬೆಲೆಯನ್ನೇ ಕಳೆದುಕೊಂಡು ಬಿಟ್ಟಿದೆ ಎನ್ನುತ್ತಾರೆ. ಆದ್ದರಿಂದ ಉಪದೇಶಕ್ಕೂ ಉಪದೇಶಕರಿಗೂ ದೊಡ್ಡ ನಮನವನ್ನು ಸಲ್ಲಿಸಲಾಗಿದೆ.

"ಕ್ಷಾರಿಕೋಪಾಖ್ಯಾನ"

ಬಾಲ್ಯದ ದಿನಗಳಲ್ಲಿ ಕ್ಟಟಿಂಗ್ ಮಾಡಿಸಿಕೊಳ್ಳುವ ನೆನೆಪು ಮರುಕಳಿಸಿದ್ದಾರೆ. ಇಲ್ಲಿ ಕಟಿಂಗ್ ಮತ್ತು ಕ್ಷಾರ ಮಾಡುವ ಅಣ್ಣಪ್ಪ ಇಡೀ ಊರಿನ ಜನರ ಕಟಿಂಗ್ ಮಾಡುತ್ತಿದ್ದನು. ಆ ಊರಿನಲ್ಲಿ ಬೇರೆ ಯಾರಿಲ್ಲವೆಂದಲ್ಲ ಇದ್ದರು ಆದರೆ ಅಣ್ಣಪ್ಪನು ಮೆಚ್ಚುಗೆಯಾಗಿದ್ದನು. ಲೇಖಕರು ತಾನು ತಮ್ಮ ತಂದೆ ಮತ್ತು ಊರ ಜನರ ಕಟಿಂಗ್ ನೆನೆಪಿನ ದಿನಗಳನ್ನು ಸ್ಮರಿಸಿದ್ದಾರೆ. ನಮ್ಮ ತಂದೆ ಮಾಸ್ತರ ಆದರೂ ಅಣ್ಣಪ್ಪನಿದ್ದಲ್ಲಿಗೆ ಹೋಗಿ ಕರೆದುಕೊಂಡು ಬರುತ್ತಿದ್ದ ಇವತ್ತು ಅಣ್ಣಪ್ಪನು ಮತ್ತು ನಮ್ಮ ತಂದೆಯೂ ವೃರೆಯಾಗಿದ್ದಾರೆ. ಆ ನೆನಪುಗಳು ಮರುಕಳಿಸುತ್ತವೆಂದಿದ್ದರೆ.

"ಜೀವನದಲ್ಲಿ ಹಾಸ್ಯ"

ಜೀವನದಲ್ಲಿ ಸುಖ–ದುಃಖ ಒಂದು ನಾಣ್ಯದ ಎರಡು ಮುಖಗಳು, ಇವುಗಳ ಜೊತೆಗೆನೆ ಹಾಸ್ಯ ಪ್ರಜ್ಞೆಯೂ ಒಂದಾಗಿದೆ. ಮನುಷ್ಯನ ನಗು ಎಷ್ಟಿರುತ್ತದೆಯೋ ಅಷ್ಟು ವರ್ಷ ಬಾಳುತ್ತೆನೆಂಬ ನಂಬಿಕೆ, ಅದು ಸತ್ಯ, ಇದರಲ್ಲಿ ಅಂದರೆ ಹಾಸ್ಯ ಹಲವು ವಿಧಗಳಲ್ಲಿ ಕಂಡುಬರುತ್ತದೆ. ಒಂದೆಡೆ ವ್ಯಂಗ, ಇನ್ನೊಂದೆಡೆ ವಾಚಾರ್ಥ ಮತ್ತೊಂದೆಡೆ ಮನುಷ್ಯನ ಪರಿಜ್ಞಾನಕ್ಕಾಗಿ ಎಂಬುದನ್ನು ತಿಳಿಸಿದ್ದಾರೆ ಮನುಷ್ಯ ನಗುವುದು ಒಂದು ಸಮಯ ಇರುತ್ತದೆ. ಸುಮ್ಮ ಸುಮ್ಮನೆ ನಕ್ಕರೆ ಹುಚ್ಚ ಎಂದು ಕರೆಸಿಕೊಳ್ಳಬೇಕಾಗುತ್ತದೆ. ಪಟ್ಟಣದಲ್ಲಿ ಇರುವ ಜನರು ಹಳ್ಳಿಯ ಜನರನ್ನು ಕಂಡು ನಗುವುದು ಒಂದು ಹಾಸ್ಯ ಕಂಡು ಬರುತ್ತದೆ. ಹಾಸ್ಯ ಎನ್ನುವುದು ಯಾವ ಸಂದರ್ಭದಲ್ಲಿ ಎಂಥ ಹಾಸ್ಯ ಇರುತ್ತದೆಂಬುದನ್ನು ಲೇಖಕರ ಮಾತಿನಲ್ಲಿ ಗಮನಿಸೋಣ ಬಾಳೆ ಹಣ್ಣಿನ ಸಿಪ್ಪೆ ಒಗೆದು ದಪ್ಪನೇ ಮನುಷ್ಯ ಬಿದ್ದರೆ ನಗುವ ಹಾಸ್ಯ ಅನಾಗರಿಕ ಹಾಸ್ಯ ಎಂದಿದ್ದಾರೆ.

"ಇಳಿ ಹೋತ್ತಿನ ತಿರುಗಾಟ"

ಲೇಖಕರು ಇಳಿವಯಸ್ಸಿನ ಅನುಭವದ ಒಂದೆಡೆಯಾದರೆ, ರಾತ್ರಿಯ ಮುಂಚೆ ಅಂದರೆ ಇಳಿ ಹೊತ್ತಿನ ತಿರುಗಾಟದಲ್ಲಿ ತಾವು ಕಂಡ ನಾನಾ ಅನುಭವಗಳನ್ನು ತಿಳಿಸಿದ್ದಾರೆ. ಪೇಪರು ಓದುವುದು ಒಂದು ಹವ್ಯಾಸ ಅವನದು ಆ ಪೇಪರಿನಲ್ಲಿ ಸಾವು ನೋವು ಸಂತೋಷ ರಾಜಕೀಯ ಮುಂತಾದವುಗಳು

ನಿನ್ನ ಓದಿದ್ದೆನೆಲ್ಲಾ ಏನಿಸುತ್ತಿದ್ದರೂ ಅವು ಆ ದಿನದ ಕಾರಣಗಳಾಗಿರುತ್ತವೆ. ಮುಂದೆ ಹೋದಂತೆಲ್ಲಾ ತಾವು ಮೇಷ್ಟ್ರು ಆಗಿದ್ದರಿಂದ ಅವರ ಕೈಯಲ್ಲಿ ಓದಿದ ವಿದ್ಯಾರ್ಥಿಗಳ ಕೆಲವು ಮಾತುಗಳಿಗೆ ಕೊಡುವ ಉತ್ತರ ವ್ಯಂಗಾರ್ಥವಾಗಿದೆ. ಇನ್ನೊಂದೆಡೆ ಸೈಕಲ್ ಸವಾರಿ ಅವರಿಗೆ ಡಿಕ್ಕಿ ಹೊಡೆದು ಮತ್ತೇ ಅವರನ್ನೇ ಸೈಕಲ್ ಸವಾರಿ ಬೈಯುವ ರೀತಿ ಈ ರೀತಿಯಾಗಿ ಇಳಿ ಹೊತ್ತು ಮುಳುಗುತ್ತಿದ್ದಂತೆಯೇ ತಿರುಗಾಟದಲ್ಲಿ ಅನೇಕ ರೀತಿಯ ಅನುಭವಗಳು ಆಗುತ್ತವೆ. ಸಂಜೆಯಾದಂತೆಯೇ ಹೆಂಡ್ತಿಯ ಕಾಟ ಒಂದೆಡೆ ಸ್ವಾಗತ ಕಂಡು ಆಶ್ಚರ್ಯರಾಗುತ್ತಾರೆ. ಮತ್ತ ದಿನ ಉರುಳುತ್ತಿದೆ ಮರುದಿನ ಯಥಾ ಪ್ರಕಾರ ಇಳಿ ಹೊತ್ತಿನ ತಿರುಗಾಟ ಸುರುವಾಗುತ್ತದೆ. ಇಲ್ಲ ಒಂದು ದಿನದ ಅನುಭವಗಳನ್ನು ತಿಳಿಸಿದ್ದಾರೆ.

"ನಿವೃತ್ತಿಯ ಆಚೆ ಈಚೆ"

ಲೇಖಕರು ಪ್ರಾಧ್ಯಾಪಕನಾಗಿ ನಿವೃತ್ತಿ ಹೊಂದಿ ಈ ಪ್ರಬಂಧ ರಚಿಸುವ ಅವಧಿಗೆ ೬ ವರ್ಷಗಳಾಗಿದ್ದವು ಜನ ಇವರನ್ನು ಮೆಚ್ಚಿದ್ದರಿಂದ ಕೆಲವು ಜನರು ಸರ್ ತಮಗೆ ಏಷ್ಟು ವರ್ಷ ಏಂದಾಗ ೬೦ ವರ್ಷ ಏಂದು ಹೇಳಿ ಬಿಡುತ್ತಿದ್ದರು ಆದರೆ ಇನ್ನು ಕೆಲವರು ಸರ್ ತಮಗೆ ವರ್ಷವಾಗಿಲ್ಲ ಈಗ ೫೦ ವರ್ಷದವರಾಗಿ ಕಾಣಿಸುತ್ತಿರಿ ಏಂದಾಗ ಅವರು ನನಗೆ ಸರಕಾರ ಅನ್ಯಾಯ ಮಾಡಿದೆ ಏಂದು ನಗೆಚಾಟಿ ಮಾಡುತ್ತಾರೆ. ಅದೇನೆ ಇರಲಿ ತಮ್ಮ ನಿವೃತ್ತಿಯ ಮತ್ತು ತಮ್ಮ ವ್ಯಕ್ತಿತ್ವಕ್ಕೆ ಇನ್ನು ನಿವೃತ್ತಿಯಾಗಿಲ್ಲ. ಏಂದು ಹೇಳಬಹುದು.

"ಆಯ್ದ ಲಲಿತ ಪ್ರಬಂಧಗಳು"

ಇದು ಪ್ರೊ. ವೀರೇಂದ್ರ ಸಿಂಪಿ ಆರನೇ ಲಲಿತ ಪ್ರಬಂಧಗಳ ಸಂಕಲನವಾಗಿದೆ. ಈ ಲಲಿತ ಪ್ರಬಂಧದಲ್ಲಿ

ಕಾಗದದ ಚೂರು

ಭಾವಮೈದುನ

ಸ್ವಚ್ಛಂದ ಮನದ ಸುಳಿದಾಟ

ಪರಿಸರ ಸ್ಪಂದನ

ಈ ಎಲ್ಲಾ ಲಲಿತ ಪ್ರಬಂಧಗಳ ಸಂಕಲನಗಳಿಂದ ತೆಗೆದುಕೊಂಡ ಆಯ್ದ ಲಲಿತ ಪ್ರಬಂಧಗಳು ಈ ಪ್ರಸಕ್ತವಾಗಿದೆ. ಇದನ್ನು ಸುವರ್ಣ ಸ್ವಾತಂತ್ರೋತ್ಸವ ಮಾಲಿಕೆ ಕರ್ನಾಟಕ ಸರ್ಕಾರದ ಸಹಾಯಧನದಿಂದ ಪ್ರಕಟಿಸಲಾಯಿತು. ೨೦೦೨ ರಲ್ಲಿ ಇದರ ಪ್ರಥಮ ಮುದ್ರಣವನ್ನು ಮಾಡಲಾಯಿತು. ಆಯ್ದ ಲಲಿತ ಪ್ರಬಂಧಗಳ ವಿಶ್ಲೇಷಣೆಯನ್ನು ನಾವು ಈ ಹಿಂದೆ ಬರುವ ಪ್ರಬಂಧದಲ್ಲಿ ನೋಡಲಾಗಿದೆ. ಒಟ್ಟು ೩೮ ಲಲಿತ ಪ್ರಬಂಧಗಳ ಸಂಕಲನವನ್ನು ನಾವು ಇಲ್ಲಿ ಕಾಣುತ್ತೇವೆ.

ಹತ್ತು ಹಲವು ಬಗೆಯಲ್ಲಿ ಬೆಳೆದು ಬಂದಿರುವ ಪ್ರೊ. ವ್ಹಿಸಿ. ಅವರು ಆಧುನಿಕ ಕನ್ನಡ ಸಾಹಿತ್ಯದ ಕಾಲಘಟ್ಟದಲ್ಲಿ ಮಹತ್ವದ ಪ್ರಬಂಧಕಾರ ಸ್ವ-ಪ್ರಯತ್ನ ನಿರಂತರವಾದ ಸಾಧನೆಯಿಂದ ಶಾಶ್ವತದಷ್ಟೇ ಕೃತಿಗಳನ್ನು ನೀಡುತ್ತ ಬಂದಿರುವರು. ಸ್ವತಃ ಪ್ರಬಂಧಕಾರರಾದ ಸಿಂಪಿ ಅವರು ಕನ್ನಡದಲ್ಲಿ ಲಲಿತ ಪ್ರಬಂಧಗಳು ಬೆಳೆದು ಬಂದ ರೀತಿಯನ್ನು ಕನ್ನಡದಲ್ಲಿ ಲಲಿತ ಪ್ರಬಂಧಗಳ ಪುಸ್ತಕದಲ್ಲಿ

ಸಮೀಕ್ಷಿಸಿದ್ದಾರೆ. ಆತ್ಮ ವೃತ್ತದ ಏಳೆಗೂಡನೆ ಸಾಮಾಜಿಕ ಚಿಂತನೆಯೂ ಇವರ ಪ್ರಬಂಧಗಳಲ್ಲಿ ಒಡಮೂಡಿದೆಯೆಂದು ಪ್ರೊ. ವ್ಹಿ.ಕೃ ಗೋಕಾಕರು ಗುರುತಿಸಿದ್ದಾರೆ. ಬದುಕಿನ ಸೂಕ್ಷ್ಮ ಅವಲೋಕನ ಇವರ ಪ್ರಬಂಧಗಳ ಹೂರಣವಾಗಿದೆ.

ವಚನ ಸಾಹಿತ್ಯ

ಕನ್ನಡ ನಾಡಿನ ಇತಿಹಾಸದಲ್ಲಿ ಹಲವಾರು ಮಹಾಪುರುಷರು ಜನಿಸಿ ಧರ್ಮದ ಒರತೆ ನಿರಂತರವಾಗಿ ಪ್ರವಹಿಸಲು ಕಾರಣರಾಗಿದ್ದಾರೆ. ಅಂತಹವರು ೧೨ ನೇ ಶತಮಾನದಲ್ಲಿ ಬಾಳಿ ಬೆಳಗಿದ ಬಸವಾದಿ ಶಿವಶರಣರು ಕ್ರಾಂತಿಕಾರಿಗಳೆಂದು ಖ್ಯಾತರಾಗಿದ್ದಾರೆ. ಅಂದು ಜಿಡ್ಡುಗಟ್ಟಿದ ಅರ್ಥಹೀನ ಸಂಪ್ರದಾಯಗಳನ್ನು ಅವರು ಧೈರ್ಯದಿಂದ ಪ್ರತಿಭಟಿಸಿ ಸಮಾಜದಲ್ಲಿ ಹೊಸ ಮೌಲ್ಯಗಳನ್ನು ಪಸರಿಸಲು ಹೋರಾಡಿದರು. ಅವರು ಇಟ್ಟ ದಿಟ್ಟ ಹೆಜ್ಜೆ ನಮಗೆ ಇಂದಿಗೂ ಆದರ್ಶಪ್ರಾಯವಾದುದಾಗಿದೆ. ಜಾತಿ–ಭೇದ ಸ್ತ್ರೀ ಪುರುಷ ಬೇಧ ಅಂಧಶ್ರದ್ಧೆ ಕರ್ಮಠತನದ ಪುರೋಹಿತ ಪದ್ಧತಿ ಮುಂತಾದವುಗಳನ್ನು ಕಿತ್ತೊಗೆಯಲು ಶ್ರಮಿಸಿದರು. ಸಮಾನತೆಯ ಮೇಲೆ ಸರ್ವಾಂಗ ಸುಂದರವಾದ ಸಮಾಜವನ್ನು ಕಟ್ಟಲು ಯತ್ನಿಸಿದರು ವಿಶ್ವಮಾನ್ಯವೆನಿಸುವ ಕಾಯಕತ್ವವನ್ನು ನೀಡಿದರು ಇಂತಹ ಶರಣರ ಮಹಿಮೆ ವ್ಯಕಿತ್ವ ತತ್ವಗಳನ್ನು ಸಾಮನ್ಯ ಜನತೆಗೆ ತಿಳಿಸುವ ಉದ್ದೇಶದಿಂದ ಪ್ರೊ. ವೀರೇಂದ್ರ ಸಿಂಪಿ ಅವರು ಆಯ್ದಕ್ಕಿ ಮಾರಯ್ಯ ಚನ್ನಬಸವಣ್ಣ ಎಂಬ ಶಿವಶರಣರ ಚರಿತ್ರೆಯನ್ನು ಜನಸಾಮಾನ್ಯರಿಗೆ ಈ ಮೂಲಕ ದರ್ಶಿಸಿದ್ದಾರೆ.

ವೀರಶೈವ ಧರ್ಮಕ್ಕೆ ಸ್ವತಂತ್ರ ವ್ಯಕ್ತಿತ್ವ ಬಂದುದು ಗೌರವಾನ್ವಿತ ಸ್ಥಾನ ಲಭಿಸಿದುದು ಬಸವಯುಗಲ್ಲಿಯೇ. ಮಹಮಾನ್ವಿತ ವ್ಯಕ್ತಿಗಳ ಜೀವಿತ ಕಾರ್ಯಗಳಿಂದ ಆವ್ರತವಾದ ಬೆಳೆಯನ್ನು ಕೊಟ್ಟಂಥದ್ದು ಇದು ವಿಶ್ವಮಾನ್ಯವೆನ್ನಿಸುವ ಶರಣರ ಸಂದೇಶ, ತತ್ವಗಳನ್ನು ನೀಡಿ ಕೃತಕೃತ್ಯವಾಯಿತು. ಇದರ ಬಳಕೆ ವೀರಶೈವ ಸಾಹಿತ್ಯದ ತುಂಬೆಲ್ಲಾ ಹರಡಿತು. ವಚನ ಸಾಹಿತ್ಯದಲ್ಲಿ ಬಾಳು ಬೆಳಗಿದ ಶರಣರ ಮಹಮಾನ್ವಿತ ವ್ಯಕ್ತಿಗಳ ಸಂಪ್ರದಾಯ ನಿರ್ಮಿಸುವಂತಹ ಪದ್ದತಿ ಮುಂದೆ ಬೆಳೆದು ಬಂದಿತು ಇಂತಹ ಸಂಪ್ರದಾಯದ ಕೃಷಿ ಮಾಡಿದವರಲ್ಲಿ ವೀರೇಂದ್ರ ಸಿಂಪಿ ಅವರು ಒಬ್ಬರು.

ಕರ್ನಾಟಕದ ಇತಿಹಾಸದ ಚರಿತ್ರೆಯಲ್ಲಿ ವಿಶಿಷ್ಟ ಮಹತ್ವ ಪಡೆದ ಬಸವ ಯುಗವು ಹತ್ತನೆ ಶತಮಾನದ ಸುವರ್ಣಯುಗ ಮುಗಿದು ಮೋಸ ವಂಚನೆ ಕಪಟತನದ ಅಜ್ಞಾನಗಳು ತಲೆದೋರಿ ಸಾಮಾಜಿಕ ಜೀವನವನ್ನು ಅಸ್ತವ್ಯಸ್ತಗೊಳಿಸಿದ ಕಾಲ ಈ ಕಾಲದಲ್ಲಿ ಶಿವಶರಣರು ನಡೆಸಿದ ಚಳುವಳಿಯಿಂದಾಗಿ ಅದು ಅನ್ವೇಷಣೆಯ ಯುಗವೆಂದು ಸುಂದರ ಸಮನ್ವಯದ ಯುಗವೆಂದು ವ್ಯವಸ್ಥೆಯನ್ನು ಪುನರಚೆಸಿದ ಕಾಲವೆಂದು ಹೆಸರಾಗಿದೆ. ಸಂಶೋಧಕರಿಗೆ ವಿಪುಲವಾದ ಸಾಮಗ್ರಿ ಒದಗಿಸುವಂತಿರುವ ಈ ಯುಗ ಅನೇಕ ವಿಷಯಗಳಲ್ಲಿ ಇನ್ನೂ ಒಗಟಾಗಿಯೇ ಉಳಿದಿದೆ. ವಚನಗಳನ್ನು ಶರಣರು ಸ್ವತಃ ರಚಿಸಿದುದರಿಂದ ಅವುಗಳ ಮುಂಖಾತರ ಅವರ ವ್ಯಕ್ತಿತ್ವವನ್ನು ಕಂಡು ಕೊಳ್ಳಲು ಮೂಲ ಸಾಮಗ್ರಿ ದೊರಕಿದಂತಾಗಿದೆ. ಅಲ್ಲದೆ ಕಾವ್ಯಗಳಿಂದ ಶಾಸನಗಳಿಂದ ಪವಾಡದ ಪ್ರಭೆಯನ್ನು ಒದಗಿಸಿ ಚರಿತ್ರೆಯ ಎಳೆಗಳನ್ನು ಗುರುತಿಸಿಕೊಳ್ಳಬಹುದಾಗಿದೆ. ಈ ಕೆಲಸವನ್ನು ಪೂಜ್ಯ ಫ.ಗು. ಹಳಕಟ್ಟಿ ಉತ್ತಂಗಿ ಚನ್ನಪ್ಪ ಹರ್ಡೇಕರ ಮಂಜಪ್ಪ ಮುಂತಾದವರು ಬಹು ಪ್ರಯಾಸದಿಂದ ಮಾಡಿದ್ದಾರೆ.

ಶರಣರ ಚರಿತ್ರೆಗಳನ್ನೊದಿದಾಗ ಅವರ ಯೋಚನೆ ಯೋಜನೆ ಸಾಧನೆ ಸಿದ್ದಿಗಳನ್ನು ಗಮನಿಸಿದಾಗ ಅವರ ನಿರಂತರ ವಿಚಾರ ವಿನಿಮಯ ಪದ್ದತಿಯನ್ನು ಅರಿತಾಗ ವಿಸ್ಮಯವಾಗುತ್ತಿದೆ.

ಅವರು ವೈಚಾರಿಕತೆಯನ್ನು ಬೆಳೆಸಿದರು ಕಾಯಕವನ್ನು ಅವಲಂಬಿಸಿದರು ದಾಸೋಹ ಭಾವನೆಯನ್ನು ಬೆಳೆಯಿಸಿದರು ಆಧ್ಯಾತ್ಮಿಕವಾಗಿ ಶಿವಯೋಗ ಶಿವನಿಷ್ಠೆಗಳಿಂದ ಅಲೌಕಿಕ ಸಾಮರ್ಥ್ಯವನ್ನು ಪಡೆದಂತೆ ಪ್ರಾಮಾಣಿಕತೆ, ಸತ್ಯ, ನೀತಿ, ಅಹಿಂಸೆ, ಮಾನವೀಯತೆಗಳಿಂದ ಅಪಾರ ನೈತಿಕ ಧೈರ್ಯವನ್ನು ಆತ್ಮ ವಿಶ್ವಾಸವನ್ನು ಪಡೆದರು ಇದರಿಂದಾಗಿ ಅವರು ಅಂದಿನ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಂಗಗಳಲ್ಲಿನ ಹಲವಾರು ಜಟಿಲ ಪ್ರಶ್ನೆಗಳನ್ನು ಬಿಡಿಸಲು ಸಾಧ್ಯವಾಯಿತು.

ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣ ಪ್ರತ್ಯಕ್ಷ ಕೈಲಾಸವಾಗಿತ್ತು ಎತ್ತತ್ತ ನೋಡಿದತ್ತ ಬಸವನೆಂಬ ಬಳ್ಳಿ ಹಬ್ಬಿ ಲಿಂಗವೆಂಬ ಗೊಂಚಲು ಕಂಗೊಳಿಸುತ್ತಿತ್ತು "ಕಾಯಕ" ದಾಸೋಹ "ವಚನ ರಚನೆ" ತತ್ವಾರ್ಥ ಚಿಂತನೆ ಶಿವ-ಜೀವಕ್ಯದ ಸಂಬಂಧ ಮುಂತಾದ ಮಾನವೀಯ ಮೌಲ್ಯಗಳು ಪ್ರತಿಯೊಬ್ಬರ ಮನೆ ಮಾತಾಗಿದ್ದವು. ಅನುಭವ ಮಂಟಪ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಕಮ್ಮಟವಾಗಿತ್ತು ಅಸಂಖ್ಯಾತ ಶಿವಶರಣ ಶಿವಶರಣೆಯರು ಸಮಾಜದಲ್ಲಿ ಹಾಸು ಹೊಕ್ಕಾಗಿದ್ದರು ಬಸವಣ್ಣನವರ ನೇತೃತ್ವದಲ್ಲಿ ಒಂದು ಸಮಾನತೆ, ಸ್ವಾತಂತ್ರ್ಯ ಹಾಗೂ ಸಹೋದರತ್ವಗಳ ಆಧಾರದ ಮೇಲೆ ನಿರ್ಮಾಣಗೊಂಡಿತ್ತು. ಆರ್ಥಿಕ ಸಮಾಜಿಕ, ರಾಜಕೀಯ ಸಮಾನತೆಗಳಂತೆ ವ್ಯಕ್ತಿ ಸ್ವಾತಂತ್ರ್ಯ ವಿಚಾರ ಸ್ವಾತಂತ್ರ್ಯ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ವೃತ್ತಿಯ ಆಯ್ಕೆಯ ಸ್ವಾತಂತ್ರ್ಯಗಳನ್ನು ಮೊಟ್ಟ ಮೊದಲನೆಯ ಸಾರೆ ಜನರು ಅನುಭವಿಸಿದರು. ಅದರಂತೆ ಸಮಾಜದ ಎಲ್ಲಾ ವ್ಯಕ್ತಿಗಳೂ ಒಂದೇ ಕುಟುಂಬದ ಸಹೋದರರಂತೆ ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಜೀವಿಸಿದರು.

ನವನಾಗರಿಕತೆಯ ತುಟ್ಟ ತುದಿಗೇರಿರುವ ಮನುಷ್ಯ ನೆಲ ಮೂಲ ಸಂಸ್ಕೃತಿಯ ಬದುಕಿನಿಂದ ತುಂಬಾ ದೂರ ಹೋಗಿ ಒಂಟಿಯಾಗಿದ್ದಾನೆ. ಅದಕ್ಕಾಗಿ ಮತ್ತೆ ಹಿಂದುರುಗಿ ನೋಡುವ ಅನಿವಾರ್ಯತೆ ಉಂಟಾಗುತ್ತದೆ. ಹಿಂದಣ ಹೆಜ್ಜೆಯನರಿತಲ್ಲದೆ ನಿಂದ ಹೆಜ್ಜೆಯನರಿಯಬಾರದು ಎಂಬ ಅಲ್ಲಮನ ಮಾತು ಜಾಗತೀಕರಣದ ಬಲವಾದ ಗಾಳಿ ಬೀಸುತ್ತಿರುವ ಮತ್ತು ಇಡೀ ಜಗತ್ತು ಭಯೋತ್ಪಾದನೆ ಭ್ರಷ್ಟಾಚಾರಗಳಲ್ಲಿ ನಲಗುತ್ತಿರುವ ಇಂದಿನ ಸಂದರ್ಭದಲ್ಲಿ ತುಂಬಾ ಪ್ರಸ್ತುತವಾಗಿದೆ. ವರ್ತಮಾನವೆನ್ನುವುದು ಭೂತ ಭವಿಷ್ಯತ್ತಿನ ಬದುಕಿಗೆ ಬೇಕಾಗುವ ಬೆಳಕಿನ ಕಿರಣವೂ ಆಗಿದೆ. ಆ ಬೆಳಕಿನ ಕಿರಣಗಳ ಮೂಲಕ ನಮ್ಮ ಬದುಕನ್ನು ಕಟ್ಟುವ ಕ್ರಿಯೆ ನೆರವೇರಬೇಕಾಗಿದೆ. ಅಂಥಹ ಆಶವಾದದ ಹಿನ್ನೆಲೆಯಲ್ಲಿ ವಚನ ಸಾಹಿತ್ಯ ಕುರಿತು ಅಧ್ಯಯನ ಪ್ರಸ್ತುತವೆನಿಸಿದೆ.

ಆಯ್ದಕ್ಕಿ ಮಾರಯ್ಯ

ಬಸವಣ್ಣನವರು ಕಟ್ಟಿದ ಆದರ್ಶ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅಭಿರುಚಿ ಯೋಗ್ಯತೆಗಳಿಗೆ ಅನುಸಾರಾವಾಗಿ ವೃತ್ತಿಯನ್ನು ಅನುಸರಿದ್ದರು. ಆಯ್ದಕ್ಕಿ ದಂಪತಿಗಳು ಎಂದರೆ "ಆಯ್ದಕ್ಕಿ ಮಾರಯ್ಯ ಹಾಗೂ ಆತನ ಪತ್ನಿ ಲಕ್ಕಮ್ಮ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲುಕಿನ ಯರಡೋಣಿ ಗ್ರಾಮದವರು. ಮಹಾನ ಶಿವಭಕ್ತರು. ಆ ಗ್ರಾಮದ ಅಮರೇಶ್ವರ ಲಿಂಗದ ಉಪಸಕರಾಗಿದ್ದರು ಬಸವಣ್ಣನವರ ಧರ್ಮ ಜಾಗೃತಿಯ ಸುದ್ದಿ ಕೇಳಿ ಕಲ್ಯಾಣಕ್ಕೆ ಬಂದರು ಶರಣ ಸತಿ ಲಿಂಗ ಪತಿ ಭಾವ ಅವರಲ್ಲಿ ಅಳವಡಿಸುತ್ತದೆ. ಇಲ್ಲಿ ಇಬ್ಬರು ಲಿಂಗಪತಿಯ ಸತಿಯರಾಗುತ್ತಾರೆ. ಆಯ್ದಕ್ಕಿ

ಕಾಯಕದ ಮಾರಯ್ಯ ಮತ್ತು ಲಕ್ಕಮ್ಮ ಎಂಬ ದಂಪತಿಗಳ ಹೆಸರು ಒಟ್ಟೊಟ್ಟಿಗೆ ಬರುತ್ತವೆ. ಇವರು ಕಲ್ಯಾಣದ ಬಸವಣ್ಣನವರ ಕಾಲದಲ್ಲಿ ಇದ್ದರೆಂಬುದಾಗಿ ತಿಳಿದು ಬಂದಿರುವುದರಿಂದ ಇವರ ಕಾಲವನ್ನು ೧೧೬೦ ಎಂದು ಕವಿಚರಿತಕಾರರು ಸರಿಯಾಗಿಯೇ ಊಹಿಸಿದ್ದಾರೆ. ಮಾರಯ್ಯ ಲಕ್ಕಮ್ಮ ವಚನಕಾರರಾಗಿದ್ದು ಅವರ ವಚನಗಳು ಉಪಲಬ್ಧವಾಗಿವೆ." [೧] ಆಯ್ದಕ್ಕಿ ಕಾಯಕದ ಮಾರಯ್ಯನವರ ಬಾಹ್ಯ ಜೀವನದ ಹೆಚ್ಚಿನ ವಿವರಗಳು ಸಿಕ್ಕಿಲ್ಲ ಆಯ್ದಕ್ಕಿ ಮಾರಯ್ಯ ಶರಣರ ಮನೆಯ ಅಂಗಳದಲ್ಲಿ ಚಲ್ಲಿದ ಅಕ್ಕಿಯನ್ನು ಆರಿಸಿ ತರುವ ಅತ್ಯಂತ ಸಾಧಾರಣವೆನಿಸುವ ಕಾಯಕವನ್ನು ನಿಷ್ಠೆಯಿಂದ ಮಾಡುತ್ತದೆ. ಆಯ್ದಕಿ ಮಾರಯ್ಯನವರ ಅಂತರಂಗಿಕ ಜೀವನ ತುಂಬ ಪರಿಮಳಮಯವಾಗಿತ್ತು. ಅವರ ಹಾಗೂ ಅವರ ಪ್ರಗ್ಯಾಂಗನೆ ಲಕ್ಕಮ್ಮನವರ ದಾಂಪತ್ಯವಂತೂ ಅತ್ಯುನ್ನತ ಮಟ್ಟದ್ದಾಗಿತ್ತು ಪತಿ ಭಕ್ತನಾದರೆ, ಪತ್ನಿ ಪರಮಭಕ್ತೆಯಾಗಿದ್ದಳು. ಅವರಿಬ್ಬರೂ ಅದೆಷ್ಟು ಅನೋನ್ಯರಾಗಿದ್ದರೆಂದು ಅವರಿಬ್ಬರ ದೇಹಗಳು ಎರಡಾದರೂ ಆತ್ಮವೊಂದೇ ಆಗಿತ್ತು. ಅವರ ಮನಸ್ಸು ನಡೆ ನುಡಿಗಳಲ್ಲಿ ಭಿನ್ನತೆಯೆಂಬುದೇ ಇರಲಿಲ್ಲ ಅವರ ಜೀವನದ ದೇವನಿಗೆ ಅರ್ಪಿಸಿದ ಒಂದು ದಿವ್ಯಾ ಪೂಜೆಯಾಗಿತ್ತು.

ಆಯ್ದಕಿ ಮಾರಯ್ಯ ಬಸವಾದಿಗಳ ತತ್ವ ಆದರ್ಶಗಳನ್ನು ಅಕ್ಷರಶಃ ಪಾಲಿಸಿ ನಡೆಸಿದವರು ಇಂಥ ಸಾತ್ವಿಕ ಆಚಾರವಂತರಿಂದಾಗಿಯೇ ಬಸವ ಧರ್ಮಕ್ಕೆ ಕಳೆ ಬಂದಿತೆಂದು ಹೇಳಬೇಕು. ಅಂದು ರೂಪಿತವಾದ ಕಾಯಕ ಜಂಗಮ ದಾಸೋಹ–ಪ್ರಸಾದ ಪೂಜೆ–ನಿಷ್ಠೆಗಳನ್ನು ಕಾರ್ಯರೂಪಕ್ಕೆ ತಂದು ಅವುಗಳ ಸತ್ವವನ್ನು ನೂರು ಮಡಿ ಹೆಚ್ಚಿಸಿದಇವರು. ಆಯ್ದಕ್ಕಿ ಮಾರಯ್ಯ ಹಾಗೇ ನೋಡಿದರೆ ಎಲ್ಲ ಶಿವಶರಣರೂ ಕ್ರಿಯಾಶೀಲರಾಗಿದಲ್ಲದು ನಿಜ. ಆಯ್ದಕ್ಕಿ ಮಾರಯ್ಯನಂಥ ಕ್ಕಾಯಕ ಧೀರರು ಕಾಯಕಕ್ಕೆ ನಿಜವಾದ ಅರ್ಥವನ್ನು ತಂದು ಕೊಟ್ಟವರು. ರಾಯಚೂರಿನ ಅಮರೇಶ್ವರದಿಂದ ಕಲ್ಯಾಣಕ್ಕೆ ಆಗಮಿಸಿ ಅಲ್ಲಿಯೇ ನೆಲಿಸಿ ಶರಣರ ದಾರಿಯಲ್ಲಿ ನಡೆದು ಶರಣ ಸತಿಪತಿಗಳಾಗಿ ಬಾಳಿದವರು ಆಯ್ದಕ್ಕಿ ಮಾರಯ್ಯ ಲಕ್ಕಮ್ಮನವರು ವಚನಗಳಲ್ಲಿನ ಕಾಯಕದ ಕುರಿತ ಮಾತುಗಳು ನಿಜವಾಗಿಯೂ ಕಾಯಕವನ್ನು ಅರ್ಥಪೂರ್ಣವಾಗಿ ವಿವರಿಸಿದ್ದಾರೆ.

ಗಂಡ ಒಂದು ಸಲ ಹೆಚ್ಚಿನ ಅಕ್ಕಿಯನ್ನು ಆಯ್ದು ತಂದಾಗ ಹೆಂಡತಿ ಈಸಕ್ಕಿ ಯಾಸೆ ನಿಮಗೇಕೆ ? ಎಂದು ತಿರುಗಿ ಕೊಟ್ಟು ಬರುವಂತೆ ಕಳುಹಿಸಿದಳು ಇದರಿಂದ ಕಾಯಕ ಕಾಯಕದಷ್ಟೇ ಪ್ರತಿಫಲ, ಅಸಂಗ್ರಹಣೆಯ ಭಾವಗಳ ಬಗ್ಗೆ ಅರಿವು ಉಂಟಾಗಿ ಮಾರಯ್ಯ ಮುಂದೆ ಅಪ್ರತಿಮ ಕಾಯಕ ಧೀರನಾಗುತ್ತಾನೆ. ಕಾಯಕಕ್ಕೆ ಹೊಸ ವ್ಯಾಖ್ಯಾನ ಬರೆದಂತೆ ವಚನ ರಚಿಸುತ್ತಾನೆ. ಅಲ್ಲಮನು ಅನುಭವ ಮಂಟಪದಲ್ಲಿ ಕೇಳಿದ ಪ್ರಶ್ನೆಗೆ ಸರಿಯಾಗಿ ತನ್ನ ಮನದಲ್ಲಿ ಇಷ್ಟ ಲಿಂಗವನ್ನು ನೆನೆಸಿಕೊಳ್ಳುತ್ತ ಹೀಗೆ ನುಡಿಯುತ್ತಾರೆ.

ಕಾಯಕದಲ್ಲಿ ನಿರತನಾದರೆ ಗುರುದರ್ಶನವಾದರೂ ಮರೆಯಬೇಕು.
ಲಿಂಗಪೂಜೆಯಾದರೂ ಮರೆಯಬೇಕು ಜಂಗಮ ಮುಂದಿದ್ದಡೆ
ಹಂಗು ಹರಿಯಬೇಕು ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು

---

೧. ಶ್ರೀಮತಿ ಶಕುಂತಲಾ ಭಟ್ಟ "ಆಯ್ದಕ್ಕಿ ಲಕ್ಕಮ್ಮ" ಪುಟ–೩–೧೯೯೬

'ಕಾಯಕವೇ ಕೈಲಾಸ' ಎಂಬ ಮಾತು ಆಯ್ದಕ್ಕಿ ಮಾರಯ್ಯನೇ ಹೇಳಿದ್ದು ಆದರೆ ಬಹಳ ಜನ ಅದನ್ನು ಬಸವಣ್ಣನವರು ಹೇಳಿದ್ದೆಂದು ತಪ್ಪು ಭಾವಿಸಿದ್ದಾರೆ. ಕಾಯದಲ್ಲಿ ನಿರತನಾದಾಗ ಗುರು-ಲಿಂಗ-ಜಂಗಮ ಯಾರೇ ಬಂದರೂ ಅವರ ಹಂಗು ಹರಿಯಬೇಕು. ಹೊರತಾಗಿ ಕಾಯಕವನ್ನು ನಿಲ್ಲಿಸಬಾರದೆಂದು ಆತ ಹೇಳಿದ ೦ಜತು ತುಂಬ ಅರ್ಥಪೂರ್ಣವಾದುದು ಕಾಯಕವನ್ನು ಮನಃಪೂರ್ವಕವಾಗಿ ಮನ ಮುಟ್ಟಿ ತನುಮುಟ್ಟಿ ಶ್ರದ್ಧೆಯಿಂದ ಮಾಡಬೇಕೆಂಬ ಮಂತ್ರವೇ ಈ ಮಾತಿನಲ್ಲಿದೆ. ೧

"ಜ್ಞಾನಕ್ಕಿಂತಲೂ ಕಾಯಕ ದೊಡ್ಡದು" ಎನ್ನುವ ಮಾತನ್ನು ತನ್ನ ಗಂಡನಿಗೆ ಎಚ್ಚರಿಸುವಳು ಹೆಚ್ಚಿನ ಅಕ್ಕಿಯನ್ನು ತಂದ ಕಾರಣ "ಕಾಯಕದಲ್ಲಿ ಆಶೆ ಬೇಡ" ಹಾಗೂ ಶಿವಭಕ್ತರಿಗೆ ಆಶೆ ಬೇಡ ಎಂದು ಹೇಳುತ್ತಾ

ಆಸೆಯೆಂಬುದು ಅರಸಂಗಲ್ಲದೆ ಶಿವಭಕ್ತರಿಗುಂಟೆ?
ರೋಷಯೆಂಬುದು ಯಮಧೂತರಿಗಲ್ಲದೆ ಅಜಾತರಿಗುಂಟೆ?
ಈಸಕ್ಕಿ ಆಸೆ ನಿಮಗೇಕೆ ಈಶ್ವರನೊಪ್ಪ ಮಾರಯ್ಯ
ಪ್ರಿಯ ಅಮರೇಶ್ವರ ಲಿಂಗಕ್ಕೆ ಸಲ್ಲದ ನೇಮವು

ಎಂದು ಹೇಳುತ್ತಾ ಹೆಚ್ಚಿನ ಅಕ್ಕಿ ಸುರಿದು ಬರಲು ತಿಳಿಸಿ ಶರಣರಿಗೆ ಪ್ರಸಾದಕ್ಕೆ ಸ್ವಾಗತಿಸುತ್ತಾಳೆ ಆಗ ಮಾರಯ್ಯನ ಚಿತ್ತ ವಿಚಿತ್ತ ಗೊಂಡಾಗ ಒಂದು ಮುತ್ತಿನಂತಹ ಮಾತನ್ನು ಹೇಳುತ್ತಾಳೆ ಆ ಮಾತು ಇಪ್ಪತ್ತೊಂದನೆಯ ಶತಮಾನದ ನಮಗೂ ಅನ್ವಯವಾಗುವಂತಿದೆ.

ಚಿತ್ತ ಶುದ್ಧವುಳ್ಳದವನಿಗೆ ದ್ರವ್ಯದ ಬಡತನವಿಲ್ಲ
ಮನಶುದ್ಧವಿಲ್ಲದವಂಗೆ ದ್ರವ್ಯದ
ಚಿತ್ತಶುದ್ಧದಲ್ಲಿ ಕಾಯಕವ ಮಾಡಿದಲ್ಲ
ಸದ್ಭಕ್ತರಿಗೆ ಎತ್ತಿ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು

ಎಲ್ಲಿ ಮನ, ಮಾತು, ಆಚರಣೆಗಳಲ್ಲಿ ಸಾಮರಸ್ಯವಿದೆಯೋ ಎಲ್ಲಿ ಆಂತರಂಗಿಕ ಸೌಂದರ್ಯವಿದೆಯೋ ಅಲ್ಲ ಮಹಾಲಕ್ಷ್ಮಿ ವಾಸಿಸುತ್ತಾಳೆಂದು ಶ್ರೀ ಅರವಿಂದರು ಹೇಳುತ್ತಾರೆ. ಅಂತರಂಗ ಬಹಿರಂಗ ಶುದ್ಧಿಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿರುವುದು ಕಾಣುತ್ತೇವೆ. ಪರಿಶುದ್ಧ ಮನಸ್ಸಿನ ಶರಣನ ಲಿಂಗಪೂಜೆ ಗುರುಸೇವೆ ಜಂಗಮ ದಾಸೋಹಗಳು ಮಾತ್ರ ಪರಮಾತ್ಮನ ಮೆಚ್ಚುಗೆ ಪಡೆಯಬಲ್ಲವು ಎಂದು ಆಯ್ದಕ್ಕಿ ಮಾರಯ್ಯ ಲಕ್ಕಮ್ಮ ದಂಪತಿಗಳು ನಂಬಿದ್ದರು.

ಒಬ್ಬ ಮನುಷ್ಯನ ಶ್ರೇಷ್ಠತೆ ಅವನ ಮನೆಯ ವೈಭವದಿಂದ ಅಳೆಯಲ್ಲಿಕಾಗದು ಮನವನ್ನು ಅಂತರಂಗವನ್ನು ಪರಿಶೋದಿಸಬೇಕು. ಎನ್ನುತ್ತಾರೆ. ಕಾಯಕದಲ್ಲಿಯೇ ಕೈಲಾಸ ಕಾಣಬೇಕೆಂದು ಲಕ್ಕಮ್ಮ ಮಾರಯ್ಯನಿಗೆ ಹೆಜ್ಜೆ ಹೆಜ್ಜೆಗೆ ಮಾರ್ಗದರ್ಶನ ಮಾಡುತ್ತಾ ಹೋಗುತ್ತಾಳೆ ಕಾಯಕ ಹಾಗೂ ದಾಸೋಹಗಳು ಆಧ್ಯಾತ್ಮ ಜೀವನ ಮಾರ್ಗವನ್ನು ಕಂಡ ಆಯ್ದಕ್ಕಿ ಮಾರಯ್ಯ ಹಾಗೂ ಲಕ್ಕಮ್ಮ ಇಂದಿನ ನಮ್ಮ ಜನಾಂಗಕ್ಕೂ ದಾರಿ ದೀಪವಾಗಿದ್ದಾರೆ ಇಂತಹ ಅನುಭವವನ್ನು ವಚನ ಸಾಹಿತ್ಯದ ಮೂಲಕ ಪ್ರೊ. ವೀರೇಂದ್ರ ಸಿಂಪಿ ಅವರು ಬಿಡಿಸಿರುವುದು ಮನಗಾಣಬಹುದು. ಇಂದಿನ ಜನಾಂಗಕ್ಕೆ ನಮ್ರತಾ

---

೧. ಪ್ರೊ. ವೀರೇಂದ್ರ ಸಿಂಪಿ 'ಆಯ್ದಕ್ಕಿ ಮಾರಯ್ಯ' ಪ್ರಟ-೧೦-೨೦೦೧

ಭಾವ ಸ್ವಾತಂತ್ರ್ಯ, ವೈಚಾರಿಕತೆ, ಕಾಯಕ ತತ್ವಗಳನ್ನು ಲಕ್ಕಮ್ಮನ ವಚನಗಳಲ್ಲಿ ಅರಹಿರುವುದನ್ನು ಕಾಣುತ್ತೇವೆ ಆಯ್ದಕಿ ಮಾರಯ್ಯ ಲಕ್ಕಮ್ಮ ದಂಪತಿಗಳು ಆದರ್ಶ ಪ್ರಾಯವಾಗಿದ್ದು ಶರಣೆರೆಲ್ಲರಿಗೂ ತೃಪ್ತಿ ಪಡುವಂತೆ ಬಾಳಿ ಎಲ್ಲಾ ಕಾಲಕ್ಕೂ ಎಲ್ಲಾ ಸಮಾಜಕ್ಕೂ ದೀವಿಗಳಾಗಿ ನಿಂತಿದ್ದಾರೆ.

ಚನ್ನಬಸವಣ್ಣನವರು

ಶರಣರ ಜೀವನ ಚರಿತ್ರೆಗೆ ಸಂಬಂಧಿಸಿದ ಆಕರಗಳು ನೋಡಲಿಕ್ಕೆ ವಿಪುಲವಾಗಿದ್ದರೂ ಅದರಲ್ಲಿ ಉಪಯೋಗಕ್ಕೆ ಬಾರದ ಸಾಮಗ್ರಿಯೇ ಹೆಚ್ಚು ಉಪಯೋಗಕ್ಕೆ ಬರುವ ಸಾಮಗ್ರಿ ಕಡಿಮೆ. ಈ ಕಡಿಮೆ ಸಾಮಗ್ರಿಯಾದರೂ ವೈರುಧ್ಯಗಳಿಂದೆ ಕೂಡಿರುವುದರಿಂದ ಸಂಶೋಧಕನಿಗೆ ಸಾಮಗ್ರಿಯೇ ಒಂದು ಸಮಸ್ಯೆಯಾಗಿ ನಿಲ್ಲುತ್ತದೆ. ಇದನ್ನು ಬಿಡಿಸಲು ಹೋದರೆ ಅನೇಕ ಹೊಸ ಸಮಸ್ಯೆಗಳು ಹುಟ್ಟುಕೊಳ್ಳುತ್ತವೆ. ಕೆಲವೊಮ್ಮೆ ಚರಿತ್ರೆಯ ಕೆಲವು ಮಗ್ಗಲುಗಳನ್ನು ಕಟ್ಟುವುದಕ್ಕೆ ಈ ಸಾಮಗ್ರಿ ಸಾಲದೇ ಹೋಗುತ್ತದೆ. ಇಂಥ ತೊಂದರೆಗಳ ಮಧ್ಯದಲ್ಲಿ ನಿಂತು ಲಭ್ಯ ಆಕರಗಳ ಸಹಾಯದಿಂದ ಚೆನ್ನಬಸವಣ್ಣನವರ ಚರಿತ್ರೆಯನ್ನು ವೀರೇಂದ್ರ ಸಿಂಪಿಯವರು ದರ್ಶಿಸಿರುವುದು ಕಾಣಬಹುದು. ೧೨ ನೇ ಶತಮಾನದ ಶರಣ ಸಮೂಹದಲ್ಲಿ ಚೆನ್ನಬಸವಣ್ಣನವರ ಸ್ಥಾನ ಮಿಗಿಲಾದುದು. ಉಳಿದ ಆಧ್ಯಾತ್ಮ ಸಾಧಕರ ಜೀವನದಂತೆ ಅವರ ಜೀವನವೂ ಯಾವ ಚರಿತ್ರೆಕಾರನ ಸ್ಥೂಲ ನೋಟಕ್ಕೂ ಸಿಗದು. ಅವರದು ಬಹುಮುಖ ಸಾಧನೆ ಹಠಯೋಗ, ಮಂತ್ರಯೋಗ, ಲಯಯೋಗ, ಶಿವಯೋಗಗಳ ಮಧ್ಯೆ ಅವರು ಸಮನ್ವಯ ಸಾಧಿಸಿದರು. ಚೆನ್ನಬಸವಣ್ಣನವರು-ತಮ್ಮ ಜೀವನದಲ್ಲಿ ಅನುಭಾವ, ಅರಿವು, ಆಚರಣೆಗಳಿಗೆ ಮಹತ್ವಕೊಟ್ಟರು.

ಬಸವಣ್ಣನವರು ಭಕ್ತಿ ಭಂಡಾರಿಗಳಾದರೆ, ಅಲ್ಲಮ ಪ್ರಭುಗಳು ಅನುಭಾವ ಸಾಮ್ರಾಜ್ಯದ ಚಕ್ರವರ್ತಿಗಳಾಗಿದ್ದರು, ಅಕ್ಕಮಹಾದೇವಿ ವೈರಾಗ್ಯ ಶಿಖಾಮಣಿಯಾದರೆ, ಸಿದ್ಧರಾಮ ಕರ್ಮಯೋಗಿಗಳಾಗಿದ್ದರು. ಇವರೆಲ್ಲರ ನಡುವೆ ಚೆನ್ನಬಸವಣ್ಣನವರು ಅವಿರಳ ಅನುಪಮ ಜ್ಞಾನಿಗಳಾಗಿದ್ದರು ಅವರೆಷ್ಟು ಉನ್ನತ ಮಟ್ಟದ ಅನುಭಾವಿಗಳೋ ಅಷ್ಟೇ ಪ್ರಮಾಣದಲ್ಲಿ ತಮ್ಮ ಸುತ್ತಲಿನ ಸಮಾಜವನ್ನು ಸಹಸ್ರ ಕಣ್ಣುಗಳಿಂದ ನೋಡಬಲ್ಲ ತೀಕ್ಷ್ಣ ದೃಷ್ಟಿಯುಳ್ಳವರು. ಚೆನ್ನಬಸವಣ್ಣನವರು ತಮ್ಮ ಜನ್ಮ ಮೂಲವನ್ನೇ ಪರಮಾತ್ಮನಿಗೆ ಅರ್ಪಿಸಿದರು. ಅವರ ವಚನಗಳು ಘನ. ಅವರ ವ್ಯಕ್ತಿತ್ವವಂತೂ ಅದಕ್ಕಿಂತಲ್ಲೂ ಘನ. ಅವರದು ಜ್ಞಾನ ಕ್ರಿಯೆಗಳ ಅಪೂರ್ವಸಂಗಮವಾದ ಪಾದರಸದಂಥ ವ್ಯಕ್ತಿತ್ವ ವೀರಶೈವ ಸಿದ್ಧಾಂತಕ್ಕೆ ತಾತ್ವಿಕ ನೆಲೆಯನ್ನು ಕೊಟ್ಟು ಅವರು ಅನುಭವ ಮಂಟಪದ ಚರ್ಚಾಗೋಷ್ಠಿಯ ನಿರ್ವಾಹಕರೂ ಆಗಿದ್ದರು. ಅಕ್ಕನಾಗಮ್ಮ ಶಿವಸ್ವಾಮಿಯರ ಪುತ್ರನಾಗಿ, ಬಸವಣ್ಣನ ಸೋದರ ಅಳಿಯನಾಗಿ ಅನುಭವ ಮಂಟಪದ ಮೂಸೆಯಲ್ಲಿ ಪುಟವಿಟ್ಟ ಚಿನ್ನವಾಗಿದ್ದಾನೆ. ಚೆನ್ನಬಸವಣ್ಣ ಶಿವಶರಣರ ಚರ್ಚೆಗಳನ್ನು ಅನುಭವದ ವಾದಗಳನ್ನು ಆತ ಕೇಳಿದ್ದಾನೆ. ಪ್ರಭುದೇವರು ಕಲ್ಯಾಣಕ್ಕೆ ಬಂದು ಬಸವಣ್ಣನು ಕೋಪಿಸಿಕೊಂಡಾಗ ಮಹಾದೇವಿಕ್ಕನ ಸತ್ವ ಪರೀಕ್ಷೆ ನಡೆದಾಗ, ನುಲಿಯ ಚಂದಯ್ಯಗಳು ಕಾಯಕದ ಹೊಣೆಯಲ್ಲಿ ಲಿಂಗವನ್ನು ತೊರೆದಾಗ ಎಲ್ಲಾ ಸಂದರ್ಭಗಳಲ್ಲೂ ಆತ ಅಗಾಧವಾದ ಜ್ಞಾನವನ್ನು ಪಡೆದಿರಲು ಸಾಕು. ಈ ಕಾರಣದಿಂದಲೇ ಆತ ಸಿದ್ಧರಾಮನಂಥ ಯೋಗಿಗೆ, ಶಿವಯೋಗ ದೀಕ್ಷೆಯನ್ನು

ನೀಡಲು ಸಾಧ್ಯವಾಯಿತು. ಕೆಳಗಿನ ವಚನದಲ್ಲಿ ಆತ ವಯಸ್ಸಿನಲ್ಲಿ ಕಿರಿಯನಾದರೂ ಜ್ಞಾನದಲ್ಲಿ ಹಿರಿಯ, ಅದೇ ಮಹತ್ವ ಪೂರ್ಣವಾದುದು ಎಂದು ಪ್ರಭುವಿನ ಮಾತು ತುಂಬಾ ಗಮನಾರ್ಹವಾದುದು

ಕಿರಿಯರಾದಡೇನು ಹಿರಿಯರಾದಡೇನು
ಅರಿವಿಂಗೆ ಹಿರಿದು ಕಿರಿದುಂಟೆ ?
ಆದಿ ಅನಾದಿ ಇಲ್ಲದಂದು
ಅಜಾಂಡ ಬ್ರಹ್ಮಾಂಡ ಕೋಟಿಗಳುದಯವಾದುದು
ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೇ ಮಹಾಜ್ಞಾನಿಯೆಂದು
ಕಾಣಬಂದಿತ್ತು ಕಾಣಾ ಚೆನ್ನಬಸವಣ್ಣಾ.

ಅಂತೆಯೇ ಅಲ್ಲಮ ಪ್ರಭು ಚರಜಂಗಮನಾಗಿ ಸಂಚಾರಗೈಯುವಾಗ ಚೆನ್ನಬಸವಣ್ಣನೇ ಎರಡನೆ ಶೂನ್ಯ ಪೀಠದ ಚಕ್ರವರ್ತಿಯಾಗಿ ಕಾರ್ಯ ನಿರ್ವಹಿಸುತ್ತಾನೆ. ಜೊತೆಗೆ ಆತ ಷಟಸ್ಥಲ ಬ್ರಹ್ಮ ಷಡಸ್ಥಲ ಮೂರ್ತಿ, ಷಿಡ್ಡಿದ ಸ್ಥಾಪನಾಚಾರ್ಯ ಎನಿಸಿಕೊಳ್ಳುವುದನ್ನು ನೋಡಿದರೆ ವೀರಶೈವ ಷಟಸ್ಥಲ ನಿರೂಪಣೆಯ ಮಣಿಹವನ್ನು ವಹಿಸಿಕೊಂಡಿದ್ದಂತೆ ತೋರುತ್ತದೆ ಅನುಭವ ಮಂಟಪದ ಕಾರ್ಯಕಲಾಪಗಳನ್ನು, ಶಿವಶರಣರ ವಿಚಾರ ಮಂಥನಕ್ಕೆ ಅವಕಾಶಗಳನ್ನು ಆ ಮೂಲಕ ಶಿವಶರಣರ ತತ್ವ ಧರ್ಮ ಆಚಾರ–ವಿಚಾರಗಳಲ್ಲಿ ಏಕತೆಯನ್ನು ರೂಪಿಸುವ ಕೆಲಸ ಚೆನ್ನಬಸವಣ್ಣನದಾಗಿತ್ತು ಎನ್ನಬಹುದು "ಚೆನ್ನಬಸುವಣ್ಣನನ್ನು ಪರಮಾರಾಧ್ಯರು" ಎಂದು ಅಕ್ಕ ಹೇಳುವಲ್ಲಿ ಈ ಅಂಶ ಹೊಳೆದಿರುವುದನ್ನು ನೋಡಬಹುದು.

ಜ್ಞಾನ ಕ್ರಿಯೆಗಳ ವೀರಶೈವದ ಎರಡು ಕಣ್ಣುಗಳು ಅವುಗಳೆರಡೂ ಸಮಾನ ಜ್ಞಾನವಿಲ್ಲದ ಕ್ರಿಯೆಗೆ ಅರ್ಥವಿಲ್ಲ, ಕ್ರಿಯೆ ಇಲ್ಲದ ಜ್ಞಾನಕ್ಕೆ ಬೆಲೆಯಿಲ್ಲ ಅವೆರಡರ ಸುಂದರ ಸಮನ್ವಯವೇ ಶರಣರು ಅನುಸರಿಸಿದ ಮಾರ್ಗ ಇದನ್ನು ತುಂಬ ಸರಳವಾಗಿ ತಿಳಿಸಿಕೊಟ್ಟಿದ್ದಾನೆ.

ಬಸವಣ್ಣ ಹಿರಿಯನಾದರೂ ತನಗೆ ಸೋದರ ಮಾವನಾದರೂ ಭಕ್ತ ಸಂದರ್ಶನದಲ್ಲಿ ಮಾನ್ಯನಾದರೂ ಚೆನ್ನಬಸವಣ್ಣ ಯಾವ ಸಂಭದವನ್ನು ಗಮನಿಸದೆ ತತ್ವ ಆಚರಣೆಗಳಲ್ಲಿ ತಪ್ಪಿದವರನ್ನು ತಿದ್ದುವಲ್ಲ ನಿಷ್ಠೆ ತೋರಿದನ್ನು ಕಾಣುತ್ತೇವೆ. ಮೆಲ್ಲಮೆಲ್ಲನೆ ಭಕ್ತನಪ್ಪ ಮೆಲ್ಲ ಮೆಲ್ಲನೆ ಮಹೇಶ್ವರನಪ್ಪ ಮೆಲ್ಲಮೆಲ್ಲನೆ ಪ್ರಸಾದಿಯಪ್ಪ ಎಂದು ಕ್ರಮ ಸಮುಚ್ಚಯದಿಂದ ಷಟ್‌ಸ್ಥಲವನ್ನು ಸಾಧಿಸುವಲ್ಲಿ ಒಲವು ತೋರಿದಾಗ ಅದನ್ನು ಚೆನ್ನಬಸವಣ್ಣ ನಿರ್ದಾಕ್ಷಣ್ಯವಾಗಿ ಖಂಡಿಸುತ್ತಾನೆ ಮೆಲ್ಲ ಮೆಲ್ಲನೆ ಭಕ್ತ ಮಹೇಶ ಪ್ರಸಾದಿಯಾಗಿ ಮುಂದುವರಿಯುವಲ್ಲಿ ನಡುವೆ ಆತಂಕದ ಕೈ ಸೆರೆಯಾದರೆ ಮುಂದೇನು ? ಎನ್ನುತ್ತಾರೆ ಚೆನ್ನಬಸವಣ್ಣ ಆದ್ದರಿಂದ ಭಕ್ತ ಭಕ್ತ ಸ್ಥಲದಲ್ಲಿದ್ದಾಗಲೂ ಅದು ಎಲ್ಲ ಸ್ಥಲಗಳನ್ನು ಒಳಗೊಳ್ಳುತ್ತದೆ. ಎಂದು ಚೆನ್ನಬಸವಣ್ಣ ಷಟ್‌ಸ್ಥಲಕ್ಕೆ ಹೊಸ ರೂಪವನ್ನೆ ನೀಡಿದ್ದು ಅವನ ಜ್ಞಾನಕ್ಕೆ ಕುರುಹು. ಸಿದ್ಧರಾಮ ಚೆನ್ನಬಸವಣ್ಣನನ್ನು ಮನಪೂರ್ವಕವಾಗಿ ಕೊಂಡಾಡಿದ್ದಾನೆ.

ಕ್ರಿಯೆ ಅದು ಚೆನ್ನಬಸವಣ್ಣನ ಎಡಪಾದ
ಜ್ಞಾನವದು ಚೆನ್ನಬಸವಣ್ಣನ ಬಲಪಾದ
ನಾನು ಅವರ ಚಮ್ಮಾವುಗೆ

ಎನ್ನುವಲ್ಲಿ ಜ್ಞಾನ ಕ್ರಿಯೆಗಳನ್ನು ಚೆನ್ನಬಸವಣ್ಣ ಸಮಾನ ಅಗತ್ಯಗಳಾಗಿ ಕಂಡುದಕ್ಕೆ ಮತ್ತು ಆಚರಿಸಿದ್ದಕ್ಕೆ ಹೋಲಿಕೆಯಾಗಿ ಎರಡೂ ಪದಗಳನ್ನು ಬಳಸಿದ್ದು ಗಮನಾರ್ಹ ಹೀಗೆ ಚೆನ್ನಬಸವಣ್ಣ ಅಂದು ಶರಣರಿಂದ ಮಾನ್ಯನಾಗಿ ಮಾರ್ಗದರ್ಶಕನಾಗಿ ಜ್ಞಾನಿಯಾಗಿ ಕಂಗೊಳಿಸಿದ್ದಾನೆ. ಈ ದೃಷ್ಟಿಯಿಂದ ಚೆನ್ನಬಸವಣ್ಣ ನಿಜವಾಗಿಯೂ ಕಲ್ಯಾಣವೆಂಬ ಪಣತೆಗೆ ಬತ್ತಿಯಾಗಿ ಇತರರಿಗೆ ಬೆಳಕಾದನೆಂದು ಹೇಳಬಹುದು.

ಚೆನ್ನಬಸವಣ್ಣನವರು ಅನುಭವ ಗೋಷ್ಠಿಯನ್ನು ಉದ್ದೇಶಿಸಿ

ಮಂಡೆಯ ಮಾಸಿದಡೆ ಮಹಾಮಜ್ಜನವ ಮಾಡುವುದು

ವಸ್ತ್ರ ಮಾಸಿದಡೆ ಮಡಿವಾಳಂಗಿಕ್ಕುವುದು.

ಮನದ ಮೈಲಿಗೆ ತೊಳೆಯಬೇಕಾದರೆ

ಕೂಡಲ ಚೆನ್ನ ಸಂಗಯ್ಯನ ಶರಣರ ಅನುಭಾವದ ಮಾಡುವುದು.ನ

ಎಂದು ಹೇಳಿ ಇಲ್ಲ "ಅನುಭಾವ" ಗೋಷ್ಠಿಯಾಗುವುದು ಶುಚಿಗೊಳಿಸುವುದಕ್ಕಾಗಿ ಎಂಬುದನ್ನು ಸ್ಪಷ್ಟ ಪಡಿಸಲು ಮಂಡೆ, ವಸ್ತ್ರದ ಪ್ರತಿಮೆಗಳನ್ನು ನೀಡಿದ ಚೆನ್ನಬಸವಣ್ಣ ಮನದ ಶುಚಿತ್ವಕೆ ಅನುಭಾವ ಗೋಷ್ಠಿಯನ್ನು ಸೂಚಿಸುತ್ತಾನೆ.

"ಅನುಭವ ಮಂಟಪದ ಪ್ರಸಂಗಗಳು" ಎಂಬ ಶೀರ್ಷಿಕೆಯ ಹಿನ್ನಲೆಯಲ್ಲಿ ವೀರೇಂದ್ರ ಸಿಂಪಿ ಅವರು ಅನುಭವ ಮಂಟಪದಲ್ಲಿ ನಡೆಯುವ ದಿನನಿತ್ಯದ ಸಮಾಲೋಚನೆಗಳನ್ನು ಬಿತ್ತರಿಸಿರುವುದು ಕಾಣಬಹುದು.

ಕಾಯಕ ದಾಸೋಹ ಪಂಚಾಚಾರ ಷಟ್‌ಸ್ಥಲ ಅಷ್ಟಾವರಣ ಕುರಿತು ತಾತ್ವಿಕ ವಿವೇಚನೆ ನಡೆಯುತ್ತಿತ್ತು ಈ ಎಲ್ಲ ಚರ್ಚೆ ತಾತ್ವಿಕ ವಿವೇಚನೆಗಳು ಚೆನ್ನಬಸವಣ್ಣನವರ ನೇತೃತ್ವದಲ್ಲಿಯೆ ನಡೆಯುತ್ತಿದ್ದವು ಹೀಗೆ ಚೆನ್ನಬಸವಣ್ಣನವರು ಶೂನ್ಯ ಸಿಂಹಾಸನಾಧಿಪತಿಗಳಲ್ಲೂ ಎಲ್ಲ ಅರ್ಹತೆಗಳನ್ನು ಪಡೆದಿದ್ದರು. "ಷಟ್‌ಸ್ಥಲ ತತ್ವವು" ವೀರಶೈವ ಧರ್ಮದ ತಳಹದಿಯಾಗಿದೆ. ಜೀವಾತ್ಮನು ಹಂತ ಹಂತವಾಗಿ ಮೇಲೆರುತ್ತ ಮುಕ್ತ ಪಡೆಯುವ ವಿಧಾನವಾಗಿದೆ. ಶರಣನಾದವನು ಈ ಆರು ಷಟ್‌ಸ್ಥಲಗಳು ಅಂದರೆ

- ಭಕ್ತಸ್ಥಲ
- ಮಾಹೇಶ್ವರ ಸ್ಥಲ
- ಪ್ರಸಾದ ಸ್ಥಲ
- ಪ್ರಾಣಲಿಂಗಸ್ಥಲ
- ಶರಣಸ್ಥಲ
- ಐಕ್ಯಸ್ಥಲ

ಈ ಆರು ಸ್ಥಲದಲ್ಲಿ ಯಾವುದೇ ಒಂದು ಸ್ಥಲವನ್ನು ಸ್ಥಾಯಿಯಾಗಿಟ್ಟುಕೊಂಡು ಆರು ಹಂತಗಳಲ್ಲಿ ವಿಕಾಸಗೊಳ್ಳುತ್ತ ಅಂತಿಮ ಹಂತ ಪಡೆಯುತ್ತದೆ. ಇದನ್ನು ಮಿಶ್ರ ಷಟ್‌ಸ್ಥಲವೆಂದು ಕರೆಯುತ್ತಾರೆ ಈ

ಡಾ. ಎಂ.ಎಂ.ಕಲಬುರ್ಗಿ ಚೆನ್ನಬಸವಣ್ಣನವರ ಷಟ್‌ಸ್ಥಲವಚನ ಮಹಾಸಂಪುಟ-೧೯೯೦

ಷಟ್‌ಸ್ಥಲವನ್ನು ಪ್ರಥಮವಾಗಿ ಪ್ರತಿಪಾದಿಸಿದನಾಗಿ ಚೆನ್ನಬಸವಣ್ಣನಿಗೆ "ಷಟ್‌ಸ್ಥಲ ಚಕ್ರವರ್ತಿ" ಎಂದು ಗೌರವ ಪ್ರಾಪ್ತವಾಗಿದೆ.

ಸದಾಚಾರ ಸಂಪತ್ತು

ಈ ಭಾಗದಲ್ಲಿ ವೀರೇಂದ್ರ ಸಿಂಪಿ ಅವರು ಪಂಚಾಚಾರಗಳ ಪರಿಕಲ್ಪನೆಯನ್ನು ಮಾಡಿಕೊಟ್ಟಿದ್ದಾರೆ. ವೀರಶೈವ ಸಂಸ್ಕೃತಿಯ ನೇತಾರ ಬಸವಣ್ಣನವರಾದರೆ, ಅದರ ಸಂವಿಧಾನ ಶಿಲ್ಪಿ ಚೆನ್ನಬಸವಣ್ಣನವರಾಗಿದ್ದರು. ಇವರ ವಚನಗಳಲ್ಲಿ ಷಟ್‌ಸ್ಥಲ ಅಡಕವಾದಂತೆ ನೀತಿ ಬೋಧವೂ ಮುಖ್ಯವಾಗಿದೆ. ತಮ್ಮ ಒಂದು ವಚನದಲ್ಲಿ

> ಕಾಮ ಬೇಡ ಪರಸ್ತ್ರೀಯರಲ್ಲಿ
> ಕ್ರೋಧ ಬೇಡ ಗುರುವಿನಲ್ಲಿ
> ಮೋಹ ಬೇಡ ಸಂಸಾರದಲ್ಲಿ
> ಮದ ಬೇಡ ಶಿವಭಕ್ತರಲ್ಲಿ
> ಮತ್ಸರ ಬೇಡ ಶಿವಭಕ್ತರಲ್ಲಿ

ಎಂದು ಚೆನ್ನಬಸವಣ್ಣನವರು ಕಟು ಮಾತಿನಲ್ಲಿ ಖಂಡಿಸಿರುವುದು ಕಾಣಬಹುದು ಏಕದೇವೋಪಾಸನೆಗೆ ಅದರಲ್ಲೂ ಇಷ್ಟಲಿಂಗ ಪೂಜೆಗೆ ಹೆಚ್ಚಿನ ಆದ್ಯತೆ ಕೊಟ್ಟರು. ಹಾಗೇಯೆ ಆಚಾರ ಅರಿವು ಅನುಭಾವಗಳಿಗೆ ಹೆಚ್ಚಿನ ಸಾಧನೆ ಕೊಟ್ಟಿದ್ದರು. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ರುದ್ರಾಕ್ಷಿ ಮಂತ್ರ, ಇವುಗಳಿಗೆ ಸಾಧಕನು ತನ್ನ ತನು ಮನ ಧನಗಳನ್ನು ಅರ್ಪಿಸುವುದು ಮೂಲಕ ಅಂಗಾಂಗ ಸಾಮರಸ್ಯ ಪಡೆಯಬಹುದು ಎಂದು ತಿಳಿಸಿದ್ದಾರೆ.

ಪಂಚಾಚಾರಗಳು

ಪಾಲನೆಯನ್ನು ನೈತಿಕ ಕಟ್ಟಳೆಗಳನ್ನಾಗಿ ಸ್ವೀಕರಿಸಿದ ಬಗೆಯನ್ನು ಹೇಳಿರುವರು ಪಂಚಾಚಾರಗಳೆಂದರೆ

- ಲಿಂಗಾಚಾರ
- ಸದಾಚಾರ
- ಶಿವಾಚಾರ
- ಗಣಚಾರ
- ಭೃತ್ಯಾಚಾರ

ಚೆನ್ನಬಸವಣ್ಣನವರು "ಪುರೋಹಿತಶಾಹಿಯ ಖಂಡನೆ" ಯನ್ನು ಮಾಡಿದರು. ಇವರೊಬ್ಬ "ಅನುಭಾವಿ ಕವಿ" ಯಾಗಿದ್ದರು. ಮೂಲಕ ವಿಚಾರವಾದಿಗಳು, ಅದ್ವಿತೀಯ ಜ್ಞಾನಿಗಳು ಹೌದು ಹಾಗೂ ಕನ್ನಡದ ಪ್ರಮುಖ ವಚನಕಾರರಲ್ಲಿ ಅವರೂ ಒಬ್ಬರು ಚೆನ್ನಬಸವಣ್ಣನವರ ವಚನಗಳಲ್ಲಿ ಗಾದೆಗಳನ್ನು ಜೋಡಿಸಿ ಕನ್ನಡ ಸಾಹಿತ್ಯಕ್ಕೆ ಅನೇಕ ಕಾಣಿಕೆ ಸಲ್ಲಿಸಿದ್ದಾರೆ. "ಚೆನ್ನಬಸಣ್ಣನವರು ಶಿವಯೋಗದ ರಹಸ್ಯ" ಪಾಪ-ಭಕ್ತ

ಪ್ರೊ. ವೀರಂದ್ರ ಸಿಂಪಿ 'ಚೆನ್ನಬಸವಣ್ಣ' ೧೯೯೭

ವೈರಾಗ್ಯ, ಅಭ್ಯಾಸ, ಧ್ಯಾನ, ಏಕಾಂತವಾಸ, ಭಿಕ್ಷಾಟನೆ ಲಿಂಗಪೂಜೆ ಸ್ಮರಣೆ ಎಂಬ ಎಂಟು ವಿಧಗಳಿಂದ ಯೋಗಸಾಧನೆ ಎಂದು ತಿಳಿಸಿದ್ದಾರೆ.

ಪ್ರೊ ವೀರೇಂದ್ರ ಸಿಂಪಿ ಅವರು ಚೆನ್ನಬಸವಣ್ಣನವರ ವಚನಗಳನ್ನು ಮಾತ್ರ ಅಲ್ಲದೆ ಅವರ ಇತರ ಸಾಹಿತ್ಯವಾದ ಮಿಶ್ರಾರ್ಪಣ, ಮಂತ್ರಗೋಪ್ಯ ಸಾಹಿತ್ಯ, ಕರಣ ಹಸಿಗೆ ಪದಮಂತ್ರಗೋಪ್ಯ ಕಾಲಜ್ಞಾನ ವಚನಗಳನ್ನು ಬರೆದಿರುವುದನ್ನು ಕಾಣುತ್ತೇವೆ. ವೀರೇಂದ್ರ ಸಿಂಪಿ ಅವರು ಚೆನ್ನಬಸವಣ್ಣನವರ ಘನ ವ್ಯಕ್ತಿತ್ವವನ್ನು ತಿಳಿಸುತ್ತಾ ಚೆನ್ನಬಸವಣ್ಣನವರು ವೈಚಾರಿಕತೆಗೆ ಹೆಸರಾದವರು ಅವರು ಬೌದ್ಧಿಕತೆ ಕ್ರಿಯಾಶೀಲತೆ ಹಾಗೂ ಸಂಘಟನಾ ಚಾತುರ್ಯಗಳ ಸಂಗಮವಾಗಿದ್ದರು ಎಂದು ಹೇಳಿ ಚೆನ್ನಬಸವಣ್ಣನವರ ವ್ಯಕ್ತಿತ್ವವನ್ನು ಅವರ ಸಮಕಾಲೀನ ವಚನಕಾರರ ಕಂಡತೆ ಕಾವ್ಯ ಪುರಾಣಗಳು ನಿರೂಪಿಸಿದಂತೆ ಹಾಗೂ ಸ್ವತಃ ಅವರ ವಚನಗಳಲ್ಲಿಯೇ ವ್ಯಕ್ತಿವಾದಂತೆ ಚಿತ್ರಿಸಲು ಇಲ್ಲ ಪ್ರಯತ್ನಿಸಲಾಗಿದೆ. ಒಟ್ಟಾರೆ ಚೆನ್ನಬಸವಣ್ಣನವರು ಹೇಳಿದ

- ಜ್ಞಾನ ಮತ್ತು ಕ್ರಿಯೆಗಳ ನಡುವಿನ ಸಮನ್ವಯ
- ಬಹಿರಂಗದ ಆಡಂಬರಕ್ಕಿಂತ ಅಂತರಂಗದ ಅರಿವೇ ಹೆಚ್ಚಿನದು
- ತೇನತ್ಯಕ್ತೇನ ಭುಂಜಿಥಾ (ಎಲ್ಲವನ್ನು ಶಿವಪ್ರಸಾದರೂಪವಾಗಿ ಅನುಭವಿಸುವುದು)

ಈ ಮೂರು ಚೆನ್ನಬಸಣ್ಣನವರ ಮುಖ್ಯ ಸಿದ್ಧಾಂತವಾಗಿದ್ದವು ಎಂಬುದನ್ನು ವೀರೇಂದ್ರ ಸಿಂಪಿ ಅವರು ಪರಿಚಯಿಸಿರುವುದು ಕಾಣಬಹುದು. ಕೊನೆಯದಾಗಿ ವಚನ ಸಾಹಿತ್ಯದ ಮೂಲಕ ವೀರೇಂದ್ರ ಸಿಂಪಿ ಅವರು ತಮ್ಮ ಬರಹದಲ್ಲಿ ಶರಣರ ಜೀವನ ಆಧ್ಯಾತ್ಮಿಕ ಸಾಧನೆಯನ್ನು ತಿಳಿಸಿದ್ದಾರೆ ಅದರ ಪ್ರಸುತತೆಯನ್ನು ಚರ್ಚಿಸಿಲಾಗಿದೆ.

ಜೀವನ ಚರಿತ್ರೆ

ಯಾವುದೇ ವ್ಯಕ್ತಿಯ ಬದುಕನ್ನು ಸಾಹಿತ್ಯಕವಾಗಿ ನಿರೂಪಿಸಿದಾಗ ಜೀವನದ ಚರಿತ್ರೆ ನಿರ್ಮಾಣವಾಗುತ್ತದೆ. ಜೀವನ ಚರಿತ್ರೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಒಂದು ಹಾಗೂ ವ್ಯಕ್ತಿಯ ಹುಟ್ಟ ಬೆಳವಣಿಗೆ ಸಾಧನೆ ಮುಂತಾದ ವಿಷಯಗಳು ಲಭ್ಯವಾಗುವುದರಿಂದ ಸಾಹಿತ್ಯ ವಿಮರ್ಶೆಗೆ ಮತ್ತು ಸಾಹಿತ್ಯ ಸಂಶೋದನೆಗೆ ಅನುಕೂಲವಾಗುತ್ತದೆ. ಈ ದೃಷ್ಟಿಯಲ್ಲಿ ವೀರೇಂದ್ರ ಸಿಂಪಿ ಅವರು ರಚಿಸಿದ

ಮಾಸ್ತಿ ವೆಂಕಟೇಶ ಅಯ್ಯಂಗಾರ

ಶ್ರೀ ಆರ್.ವ್ಹಿ. ಬಿಡಪ

ಸಿಂಪಿ ಲಿಂಗಣ್ಣನವರ ಸಾಹಿತ್ಯ

ಈ ಮಹಾಪುರುಷರು ಬಾಳಿ ಬೆಳಗಿದ ಮತ್ತು ಸಮಕಾಲೀನ ಸ್ಥಿತಿಗಳ ಬಗ್ಗೆ ಸರಳವಾಗಿ ಜನಸಾಮಾನ್ಯರಿಗೆ ಅರ್ಥವಾಗುವಂತ ರೀತಿಯಲ್ಲಿ ಬರೆದ ಕೃತಿಗಳಾಗಿವೆ.

ವೀರೇಂದ್ರ ಸಿಂಪಿ ಅವರು ಹಲವಾರು ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ ಅವುಗಳಲ್ಲಿ ಜೀವನ ಚರಿತ್ರೆ ಒಂದು ಸರಾಗವಾಗಿ ಲಲಿತವಾಗಿ ಸುಲಭವಾಗಿ ಓದಿಸಿಕೊಂಡು ಹೋಗುವಂತೆ ಬರೆಯುವುದು ಕರಗತವಾಗಿದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ

ಮಾಸ್ತಿಯವರ ಜೀವನ ಚರಿತ್ರೆಯನ್ನು ಬಿಚ್ಚಿಡುವ ಪ್ರಸ್ತುತ ಕೃತಿ ಒಂದು ಉತ್ತಮ ಜೀವನ ಚರಿತ್ರೆಯಾಗಿದೆ ಅಯ್ಯಂಗಾರ ಜೀವನ ಚರಿತ್ರೆಗೆ ಸಂಭದಪಟ್ಟ ಕೃತಿಗಳು ಹೊರಬಂದಿರುವುದು ಅತಿ ವಿರಳ ಆದರೆ ಅವರ ಸಾಹಿತ್ಯವನ್ನು ಸಂಪಾದನೆ ಮಾಡಿದಂತಹ ಸಾಕಷ್ಟು ಹೊತ್ತಿಗೆಗಳು ಪ್ರಕಟಗೊಂಡಿವೆ. ಮಾಸ್ತಿ ಕನ್ನಡ ಅತ್ಯಂತ ಶ್ರೇಷ್ಠಿ ಲೇಖಕರಲ್ಲೊಬ್ಬರು ಅವರನ್ನು ಕನ್ನಡದ ಆಸ್ತಿ ಎನ್ನುವುದುಂಟು ಈ ಪ್ರಶಂಸೆಯಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಗುಲ್ಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ ಪ್ರಸಾರಾಂಗಗೊಂಡ ಈ ಪ್ರತಿ ಮಾಸ್ತಿ ವೆಂಕಟೇಶ ಅಯ್ಯಂಗಾರ ಜೀವನ ಹಾಗೂ ಸಾಹಿತ್ಯದ ಮೇಲೆ ಒಂದು ಪಾಕ್ಷಿಕ ನೋಟವನ್ನು ಬೀರಲಾಗಿದೆ.

ಮಾಸ್ತಿ ಸಣ್ಣ ಕಥೆಗಳ ಜನಕರೆನಿಸಿದರು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅವರ ಸಾಧನೆ ತುಂಬಾ ಮಹತ್ವದ್ದಾಗಿದೆ. ಕಾದಂಬರಿ, ಕಾವ್ಯ, ನಾಟಕ, ಅನುವಾದ, ಪತ್ರಿಕೋದ್ಯಮ, ವಿಮರ್ಶೆ ಕ್ಷೇತ್ರಗಳಿಗೆ ಅವರು ಕೊಟ್ಟ ಕಾಣಿಕೆ ಅನುಪಮವಾಗಿದೆ. ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ನಾಡಿನ ಪ್ರಥಮ ಪಂಕ್ತಿಯ ಲೇಖಕರಲ್ಲಿ ಅವರು ಅಗ್ರಗಣ್ಯರು ತಮ್ಮ "ಸಣ್ಣ ಕಥೆಗಳ" ಸಂಕಲನಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಮಾಸ್ತಿಯವರು "ಚಿಕ್ಕ ವೀರರಾಜೇಂದ್ರ" ಕಾದಂಬರಿಗಾಗಿ ಜ್ಞಾನ ಪೀಠ ಪ್ರಶಸ್ತಿಯನ್ನು ಗಳಿಸಿದರು ಕನ್ನಡಕ್ಕಾಗಿ ಅಭಿಮಾನದ ಕೋಡು ಮೂಡಿಸಿದ ಕೆಲವೇ ಜನ ಹಿರಿಯ ಲೇಖಕರಲ್ಲಿ ಅವರು ಒಬ್ಬರು.

ಮಾಸ್ತಿಯವರ ಕುಟುಂಬ ತೀವ್ರತರ ಕಠಿಣ ಆರ್ಥಿಕ ಸ್ಥಿತಿಯನ್ನು ಎದುರಿಸುತ್ತಿತ್ತು ಅದಕ್ಕಾಗಿ ಮಾಸ್ತಿ ತಾಯಿಯ ತವರಿನಲ್ಲಿಯೇ (ಹೊಂಗೇನಹಳ್ಳಿ) ತಮ್ಮ ಪ್ರಾಥಮಿಕ ಶಿಕ್ಷಣ ಪ್ರಾರಂಭಿಸಿದರು.

ಮುಂದೆ ಮಾಧ್ಯಮಿಕ ಕಾಲೇಜು ಶಿಕ್ಷಣವನ್ನು ಮುಗಿಸಿ ಮದ್ರಾಸನಲ್ಲಿ ತಮ್ಮ ಸ್ನಾತಕೊತ್ತರ ಪದವಿಯನ್ನು ಪಡೆದರು. ಸಿವ್ಹಿಲ್ ಸರ್ವಿಸ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದು ಅವರು ಪ್ರೊಬೇಶನರಿ ಅಸಿಸ್ಟಂಟ ಕಮೀಶನರ್ ರಾಗಿ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದರು.

ಮಾಸ್ತಿಯವರು ಹೊಸಗನ್ನಡ ಸಣ್ಣ ಕಥೆಗಳಿಗೆ ರೂಪ ಕೊಟ್ಟ ಆಚಾರ್ಯ ಪುರುಷರು. ಅದರಂತೆ ಕಾದಂಬರಿಕಾರರಾಗಿ, ನಾಟಕಕಾರರಾಗಿ ಕವಿಗಳಾಗಿ, ಅವರು ಅಚಲವಾದ ಜೀವನದ ದೃಷ್ಟಿ ಇರಿಸಿಕೊಂಡಿದ್ದರು. ಆಂಗ್ಲ ಸಾಹಿತ್ಯದ ಉತ್ತಮ ಶ್ರೇಣಿಯ ಕೃತಿಗಳಿಗೆ ಸಮನಾದ ಕಥೆ ಕವನ ನಾಟಕಗಳನ್ನು ಒದಗಿಸಬೇಕೆಂಬ ಪ್ರೇರಣೆಯಿಂದ ಅವರು ಸಾಹಿತ್ಯ ರಚನೆಗೆ ತೊಡಗಿ ಸಾಕಷ್ಟು ಯಶಸ್ವಿಯಾದರು. ಮಾಸ್ತಿ ಸಣ್ಣ ಕತೆಗಳ ಜನಕರು, ಹಾಗೂ ಇವರು ಪಾಶ್ಚಾತ್ಯ ಕತೆಗಾರರಿಂದ ಪ್ರಭಾವಿತರಾದರೂ ಅವರ ಕತೆಗಳು ಮುಖ್ಯವಾಗಿ ಭಾರತೀಯ ಕಥಾ ಪರಂಪರೆಗೆ ಸೇರಿವೆ ಹಾಗೇಯೆ ಇವರ ಸಣ್ಣಕತೆಯ ಹರಹು ದೊಡ್ಡದು ಮಾಸ್ತಿಯವರು ಭಾರತೀಯ ಅದರಲ್ಲು ವಿಶೇಷವಾಗಿ ಹಿಂದೂ ಸಂಸ್ಕೃತಿಯ ಮೌಲ್ಯಗಳಲ್ಲಿ ತುಂಬ ವಿಶ್ವಾಸವಿರಿಸಿದವರು ಅದೆ ಮೌಲ್ಯಗಳ ಸಮರ್ಥನೆ ಅವರ ಕತೆಗಳಲ್ಲಿ ವ್ಯಕ್ತವಾಗಿದೆ.

ಮಾಸ್ತಿ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರಾಗಿದ್ದರು. "ಶ್ರೀನಿವಾಸ" ಇವರ ಕಾವ್ಯನಾಮವಾಗಿದೆ ಬಹುಮುಖ ಪ್ರತಿಭೆಯ ಈ ಪ್ರತಿಭಾವಚಿತರು "ಚಿಕ್ಕವೀರ ರಾಜೇಂದ್ರ" "ಚೆನ್ನಬಸವನಾಯಕ" ಮತ್ತು ಈ ಎರಡು ಕಾದಂಬರಿಗಳನ್ನು ರಚಿಸಿ ಕಾದಂಬರಿ ಲೋಕದಲ್ಲಿ ಶಾಶ್ವತ ಸ್ಥಾನವನ್ನು ಪಡೆದಿದ್ದಾರೆ. ಅವರ ಎರಡೂ ಕಾದಂಬರಿಗಳು ಐತಿಹಾಸಿಕ ವಿಷಯಗಳನ್ನು ಒಳಗೊಂಡಿರುವುವು ರಾಜಮನೆತನಗಳ ಪತನವೇ ಮಾಸ್ತಿಯವರ ಕಾದಂಬರಿಗಳ ವಿಷಯವಾಗಿರುವದು. "ಸುಬ್ಬಣ್ಣ" "ಶೇಷಮ್ಮ" ನೀಳ್ಗತೆಗಳಾಗಿವೆ, ಸಣ್ಣ ಕಥೆಗಳ ೧೫ ಕಥಾ ಸಂಕಲನಗಳಿವೆ. "ರಂಗನ ಮದುವೆ" ಪ್ರಥಮ ಕಥೆಯಾಗಿರುವದು ಮಾಸ್ತಿಯವರ ಕಾವ್ಯಗಳು ಅಂದರೆ ಬಿನ್ನಹ, ಅರುಣ, ತಾವರೆ, ಚೆಲವು, ಮಲಾರ, ಗೌಡರಮಲ್ಲಿ ರಾಮನವಮಿ, ಮೂಕನ ಮಕ್ಕಳು, ಸುನೀತಾ ಮಾನವಿ, ಮತ್ತು ಸಂಕ್ರಾಂತಿ. ಮುಂತಾದವುಗಳನ್ನು ಬರೆದು ಕಾವ್ಯಲೋಕಕ್ಕೆ ತಮ್ಮದೆ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. ಹಾಗೇಯೇ ಅನೇಕ ನಾಟಕಗಳನ್ನು ಕೂಡ ಬರೆದಿದ್ದಾರೆ ತಾಳಿಕೋಟೆ, ಕಾಕನಕೋಟೆ, ಕನಕಣ್ಣ, ಶ್ರೀರಾಮ ಪಟ್ಟಾಭಿಷಕ, ನವರಾತ್ರಿ, ಬಾನುಲಿ ದೃಷ್ಟಿಗಳು ಮುಂತಾದವು ಮಂಜುಳ ಸಾಮಾಜಿಕ ನಾಟಕವನ್ನು ತಿರುಪಾಣಿ ಹಾಗೂ "ಯೊಶೋಧನಾ" ಆಧ್ಯಾತ್ಮಿಕ ನಾಟಕಗಳನ್ನು ಶಾಂತ, ಸಾವಿತ್ರಿ, ಉಷಾ, ಪೌರಾಣಿಕ ನಾಟಕವನ್ನು ಮಾಸ್ತಿಯವರು ಬರೆದಿದ್ದಾರೆ.

ಈ ಎಲ್ಲಾ ನಾಟಕಗಳ ಮೂಲ ಪ್ರೇರಣೆ ಸತ್ಯಶಿವ ಸೌಚಿದರ್ಯಗಳ ಜಯವಾಗಿದೆ. ಇವುಗಳಲ್ಲಿ ಕಥಾ ಸಂವಿಧಾನದ ಸಂಕೀರ್ಣತೆ ಇರದೆ ಸ್ವಭಾವ ಚಿತ್ರಣ ಸಂವಾದಗಳಲ್ಲಿ ಪರಿಣತಿ ಇದೆ. ಈ ರೀತಿ ಸ್ವಾತಂತ್ರ ನಾಟಕಗಳ ಜೊತೆಗೆ ಕಿಂಗಲಿಯರ್, ಹ್ಯಾಮ್ಲೆಟ್ ಟ್ವೆಲ್ಥನೈಟ್ ನಾಟಕಗಳನ್ನು ಮಾಸ್ತಿಯವರು ಕನ್ನಡಕ್ಕೆ ತಂದು ಕೊಟ್ಟಿದ್ದಾರೆ. ಇವು ಅವರ ಭಾವಾಂತರಗಳಲ್ಲ ಸೃಜಶೀಲ ಪ್ರತಿಭಾವಂತ ನಾಟಕಕಾರ ಸೃಜಸಿದ ಭಾವಾಂತರಗಳಾಗಿವೆ.

ಅನೇಕ ಕೃತಿಗಳನ್ನು ಸಂಪಾದನೆ ಮಾಡಿದ್ದಾರೆ. ಮಾಸ್ತಿಯವರ ವಿಮರ್ಶೆ ಕನ್ನಡ ಸಾಹಿತ್ಯ ಇತರ ಸೋದರ ಸಾಹಿತ್ಯ ಅನ್ಯ ದೇಶಗಳ ಸಾಹಿತ್ಯದ ಕುರಿತಾಗಿದೆ. "ಭಾರತ ತೀರ್ಥ" "ಆದಿಕವಿ ವಾಲ್ಮೀಕಿ" ಪ್ರಮುಖ ವಿಮರ್ಶ ಕೃತಿಗಳಾಗಿವೆ. ಮಾಸ್ತಿಯವರ ಜೀವನ ದೊಡ್ಡದು ಅದಕ್ಕಿಂತಲ್ಲೂ ಅವರ ಸಾಹಿತ್ಯ ದೊಡ್ಡದು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅವರ ಸಾಧನೆ ಅನುಪಮಮವಾಗಿದೆ. ಈ ಅನುಪಮ ಸಾಧನೆಯನ್ನು ಸಾಹಿತ್ಯದ ಮೂಲಕ ದರ್ಶಿಸಿದ ಖ್ಯಾತಿ ಪ್ರೊ. ವೀರೇಂದ್ರ ಸಿಂಪಿ ಅವರಿಗೆ ಸಲ್ಲುತ್ತದೆ.

ಆರ್. ವ್ಹಿ. ಬಿಡಪ

ತತ್ವನಿಷ್ಠ ರಾಜಕೀಯ ಧುರೀಣ ಶ್ರೀ ಆರ್. ವ್ಹಿ. ಬಿಡಪನವರ ಜೀವನ ಚರಿತ್ರೆ ಹೈದರಬಾದ-ಕರ್ನಾಟಕದ ಕಳೆದ ೫೦ ವರ್ಷಗಳ ಕಾಲದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ, ಹೈದ್ರಾಬಾದ ಸಂಸ್ಥಾನದ ವಿಮೋಚನಾ ಚಳುವಳಿಯ ಕರ್ನಾಟಕ ಏಕೀಕರಣ ಹಾಗೂ ಕನ್ನಡ ಪರ ಚಳುವಳಿಯ ಸಮಾಜವಾದಿ ಸಂಘಟನೆಯ, ರೈತರ, ಮಿಲ್ ಕಾಮಗಾರ ಪರ ಹೋರಾಟದ, ಕರ್ನಾಟಕ ಲೋಕಸೇವಾ ಆಯೋಗದ ಇತಿಹಾಸದ ಭಾಗವೇ ಆಗಿದೆ. ಬೀದರಿನ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಅವರು ಬೀದರ ಜಿಲ್ಲೆಯಲ್ಲಿ ಕೈಕೊಂಡ ಶೈಕ್ಷಣಿಕ ಸೇವೆ ಸುವರ್ಣಾಕ್ಷರಗಳಲ್ಲಿ ಬರೆಯುವಂತಹುದು. ಅವರೊಬ್ಬ ರಾಜ್ಯ ಮಟ್ಟದ ಅಷ್ಟೇ ಅಲ್ಲ ರಾಷ್ಟ್ರಮಟ್ಟದ ಸಮಾಜವಾದಿ ಧುರೀಣರಾಗಿದ್ದಾರೆ. ಮಾನವತಾವಾದಿಗಳೂ ಸ್ವಾತಂತ್ರ್ಯಯೋಧರೂ, ಸಾಮಾಜಿಕ ಕಾರ್ಯಕರ್ತರೂ ಸರಳತೆಯ ಸಾಕಾರ ಮೂರ್ತಿಗಳೂ ಆದ ಬಿಡಪನವರು ತತ್ವನಿಷ್ಠೆ ರಾಜಕಾರಣಿಗಳಾಗಿದ್ದಾರೆ. ಅದರಂತೆ ಅವರ ಜೀವನ ತೆರೆದಿಟ್ಟ ಪುಸ್ತಕವಾಗಿದೆ. ಅಲ್ಲಿ ಮುಚ್ಚುಮರೆ ಏಂಬುದೇ ಇಲ್ಲ. ಭ್ರಷ್ಟಾಚಾರ ಜೀವನ ಮಾರ್ಗವಾಗಿರುವ ಇಂದಿನ ದಿನಗಳಲ್ಲಿ ಬಿಡಪನವರು ರಾಜಕಾರಣದಲ್ಲಿ ಪಾರದರ್ಶಕತೆಯನ್ನು, ನೈತಿಕತೆಯನ್ನು ತೋರಿಸಿದ ಅಪೂರ್ವ ವ್ಯಕ್ತಿಯಾಗಿದ್ದಾರೆ.

ಶ್ರೀ ಆರ್.ವ್ಹಿ. ಬಿಡಪ ಅವರ ಜೀವನದ ಚರಿತ್ರೆಯನ್ನು ಮೊದಲು ಇಂಗ್ಲೀಷ್ ಭಾಷೆಯಲ್ಲಿ ಪ್ರೊ. ಸಿ.ಎನ್. ಹಿರೇಮಠರು ಮೊದಲು ಬರೆದುಕೊಟ್ಟವರು ಈ ಗ್ರಂಥದ ಆಧಾರದ ಮೇಲೆ ಪ್ರೊ. ವೀರೇಂದ್ರ ಸಿಂಪಿ ಅವರು ಕನ್ನಡ ಭಾಷೆಯಲ್ಲಿ ಸಂಕ್ಷಿಪ್ತವಾಗಿ ಸುಂದರವಾಗಿ ಈ ಕೃತಿಯನ್ನು ರಚಿಸಿಕೊಟ್ಟಿರುವುದು ಕಾಣಬಹುದು

ಇವರ ಪೂರ್ಣ ಹೆಸರು ರಾಚಪ್ಪ ವೀರಭದ್ರಪ್ಪ ಬಿಡಪ್ಪ ಇವರು ಹುಮನಾಬಾದ (ತಾ) ಚಿಟಗುಪ್ಪಾ ಬೀದರನಲ್ಲಿ ೧೯೨೦ ರಲ್ಲಿ ಜನಿಸಿದರು ತಾಯಿ ನೀಲಮ್ಮ ಬೀಡಪ ಪ್ರಾರಂಭದ ಶಿಕ್ಷಣ ಮಾಧ್ಯಮಿಕ ಶಿಕ್ಷಣ ಚಿಟಗುಪ್ಪಾ ಗ್ರಾಮದಲ್ಲಿ ಮುಗಿಸಿದರು. ಪ್ರೌಢಶಾಲಾ ಶಿಕ್ಷಣವು (೧೯೩೮) ಗುಲ್ಬರ್ಗಾದಲ್ಲಿ ಪಡೆದರು ಕಾಲೇಜ ಶಿಕ್ಷಣ ಅಲೀಗಡ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ೧೯೩೮ ರಿಂದ ೧೯೪೦ ರವರೆಗೆ ಪಡೆದುಕೊಂಡರು ಹಾಗೆಯೆ ೧೯೪೦ ರಲ್ಲಿ ಇಂಟರ್ ಮಿಡಿಯೆಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ನಂತರ ೧೯೪೪ ರಲ್ಲಿ ಎಲ್ ಎಲ್.ಬಿ. ಪರೀಕ್ಷೆಯಲ್ಲಿ ಪಾಸಾದರು.

ಸ್ವಾತಂತ್ರ್ಯ ಪೂರ್ವದಲ್ಲಿ ಅವರ ಕಾರ್ಯಕ್ಷೇತ್ರ ಹೈದ್ರಾಬಾದ ಆಗಿತ್ತು ಅದಕ್ಕೂ ಮೊದಲು ಪುಣೆಯಲ್ಲಿ ಕಾನೂನು ಮಹಾವಿದ್ಯಾಲಯದಲ್ಲಿ ಕಲಿಯುತ್ತಿದ್ದಾಗಲೇ ಚಲೇಜಾವ್ ಚಳುವಳಿಯಲ್ಲಿ

ಭಾಗವಹಿಸುವುದರ ಮೂಲಕ ಸಕ್ರಿಯವಾಗಿ ರಾಜಕೀಯದಲ್ಲಿ ಧುಮುಕಿದರು. ನಂತರ ಜಿ.ಏನ್. ಮೇಲ್ಲೊಡೆಯವರು ಅಧ್ಯಕ್ಷರಾಗಿದ್ದ ಫ್ರೀಡಂ ಕ್ಲಬಿನ ಕಾರ್ಯದರ್ಶಿಗಳಾಗಿ. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದಂತೆ ನಿಜಾಮರ ಸರ್ವಾಧಿಕಾರದ ವಿರುದ್ಧ ಹೋರಾಟದ ಹೈದ್ರಾಬಾದ ವಿಮೋಚನಾ ಚಳುವಳಿಯ ಧುರೀಣತ್ವ ವಹಿಸಿದರು. ಕೆಲಕಾಲ ಭೂಗತರಾಗಿ ಸ್ವಾತಂತ್ರ್ಯ ಚಳುವಳಿಯ ವೀರಯೋಧರೂ ಆಗಿದ್ದರು ರಾಷ್ಟ್ರಮಟ್ಟದ ಸಮಾಜವಾದಿ ನಾಯಕರಲ್ಲಿ ಒಬ್ಬರಾಗಿದ್ದರಲ್ಲದೆ ಜಯಪ್ರಕಾಶ ನಾರಾಯಣ, ಲೋಹಿಯಾರಂಥ ರಾಷ್ಟ್ರನಾಯಕರೊಡನೆ ಘನಿಷ್ಠ ಸಂಬಂಧವಿರಿಸಿಕೊಂಡಿದ್ದರು. ಹೈದ್ರಾಬಾದ ವಿಮೋಚನಾ ಚಳುವಳಿಯಲ್ಲಿ ಅವರದು ಅಗ್ರ ಪಾತ್ರ.

ಶ್ರೀ ಪ್ರಭುರಾವಜಿ ಕಂಬಳಿವಾಲೆಯವರ ಒತ್ತಾಯದ ಮೇರೆಗೆ ೧೯೫೩ ರಲ್ಲಿ ಬೀದರಿಗೆ ಬಂದ ನಂತರ ಅವರು ಎರಡು ಕ್ಷೇತ್ರಗಳಲ್ಲಿ ಬಹುದೊಡ್ಡ ಕಾರ್ಯ ಮಾಡಿದ್ದಾರೆ. ಒಂದು ಕರ್ನಾಟಕ ಏಕೀಕರಣಕ್ಕಾಗಿ ಮಾಡಿದ ಹೋರಾಟ. ಇನ್ನೊಂದು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಬೀದರ ಜಿಲ್ಲೆಯಲ್ಲಿ ಮಾಡಿದ ಶೈಕ್ಷಣಿಕ ಕ್ರಾಂತಿ. ಅವರು ಕರ್ನಾಟಕ ಏಕೀಕರಣಕ್ಕಾಗಿ ಹೈದ್ರಾಬಾದ ಕರ್ನಾಟಕದಲ್ಲಿ ಜನಾಭಿಮ್ಮಿಯ ಮಾಡಿಸುವಲ್ಲಿ ಸಫಲರಾದರು ಸುಮಾರು ೪೪ ವರ್ಷಗಳ ಕಾಲ ಕೆ.ಆರ್.ಇ. ಸೊಸೈಟಿಯ ಅಧ್ಯಕ್ಷರಾಗಿದ್ದುಕೊಂಡು ನಿಸ್ವಾರ್ಥ ಸೇವೆ ಸಲ್ಲಿಸಿದ ಕೀರ್ತಿ ಬಿಡಪನವರಿಗೆ ಸಲ್ಲುತ್ತದೆ. ಬಿಡಪನವರು ಸಮಾಜವಾದಿಗಳಂತೆ ಮಾರ್ಕ್ಸವಾದದ ಅಭ್ಯಾಸಿಗಳೂ ಆಗಿದ್ದಾರೆ ಅದರಂತೆ ಚಿಂತಕರೂ ಆಗಿನದೊಂದು ಮಹತ್ವದ ಮಾತಾಡಿಪೆ. ಬಿಡಪನವರು ಬೀದರಿನ ಆಧುನಿಕ ನಿರ್ಮಾಪಕರಲ್ಲಿ ಒಬ್ಬರಾಗಿದ್ದಾರೆ. ಬೀದರ ಸಹಕಾರಿ ಕ್ಷೇತ್ರದಲ್ಲಿಯೂ ಅವರು ಮುಂದಾಳತ್ವ ವಹಿಸಿದ್ದಾರೆ. ಬಿಡಪನವರು ವಿಶ್ವ ಪರ್ಯಟನೆ ಮಾಡಿದ ಸಾಹಸಿಗರೂ ಹೌದು ಅವರು ಕೇವಲ ಏಷಾರಾಮಕ್ಕಾಗಿ ಪ್ರವಾಸ ಮಾಡಿದವರಲ್ಲಿ ಜ್ಞಾನರ್ಜನೆಗೆ ಪ್ರವಾಸ ಕೈಗೊಂಡ ಮಹಾಜ್ಞಾನಿಗಳೂ ಆಗಿದ್ದಾರೆ.

ಕರ್ನಾಟಕ ರಾಜ್ಯದ ಲೋಕಸೇವಾ ಆಯೋಗದ ಸದಸ್ಯರಾಗಿ ಹಾಗೂ ಅದರ ಅಧ್ಯಕ್ಷರಾಗಿ ಆರ್.ವ್ಹಿ. ಬಿಡಪನವರು ಮಾಡಿದ ಸೇವೆ ಸಾಧಿಸಿದ ಸಾಧನೆ ಅನುಪಮವಾಗಿದೆ. ಬಿಡಪನವರು ಸಮಾಜ ವಾದಿಗಳಾಗಿದ್ದಂತೆ ಮಾರ್ಕ್ಸವಾದದ ಅಭ್ಯಾಸಿಗಳೂ ಆಗಿದ್ದಾರೆ. ಅದರಂತೆ ಚಿಂತಕರೂ ಆಗಿನದೊಂದು ಮಹತ್ವದ ಮಾತಾಗಿದೆ. ಬಿಡಪನವರು ಬೀದರಿನ ಆಧುನಿಕ ನಿರ್ಮಾಪಕರಲ್ಲಿ ಒಬ್ಬರಾಗಿದ್ದಾರೆ. ಬೀದರ ಕರ್ನಾಟಕಕ್ಕೆ ಸೇರಿಸಲು ಬಿಡಪನವರ ಪ್ರಯತ್ನ ಸ್ಲ್ಯಾಗನೀಯ.

ಬಿಡಪನವರು ವಿಶ್ವಪರ್ಯಟನೆ ಮಾಡಿದ ಸಾಹಸಿಗರೂ ಹೌದು. ಇಷ್ಟು ದೊಡ್ಡ ವ್ಯಕ್ತಿಗಳಾಗಿ ಬಿಡಪ ಸ್ನೇಹ ಜೀವಿಗಳೂ ಆಗಿದ್ದಾರೆ. ಅವರು ಇಂದಿನ ತರುಣರನ್ನುದ್ದೇಶಿಸಿ ಮಾತನಾಡುತ್ತಾ ಒಂದು ಸ್ಪಷ್ಟ ವಿಚಾರ ವ್ಯಕ್ತಪಡಿಸಿದ್ದಾರೆ. ಅವರು ಇಂದು ಬೆಳೆಸಿಕೊಂಡು ಬರುತ್ತಿರುವ ವಿರಾಮ ಸಂಸ್ಕೃತಿ ಕಳೆದೊಗೆದು ಕ್ರಿಯಾಶೀಲ ಸಂಸ್ಕೃತಿಯನ್ನು ಬೆಳೆಸಿಕೊಳ್ಳದೆ ಹೋದರೆ ನಮ್ಮ ದೇಶಕ್ಕೆ ಉಳಿಗಾಲವಿಲ್ಲವೆಂದು ಹೇಳುತ್ತಾರೆ. ಬಿಡಪ ಪ್ರಾಮಾಣಿಕರು, ಸತ್ಯಸಂಧರು, ಹಾಗೂ ಮಾನವತಾವಾದಿಗಳೂ ಆಗಿದ್ದಾರೆ. ಅವರದು ಸರಳ ಸಾದಾಜೀವನ ಅವರ ಜೀವನದ ಯಶಸ್ಸಿನ ಗುಟ್ಟು ನಿಯಮಿತತನದ ಪಾಲನೆಯಲ್ಲಿಯೇ ಇದೆಯೆಂದರೆ ತಪ್ಪಾಗಲಾರದು.

ಹೀಗೆ ಪ್ರೊ. ವೀರೇಂದ್ರ ಸಿಂಪಿಯವರು ಶ್ರೀ ಆರ್. ವ್ಹಿ. ಬಿಡಪನವರ ಜೀವನ ಚರಿತ್ರೆ ಮಾತ್ರ ಚಿತ್ರಿಸಿದಲ್ಲದೆ ಹೈದ್ರಾಬಾದ ಕರ್ನಾಟಕದ ಸ್ಥಿತಿಗತಿಗಳು ಹಾಗೂ ಸ್ವಾತಂತ್ರ ಪೂರ್ವ ಭಾರತದ ಸೂಕ್ಷ್ಮ ಚಿತ್ರಣವನ್ನು ಮಾಡಿಕೊಟ್ಟಿದ್ದಾರೆ.

ಸಿಂಪಿ ಲಿಂಗಣ್ಣನವರ ಸಾಹಿತ್ಯ

ಸಿಂಪಿ ಲಿಂಗಣ್ಣನವರು ನವೋದಯ ಸಾಹಿತ್ಯದಲ್ಲಿ ಬೆರಗುಗೊಳಿಸುವಂತಹ ಕೃಷಿಮಾಡಿದ್ದಾರೆ. ನವೋದಯ ಕಾಲದ ಇತರ ಸಾಹಿತಿಗಳಂತೆ ಲಿಂಗಣ್ಣನವರು ಕಾವ್ಯ, ನಾಟಕ, ಪ್ರಬಂಧ, ಕಾದಂಬರಿ, ಹರಟೆ, ಅನುವಾದ, ಜನಪದ ಸಾಹಿತ್ಯ ಸಂಗ್ರಹ ಹಾಗೂ ವಿಮರ್ಶ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕಾರ್ಯಮಾಡಿದ್ದಾರೆ. ಸಿಂಪಿ ಲಿಂಗಣ್ಣ ಅವರದು ಬಹುಮುಖ ಪ್ರತಿಭೆಯ ಅದ್ಭುತ ವ್ಯಕ್ತಿತ್ವ ಬಿಜಾಪುರ ಜಿಲ್ಲೆಯೊಳಗಿನ ಇಂಡಿ ತಾಲೂಕಿನ ಚಡಚಣ ಹೆಸರಿನ ಸಾಮಾನ್ಯ ಹಳ್ಳಿಯಲ್ಲಿಯ ಸಾಧಾರಣ ಮನೆತನವೊಂದರಲ್ಲಿ ಹುಟ್ಟಿದ್ದು ಅವರು ತಮ್ಮ ಸ್ವಂತಿಕೆಯಿಂದ ಸಾಹಿತ್ಯ ಕ್ಷೇತ್ರದಲ್ಲಿ ಸತತ–ಸಾಧನೆಗೈದು ಪಡೆದ ಸಿದ್ಧಿಗಳಿಂದಾಗಿ ಅನನ್ಯರಾದರು. ತಮ್ಮ ಪ್ರಾಥಮಿಕ ಶಿಕ್ಷಕ ವೃತ್ತಿ ಜೀವನದಲ್ಲಿ ಆದರ್ಶ ಶಿಕ್ಷಕರಾಗಿ ಅತ್ಯುನ್ನತ ರಾಷ್ಟ್ರ ಪ್ರಶಸ್ತಿ ಪಡೆದರು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯ ಅಸಾಮಾನ್ಯ ಸಾದನೆಯ ಮನ್ನಣೆಯೆಂದು ಕೊಪ್ಪಳದಲ್ಲಿ ಜರುಗಿದ ೬೨ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಪಟ್ಟ ಪಡೆದರು.

ಜನಪದ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಕೊಡುಗೆಗಳ ಕಾರಣದಿಂದಾಗಿ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆಯ ಸನ್ಮಾನವನ್ನು ಸಿಂಪಿ ಲಿಂಗಣ್ಣನವರು ದೊರಕಿಸಿಕೊಂಡರು. ಜಾನಪದಕ್ಕೆ ಸಂಬಂಧಿಸಿದ ಬೇರೆ ಐದಾರು ಮಹತ್ವದ ರಾಜ್ಯ ಮಟ್ಟದ ಸಮ್ಮೇಳನ ಸಭೆ ಇವುಗಳ ಅಧ್ಯಕ್ಷತೆಯ ಗೌರವವನ್ನು ಪಡೆದರು. 'ಬಾಲ್ಯದಲ್ಲಿಯೇ ಜನಪದ ಸಾಹಿತ್ಯ ಸವಿಯನ್ನುಂಡು ಸಿಂಪಿಯವರಿಗೆ ಜನಪದ ಸಾಹಿತ್ಯವೇ ಜೀವವಾಯಿತು. ಉಸಿರಾಯಿತು. ಡಾ|| ಫ.ಗು. ಹಳಕಟ್ಟಿಯವರು ವಚನ ಸಾಹಿತ್ಯದ ಪಿತಮಹರೆಂದೆನಿಸಿದ್ದಂತೆ ಡಾ|| ಸಿಂಪಿ ಲಿಂಗಣ್ಣನವರು ಜನಪದ ಸಾಹಿತ್ಯದ ಪಿತಾಮಹಾಹರೆನಿಸುತ್ತಾರೆ.' [೧] ಇಡಿಯಾಗಿ ಸಿಂಪಿ ಲಿಂಗಣ್ಣ ಅವರೊಂದಿಗಿನ ಸಂಭಾಷಣೆಯಂತೂ ಜನಪದ ನುಡಿಯ ಸೊಗಡನ್ನು ಸೊರೆಗೊಳಿಸುವ ಅನುಭವ ನೀಡುತ್ತಿತ್ತು. ಅವರ ಪೋಷಾಕು, ಅವರ ಇರುವಿಕೆ, ಅವರ ನಡವಳಿಕೆ ಇತ್ಯಾದಿಗಳೆಲ್ಲ ಜಾನಪದೀಯವಾಗಿದ್ದವು.

ಡಾ|| ಸಿಂಪಿ ಲಿಂಗಣ್ಣನವರ ಸಾಹಿತ್ಯಿಕ ಸಾಧನೆ

ಜನಪದ ಸಾಹಿತ್ಯ ಸಂಗ್ರಹ ಹಾಗೂ ವಿವೇಚನೆ

"ಗರತಿಯ ಹಾಡು" ಕೃತಿಗೆ ಯೋಗ್ಯತೆಗೆ ಸರಿಸಾಟಿಯಾಗುವ ಇನ್ನೊಂದು ಆ ಬಗೆಯ ಪುಸ್ತಕ ಇಂದಿಗೂ ಪ್ರಕಟವಾಗಿಲ್ಲ ಜನಪದ ಸಾಹಿತ್ಯದ ಸತ್ವವನ್ನು ಮತ್ತು ಸವಿಯನ್ನು ಸಮರ್ಥವಾಗಿ ಪ್ರತಿಪಾದಿಸುವ ಸೊಗಸುಗಾರಿಕೆ ಸಿಂಪಿಲಿಂಗಣ್ಣ ಅವರ "ಗರತಿಯ ಬಾಳು" ಮತ್ತು "ಜನಾಂಗದ ಜೀವಾಳ"

---

೧. ಸಂ. ಡಾ. ಗುರುಲಿಂಗ ಕಾಪಸೆ ಸಿಂಪಿಲಿಂಗಣ್ಣ ಅಪ್ಪಟ್ಟ ಜಾನಪದ ಪ್ರತಿಭೆ ಪುಟ–೨೧–೨೦೦೪

ಈ ಎರಡು ಕೃತಿಗಳಲ್ಲಿ ಮಾತ್ರ ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಂಡಿದೆ. ಅವು ಜನಾಂಗದ ಜೀವಾಳ ಜಾನಪದ ವಿಮರ್ಶೆ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿದೆ. ಉತ್ತರ ಕರ್ನಾಟಕದ ಜಾನಪದ ಗೀತೆಗಳು ಐ.ಬಿ.ಎಚ್. ಸಂಸ್ಥೆಯ ಪ್ರಕಟಣೆಯಾಗಿದ್ದು ಇದರಲ್ಲಿ ಜನಪದಗೀತೆಗಳ ಹಾಡುವ ಸಂದರ್ಭ ರೀತಿ ಬಗೆಗಳನ್ನು ಸಂಕ್ಷೆಪಿಸಿದಾಗ ಪರಿಶೀಲಿಸಿದ್ದಾರೆ. "ಕಿರಿದರೊಳೆ ಪಿರಿವದರ್ಥಕ ಚಲಕ" ಎಂಬ ಪುಸ್ತಕದಲ್ಲಿ ವಿಶೇಷ ಗಾದೆಯ ಮಾತುಗಳು ಅಡ್ಡಕತೆಗಳು ದೃಷ್ಟಾಂತ ಕಥೆಗಳು ಮುಂತಾದ ಜನಪದ ಸಾಹಿತ್ಯದ ವಿವಿಧಾಂಗಗಳಲ್ಲಿ ಭಾಷೆಯ ಬಳಕೆ ಹೇಗೆ ಆಗಿದೆಯೆಂಬುದರ ಸರಳ ಸುಂದರ ವಿಮೋಚನೆ ಕಾಣಬಹುದು "ಲಾವಣಿಗಳು" ಪುಸ್ತಕವನ್ನು ಧಾರವಾಡದ ವಿದ್ಯಾವರ್ಧಕ ಸಂಸ್ಥೆ ಪ್ರಕಟಿಸಿದೆ.

ಹೆಡಿಗೆ ಜಾತ್ರೆ

ಜಾನಪದ ವಿಷಯವನ್ನೇ ಕುರಿತ ಹದಿನೇಳು ಪ್ರಬುದ್ಧ ಮೌಲಿಕ ಪ್ರಬಂಧಗಳ ಸಂಕಲನವಾಗಿದೆ. "ಗರತಿಯ ಬಾಳ ಸಂಹಿತೆ" ಗರತಿಯ ನಾಲ್ಕು ಅವತಾರಗಳ ಅದ್ಭುತ ಪವಾಡವನ್ನು ಗರತಿಯ ಹಾಡಿನ ವ್ಯಾಖ್ಯಾನದ ಮೂಲಕ ವಿವರಿಸಿದ್ದಾರೆ. "ಗಾದೆಗಳ ಗಾರುಡಿ" ಗಾದೆಗಳನ್ನು ಕುರಿತೇ ಹದಿನೇಳು ಲೇಖನಗಳನ್ನೊಳಗೊಂಡ ಈ ಗ್ರಂಥದಲ್ಲಿ ಲೇಖಕರ ಒಂದೊಂದು ಮಾತು ಗಾದೆಯಾಗುವಷ್ಟು ಅರ್ಥವಂತಿಕೆಯನ್ನು ಕೊಡುತ್ತವೆ.

ಕವನ ಸಂಕಲನಗಳು

ಸಿಂಪಿ ಲಿಂಗಣ್ಣನವರು ರಾಮನರೇಶ ತ್ರಿಪಾಠಿಯವರು ಹಿಂದಿಯಲ್ಲಿ ಬರೆದ "ಮಿಲನ"ವೆಂಬ ಖಂಡಕಾವ್ಯವನ್ನು ಕನ್ನಡಕ್ಕೆ ಅನುವಾದಿಸಿದರು "ಮುಗಿಲ ಜೇನು" ಸಂಕಲನಕ್ಕೆ ಮೊದಲಿಗೆ ಕರಿವಾಳ (ಅಂದರೆ ದೇವನಾಯುಧ) ಎಂಬ ಶಿರ್ಷಿಕೆ ಇತ್ತು ಮುಗಿಲ ಜೇನು ಸಿಂಪಿಯವರ ಮುಗ್ಧ ಕಲ್ಪನೆ ಬಾಳಿನ ನೋಟ ಮತ್ತು ಬಾಳಿನ ಗೊತ್ತು ಗುರಿಯನ್ನು ಹೃದ್ಯಯವಾಗಿ ಸೂಚಿಸುವ ಪದ್ಯ "ಮಾತೃವಾಣಿ" ಯಲ್ಲಿ ಶ್ರೀ ಅರವಿಂದಾಶ್ರಮದ ಶ್ರೀ ಮಾತೆಯವರ ನುಡಿ ಮುತ್ತುಗಳನ್ನು ಪದ್ಯ ರೂಪದಲ್ಲಿ ಹೆಣೆದಿದ್ದಾರೆ. ಈ ಬಿಡಿ ಬಿಡಿ ಕವನಗಳು ಭೋಧಪ್ರದವಾಗಿವು "ಪೂಜಾ" ಗದ್ಯಗೀತೆಗಳ ಸಂಗ್ರಹಕ್ಕೆ ಪ್ರೊ. ವ್ಹಿ. ಕೃ ಗೋಕಾಕರು ಮುನ್ನುಡಿ ಬರೆದಿದ್ದಾರೆ. ಅತೀಂದ್ರಿಯ ಪ್ರಜ್ಞೆಯ ಸ್ಪರ್ಶದಿಂದ ಪುಳಕಿತನಾದ ಕವಿ ತನ್ನಲ್ಲಿ ಉಂಟಾದ ಕಂಪನವನ್ನು ಗದ್ಯಗೀತೆಗಳಲ್ಲಿ ವರ್ಣಿಸಿದ್ದಾರೆ. "ನಮಸ್ಕಾರ" ಉನ್ನತ ಭಾವ ಉದಾತ್ತ ಅನುಭಾವ, ನಿರ್ಮಲ ಮನಸ್ಸು, ಕಲ್ಪನಾ ವಿಲಾಸ, ಪರಿಶುದ್ಧ ಭಕ್ತಿಗಳಲ್ಲಿ ಅಲಂಕಾರಿಕ ಸೂತ್ರಬದ್ಧ ಲಲಿತಗದ್ಯದಲ್ಲಿ ಅಭಿವ್ಯಕ್ತಗೊಂಡಿವೆ ಗದ್ಯಗೀತೆಗಳ ವಸ್ತು ಹಾಗೂ ರೂಪಗಳಲ್ಲಿ ಮಿಗಿಲಾದ ಸಾಮರಸ್ಯ ಕಾಣುತ್ತೇವೆ.

ಪ್ರಬಂಧ ಸಂಕಲನಗಳು

ಶ್ರೀ ಸಿಂಪಿಲಿಂಗಣ್ಣನವರು ಕನ್ನಡ ಜನಪದ ಸಾಹಿತ್ಯದ ಆಚಾರ್ಯ ಪುರುಷರಲ್ಲಿ ಒಬ್ಬರಾಗಿದ್ದಾರೆ ಅದರಂತೆ ಕನ್ನಡದ ಪ್ರಮುಖ ಪ್ರಬಂಧಕಾರರಲ್ಲಿಯೂ ಒಬ್ಬರಾಗಿದ್ದಾರೆಂದು ದೇ.ಜ.ಗೌ. ಹೇಳುತ್ತಾರೆ. ಅರವತ್ತು ವರ್ಷಗಳ ಅವರ ಅಖಂಡ ಅವಿರತ ಸಾಹಿತ್ಯ ಸಾಧನೆಯೇ ಹದಿನೈದರಷ್ಟು ಗ್ರಂಥಗಳು ಪ್ರಬಂಧ ಸಂಕಲನಗಳಾಗಿವೆ. ಭಾರತ ಭವ್ಯ ಸಿದ್ಧತೆ, ಭಾರತಕ್ಕೆ ಸ್ವರಾಜ್ಯ ದೊರೆತುದಕ್ಕೆ ಭಾರತೀಯ

[illegible]

ಸಂಸ್ಕೃತಿಯ ಸಂಘಟನೆ ಬಾಳ ಬೇಸಾಯ. ವೈಚಾರಿಕ ಪ್ರಬಂಧ ಸಂಕಲನಗಳು, ಜೀವನ ದೃಷ್ಟಿ, ಬದುಕಿನ ನೆಲೆ ಸನ್ಯಾಸಿದಿಬ್ಬ ಸ್ವರ್ಗದೋಲೆ ಹೀಗೆ ಸುಮಾರು ಹದಿನಾರು ಪ್ರಬಂಧವನ್ನು ಕಾಣಬಹುದು.

ಜೀವನ ಚರಿತ್ರೆಗಳು

ಜೀವನ ಚರಿತ್ರೆ ಶ್ರೀ ಸಿಂಪಿ ಲಿಂಗಣ್ಣನವರು ವಿಶೇಷ ಕೃಷಿ ಮಾಡಿದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದೆ. ತಮ್ಮ ಜೀವನದ ಘಟನೆಗಳನ್ನು ಮೆಲಕು ಹಾಕುವುದರೊಂದಿಗೆ ಮಧುರಚೆನ್ನ ಬೇಂದ್ರೆಯವರನ್ನೊಳಗೊಂಡತೆ, ಬಸವಣ್ಣ ವಿವೇಕಾನಂದ ರಾಮಕೃಷ್ಣ ಪರಮಹಂಸ ಟ್ಯಾಗೋರ ರಾಮತೀರ್ಥ ಶ್ರೀಮಾತೆ ಶ್ರೀ ಅರವಿಂದರನ್ನು ಕುರಿತು ಚರಿತ್ರೆಗಳನ್ನು ಬರೆದಿದ್ದಾರೆ. ಈ ಜೀವನ ಕಥನವನ್ನೂ ಬಾಹ್ಯ ಜೀವನದ ಇತಿಹಾಸವನ್ನು ಸಂಕ್ಷಿಪ್ತವಾಗಿ ಕೊಡುವುದರ ಜೊತೆಗೆ ಅವರ ಅಂತರಂಗಿಕ ಜೀವನದ ಹೋರಾಟವನ್ನು ದ್ವಂದ್ವವನ್ನು ಆಧ್ಯಾತ್ಮಿಕ ಜೀವನದ ಸಾಧನೆ ಸಿದ್ಧಿಗಳನ್ನು ಅವರ ಜೀವನದ ಸಂದೇಶವನ್ನೂ ಉಳಿದ ಮಹಾಪುರುಷರೊಂದಿಗೆ ಹೋಲಿಕೆಯನ್ನು ಮಾಡುತ್ತ ಹೋಗುವುದು ಹಾಗೂ ಅವರು ಜೀವನದುದ್ದಕ್ಕೂ ವ್ಯಕ್ತ ಪಡಿಸುತ್ತಾ ಬಂದ ನುಡಿ ಮುತ್ತುಗಳನ್ನು ಕೊಡುವುದು ಸಿಂಪಿಯವರು ಕಂಡುಕೊಂಡ ಜೀವನ ಚರಿತ್ರೆಯ ವಿನ್ಯಾಸವೆಂದು ಹೇಳಬಹುದು.

ಸಣ್ಣ ಕತೆಗಳು

ಶ್ರೀ ಸಿಂಪಿಲಿಂಗಣ್ಣನವರು ಸಣ್ಣ ಕತೆಗಾರರೆಂದು ಇಂದು ಪರಿಗಣಿಸಲ್ಪಡದೇ ಹೋದರು ಕೆಲವು ಸಣ್ಣ ಕತೆಗಳನ್ನು ಬರೆದಿದ್ದಾರೆ. "ಮಧುವನ" ವಿವಿಧ ಕತೆಗಾರ ಕತೆಗಳನ್ನೊಳಗೊಂಡ ಕಥಾ ಸಂಕಲನವಾಗಿದೆ "ಪವಿತ್ರ ಜೀವನ" ಇದರಲ್ಲಿ ಪ್ರೇಮಚೆಂದಿರ ಹಿಂದಿ ಅನುವಾದದ ಸಹಾಯದಿಂದ ಕನ್ನಡಕ್ಕೆ ಅನುವಾದಿಸಿದ ಪುಸ್ತಕವಾಗಿದೆ. ಇದು ಜೀವನದ ಮೂಲಭೂತ ಪ್ರಶ್ನೆಗಳ ಸುತ್ತಲೂ ಕತೆ ಹೆಣೆಯಲ್ಪಟ್ಟಿವೆ. "ಸುಂದರ ಕಥೆಗಳು" ಶ್ರೀ ಅರವಿಂದ ಆಶ್ರಮದ ಮಾತೆಯವರ ಕಥೆಗಳ ಕನ್ನಡನುವಾದವಾಗಿದೆ. ದೀಪವರ್ತಿ ಶ್ರೀ ಅರವಿಂದರು ಬರೆದ ಏರಡು ಸಣ್ಣ ಕತೆಗಳ ಕನ್ನಡನುವಾದವಾಗಿದೆ.

ಕಾದಂಬರಿ

ಶ್ರೀ ಸಿಂಪಿ ಲಿಂಗಣ್ಣನವರು ಒಂದು ನೂರು ಕೃತಿಗಳನ್ನು ರಚಿಸಿದರೂ ಅವರ ಬೆಟ್ಟದ ಹೊಳೆಯೆಂಬ ಒಂದೇ ಒಂದು ಕಾದಂಬರಿಯನ್ನು ರಚಿಸಿದ್ದಾರೆ. ಅದು ಅವರ ಆತ್ಮಕತೆಯ ಅಂಶಗಳನ್ನೊಳಗೊಂಡಿದೆ. ಆತ್ಮಕತೆಯೊಂದಿಗೆ ಏಷ್ಟೋ ಕಾಲ್ಪನಿಕ ಕತೆಗಳು ಕೂಡಿವೆ. ಲೇಖಕರೇ ಈ ಕಾದಂಬರಿಯ ಆಶಯವಿಂದು ಹೇಳಿಕೊಂಡಿದ್ದಾನೆ. ಬಾಳಿನ ಚಿತ್ರಗಳ ಬಯಲಾಟ ಮುಂತಾದವುಗಳ ಜೀವಂತ ವರ್ಣನೆ ಕಾದಂಬರಿಯನ್ನು ಹೃದಯವನ್ನಾಗಿ ಮಾಡಿವೆ.

ಮಕ್ಕಳ ಸಾಹಿತ್ಯ

ಶ್ರೀ ಸಿಂಪಿ ಲಿಂಗಣ್ಣನವರು ಮಕ್ಕಳಿಗಾಗಿ ಅವರ ಅರಿವಿಗೆ ನಿಲುಕುವ ಶೈಲಿಯಲ್ಲಿ ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. ವಿಶ್ವಾಮಿತ್ರನ ಸಾಹಸ ಲೊಬೊ ಲೊಬೊ, ಕಿರುಗನ್ನಡಿ, ಹರಿಜನೋದ್ಧಾರ, ಅಕ್ಕ ತಂಗಿಯರಿಗಾಗಿ, ಭಗವಾನ್ ಬುದ್ಧದೇವ, ಕಬೀರ ಕವಿತೆ, ಪೌರನೀತಿ ಅಲೆ, ಅಚಿದ ಚೆಂಡು, ನಾಮದೇವ,

ಮಕ್ಕಳ ಶ್ರೀ ಅರವಿಂದರ, ತಿರುವಲ್ಲವರ್ ಬಬಲೇಶ್ವರದ ಸ್ವಾಮಿಗಳು, ಗುಡ್ಡಾಪುರದ ದಾನಮ್ಮ, ಗಣಾಚಿ ವೀರಣ್ಣ, ಕರೆಯಿಸಿಕೊಂಡು ಬಂದರು. ಮಹಾಪುರುಷರು ಜೀವನ ಪ್ರಸಂಗಗಳು, ಈ ಕೃತಿಗಳು ಮಕ್ಕಳಿಗಾಗಿ ರಚಿತವಾಗಿವೆ. ಇವಿ ಹೆಚ್ಚಾಗಿ ಸಮಾಜ ಶಿಕ್ಷಣ ಪ್ರಸಾರಕ ಗ್ರಂಥಮಾಲೆ ಬೆಳಗಾವಿಯವರಿಂದ ಪ್ರಕಟವಾಗಿವೆ.

ನಾಟಕ ಏಕಾಂಕಗಳು

ಇವರು ಬರೆದ ಮರೆಮುಚ್ಚಕ ವೆಂಬ ಅಸ್ಪ್ರಶೋದ್ಧಾರ ಕುರಿತ ನಾಟಕ "ಜನಜೀವನ" ನಾಟಕವು ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ದೆಯೇ ಮೇಲು ಎಂದು ವಿವರಿಸುವ ಮೂರಂಕಿನ ನಾಟಕವಾಗಿದೆ. ಇದನ್ನು ಏಕಾಂಕ ರೂಪಕ್ಕೆ ತಿರುಗಿಸಿ ಏಳು ಏಕಾಂಕಗಳನ್ನೊಳಗೊಂಡ "ಸಪ್ತಪದಿ" ಎಂಬ ಸಂಗ್ರಹವನ್ನು ಹೆರತಂದರು. ಹೀಗೆ ಭಕ್ತಿ ರಹಸ್ಯ, ಮೊದಲನೇ ದೇಶದ್ರೋಹಿ ಎಂಬ ಪ್ಥಥ್ವಿರಾಜ ಅಲೆಕ್ಸಾಂಡರನ ನಡುವಿನ ಹೋರಾಟವನ್ನು ಕುರಿತ ಚಿಕ್ಕ ನಾಟಕ ಬರೆದರು.

ಅನುವಾದಿತವಾದ ರಾಮತೀರ್ಥರ ಸಾಹಿತ್ಯ

ಶ್ರೀ ಸಿಂಪಿ ಲಿಂಗಣ್ಣನವರು ಮರಾಠಿಯಲ್ಲಿ ಪ್ರಕಟಿತವಾದ ರಾಮತೀರ್ಥರ ಉಪನ್ಯಾಸಗಳ ಸಮಗ್ರ ಸಂಪುಟಗಳನ್ನು ಸತತ ಅಧ್ಯಯನ ಮಾಡಿ ನಂತರ ಕನ್ನಡದಲ್ಲಿ ಅನುವಾದಿಸಿದ್ದಾರೆ. ಈ ಅನುವಾದಗಳು ಮೂಲದ ಸೌಂದರ್ಯವನ್ನು ಬಹುಮಟ್ಟಿಗೆ ಇರಿಸಿಕೊಂಡಿವೆ. "ಸುಖದ ನೆಲೆ" ಶ್ರೀ ರಾಮತೀರ್ಥ ಸ್ವಾಮಿಗಳ ಹನ್ನೊಂದು ಉಪನ್ಯಾಸಗಳ ಕನ್ನಡಾನುವಾದ ಮನೆಯಲ್ಲೆ ಮುಕ್ತಿಯದಾರಿ, ಭಾರತ ಸಮಸ್ಯೆ, ಸುಖದ ನೆಲೆ ರಾಮತೀರ್ಥರ ಪತ್ರಗಳು ಹೀಗೆ ರಾಮತೀರ್ಥರರ ಜೀವನದ ಘಟನೆಗಳನ್ನು ತಿಳಿಸಿಕೊಟ್ಟಿದ್ದಾರೆ.

ಅರವಿಂದ ಸಾಹಿತ್ಯ

ಶ್ರೀ ಅರವಿಂದರ ಕುರಿತು ಅವರು ಬರೆದ ಜೀವನ ಚರಿತ್ರೆ ಪ್ರೌಢವಾಗಿದ್ದು, ಮೂರು ಆವೃತ್ತಿಗಳನ್ನು ಹೊಂದಿ ಇಂದಿಗೂ ತನ್ನ ಅಧಿಕೃತತೆಯನ್ನು ಉಳಿಸಿಕೊಂಡಿದೆ. ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯಕ್ಕೆ ಸಿಂಪಿ ಲಿಂಗಣ್ಣನವರು ಘನವಾದ ಕಾಣಿಕೆ ಕೊಟ್ಟಿದ್ದಾರೆ.

ಹೀಗೆ ಸಿಂಪಿ ಲಿಂಗಣ್ಣನವರು ಹಿರಿಯ ಜಾನಪದ ವಿದ್ವಾಂಸರಾಗಿ ಪ್ರಬಂಧಕಾರರಾಗಿ, ಜೀವನ ಚರಿತ್ರೆಕಾರರಾಗಿ, ಕವಿಗಳಾಗಿ, ನಾಟಕ ವಿಮರ್ಶಕರಾಗಿ ವಿಚಾರವಾದಿಗಳಾಗಿ ಆಧ್ಯಾತ್ಮಿಕವಾದಿಗಳಾಗಿ. ಗ್ರಾಮೀಣ ಸಂಸ್ಕೃತಿಯ ಸೌರಭವನ್ನು ಹರಡಿದ ರಸಿಕರಾಗಿ ಕನ್ನಡ ಜನತೆಯ ಮನವನ್ನು ಗೆದ್ದವರು. ಅವರ ಸಾಹಿತ್ಯ ಸೃಷ್ಟಿ ವಿಪುಲವಾಗಿದಂತೆ ವೈವಿಧ್ಯ ಪೂರ್ಣವೂ ಆಗಿದೆ. ವಿಶಿಷ್ಟ ದೃಷ್ಟಿಕೋನದ್ದೂ ಆಗಿದೆ. ಅವರು ಆಧುನಿಕ ಕನ್ನಡ ಗದ್ಯ ನಿರ್ಮಾಪಕರಲ್ಲಿ ಒಬ್ಬರಾಗಿದ್ದಾರೆ. ಇಂತಹ ಮಹಿಮರ ಜೀವನ ಚರಿತ್ರೆಯನ್ನು ಪರಿಚಯಿಸಿದ ಖ್ಯಾತಿ ಇವರ ಮಗನಾದ ಪ್ರೊ. ವೀರೇಂದ್ರ ಸಿಂಪಿ ಅವರಿಗೆ ಸಲ್ಲುತ್ತದೆ.

ಸಂಪಾದನೆ

ಪ್ರೊ. ವೀರೇಂದ್ರ ಸಿಂಪಿ ಅವರ ಇನ್ನೊಂದು ಪ್ರಮುಖ ಮತ್ತು ವೈಶಿಷ್ಟ್ಯ ಪೂರ್ಣ ಸಾಧನೆ ಅಂದರೆ ಸಂಪಾದನೆ. "ಚೆನ್ನಬಸವಣ್ಣನವರು", "ಬೀದರ ಜಿಲ್ಲಾ ದರ್ಶನ", "ಬೀದರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು" ಇವು ವೀರೇಂದ್ರ ಸಿಂಪಿ ಅವರ ಸ್ಮರಣೀಯ ಕಾರ್ಯವಾಗಿದೆ. ಹಾಗೆಯೆ ಚೆನ್ನಬಸವಣ್ಣನವರ ಕೆಲವು ವಚನವನ್ನು ಸಂಪಾದನೆಯನ್ನು ಮಾಡಿದ್ದಾರೆ.

ಕೃತಿ ರಚನೆಗಿಂತ ಗ್ರಂಥ ಸಂಪಾದನೆ ಅಧಿಕ ಶ್ರಮ, ತಾಳ್ಮೆ ವಿದ್ವತ್ತನ್ನೂ ಬೇಡುವಂತಹದು. ಒಂದು ಕೃತಿ ರಚನೆಗೆ ಆಕಾಲದ ಅದಕ್ಕೆ ಸಂಬಂಧಿಸಿದ ಪರಿಜ್ಞಾನ ಇದ್ದರೆ ಸಾಕು. ಆದರೆ ಸಂಪಾದನೆ ಮಾತ್ರ ಅದಕ್ಕಿಂತ ಭಿನ್ನರೂಪದಲ್ಲಿ ಗ್ರಂಥ ಸಂಪಾದನೆಯ ಸಂದರ್ಭದಲ್ಲಿ ಕವಿಪಾಠ, ಹಸ್ತಪ್ರತಿ ಸಾಮಗ್ರಿ, ಕವಿಪರಿಚಯ ಕೃತಿ ರಚನೆಯ ಹಿನ್ನಲೆ, ಪರಿಸರ ಕೃತಿ ಮತ್ತು ಅದರ ವಿಶ್ಲೇಷಣೆ ಕವಿಯ ಮನೋಧರ್ಮ, ಹೀಗೆ ವಿವಿಧ ಮಗ್ಗಲುಗಳಿಂದ ಒಳಹೊಕ್ಕು ಗಮನಿಸಬೇಕಾಗುತ್ತದೆ. ಇದರೊಂದಿಗೆ ರಸ, ವ್ಯಾಸ ಸನ್ನಿವೇಶ ಭಾಷೆ ಶೈಲಿ, ಛಂದಸ್ಸು ಮೌಲ್ಯ ಮತ್ತು ಸ್ಥಾನ ನಿರ್ದೇಶನ ಮಾಡುವ, ತೂಗಿ ನೋಡುವ ಜವಾಬ್ದಾರಿ ಸಂಪಾದಕನದ್ದು. ಸಂಪಾದಿತ ಕೃತಿಯ ಕಟ್ಟಿತಂದ ಬುತ್ತಿ ಸಂದರ್ಭದ ಕಟ್ಟೆಯ ಮೇಲೆ ಬಿಚ್ಚಿಡಲು ಪ್ರಯತ್ನಿಸುವುದು, ಉಣಬಡಿಸುವುದು, ಈ ಕಾರಣಗಳಿಂದ ಈ ಸಂಪಾದನೆ ಕೃತಿಗಳ ಮಹತ್ವ ಪಡೆಯುತ್ತದೆ.

ಚೆನ್ನಬಸವಣ್ಣನವರು

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನದ ಬಸವಾದಿ ಶರಣರ ವಚನಗಳಿಗೆ ತುಂಬಾ ವಿಶೇಷ ಸ್ಥಾನವಿದೆ. ಗದ್ಯವೂ ಅಲ್ಲದ ಪದ್ಯವೂ ಅಲ್ಲದ ವಚನಗಳು ಮುಕ್ತ ರೂಪದ ರಚನೆಗಳಾಗಿವೆ. ವಿಶ್ವದ ಯಾವ ಭಾಷೆಯಲ್ಲಿಯೂ ಕಾಣಸಿಗದ ಸಂವಾದಗಳಾಗಿವೆ. ಮನಸ್ಸಿನ ನಿವೇದಗಳಾಗಿವೆ. ಅಂತರಂಗದ ಅನಿಸಿಕೆಗಳಾಗಿವೆ ಸಾಮಾಜಿಕ ಕ್ರಾಂತಿಯ ಕಿಡಿಗಳಾಗಿವೆ. ನೂರಾರು ಜನ ಶರಣರು ಹಾಗೂ ಸುಮಾರು ಮೂವತ್ತುಮೂರು ಜನ ಶಿವಶರಣೆಯರು ಮರ್ತ್ಯಲೋಕದ ಮನದ ಮೈಲಿಗೆ ಕಳೆಯಲೆಂದು ವಚನಗಳನ್ನು ರಚಿಸಿದರು. ಅವು ದೇವಲೋಕಕ್ಕೆರುವ ಬಟ್ಟೆಗಳಾಗಿವೆ. ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿಯಾಗಿಸುವ ವಚನಗಳು ಮರುಷದಂತಿದೆ. ಶರಣರು ವಚನಗಳಲ್ಲಿ ಮನದೆರೆದು ಮಾತಾಡಿದರಿಂದ ಅಲ್ಲಿ ಲಿಂಗವನ್ನು ಕಾಣಬಹುದು.

ಹನ್ನೆರಡನೆಯ ಶತಮಾನದ ಶರಣ ಸಂಕುಲದಲ್ಲಿ ಚೆನ್ನಬಸವಣ್ಣನವರು ವಯಸ್ಸಿನಲ್ಲಿ ಕಿರಿಯರು ಜ್ಞಾನದಲ್ಲಿ ಹಿರಿಯರು ವಯಸ್ಸಿಗೂ ಮಿರಿದ ಪ್ರತಿಭೆ ಅವರದು. ಚೆನ್ನಬಸವಣ್ಣನವರು ಅರುಹಿದ ಸಾಧನಾ ಮಾರ್ಗದಲ್ಲಿ ಸರ್ವಾರ್ಪಣೆ ತತ್ವಕ್ಕೆ ಮಹತ್ವದ ಸ್ಥಾನವಿದೆ. ಚೆನ್ನಬಸವಣ್ಣನವರು ಜ್ಞಾನದ ಅಚ್ಚುತ ಶಿಖರವನ್ನು ತಲುಪಿದರು ಶರಣರಲ್ಲಯೇ ವಯಸ್ಸಿನಲ್ಲಿ ಕಿರಿಯರಾದ ಚೆನ್ನಬಸವಣ್ಣನವರು ಜ್ಞಾನದ ತುತ್ತ ತುದಿಯನ್ನು ಮುಟ್ಟಿದಂತೆ ಕ್ರೀಯಾಶೀಲತೆಗೂ ಹೆಸರಾಗಿದ್ದರು. ವೇದ ಶಾಸ್ತ್ರ ಪುರಾಣಗಳನ್ನು ಧಿಕ್ಕರಿಸಿ ಅಂದಿನ ಶೈವ ಸಂಪ್ರದಾಯಗಳನ್ನು ಅಲ್ಲಗಳೆದು ವೈದಿಕ ಧರ್ಮದ ಪೊಳ್ಳುತನವನ್ನು ಎತ್ತಿ ತೋರಿಸುವುದರ ಮೂಲಕ ಚೆನ್ನಬಸವಣ್ಣನವರು ಪುರೋಹಿತ ಶಾಯಿಯ ವಿರುದ್ಧ ತಮ್ಮ ಸಮರವನ್ನು

ಸಾರಿದರು. ಧರ್ಮದ ಪುನರುತ್ಪಾದನಕ್ಕೆ ಕಾರಣ ಕರ್ತರಾಗಿದ್ದಂತೆ ಚೆನ್ನಬಸವಣ್ಣನವರು ಲಿಂಗವಂತ ಧರ್ಮ ಸಿದ್ದಾಂತದ ಸಂವಿಧಾನ ಶಿಲ್ಪಿಗಳಾಗಿದ್ದರು. ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಕ್ಕೂ ಸಂಬಂಧಿಸಿದ ಅನೇಕ ಮೌಲಿಕ ವಿಚಾರಗಳನ್ನು ಈತನು ವಚನಗಳು ಒಳಗೊಂಡಿವೆ. ಚೆನ್ನಬಸವಣ್ಣನು ತನ್ನ ಒಂದು ವಚನದಲ್ಲಿ ಇಷ್ಟಲಿಂಗಧಾರಿಗಳು ಸ್ಥಾವರ ಲಿಂಗಕ್ಕೂ ಎರಗಬಾರದೆಂದು ಎಚ್ಚರಿಕೆಯನ್ನು ನೀಡುವುದರ ಮೂಲಕ ಇಷ್ಟಲಿಂಗ ಮಾಹಿತಿಯನ್ನು ಎತ್ತಿ ಹಿಡಿದಿರುವರು. ಆತನ ವಚನಗಳು ಒಂದು ರೀತಿಯಲ್ಲಿ ನೀತಿ ಸಂಹಿತೆಗಳಂತಿವೆ. ಬೋದೆಗಳಾಗಿವೆ ತತ್ವ ಸಿದ್ದಾಂತಗಳ ವಿವರಣೆಯಾಗಿವೆ.

ಪ್ರೊ. ವೀರೇಂದ್ರ ಸಿಂಪಿ ಅವರು ಚೆನ್ನಬಸವಣ್ಣನವರ ವಚನಗಳ ಸಂಗ್ರಹಣೆಯಲ್ಲಿ ಸುಮಾರು ೧೨೫ ವಚನಗಳನ್ನು ಸಂಕಲ್ಪಿಸಿ ಸಂಪಾದನೆಯನ್ನು ಗೈದಿರುವರು. ಚೆನ್ನಬಸವಣ್ಣ ಅಂದು ಎಲ್ಲ ಶರಣರಿಂದ ಮಾನ್ಯವಾಗಿ, ಮಾರ್ಗದರ್ಶಕನಾಗಿ ಜ್ಞಾನಿಯಾಗಿ ಕಂಗೊಳಿಸಿದ್ದಾನೆ.

ಇಷ್ಟಲಿಂಗ ಅರುಹಿನ ಕುರುಹು, ಇಷ್ಟಲಿಂಗ ದೀಕ್ಷೆ ಇಲ್ಲದೆ ಶರಣಮಾರ್ಗ ಅಳವಡಿಸಿದ್ದು ಸಾಧಕ ಎಷ್ಟೇ ಸಿದ್ದಿಯನ್ನು ಗಳಿಸಿದರೂ ಇಷ್ಟಲಿಂಗ ಬಿಡಲಾಗದೂ.

ಆಕಾಶದಲ್ಲಾಡುವ ಪಟಕ್ಕಾದಡೆಯೂ ಮೂಲ ಸೂತ್ರವಿರಬೇಕು

ಕಲಿಯಾದಡೆಯಾ ಕಜ್ಜವಿಲ್ಲದೆ ಆಗದು ಭೂಮಿಯಿಲ್ಲದೆ ಬಂಡಿ ನಡೆಯದು

ಅಂಗಕ್ಕೆ ಲಿಂಗವಿಲ್ಲದೆ ನಿಸ್ಸಂಗವಾಗಬಾರದು. ಕೂಡಲ ಚೆನ್ನಸಂಗಮದೇವರಲ್ಲಿ

ಸಂಗವಿಲ್ಲದೆ ನಿಸ್ಸಂಗಿಯೆಂದು ನುಡಿಯಬಹುದೆ ಪ್ರಭುವೆ?

ಎಂಬ ಮಾತಿನಲ್ಲಿ ಚೆನ್ನಬಸವಣ್ಣನ ಸಿದ್ದಾಂತ ನಿರೂಪಣೆಯ ಸ್ಪಷತೆಯನ್ನು ಮನಗಾಣಬಹುದು.

ಜ್ಞಾನವಿಲ್ಲದ ಕ್ರಿಯೆಗೆ ಅರ್ಥವಿಲ್ಲ, ಕ್ರಿಯೆ ಇಲ್ಲದ ಜ್ಞಾನಕ್ಕೆ ಬೆಲೆಯಿಲ್ಲ ಅವೆರಡರ ಸುಂದರ ಸಮನ್ವಯವೇ ಶರಣರು ಅನುಸರಿಸಿದ ಮಾರ್ಗ ಇದನ್ನು ತುಂಬ ಸರಳವಾಗಿ ಚೆನ್ನಬಸವಣ್ಣ ಹೇಳುವುದನ್ನು ನೋಡಬಹುದು.

ಕ್ರಿಯೆಯೆ ಜ್ಞಾನ ಆ ಜ್ಞಾನವೆ ಕ್ರಿಯೆ

ಜ್ಞಾನವೆಂದಡೆ ತಿಳಿಯುವುದು,

ಕ್ರಿಯೆಯೆಂದಡೆ ತಿಳಿದಂತೆ ಮಾಡುವುದು

ಪರಸ್ತ್ರೀಯ ಭೋಗಿಸಬಾರದೆಂಬುದೆ ಜ್ಞಾನ,

ಅದರಂತೆ ಆಚರಿಸುವದೆ ಕ್ರಿಯೆ ಅಂತು ಆಚರಿಸದಿದ್ದಡೆ ಅದೆ ಅಜ್ಞಾನನೋಡಾ ಕೂಡಲ ಚೆನ್ನಸಂಗಮದೇವಾ

ಪ್ರೊ. ವೀರೇಂದ್ರ ಸಿಂಪಿ ಅವರ ಈ ಚೆನ್ನಬಸವಣ್ಣನವರ ವಚನಗಳಲ್ಲಿ ಷಟಸ್ಥಲ ವಚನಗಳು ಪಂಚಾಚಾರ ಅಷ್ಟಾವರಣ ಸಂಬಂಧಿಸಿದ ವಚನಗಳು ಕುರಿತ ಸಂಕುಲವನ್ನು ಮಾಡಿರುವುದು ಕಾಣಬಹುದು.

"ಬೀದರ ಜಿಲ್ಲಾ ದರ್ಶನ"

ಬೀದರ ಜಿಲ್ಲಾ ದರ್ಶನ ಗ್ರಂಥ ಬೀದರ ಜಿಲ್ಲೆಯನ್ನು ಪ್ರತಿನಿಧಿಸುವ ಸಮಗ್ರ ದರ್ಶನವಲ್ಲದಿದ್ದರು ನಿರ್ದಿಷ್ಟ ವಿಷಯಗಳನ್ನೊಳಗೊಂಡ ಸಂಕಲನವಾಗಿದೆ. ಅನೇಕ ಹೊಸ ಲೇಖನವನ್ನು ನಾವು ಇದರಲ್ಲಿ

ಕಾಣಬಹುದು. ಧರಿನಾಡೆನಿಸಿದ ಬೀದರ ಜಿಲ್ಲೆಯ ಪರಂಪರೆ, ಸಂಸ್ಕೃತಿ, ಇತಿಹಾಸ, ಕಲೆ ಸಾಹಿತ್ಯ ಕೃಷಿ ಹಾಗೂ ಜಾನಪದ ಪರಿಸರಗಳಿಗೆ ಮಾಹಿತಿಯನ್ನು ಈ ಗ್ರಂಥ ನೀಡುತ್ತದೆ. ಬೀದರ ಜಿಲ್ಲೆಯ ಸಾಹಿತ್ಯ ಶ್ರೀಮಂತವಾದದ್ದು ಅಗಾಧವಾದುದು ಇಂಥಹ ಜಿಲ್ಲೆಯ ಐತಿಹಾಸಿಕ, ಸಾಂಸ್ಕೃತಿಕ ಸಾಹಿತ್ಯಿಕ ಹಾಗೂ ಸಾಮಾಜಿಕ ಮುಖಗಳ ಕುರಿತು ಪರಿಚಯ ಮಾಡಿಕೊಡುವ ಲೇಖನಗಳ ಸಂಕಲನವು ಇದಾಗಿದೆ. ಸಂಕುಲಿತವಾದ ಲೇಖನಗಳು ವಿದ್ವತ್ಪೂರ್ಣವಾದವುಗಳು.

ಬೀದರ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ

ಎಂಬ ಲೇಖನ ಡಾ ॥ ಎಲ್. ಆರ್. ಕುಲಕರ್ಣಿ ಅವರದ್ದಾಗಿದೆ. "ಬಿದಿರಿ" ಕಲೆಯಲ್ಲಿ ನಿಪುಣತೆಯನ್ನು ಪಡೆದ ಬೀದರ ನವಕರ್ನಾಟಕದ ಕರೀಟವಾಗಿದೆ. ಪೌರಾಣಿಕವಾಗಿ ಬೀದರ "ವಿದುರನಗರ" ಮಹಾಭಾರತದ ಕಾಲದಷ್ಟು ಇದರ ಪ್ರಾಚೀನತೆ. ಇತಿಹಾಸದ ಕಾಲವನ್ನು ತಿಳಿಸುತ್ತಾ ಲೇಖಕರು ಬೀದರ ಪ್ರಾಚೀನ ಇತಿಹಾಸದ ಚಿತ್ರ ಅಸ್ಪಷ್ಟ ೧೦ ನೆ ಶತಮಾನದಲ್ಲಿ ಕಲ್ಯಾಣದ ಚಾಲುಕ್ಯರ ಆಳ್ವಿಕೆ ಪ್ರಾರಂಭ ಕಲ್ಯಾಣ ರಾಜಧಾನಿ ಬೀದರೆಯ ಉಜ್ವಲ ಇತಿಹಾಸದ ಮೊದಲ ಅಧ್ಯಾಯ ಪ್ರಾರಂಭವಾಯಿತು. ನಂತರ ೧೨ ನೇ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಶರಣರ ಕ್ರಾಂತಿಯ ಕಾಲ ಬೀದರ ಇತಿಹಾಸದ ನವೋದಯ ಕಾಲ ೧೨೦೦ ರ ಸುಮಾರಿಗೆ ಕಲ್ಯಾಣದ ಚಾಲುಕ್ಯರ ಪತನ ಬೀದರ ದೇಹಲಿ ಸುಲ್ತಾನರ ಕೈವಶ ಆಗ ಮಹ್ಮದ ತುಘಲಕ ದಾಳಿ ಬೀದರ ಮೇಲಾಯಿತು. ಅಹ್ಮದ ಶಹನು ಆಳ್ವಿಕೆಯಲ್ಲಿ ಬೀದರ ಸಾಂಸ್ಕೃತಿಕ ಜೀವನದಲ್ಲಿ ಹೊಸ ತಿರುವು ಪಡೆಯಿತು. ಸಾಂಸ್ಕೃತಿಕ ಕಲೆಯ ಹಿರಿಮೆಯನ್ನು ಮೆರೆಸುವ ಬೀದರ ಕೋಟೆ ದಕ್ಷಿಣ ದೇಶಗಳ ಕೋಟೆಗಳಿಗಿಂತ ಭದ್ರ ಹಾಗೂ ಸುಂದರವಾಗಿದೆ. ಬಿದರಿ ಕಲೆ ಬೀದರದ ಘನತೆಯನ್ನು ಹೆಚ್ಚಿಸಿದೆ. ಅನೇಕ ಕಟ್ಟಡಗಳು ಸುಲ್ತಾನರ ವೈಭವ ಕಲಾತ್ಮಕ ಬದುಕಿನ ದರ್ಶನವನ್ನು ಮಾಡಿಸುತ್ತದೆ. ಧರ್ಮ ಸಂಸ್ಕೃತಿ ಸಮನ್ವಯವನ್ನು ಕಾಣುತ್ತೇವೆ.

ದಿ. ಡಾ. ವಿಠಲರಾವ್ ಕುಲರ್ಣಿ ಅವರು ತಮ್ಮ ಲೇಖನವಾದ ಬೀದರ ಜಿಲ್ಲೆಯ ಶಿಲಾಶಾಸನಗಳು ಎಂಬುದರಲ್ಲಿ ಬೀದರ ಜಿಲ್ಲೆಯಲ್ಲಿ ದೊರೆತ ಚಾಲುಕ್ಯರ ಶಾಸನಗಳು ಈ ಜಿಲ್ಲೆಯ ಸಂಸ್ಕೃತಿ ಹಿರಿಮೆಯನ್ನು ಹಾಗೂ ಜನತೆಯ ಜೀವನದ ಮೌಲ್ಯಗಳನ್ನು ತಿಳಿಸುತ್ತವೆ ಎಂದು ಹೇಳಿದ್ದಾರೆ. ಬಸವಕಲ್ಯಾಣ ಸಮೀಪದ ನಾರಾಯಣಪುರ ಶಿಲಾಶಾಸನ/ ಚಾಲುಕ್ಯ ವಿಕ್ರಮಾದಿತ್ಯನ ಕಾಲದ್ದು ನಾರಾಯಣಪುರದ ಕೆರೆಯ ಸಮೀಪದ ಹೊಲದಲ್ಲಿ ಬಿದ್ದ ಸ್ತಂಭ ಶಾಸನವು ಚಾಲುಕ್ಯ ಭೂಲೋಕಮಲ್ಲ ೩ ನೇ ಸೋಮೇಶ್ವರ ಕಾಲದ್ದು, ರಂಜೋಳ ಗ್ರಾಮದ ಶಿಲಾಶಾಸನ ಚಾಳುಕ್ಯರ ಕಾಲದ್ದು, ಗೋರಟಾ ಗ್ರಾಮದ ರಸ್ತೆ ಬದಿಯಲ್ಲಿ ಬಿದ್ದ ಶಾಸನ, ಕಲ್ಯಾಣದ ಕೋಟೆಯಲ್ಲಿ ದೊರೆತ ಶಾಸನಗಳು ಬೀದರ ಸಮೀಪದ ಅಣದೂರ ಶಾಸನ ಹಾಲಹಳ್ಳಿ ಶಿಲಾಶಾಸನ ಅನೇಕ ಶಿಲಾಶಾಸನಗಳು ದೊರಕುತ್ತವೆ. ಎಂದು ತಿಳಿಸಿದ್ದಾರೆ.

ಬೀದರ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆಯಲ್ಲಿ ಮಹಿಳೆಯರ ಪಾತ್ರ

ಇದನ್ನು ಶ್ರೀಮತಿ ಭಾರತಿ ವಸ್ತ್ರದ ಅವರು ಬರೆದಿದ್ದಾರೆ. ಇವರು ಬೀದರ ಜಿಲ್ಲೆಯ ಐತಿಹಾಸಿಕ,

---

ಪ್ರ. ಸಂ. ಡಾ. ಜಗನ್ನಾಥ ಹೆಬ್ಬಾಳೆ

ಸ. ಸಂ. ಪ್ರೊ. ವೀರೇಂದ್ರ ಸಿಂಪಿ ಬೀದರ ಜಿಲ್ಲಾ ದರ್ಶನ ೧೯೯೮

[illegible]

ರಾಜಕೀಯ ಧಾರ್ಮಿಕ ಸಾಂಸ್ಕೃತಿಕ ಸಾಹಿತ್ಯಿಕ ಅಂಶಗಳಲ್ಲಿ ಮಹಿಳೆ ತನ್ನ ಪ್ರಭಾವವನ್ನು ಬೀರಿ ಯುಗ-ಯುಗಗಳಿಂದಲೂ ನವ ಚೇತನ ಶಕ್ತಿಯಾಗಿದ್ದಾಳೆಂದು ತಿಳಿಸಿದ್ದಾರೆ. ಹೀಗೆ ಐತಿಹಾಸಿಕ, ಸಾಹಿತ್ಯಿಕ, ಸಂಗೀತ, ನೃತ್ಯ, ಕಲೆ, ಶಿಕ್ಷಣ, ಸಾಮೂಹಿಕ ಕಾರ್ಯಗಳು, ರಾಜಕೀಯ, ಸಾಕ್ಷರತೆ, ಈ ಕ್ಷೇತ್ರದಲ್ಲಿ ಹೆಣ್ಣಿನ ಪಾತ್ರವನ್ನು ತಿಳಿಸಿಕೊಟ್ಟಿದ್ದಾರೆ. ಬೀದರ ಜಿಲ್ಲೆಯ ಮಹಿಳೆಯನ್ನು ಕುರಿತು ಈ ರೀತಿ ಹೇಳಿರುವರು ಕಾಣಬಹುದು.

ಧರೀ (ಬೀದರ) ಸ್ತ್ರೀ ಧೀರ ಮಾದುರಿ

ಬೀದರ ಜಿಲ್ಲೆಯ ವಾಸ್ತುಶಿಲ್ಪದ ಬಗ್ಗೆ ಡಾ॥ ಸೋಮನಾಥ ಯಾಳವಾರರು ಬೀದರ ಕಲಾತ್ಮಕವಾದ ವಾಸ್ತುಗಳ ದೃಷ್ಟಿಯಿಂದಲೂ ಪ್ರಮುಖವೆನಿಸುತ್ತದೆ. ಬೀದರನಲ್ಲಿ ಕೋಟೆ-ಕೊತ್ತಳಗಳು, ಮಸೀದಿ-ಮಂದಿರಗಳು, ಅರಮನೆ ಮನೆಗಳು, ಗುಮ್ಮಟ-ಗೋರಿಗಳು ಕಟ್ಟಡಗಳಲ್ಲಿ ಕಾಣಸಿಗುತ್ತವೆ. ಒಟ್ಟಾರೆ ಬೀದರ ಜಿಲ್ಲೆಯ "ವಾಸ್ತು ಶೈಲಿ" ಅಮೋಘವಾದುದು.

ರಷ್ಯನ್ ಪ್ರವಾಸಿ ಕಂಡ ಬೀದರ

ಲೇಖನವು ಮುರಲೀಧರ ಕುಲಕರ್ಣಿ ಅವರು ಬರೆದಿದ್ದಾರೆ. ಬೀದರ ನಗರಕ್ಕೆ ಬೇಡಿ ನೀಡಿದ ರಷ್ಯನ್ ಪ್ರವಾಸಿ ಅಥನಾಸಿ ನಿಕಿಟಿನ್ ಆಗ ಬೀದರನ್ನು ಮಹ್ಮದ ಶಾಹನ ಆಡಳಿತ ಇತ್ತು. ಇಡೀ ಹಿಂದುಸ್ತಾನದಲ್ಲಿ "ಬೀದರ" ಪ್ರಸಿದ್ಧ ನಗರವೆಂದು ಬಣ್ಣಿಸಿದ.

ಕರ್ನಾಟಕದ ಕಿರೀಟ ಬೀದರ ಜಿಲ್ಲೆ

ಕ್ಷಿತಿಜ ಅವರ ಲೇಖನದಲ್ಲಿ ಬೀದರ ಔದ್ಯೋಗೀಕರಣ ನಗರಿಕರಣದ ಚಿತ್ರಣವನ್ನು ಕಾಣುತ್ತೇವೆ. ಬೀದರ ಜಿಲ್ಲೆ ಒಂದು ಮಿನಿ ದುಬೈ ಅಥವಾ ಮಿನಿ ಪಂಜಾಬ ಎಂದು ಕರೆಸಿಕೊಳ್ಳುವ ಮಟ್ಟಿಗೆ ಇಲ್ಲಿಯ ಜನಜೀವನ ರೀತಿ-ನೀತಿಗಳು ವ್ಯಾಪಾರ-ವ್ಯವಹಾರಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ.

ಬಸವಕಲ್ಯಾಣ (ಒಂದು ವಿಹಂಗಮ ನೋಟ) ವನ್ನು ರಾಜಮತಿ ಗಂಗು ಅವರು ಮಾಡಿಕೊಟ್ಟಿದ್ದಾರೆ. ೧೨ ನೇ ಶತಮಾನದಲ್ಲಿ ಬಾಳು ಬೆಳಗಿದ ಬಸವಣ್ಣನವರ ಕಾರ್ಯಕ್ಷೇತ್ರ ಕಲ್ಯಾಣವಾಗಿತ್ತು. ಇದು ಇರುವುದು ಬೀದರ ಜಿಲ್ಲೆಯಲ್ಲಿ ಅನೇಕ ಶರಣರ ಅಡಿಗಳ ಮಹಿಮೆಯಿಂದ ಪಾವನವಾದ ಈ ನೆಲ, ಜಲ, ಅನೇಕ ಪ್ರೇಕ್ಷಣೀಯ ಸರಳಗಳನ್ನೊಳಗೊಂಡಿದೆ. ಬಸವೇಶ್ವರ ಕರ್ಮ ಭೂಮಿಯಾದುದರಿಂದ ಈ ಊರಿಗೆ "ಬಸವಕಲ್ಯಾಣ" ಎನ್ನುವ ಹೆಸರು ಬಂತು ಎಂದು ಲೇಖಕರು ಕಲ್ಯಾಣದ ಮಹಿಮೆಯನ್ನು ಕೊಂಡಾಡಿದ್ದಾರೆ.

ಬೀದರ ಜಿಲ್ಲೆಯ ಕನ್ನಡ ಭಾಷೆ

ಸುಬ್ಬಣ್ಣ ಅಂಬೆಸಂಗೆ ಅವರು ಈ ಲೇಖನವನ್ನು ವ್ಯಕ್ತಪಡಿಸಿದ್ದಾರೆ. ಬೀದರ ಕನ್ನಡದ ಮೇಲೆ ಹಿಂದಿ, ಉರ್ದು, ಮೋಡಿ, ಮರಾಠಿ, ತೆಲಗು, ಇಂಗ್ಲೀಷ ಭಾಷೆಗಳ ಪ್ರಭಾವನ್ನು ಹಾಕಿದವು ಇದರಿಂದಾಗಿ ಇಲ್ಲಿನ ಶುದ್ಧ ಕನ್ನಡಕ್ಕೆ ಅನ್ಯ ಭಾಷೆಯ ಪದಗಳು ಕಾರ್ಮೋಡಗಳಂತೆ ಮುಸುಕಿಕೊಂಡವು. ಇಲ್ಲಿಯ ಕನ್ನಡ ಭಾಷೆಯಲ್ಲಿ ಜನಪದ ಭಾಷೆ ತುಂಬಿಕೊಂಡಿದೆ. ಹೀಗೆ ಬೀದರ ಜಿಲ್ಲೆಯ ಕನ್ನಡ

ಭಾಷೆಯು ಶುದ್ಧ ಮತ್ತು ಅನ್ಯ ಭಾಷೆಗಳ ಪ್ರಭಾವದಿಂದ ಸ್ವಲ್ಪ ಮಟ್ಟಿಗೆ ಅಶುದ್ಧವಾಗಿ ಬಳಕೆಯಾಗುತ್ತದೆ. ಎಂದು ಹೇಳಬಹುದು.

ಬೀದರ ಜಿಲ್ಲೆಯಲ್ಲಿ ನೆರೆಮನೆ-ಸಂಭಾಷಣೆ

ಎಸ್.ವ್ಹಿ. ಮೂಲಿಮನಿ ಅವರು ಬೀದರ ಬಸವಕಲ್ಯಾಣ ಹುಮನಾಬಾದ ಭಾಲ್ಕಿ ಹಾಗೂ ಔರಾದ (ಬಿ) ಹೊಂದಿರುವ ಬೀದರ ಜಿಲ್ಲೆ ಸದ್ಯಕ್ಕೆ ಆರ್. ಎಂ. ಎಲ್. ಎ. ಕ್ಷೇತ್ರಗಳನ್ನು ಹೊಂದಿದೆ. ಈ ಭಾಗದಲ್ಲಿ ನೆರೆಹೊರೆಯ ಸಂಭಾಷಣೆಯನ್ನು ನೀವು ಕಾಣುತ್ತೇವೆ.

ಬೀದರ ಜಿಲ್ಲೆಯ ಸಂಗೀತ

ಪ್ರೊ. ಸಿದ್ದರಾಮಯ್ಯ ಮಠಪತಿ ಕರ್ನಾಟಕದ ಸಂಗೀತ ಪರಂಪರೆಯಲ್ಲಿ ಬೀದರ ಜಿಲ್ಲೆಗೆ ತನ್ನದೆ ಆದ ವಿಶಿಷ್ಟ ಪರಂಪರೆಯಿದೆ. ವಿವಿಧ ಬಗೆಯ ಸಂಗೀತ (ಹಿಂದುಸ್ತಾನಿ) ಶಾಸ್ತ್ರೀಯ ಸುಗಮ ಸಂಗೀತ. ಜನಪದ, ರಂಗಭೂಮಿ ಸಂಗೀತ, ಮುಂತಾದ ಸಂಗೀತ ಪರಿಚಯವನ್ನು ಮಾಡಿದ್ದಾರೆ. ಸಂಗೀತ ಅಗ್ರಹಾರ, ಸಂಗೀತ ಸಂಸ್ಥೆಗಳು, ಸಂಗೀತ ಪಾಠಶಾಲೆಗಳು, ಗಾಯಕರು, ತಬಲಾ ಕಲಾವಿದರು, ಸಿತಾರ, ಕೊಳಲು, ಹಾರ್ಮೋನಿಯಂ ಮೊದಲಾದವುಗಳು ಪರಿಚಯಿಸಿದ್ದಾರೆ.

ವಿಶ್ವವಿಖ್ಯಾತ ಬಿದ್ರಿ ಕಲೆ

ರಾಜೇಂದ್ರ ಯರನಾಳೆ ಬಿದ್ರಿ ಕಲೆಯ ಉಗಮವಾದ ಕುರುಹುಗಳಾ. ಧಾರದ ಮೇಲೆಯೂ ಬೀದರ ಎಂಬ ಹೆಸರು ಬಂದಿದೆ ಎನ್ನುತ್ತಾರೆ. ಬಿದ್ರಿ ಬೀದರ ಶಬ್ದ ಬಳಕೆ ಬಿದ್ರಿಕಲೆಯ ಉಗಮ ವಿಕಾಸ ಬಿದ್ರಿ ಕಲೆಗಳು ಹಾಗೂ ವೈಶಿಷ್ಟ್ಯ ಬಿದ್ರಿ ಕಲೆಯ ಪರಿಕರಗಳು ಬಿದ್ರಿ ಕಲೆ ತಯಾರಿಸುವಿಕೆ ಇವೆಲ್ಲವು ಪರಿಚಯವನ್ನು ಕಾಣಬಹುದು.

ಬೀದರ ಜಿಲ್ಲೆಯಲ್ಲಿ ರಂಗಭೂಮಿ

ಬೀದರ ಜಿಲ್ಲೆಯಲ್ಲಿ ರಂಗಭೂಮಿ ನಡೆದು ಬಂದ ದಾರಿಯನ್ನು ಚಂದ್ರಗುಪ್ತ ಚಾಂದಕವಟೆ ಅವರು ಚಿತ್ರಿಸಿದ್ದಾರೆ. ಇಂದಿಗೂ ಕೂಡ ರಂಗಭೂಯಲ್ಲಿರುವ ಆಕರ್ಷಣೆ ವಿಶಿಷ್ಟತೆಯಿಂದ ಕೂಡಿದುದಾಗಿದೆ.

ಬೀದರ ಜಿಲ್ಲೆಯ ಕರಕುಶಲ ಕಲೆಗಳ ಪರಿಚಯ

ಬೀದರ ಜಿಲ್ಲೆಯ ಕರಕುಶಲ ಕಲೆಗಳ ಪರಿಚಯವನ್ನು ಮ.ಮಾ. ಬೋರಾಳಕರರ ಮಾಡಿಕೊಟ್ಟಿರುವರು. ಕರಕುಶಲ ಕಲೆಯಲ್ಲಿ ಬುದ್ಧಿ ಹಾಗೂ ತಾಳ್ಮೆ ಮುಖ್ಯವಾಗಿರುತ್ತದೆ. ಕರಕುಶಲ ಕಲೆಗಳನಲ್ಲಿ ಗುಡಿ ಕೈಗಾರಿಗಳ ಗುಂಪಿಗೆ ಸೇರಿಸಬಹುದು.

ಬೀದರ ಜಿಲ್ಲೆಯ ಜನಪದ ಕಲೆಗಳು

ಬೀದರ ಜಿಲ್ಲೆಯ ಜನಪದ ಕಲೆಗಳು ಒಂದು ಸಮೀಕ್ಷೆ ಡಾ. ಸೋಮನಾಥ ನುಚ್ಚಾ ತಿಳಿಸಿದ್ದಾರೆ. ಗೊಂದಲಿಗರು ಭೂತೇರು ಪಾರವಂತರು ಬಹುರೂಪಿಗಳು ಅಲಾಯಿ ಕುಣಿತ ದೊಡ್ಡಾಟ ಪೈಪಿ

ಡಪ್ಪಿನಾಟ (ಸಣ್ಣಾಟ) ಕೋಲಾಟ ಈ ಎಲ್ಲಾ ಜನಪದ ಕಲೆಗಳಲ್ಲದೆ ಅನೇಕ ಬಗೆಯ ಜನಪದ ಗೀತೆಗಳನ್ನು ಕೂಡ ತಿಳಿಸಿಕೊಟ್ಟಿದ್ದಾರೆ.

ಬೀದರ ಜಿಲ್ಲೆಯ ಸ್ವರವಚನಕಾರರು

ಬೀದರ ಜಿಲ್ಲೆಯ ಸ್ವರವಚನಕಾರರು ಎಚ್ ಕಾಶೀನಾಥರೆಡ್ಡಿ ಸ್ವರವಚನಕಾರರ ಪರಂಪರೆ ಹಾಗೂ ಸ್ವರವಚನಕಾರರ ಬಗ್ಗೆ ತಿಳಿಸಿದ್ದಾರೆ. ಮರಕುಂದಿಯ ಬಸವಣ್ಣಪ್ಪ, ಮಾಣಿಕ ಪ್ರಭು, ಸಿದ್ಧಪ್ರಭು ಭದ್ರಪ್ಪ ಹುಸನ ನಿಜಲಿಂಗ ಭದ್ರೇಶ್ವರ ಲಾದಾ ಶಿವರಾಯ ಹಣಮಂತ ಭೂತಾಳೆ ಶಿಲ್ಲಪ್ಪ ಮೊದಲಾದ ಸ್ವರವಚನಕಾರರ ಬಗ್ಗೆ ತಿಳಿಸಿದ್ದಾರ.

ಬೀದರ ಜಿಲ್ಲೆಯಲ್ಲಿ ಕನ್ನಡದ ಪುನರುಸ್ಥಾನದ

ಬೀದರ ಜಿಲ್ಲೆಯಲ್ಲಿ ಕನ್ನಡದ ಪುನರುಸ್ಥಾನದ ಬಗ್ಗೆ ಹೇಳುತ್ತಾ ಬೀದರ ಜಿಲ್ಲೆಯು ಕನ್ನಡದ ಗಂಡು ಮೆಟ್ಟಿನ ನೆಲವಾಗಿದೆ. ಕನ್ನಡವು ಈ ನಾಡಿನ ಆಡಳಿತ ಭಾಷೆ ಹಾಗೂ ಆಡು ಭಾಷೆಯಾಗಿ ಮೆರೆಯಿತು. ಎಂದು ಹನುಮಂತಪ್ಪ ಪಾಟೀಲ ಹೇಳಿದ್ದಾರೆ.

- ದೇಶಾಂಶ ಹುಡುಗಿ ಬೀದರ ಜಿಲ್ಲೆಯ ಕವಿ–ಕಾವ್ಯ ಸಂಪತ್ತು ಕುರಿತು ತಿಳಿಸಿದ್ದಾರೆ.
- ವಿಕ್ರಮ ವಿಸಾಜಿ ಅವರು ಬೀದರ ಜಿಲ್ಲೆಯ ಕಾದಂಬರಿಗಳ ಪರಿಚಯಿಸಿದ್ದಾರೆ. ಸಿಂದಿ ಬನದಲ್ಲಿ ಸಿಕ್ಕವಳು, ಪ್ರಕಾಶ ಜ್ಯೋತಿ, ಹೂ ಬಾಡಿದಾಗ, ಮಂಗಳಾ ಇವುಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಣೆ ಮಾಡಿರುವುದು ಕಾಣಬಹುದು.

ಬೀದರ ಜಿಲ್ಲೆ ಪರಿಸರ ಮಾಲಿನ್ಯ–ಒಂದು ಸಮೀಕ್ಷೆ

ಸುಭಾಷ ಎನ್. ನೇಳಗೆ ಮಾಡಿದ್ದಾರೆ. ಪಟ್ಟದ ಶುಚಿತ್ವಕ್ಕೆ ಬೇಕಾದ ಕ್ರಮಗಳನ್ನು ತಿಳಿಸಿದ್ದಾರೆ.

- ಬೀದರ ಜಿಲ್ಲೆಯ ಪ್ರಗತಿಗೆ ಎಫ್.ಕೆ.ಎ.ಐ. ಬೀದರ ಶಾಖೆಯ ಕೊಡುಗೆಯನ್ನು ಕುರಿತು ಪ್ರೊ. ಬಿ. ಆರ್. ಕೊಂಡ ಅವರು ಹೇಳಿದ್ದಾರೆ.

ಬೀದರ ಜಿಲ್ಲೆಯ ಲಿಂಗಾಯತ ಮಠಗಳು

ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಲಿಂಗಾಯತ ಮಠಗಳು

ಔರಾದ ತಾಲ್ಲೂಕಿನ ಲಿಂಗಾಯತ ಮಠಗಳು

ಬೀದರ ತಾಲ್ಲೂಕಿನ ಲಿಂಗಾಯತ ಮಠಗಳು

ಹುಮನಾಬಾದ ತಾಲ್ಲೂಕಿನ ಲಿಂಗಾಯತ ಮಠಗಳು

ಬಸವಕಲ್ಯಾಣ ತಾಲ್ಲೂಕಿನ ಲಿಂಗಾಯತ ಮಠಗಳು

ಒಟ್ಟಾರೆ ಬೀದರ ಜಿಲ್ಲೆಯ ಲಿಂಗಾಯತ ಮಠಗಳು ಧಾರ್ಮಿಕ ಶೈಕ್ಷಣಿಕ ಸಾಮಾಜಿಕ ಸಾಹಿತ್ಯದ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆ ಗಮನಾರ್ಹವಾದುದಾಗಿದೆ ಎಂದು ವೀರಶೆಟ್ಟಿ ಬಾವುಗೆ ಅವರು ತಿಳಿಸಿಕೊಟ್ಟಿರುವರು

ಬೀದರ ಜಿಲ್ಲೆಯ ಬುಡಕಟ್ಟು

ಬೀದರ ಜಿಲ್ಲೆಯ ಬುಡಕಟ್ಟು ಡಾ. ಕೆ. ಎಂ. ಮೈತ್ರಿಗೊಂಡರು, ರಾಜಗೊಂಡರು, ಪಾಲ್ದಿ, ಟೋಕರಿಕೊಳಿ, ಬೇಡ, ಬಗ್ಗೆ ತಿಳಿಸಿಕೊಡುತ್ತಾ ಬುಡಕಟ್ಟು ಇಂದು ಪರಿವರ್ತನೆ ಹೊಂದುತ್ತಿವೆ. ಎಂದು ತಿಳಿಸಿದ್ದಾರೆ.

- ಸಾರ್ಥಕ ಜೀವನದ ಶತಮರುಷ ಭಾಲ್ಕಿಯ ಪೂಜ್ಯ ಶ್ರೀ ಚೆನ್ನಬಸವ ಪಟ್ಟದೇವರ ಸಾಧನೆಯನ್ನು ಕುರಿತು ಪ್ರೊ. ವೀರೇಂದ್ರ ಸಿಂಪಿ ಅವರು ತಿಳಿಸಿದ್ದಾರೆ. ಇವರು ಶ್ರೇಷ್ಠ ಶರಣರು ಅಪ್ರತಿಮ ಸಂತರು ಹಾಗೂ ಬಸವತತ್ವಾನುಯಾಯಿಗಳು. ದಲಿತೋದ್ಧಾರಕರು ಪ್ರಗತಿಶೀಲರು ಆಗಿದ್ದಾರೆ.
- ಸಂತ ಮಾಣಿಕ ಪ್ರಭುಗಳ ಸಮನ್ವಯ ಪಥದ ಬಗ್ಗೆ ಎಂ.ಜಿ. ಗಂಗನ ಪಳ್ಳಿ ಅವರು ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ.

ಬೀದರ ಜಿಲ್ಲೆಯಲ್ಲಿ ಪಶುಸಂಗೋಪನೆಗೆ

ಬೀದರ ಸೂಕ್ತ ವಾತಾವರಣ ಹೊಂದಿದೆ ಎಂದು ಡಾ. ಎನ್. ಪಿ. ಪಾಟೀಲ ಹೇಳಿದ್ದಾರೆ. ಇಲ್ಲಿ ಸಾಮಾನ್ಯವಾಗಿ ಅನೇಕ ಪ್ರಾಣಿ ಸಾಕಣೆಯನ್ನು ಕಾಣಬಹುದು. ಬೀದರ ಜಿಲ್ಲೆ ಪಶು ಸಂಗೋಪನೆಯಲ್ಲಿ ತನ್ನದೇ ಆದ ವೈವಿಧ್ಯತೆಯನ್ನು ಹೊಂದಿದ್ದು ರಾಜ್ಯದ ಆರ್ಥಿಕ ಸಂಪತ್ತಿಗೆ ಅಮೂಲ್ಯವಾದ ಕೊಡುಗೆಯನ್ನು ನೀಡುತ್ತಿದೆ.

- ಮಹಾದಾಸೋಹಿ ಮಹಿಮಾ ಮರುಷ ಪೂಜ್ಯ ಮಹಾದೇವಪ್ಪ ಶರಣರ ಮಹತ್ಕಾರ್ಯಗಳನ್ನು ಕುರಿತು ಪ್ರೊ. ಶಂಭುಲಿಂಗ ವ್ಹಿ. ಕಾಮಣ್ಣಾ ವಿವರಿಸಿದ್ದಾರೆ.
- ಮುಚಳಂಬಿಯ ಬ್ರಹ್ಮಲೀನ ನಾಗಭೂಷಣ ಶಿವಯೋಗಿಗಗಳು ಜೀವನ ಮತ್ತು ಸಾಧನೆಯ ಚಿತ್ರಣವನ್ನು ಪ್ರೊ. ಗುರುಲಿಂಗಪ್ಪ ಎಸ್. ಧಬಾಲೆ ಅವರ ಲೇಖನದಲ್ಲಿ ಕಾಣಬಹುದು.
- ಶರಣರು ಮತ್ತು ಅನುಭವ ಮಂಟಪ ಕುರಿತು ಪ್ರೊ. ಸೂಗಯ್ಯ ಹಿರೇಮಠ ದೀರ್ಘ ಸಮಾಲೋಚನೆಯನ್ನು ಮಾಡಿದ್ದಾರೆ.
- ಬೀದರ ಜಿಲ್ಲೆಯ ವ್ಯವಸಾಯವನ್ನು ಶ್ರೀಕಾಂತ ಪಾಟೀಲರು ಪರಿಚಯಿಸಿದ್ದಾರೆ. ಆದಾರ ಬೆಲೆಗಳು ಕೃಷಿ ಯೋಜನೆಗಳು, ತಾಂತ್ರಿಕತೆಗಳ ಬೆಳವಣಿಗೆ, ಜೈವಿಕ ಗೊಬ್ಬರ, ರಸಗೊಬ್ಬರಗಳ ಮಾಹಿತಯನ್ನು ಕೊಟ್ಟಿದ್ದಾರೆ.
- ಬೀದರ ಜಿಲ್ಲೆಯ ಜನಪದ ವೃತ್ತಿಕೊವಿದರುಗಳು ಆದ ಬುಡಬುಡಿಕೆ ಕಿನ್ನರಿ ಜೋಗಿ, ಹಾವಾಡಿಗರು, ದೊಂಬರು, ಸುಡಗಾಡ ಸಿದ್ದರು, ಬಹುರೂಪಿ ಭೂತೇರು, ಕೋತಿ ಕುಣಿತ, ಜಾತಗಾರರು, ಕರಡಿ ಕುಣಿತ, ಮುಂತಾದ ವೃತ್ತಿ ಜನಪದ ಕಲಾವಿದರನ್ನು ಡಾ. ಜಗನ್ನಾಥ ಹೆಬ್ಬಾಳೆಯವರು ಪರಿಚಯಿಸಿದ್ದಾರೆ.
- ಬೀದರ ಜಿಲ್ಲೆಯ ಶಿವಶರಣೆಯರು ಪ್ರೊ. ಗಂಗಾಬಿಕೆ ಪಾಟೀಲ ಅವರು ತಮ್ಮ ಲೇಖನದಲ್ಲಿ ವೀರಮಾತೆ ಜಯದೇವಿತಾಯಿ, ಶಾಂತಿಯೇ ಮೂರ್ತಿವೆತ್ತಂತಿರುವ ಮಾತೆಲಲ್ಲೇಶ್ವರಿ ಮೂಗಿ,

ಕೋಡ್ಲಾ ಮಹಾದೇವಿ, ಮಾತೆ ಮೈತ್ರಾದೇವಿ, ಮಾತೆ ಲಕ್ಷ್ಮಿದೇವಿ, ಗಂಗಾದೇವಿ, ಹಾಗೂ ನಿಜಾನುಭಾವಿ ಸೃಜ್ಞಾನಿ ದೇವಿಯರ ಇವರುಗಳ ಕಾರ್ಯ ಪ್ರವೃತ್ತಿಯನ್ನು ತಿಳಿಸಿದ್ದಾರೆ. ಈ ಶಿವಶಖುಣೆಯರು ಆಧ್ಯಾತ್ಮದ ತಂಪೆರೆಯುವ ಚೈತನ್ಯದ ಚೆಲುಮೆಯಾಗಿದ್ದಾರೆ.

ಈ ರೀತಿಯಾಗಿ ಬೀದರ ಜಿಲ್ಲಾ ದರ್ಶನ ಕೃತಿಯು ಬೀದರ ಜಿಲ್ಲೆಯ ಸಮಗ್ರ ಚರಿತ್ರೆಯ ವಿಹಂಗಮ ನೋಟವನ್ನು ಪರಿಚಯಿಸುವಂತಹ ಕೃತಿಯಾಗಿದೆ.

"ಬೀದರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು"

ಪ್ರೊ. ವೀರೇಂದ್ರ ಸಿಂಪಿ ಈ ಗ್ರಂಥದ ಪ್ರಧಾನ ಸಂಪಾದಕರಾಗಿದ್ದು ಶ್ರೀ ಗುರುಸಿದ್ದಪ್ಪ ಸೋಮಶೆಟ್ಟಿಯವರು ಸಹ ಸಂಪಾದಕರಾಗಿದ್ದಾರೆ. ಕರ್ನಾಟಕದ ಉತ್ತರದ ತುತ್ತ ತುದಿಯಲ್ಲಿರುವ ಬೀದರ ಜಿಲ್ಲೆ ಅದರ ಮುಕಟ ಮಣಿಯೂ ಆಗಿದೆ. ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದ ಬೀದರ ಜಿಲ್ಲೆ ಕ್ರಾಂತಿಕಾರಿಗಳ ನಾಡೂ ಹೌದು ಹನ್ನೆರಡನೇ ಶತಮಾನದಲ್ಲಿ ಶರಣರು ಸಾಂಸ್ಕೃತಿಕ, ಸಾಹಿತ್ಯಿಕ, ಧಾರ್ಮಿಕ, ಸಾಮಾಜಿಕ ಕ್ರಾಂತಿಯನ್ನು ಇದೇ ಕಲ್ಯಾಣ ನಾಡಿನಲ್ಲಿ ಮಾಡಿದರು. ಅಂತಹ ಇನ್ನೊಂದು ಕ್ರಾಂತಿಯನ್ನು ಬೀದರ ಜಿಲ್ಲೆಯ ಜನಸಾಮಾನ್ಯರು ಸ್ವಾತಂತ್ರ್ಯ ಆಂದೋಲನದ ಮೂಲಕ ಮಾಡಿ ತೋರಿಸಿದ್ದಾರೆ. ಇಡೀ ಭಾರತದಲ್ಲಿ ನಡೆದ ಸ್ವಾತಂತ್ರ್ಯ ಆಂದೋಲನ ಕೇವಲ ಬ್ರೀಟಿಷರ ನಿರಂಕುಶ ಪ್ರಭುತ್ವದ ವಿರುದ್ಧ ಮಾತ್ರವಿದ್ದರೆ ಹೈದ್ರಾಬಾದ ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ ಏಕಕಾಲಕ್ಕೆ ಬ್ರೀಟಿಷರ ಹಾಗೂ ನಿಜಾಮ ಸರಕಾರದ ಮತಾಂಧ ಆಡಳಿತದ ವಿರುದ್ಧವಿತ್ತು ಇಡೀ ಹೈದ್ರಬಾದ ಸಂಸ್ಥಾನದಲ್ಲಿಯೇ ರಜಾಕಾರರ ಉಪಟಳ ಬೀದರ ಜಿಲ್ಲೆಯಲ್ಲಿ ಅತ್ಯಂತ ಅಧಿಕವಾಗಿತ್ತು ಅದನ್ನು ಅತ್ಯಂತ ಧೈರ್ಯ ಸಾಹಸಗಳಿಂದ ಎದುರಿಸಿದ ಶ್ರೇಯ ಬೀದರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರಿಗೆ ಸಲ್ಲುತ್ತದೆ. ಬೀದರ ಜಿಲ್ಲೆಯ ಸ್ವಾತಂತ್ರ ಯೋಧರ ರೋಮಾಂಚನಾಕಾರಿ ತ್ಯಾಗ ಬಲಿದಾನಗಳನ್ನು ಈ ಗ್ರಂಥದಲ್ಲಿ ಚಿತ್ರಿಸಲಾಗಿದೆ. ಅವರ ಜೀವನ ಚರಿತ್ರೆಯನ್ನು ಸಂಗ್ರಹವನ್ನು ನಾವು ಇದರಲ್ಲಿ ಕಾಣುತ್ತೇವೆ. ಬೀದರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ದೇಶಕ್ಕಾಗಿ ಪ್ರಾಣದ ಹಂಗಿಲ್ಲದೆ ಹೋರಾಟ ಮಾಡಿದ್ದಾರೆ. ದೇಶದ ಯಾವ ಮೂಲೆಯಲ್ಲಿಯೂ ಬೀದರ ಜಿಲ್ಲೆಯಲ್ಲಿ ನಡೆದಷ್ಟು ದೊಡ್ಡ ಪ್ರಮಾಣದ ರಕ್ತ ಸಂಚಿತ ಸ್ವಾತಂತ್ರ್ಯ ಚಳುವಳಿ ನಡೆದುದಿಲ್ಲ. ಇಷ್ಟು ದೊಡ್ಡ ಸಂಖ್ಯೆಯ ಹುತಾತ್ಮರೂ ಎಲ್ಲಿಯೂ ಸಿಗುವುದಿಲ್ಲ ಅದರ ತ್ಯಾಗ ಬಲಿದಾನಗಳ ಕಥೆ ಈ ಗ್ರಂಥದಲ್ಲಿ ದೊರೆಯುತ್ತದೆ.

ಹೈದ್ರಾಬಾದ ಸ್ವಾತಂತ್ರ್ಯ ಶಿಲ್ಪಿ ಸ್ವಾಮಿ ರಮಾನಂದ ತೀರ್ಥರ ಚರಿತ್ರೆ ಘನವಾದದ್ದು. ಇವರು ೧೯೩೮ ರಲ್ಲಿ ಸ್ವಾತಂತ್ರ್ಯ ಸೇನಾನಿಗಳ ಮೊದಲ ತಂಡವನ್ನು ಅಣಿಗೊಳಿಸಿದರು ಅದರ ಧುರೀಣತ್ವವನ್ನು ರಮಾನಂದ ತೀರ್ಥರೂ ವಹಿಸಿದ್ದರೂ. ಇವರು ರಾಷ್ಟ್ರ ಪ್ರೇಮಿಗಳಾಗಿ ಹೈದ್ರಾಬಾದ ಸ್ಥಾಪಿಸಿದ ಬಂಧಿ ವಿಮೋಚನೆಯ ನಾಯಕರಾಗಿ ಅಜರಾಮರರಾಗಿದ್ದಾರೆ ಸ್ವಾತಂತ್ರ್ಯ ಸೇನಾನಿಗಳಲ್ಲೇ ಅವರೊಬ್ಬರು ಸಚೇತರಾಗಿದ್ದಾರೆ. ಒಂದು ದೃಷ್ಟಿಯಿಂದ ರಮಾನಂದ ತೀರ್ಥರ ಚರಿತ್ರೆ ಬೇರೆ ಅಲ್ಲ ಹೈದ್ರಾಬಾದ ಬಂದ ವಿಮೋಚನಾ ಚಳುವಳಿ ಬೇರೆಯಲ್ಲ ಈ ಅಂದೋಲನಕ್ಕೆ ಇವರ ಕೊಡುಗೆ ಅಪಾರ.

ಬೀದರ ಜಿಲ್ಲೆಯಲ್ಲೂ ಸ್ವಾತಂತ್ರ್ಯ ವಿಮೋಚನೆಗಾಗಿ ಚಳುವಳಿಗಳು ನಡೆದವು. ಜಿಲ್ಲೆಯ ಉದಗೀರ, ನಿಲಂಗಾ, ಚಿಟ್ಗುಪ್ಪಾ, ಹುಮನಾಬಾದ, ಬೀದರ, ಭಾಲ್ಕಿ, ಹಳ್ಳಿಖೇಡ ಮುಂತಾದವುಗಳು ಚಳುವಳಿಯ ಪ್ರಮುಖ ಕೇಂದ್ರಗಳಾಗಿದ್ದವು. ಜೊತೆಯಲ್ಲಿ ಕನ್ನಡ ಉಳಿಸಿಕೊಂಡು ಬರುವ ಪ್ರಯತ್ನಗಳು ನಡೆದವು.

ಈ ಕಾರ್ಯ ನಡೆಸಿದವರಲ್ಲಿ ಭಾಲ್ಕಿಯ ಡಾ॥ ಚೆನ್ನಬಸವ ಪಟ್ಟದ್ದೇವರು ಪ್ರಮುಖರು. ಮಠಗಳು ಮಾನ್ಯಗಳು ಕೂಡ ಈ ದಿಶೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸಿದವು. ಸ್ವತಂತ್ರ ಭಾರತದ ಅಂದಿನ ಹೈದ್ರಾಬಾದ ಪ್ರಾಂತದ ದೊಡ್ಡ ಜಿಲ್ಲೆಯಾಗಿದ್ದ ಬೀದರ ಜಿಲ್ಲೆ ೧೯೫೬ ರ ರಾಜ್ಯ ಪುನರ್ ವಿಂಗಡಣೆಯ ಪರಿಣಾಮವಾಗಿ ಕೆಲ ತಾಲ್ಲೂಕುಗಳನ್ನು ಕಳೆದುಕೊಂಡಿತು. ಈಗ ಬೀದರ, ಔರಾದ, ಭಾಲ್ಕಿ, ಹುಮನಾಬಾದ, ಬಸವಕಲ್ಯಾಣ, ಒಟ್ಟು ಐದು ತಾಲ್ಲೂಕುಗಳನ್ನು ಹೊಂದಿದ ಚಿಕ್ಕ ಜಿಲ್ಲೆಯಾಗಿದೆ. ಶರಣರ ಸಂತರ ನಾಡಿದು ವಿವಿಧತೆಯಲ್ಲಿ ಏಕತೆ ಕಾಣುತ್ತೇವೆ ನಾವಿಲ್ಲ. ಭೂಮಿ ವೈವಿಧ್ಯತೆ ಇಲ್ಲದೆ, ಜನರ ಬದುಕಿನಲ್ಲಿ ಸಾಮರಸ್ಯ ಎದ್ದು ಕಾಣುತ್ತದೆ. ಹಾಗೂ ಹೈದ್ರಾಬಾದ ಸಂಸ್ಥಾನದ ವಿಮೋಚನಾ ಚಳುವಳಿಗೆ ಬೀದರ ಜಿಲ್ಲೆಯ ಕೊಡುಗೆ ಅಪಾರ ಅದೇ ರೀತಿ ದಯಾನಂದ ಸರಸ್ವತಿ ಇವರಿಂದ ಸ್ಥಾಪಿತವಾದ "ಆರ್ಯ ಸಮಾಜ" ೧೮೭೫) ವು ಕೂಡ ನಿಜಾಮರ ಚಟುವಟಿಕೆಗಳಿಗೆ ವಿರುದ್ಧ ಪ್ರತಿಕ್ರಿಯೆಯನ್ನು ವ್ಯಕ್ತ ಪಡಿಸಿತ್ತು. ಹಾಗೂ ಹೈದ್ರಾಬಾದಿನಲ್ಲಿ ಆರ್ಯ ಸಮಾಜಿಗರು ಮಾಡಿದ ಸಾಧನೆ ಸಂಘರ್ಷಗಳು ಬಹಳಷ್ಟು.

ಈ ಒಂದು ಘಟನೆಯಿಂದಾಗಿ ಸಂಘ, ಶುದ್ಧ ಶಾಲೆ–ಕಾಲೇಜುಗಳು ಸ್ಥಾಪನೆಯಾದವು.

- ೧೮೫೨ ರಲ್ಲಿ ಬೀದರನ ಲಿಂಗಪ್ಪ ಎಂಬುವರು ಜಿಲ್ಲೆಯ ಹಲವಾರು ಕೋಟೆಗಳನ್ನು ಗೆದ್ದರು.
- ೧೮೭೫ ಮುಂಬಯಿಯಲ್ಲಿ ದಯಾನಂದ ಸರಸ್ವತಿಯವರಿಂದ ಆರ್ಯ ಸಮಾಜ ಸ್ಥಾಪನೆಯಾಯಿತು.
- ೧೯೦೮ ರಲ್ಲಿ ಗುಲ್ಬರ್ಗಾದ ನೂತನ ವಿದ್ಯಾಲಯ ಹೈಸ್ಕೂಲ್ ಸ್ಥಾಪನೆ ಉಸ್ಮಾನಿಯಾ ಯುನಿರ್ವಸಿಟಿಯ ಸ್ಥಾಪನೆ.
- ೧೯೨೦ ರಾಯಚೂರಿನಲ್ಲಿ ಹಮದರ್ದ್ ಹೈಸ್ಕೂಲ್ ಸ್ಥಾಪನೆ. ಹೈದ್ರಾಬಾದಿನಲ್ಲಿ ವಿವೇಕವರ್ಧಿನಿ ಹೈಸ್ಕೂಲಿನಲ್ಲಿ ದೊಡ್ಡ ಸಭೆ ಸರ್ಕಾರಗಳ ವಿರುದ್ಧ ಘೋಷಣೆ ಅಸಹಕಾರ ಚಳುವಳಿಯ ಪ್ರಾರಂಭ
- ೧೯೨೨ ಬೀದರಿನಲ್ಲಿ ಡಿ.ಸಿ.ಸಿ. ಬ್ಯಾಂಕ್ ಸ್ಥಾಪನೆ ಗುಲ್ಬರ್ಗಾದಲ್ಲಿ ಭಾರಿ ಕೋಮುಗಲಭೆ ಕುಕನೂರಲ್ಲಿ ಗುರುಕುಲ ಸ್ಥಾಪನೆ.
- ೧೯೨೪ ರಲ್ಲಿ ಉದಗೀರನಲ್ಲಿ ಆರ್ಯಸಮಾಜ ಸ್ಥಾಪನೆ.
- ೧೯೨೬ ಮಜಲಿಸ್–ಇತ್ತೇಹಾದುಲ್ ಮುಸ್ಲಿಂ ಸಂಸ್ಥಾ ಸ್ಥಾಪನೆ.
- ೧೯೩೫ ನಿಜಾಮ ಪ್ರಾಂತಿಯ ವೀರಶೈವ ಪರಿಷತ್ತಿನ ಸ್ಥಾಪನೆ ಉದಗೀರದಲ್ಲಿ
- ೧೯೩೬ ಕರ್ನಾಟಕ–ಪರಿಷತ್ತು ಆಂಧ್ರ ಮಹಾಸಭೆ ಮಹಾರಾಷ್ಟ್ರ ಪರಿಷತ್ತುಗಳ ಸ್ಥಾಪನೆ. ಮೋರಗಿಯಲ್ಲಿ ಕನ್ನಡ ಶಾಲೆ ಪ್ರಾರಂಭ ಭಾಲ್ಕಿಯ ಪೂಜ್ಯ ಶ್ರೀ ಚೆನ್ನಬಸವ ಪಟ್ಟದ್ದೇವರಿಂದ.

ಪ್ರ. ಸಂ. ವೀರೇಂದ್ರ ಸಿಂಪಿ

ಸಂ. ಶ್ರೀ ಗುರುಸಿದ್ದಪ್ಪಾ ಸೋಮಶೆಟ್ಟಿ 'ಬೀದರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು ೧೯೯೮

- ೧೯೩೭ ಹೈದ್ರಾಬಾದ ಸ್ಟೇಟ್ ಕಾಂಗ್ರೆಸ್ ಸ್ಥಾಪನೆ ರಾಯಚೂರಿನಲ್ಲಿ ಕರ್ನಾಟಕ ಪರಷತ್ತಿನ ಪ್ರಥಮ ಸಭೆಯು ಕಿಶನರಾವ ಅಧ್ಯಕ್ಷತೆಯಲ್ಲಿ
- ೧೯೪೩ ಬೀದರ ಜಿಲ್ಲಾ ಕಾಂಗ್ರಸ್ ಕಮೀಟಿಯ ಸ್ಥಾಪನೆ.

ಹಾಗೇಯೇ ಹೈದ್ರಾಬಾಡ ಸಂಸ್ಥಾನದ ವಿಮೋಚನಾ ಚಳುವಳಿಯ ಸುಂದರ್ಭದಲ್ಲಿ ಅನೇಕ ಪ್ರಮುಖ ಘಟನೆಗಳು ಜರುಗಿದವು.

- ೧೮-೧೯-೨೦ ರಲ್ಲಿ ಉದಗೀರದಲ್ಲಿ ಬ್ರೀಟಿಷರ ವಿರುದ್ಧ ಶಿವಲಿಂಗಯ್ಯ ದೇಶಮುಖರ ಬಂಡಾಯ ಪ್ರಮುಖವಾದುದು.
- ೧೯೨೬ ಕಾಲಾಗಷ್ತಿ ಐವತ್ತೂರು ನಿಯಮಗಳು ಹೈದ್ರಾಬಾದ ರಾಜ್ಯದ ಪ್ರಜೆಗಳ ಸಂಪೂರ್ಣ ಸ್ವಾತಂತ್ರ್ಯ ಹರಣ
- ೧೯೩೮ ಚಿಟ್ಟಗುಪ್ಪದಲ್ಲಿ ಭವಾನಿ ಪಲ್ಲಕ್ಕಿ ಮೆರವಣಿಗೆಯ ಮೇಲೆ ದಾಳಿ ರಾಜ್ಯ ಕಾಂಗ್ರೆಸ್ಸಿಗೆ ಮಾನ್ಯತೆ ದೊರಕಿಸಲು ಹೈದ್ರಾಬಾದಿನಲ್ಲಿ ಸತ್ಯಾಗ್ರಹ ಪ್ರಾರಂಭ ಬಸವಕಲ್ಯಾಣದಲ್ಲಿ ಧರ್ಮಪ್ರಕಾಶರ ಹತ್ಯ, ಭಾಯಿ ಶಾಮಿಲಾಲರಿಗೆ ಬೀದರ ಜೈಲಿನಲ್ಲಿ ವಿಷಪ್ರಾಶನದಿಂದ ನಿಧನ "ವಂದೇ ಮಾತರಂ" ಹಾಡುವ ಚಳುವಳಿ ಪ್ರಾರಂಭ.
- ೧೯೩೫ ಗುಂಜೋಟಿಯಲ್ಲಿ ಯುದ್ಧ ವೇದ ಪ್ರಾಕಾಶರ ಹತ್ಯೆ.
- ೧೯೪೦ ಜಾನಾಪೂರದಲ್ಲಿ ನರೇಂದ್ರ ನಿಕೇತನ ಆಶ್ರಮ ಸ್ಥಾಪನೆ. ಉಸ್ಮಾವಗಂಜ ಬೀದರದ ದಹನ ಬ್ರಜಪಾಲಸಿಂಗರ ಬಂಧನ, ಬಸವಂತರಾವ ಶೆಟಕಾರರ ಹತ್ಯೆ.
- ೧೯೪೬ ನಿಜಾಮರು ಸ್ಟೇಟ್ ಕಾಂಗ್ರೆಸ್ಸಿನ ಮೇಲಿನ ಪ್ರತಿಬಂಧಕಾಜ್ಞೆಯನ್ನು ತೆಗೆದು ಹಾಕಿದ್ದು.
- ೧೯೪೭ ಜಹೀರಾಬಾದಿನ ಹತ್ತಿರವಿರುವ "ರಾಯಕೊಡ ಹತ್ಯಾಕಾಂಡ" ಭಾರತ ಒಕ್ಕೂಟ ಸೇರಿರಿ ಎನ್ನುವ ಚಳುವಳಿ "ಕ್ವಿಟ್ ಕಾಲೇಜ" ಚಳುವಳಿ ಹಾಗೂ ಜಹೀರಾಬಾದಿನ ಹನುಮಾನ ಮಂದಿರದ ಮೇಲೆ ತಿರಂಗಾ ಧ್ವಜ ಹಾರಿಸಿದ್ದು. ರಜಾಕಾರರ ಮುಖಂಡ ಇಸಾಮೊದ್ದೀನನ ಹತ್ಯೆ ಶಹಾಜಾನಿ ಔರಾದಿನಲ್ಲಿ ದಂಗೆ, ಹೈದ್ರಾಬಾದ ಕರ್ನಾಟಕದ ಗಡಿ ಪ್ರದೇಶದಲ್ಲಿ ಹದಿಮೂರು ಕ್ಯಾಂಪಗಳ ನಿರ್ಮಾಣ ಆರ್. ವ್ಹಿ. ಬಿಡಪನವರ ಮುಖಂಡತ್ವದಲ್ಲಿ ಆಗಲೇ ಶಾಂತಗಿರಿ ಇಟಗಿ ಮೊದಲಾದ ಹದಿಮೂರು ಹಳ್ಳಿಗಳು ಸ್ವತಂತ್ರವೆಂದು ಘೋಷಣೆ ಮಾಡಿದರು.

ಕೂಸಗೆ ಹೋರಾಟದ ಪರಿಣಾಮವಾಗಿ ರಜಾಕಾರರು ಹಾಗೂ ನಿಜಾಮ ಪೋಲಿಸರ ಮೇಲೆ ದಾಳಿ. ದಿ. ೧೭ ನೇ ಸಪ್ಟಂಬರ ೧೯೪೮ ಕ್ಕೆ ಪೋಲಿಸ್ ಕಾರ್ಯಚರಣೆಯ ಮುಕ್ತಾಯ ಹಾಗೂ ನಿಜಾಮನು ಶರಣಾಗತನಾದದ್ದು. ಸಪ್ಟೆಂಬರ ೧೮-೧೯೪೮ ರಿಂದ ಹೈದ್ರಾಬಾದ ರಾಜ್ಯ ಭಾರತ ಒಕ್ಕೂಟ ಸೇರಿತ್ತು.

ಒಟ್ಟಾರೆ ಹೈದ್ರಾಬಾದ ಸಂಸ್ಥಾನದ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದ ಬೀದರ ಜಿಲ್ಲೆಯ ಸ್ವತಂತ್ರ ಹೋರಾಟಗಾರರೆಂದರೆ ಉದಗಿರಿ ೫ ಜಹೀರಾಬಾದ-೧೧ ಬಸವಕಲ್ಯಾಣ-೩೮

ಔರಾದ–೨೫ ಬೀದರ–೩೦ ಭಾಲ್ಕಿ–೨೪ ಹುಮನಾಬಾದ–೨೦ ಒಟ್ಟು ೧೭೩ ಸ್ವತಂತ್ರ ಹೋರಾಟಗಾರರು ಹೋರಾಡಿ ಹುತಾತ್ಮರಾದ ಸಂಗತಿಯನ್ನು ನಾವು ಈ ಗ್ರಂಥದಿಂದ ತಿಳಿದುಕೊಳ್ಳಬಹುದು. ಹೈದ್ರಾಬಾದ ಸಂಸ್ಥಾನದ ವಿಮೋಚನಾ ಚಳುವಳಿಯ ಇತಿಹಾಸ ಒಟ್ಟು ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕಿಂತ ಹೆಚ್ಚು ವಿಶಿಷ್ಟವಾಗಿದೆ. ಈ ವಿಮೋಚನಾ ಚಳುವಳಿ ಬೀದರ ಜಿಲ್ಲೆಯ ಕೊಡುಗೆ ಅಪಾರ ಎನ್ನುವದನ್ನು ಈ ಗ್ರಂಥ ತಿಳಿಸಿಕೊಡುತ್ತದೆ.

ಅನುವಾದ ಸಾಹಿತ್ಯ

ಕನ್ನಡ ನವೋದಯ ಸಾಹಿತ್ಯ ಸಂದರ್ಭದಲ್ಲಿ ಇಂಗ್ಲಿಷ್ ಭಾವಗೀತೆಗಳನ್ನು ಕನ್ನಡಕ್ಕೆ ತಂದ ಕೀರ್ತಿ ಬಿ.ಎಂ.ಶ್ರೀ ಅವರಿಗೆ ಸಲ್ಲುತ್ತದೆ. ಅವರ "ಇಂಗ್ಲಿಷ್‌ಗೀತೆಗಳು" ಅತ್ಯುತ್ಕೃಷ್ಟ ಅನುವಾದದ ಒಂದು ಉದಾಹರಣೆಯಾಗಿದೆ. ಇಂಗ್ಲಿಷ್ ರೆನೆಜಾನ್ಸ್ ಸಾಹಿತ್ಯ ಪೂರ್ತಿ ಭಾಷಾಂತರಗಳಿಂದ ತುಂಬಿದೆ ಗ್ರೀಕ್, ಲ್ಯಾಟಿನ್, ಭಾಷೆಗಳಿಂದ ಇಂಗ್ಲಿಷ್ ಸಾಹಿತ್ಯ ಸಮೃದ್ಧವಾಗಿ ಬೆಳೆಡಯಿತು. ಅರುಣೋದಯದ ಸಂದರ್ಭದಲ್ಲಿ ಮರಾಠಿ ಹಾಗೂ ಬಂಗಾಲಿ ಭಾಷೆಗಳಿಂದ ಕನ್ನಡ ಕಾದಂಬರಿ ಸಮೃದ್ಧವಾಗಿ ಬೆಳೆಯಿತು. ಬಂಕಿಮ ಚಂದ್ರರ ಕಾದಂಬರಿಗಳು ಕನ್ನಡಕ್ಕೆ ಭಾಷಾಂತರಿಸಲ್ಪಟ್ಟವು. ಅನ್ಯ ಭಾಷೆಯ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವುದರ ಮೂಲಕ ಆ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಅಂತಹ ಪ್ರತಿಭಾಶಾಲಿಗಳಲ್ಲಿ ಪ್ರೊ. ವೀರೇಂದ್ರ ಸಿಂಪಿ ಅವರು ಒಬ್ಬರಾಗಿದ್ದಾರೆ.

ಕನ್ನಡದ ಅನುವಾದ ಕ್ಷೇತ್ರಕ್ಕೆ ಅನುಪಮ ಕೊಡುಗೆ ಕೊಟ್ಟವರಲ್ಲಿ ಪ್ರೊ. ವೀರೇಂದ್ರ ಸಿಂಪಿ ಅವರು ಪ್ರಮುಖರು. ಒಂದು ಭಾಷೆಯ ಕೃತಿಗಳನ್ನು ಇನ್ನೊಂದು ಭಾಷೆಗೆ ತರ್ಜುಮೆಗೊಳಿಸುವುದರಿಂದ ಆಗುವಂತಹ ಪ್ರಯೋಜನ ಅಪಾರ ಹಾಗೆಯೇ ತರ್ಜುಮೆ ಮಾಡುವಾಗ ಪಡುವ ಕಷ್ಟ, ಶ್ರಮ ಶ್ರದ್ಧೆಯಿಂದ ಇಂತಹ ಅನುವಾದ ಕಾರ್ಯ ನೆರವಾಗುತ್ತದೆ. ಪ್ರೊ. ವೀರೇಂದ್ರ ಸಿಂಪಿ ಅವರು ಪ್ರಭಾವಶಾಲಿ ಕ್ರಿಯಾತ್ಮಕ ಬರಹಗಾರರಾಗಿರುವವರ ಜೊತೆಗೆ ಅನುವಾದದಲ್ಲಿಯೂ ತಮ್ಮ ವಿಶಿಷ್ಟ ವಿದ್ವತ್ತಿನಿಂದ ಕನ್ನಡಕ್ಕೆ ತಮ್ಮದೆ ಆದ ಕೊಡುಗೆಯನ್ನು ನೀಡಿದ್ದಾರೆ. ವೀ.ಸಿ. ಯವರು ವೃತ್ತಿಯಿಂದ ಆಂಗ್ಲ ಭಾಷೆಯ ಪ್ರಾಧ್ಯಾಪಕರಾಗಿದ್ದು ಕನ್ನಡ ಸಾಹಿತ್ಯದ ಅನುವಾದಗಳ ಕುರಿತು ಚಿಂತಿಸಿದರು. ಅಂತೆಯೇ---

- ಗಾಯ್. ಡಿ. ಮೊಪಾಸಾನ ವಿಚಾರಧಾರೆ
- ಶ್ರೀ ಅರವಿಂದರ ಸಮಗ್ರ ಸಾಹಿತ್ಯದ ಅನುವಾದ
- ಯೋಗಾರಂಭ

ಈ ಮೂರು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವುದರ ಮೂಲಕ ಅನುವಾದ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ.

ಗಾಯ್. ಡಿ. ಮೊಪಾಸಾನ ಕಥೆಗಳು

ಗಾಯ್. ಡಿ. ಮೊಪಾಸಾ ಒಬ್ಬ ಸಣ್ಣ ಕತೆಗಾರರು ಫ್ರೆಂಚ ಬರಹಗಾರರಲ್ಲೊಬ್ಬರಾಗಿದ್ದರು. ಒಂದು ರೀತಿಯಲ್ಲಿ ಜನಪ್ರಿಯ ಸಣ್ಣಕತೆಗೆ ಭದ್ರವಾದ ತಳಹದಿಯನ್ನು ಒದಗಿದವನು ಮೊಪಾಸಾನೇ ಆಗಿದ್ದಾನೆ. ಗಾಯ್.ಡಿ. ಮೊಪಾಸಾ ೧೮೫೦ ರಲ್ಲಿ ನಾರ್ಮಂಡಿ ಮಿರನ್ ಮೆಸ್ನಿಲ್‌ದಲ್ಲಿ ಹುಟ್ಟಿದನು. ತಂದೆ ಶ್ರೀಮಂತ ಕುಟುಂಬಕ್ಕೆ ಸೇರಿದವನಾಗಿದ್ದಾರೆ ತಾಯಿ ಕಲಾಕಾರರ ಬಳಗಕ್ಕೆ ಸೇರಿದವಳು. ಅವನ ರಕ್ತದಲ್ಲಿ ವೈವಿಧ್ಯದ ಅಂಶಗಳಿದ್ದವು. ಒಂದೆಡೆಗೆ ಸ್ವಚ್ಛಂದತೆಯ ಜಾತಿಯಿದ್ದರೆ ಇನ್ನೊಂದೆಡೆ ದಾಂಪತ್ಯದ ಇಕ್ಕಟ್ಟಿಗೆ ಸಿಕ್ಕು ಗಲಿಬಿಲಿಗೊಂಡಾಗಲೊಮ್ಮೆ ಮೊಪಾಸಾ ಸಮುದ್ರದೆಡೆಗೆ ನಡೆದು ಬಿಡುತ್ತಿದ್ದನು. ಸೃಷ್ಟಿಯ ಕಾರ್ಯ ಹಾಗೂ ಆನಂದಗಳನ್ನು ಅವನು ಸಮುದ್ರದ ಮುಖದಲ್ಲಿ ಕಾಣುತ್ತಿದ್ದನು. ನಂತರ ಮೊಪಾಸಾ ಕಾನೂನು ವಿದ್ಯಾಲಯವನ್ನು ಸೇರಿ ಸಾಧಾರಣ ದರ್ಜೆಯಲ್ಲಿ ಪಾಸಾಗುತ್ತ ನಡೆದನು. ಈಗ ಜರ್ಮನಿಯು ಫ್ರಾನ್ಸದ

[illegible]

ಮೇಲೆ ದಾಳಿ ಮಾಡಿತು ಫ್ರೆಂಚ ಸೈನ್ಯ ಸೋತು ಹಿಂದೆ ಸರಿಯುತ್ತಿದ್ದಂತೆ ಜರ್ಮನರ ವಿರುದ್ಧ ಸೇಡು ತೀರಿಸಿಕೊಳ್ಳುವ ಕನಸು ಕಂಡದ್ದು ಕೂಡ ಇದೆ ಸಮಯದಲ್ಲಿ ಆಗಲೇ ಮೊಪಾಸಾನ ಪ್ರತಿಭೆ ಪಲ್ಲವಿಸಲು ಪ್ರಾರಂಭವಾಯ್ತು.

ಕಾಳಗ ಮುಗಿದಾಗ ಮೊಪಾಸಾ ಕೆಲಸವನ್ನರಸಿ ಪ್ಯಾರಿಸಿಗೆ ನಡೆದನು ಸಿಯನ್ ನದಿಯು ಸಮುದ್ರದ ತುಣುಕಾಗಿತ್ತು ಇಲ್ಲಿ ಹುಟ್ಟು ಹಾಕುವನಾಗಿದ್ದನು. ಸಮುದ್ರದ ನದಿಯು ಮೇಲೆ ಉತ್ಕಟ ಪ್ರೇಮ ಇರುವ್ಯದರಿಂದಲೇ ಅವನ ಕಥೆ–ಕಾದಂಬರಿಗಳಲ್ಲಿ ಸಮುದ್ರ–ನದಿಗಳ ದಟ್ಟ ಹಿನ್ನಲೆ ಕಂಡು ಬರುವದು. ಸಿಯನ್ ನದಿ ಅವನಿಗೆ ಹೇಗೆ ಬದುಕು ನೀಡಿತು ಹಾಗೆ ಈ ಬದುಕನ್ನು ರೂಪಿಸಿದವನು ಪ್ರಸಿದ್ಧ ಕಾದಂಬರಿಕಾರ ಗಸ್ಟಾವ್ ಪ್ಲಾಬೋ. ಇವರ ಮಾರ್ಗದರ್ಶನದಲ್ಲಿ ಬರವಣಿಗೆಯ ಕಠಿಣ ತರಬೇತಿಯನ್ನು ಪಡೆದನು. ಮೊಪಾಸಾ ಬರೆದ ಕವಿತೆ, ನಾಟಕ ಕತೆಗಳನ್ನು ತಿದ್ದುತ್ತ ಅವನಿಗೆ ಪ್ರೇರಣೆ ಸ್ಫೂರ್ತಿಯನ್ನು ನೀಡಿದನು ೧೮೮೦ ರಲ್ಲಿ ಪ್ಲಾಬೋನ ಮರಣ ಮೊಪಾಸಾನ ಮೇಲೆ ಗ್ಢಡ ಪರಿಣಾಮ ಬೀರಿತು. ಮೊಪಾಸಾ ಸರಕಾರಿ ನೌಕರನಾಗಿ ಕಳೆದ ವರ್ಷಗಳು ಅತ್ಯಂತ ಸುಖದ ವರ್ಷಗಳಾಗಿದ್ದವು. ಮೊಪಾಸಾನು ಭಯಂಕರ ತಲೆನೋವಿನಿಂದ ಬಳಲುತ್ತಿದ್ದನು. ದೈಹಿಕ ಅನಾರೋಗ್ಯ ಹಾಗೂ ಮಾನಸಿಕ ವೇದನೆಗಳು ಅವನನ್ನು ತುಂಬ ಗಾಸಿಗೊಳಿಸಿದವು. ಮೊಪಾಸಾ ಪ್ರಚಂಡ ಮಾನವತವಾದಿಯಾಗಿದ್ದಂತೆ ಪ್ರಾಣಗಳ ಬಗ್ಗೆಯೂ ಅಪಾರ ಅನುಕಂಪವುಳ್ಳವನ್ನಾಗಿದ್ದನು.

ಗಾಯ್.ಡಿ. ಮೊಪಾಸಾ ಯಥ್ಥಾರ್ಥವಾದೀ ಲೇಖಕನಾಗಿದ್ದ, ಯಥಾರ್ಥವಾದ ವಾಸ್ತವವಾದದಂತೆ ಒಂದು ಸಾಹಿತ್ಯಿಕ ಮಾರ್ಗ ಹೆಸರೇ ಸೂಚಿಸುವಂತೆ ಜೀವನವನ್ನು ಯಥಾವತ್ತಾಗಿ ಚಿತ್ರಿಸುವುದೇ ಯಥಾರ್ಥವಾದಿ ಲೇಖಕನ ಗುರಿ. ಇದರಲ್ಲಿ ಜೀವನದ ಹೆಚ್ಚು ನಿರ್ದಿಷ್ಟ ಹಾಗೂ ಖಚಿತ ಚಿತ್ರವೆಂದು ಹೇಳಲಾಗುತ್ತದೆ.

ಗಾಯ್.ಡಿ. ಮೊಪಾಸಾನ ಸಣ್ಣಕತಗಳ ವಸ್ತು ಮತ್ತು ಆಶಯ

ಮೊಪಾಸಾ ಫ್ರೆಂಚ ಕಾದಂಬರಿಕಾರ ಪ್ಲಾಬೋನ ಶಿಷ್ಯ ಏಳುವರ್ಷ ಅವನ ಕೈಕೆಳಗೆ ಕಠಿಣ ತರಬೇತಿಯನ್ನು ಪಡೆದು ತಾಯಿಯ ಕನಸನ್ನು ಪರಿಪೂರ್ಣಗೊಳಿಸಿದನು ಮೊಪಾಸಾ ಅವರು ಆರು ಕಾದಂಬರಿಗಳನ್ನು ಮೂರು ಪ್ರವಾಸ ಕಥನಗಳನ್ನು ಸಣ್ಣ ಕತೆಗಳು ಅವನನ್ನು ವಿಶ್ವ ಸಾಹಿತ್ಯ ಕ್ಷೇತ್ರದಲ್ಲಿ ಅವರನ್ನಾಗಿಸಿವೆ. ಅವನು ಬರೆದ ಸಣ್ಣಕತೆಗಳ ಸಂಖ್ಯೆ ೨೦೦ ಕ್ಕೂ ಮಿಕ್ಕಿವೆ.

ಇತನ ಸಣ್ಣಕತೆಗಳಲ್ಲಿ ಫ್ರಾನ್ಸದ ೧೯ನೇ ಶತಮಾನದ ಉತ್ತರಾರ್ಧದ ಸಾಮಾಜಿಕ ಜೀವನದ ವಿವಿಧ ಸ್ತರಗಳೇ ಮೂಡಿವೆ.೧ ಸಣ್ಣಕಥೆಗಳು ಅತಿ ಸರಳ ಮಾದರಿಯನ್ನು ಹೊಂದಿದ್ದವು. ಮೊಪಾಸಾನ ಸಣ್ಣಕತೆಗಳನ್ನು ಈ ರೀತಿ ವಿಂಗಡಿಸಲಾಗುತ್ತದೆ.

- ಫ್ರಾನ್ಸ ಹಾಗೂ ಪರ್ಶಿಯನ್ ಯುದ್ಧಕ್ಕೆ ಕುರಿತ ಕಥೆಗಳು
- ನಾರ್ಮನ್ ದೇಶದ ಒಕ್ಕಲಿಗರ ಕುರಿತ ಕಥೆಗಳು
- ನೌಕರ ಶಾಹಿಯ ಕುರಿತ ಕತೆಗಳು
- ಸಿಯೆನ್ ನದಿಯ ದಂಡೆಯ ಮೇಲಿನ ಜೀವನ ಕುರಿತ ಕತೆಗಳು

• ಭ್ರಮೆ ಹಾಗೂ ಕನಸುಗಳ ಕುರಿತ ಕತೆಗಳು

ಹೀಗೆ ಸಣ್ಣ ಕತೆಗಳಲ್ಲಿ ಆರು ಪ್ರಕಾರಗಳನ್ನು ಮಾಡುತ್ತಾರೆ. ಮೊಪಾಸಾನ ಬಹಳಷ್ಟು ಸಣ್ಣ ಕತೆಗಳು ಕಥಾನಕ ರೂಪದಲ್ಲಿವೆ. ಒಂದು ಘಟನೆ ಅಥವಾ ಸ್ವಭಾವ ಚಿತ್ರಣ ಬೆಳೆಸುವದರಲ್ಲಿ ಕಥೆ ಮುಗಿದು ಹೋಗುತ್ತಿದೆ. ಕಥೆಯ ವಸ್ತುವನ್ನು ವಿವಿಧ ದೃಷ್ಟಿಕೋನಗಳಿಂದ ನೋಡಿ ಅದಕ್ಕೆ ಸಮಗ್ರತೆಯನ್ನು ಸಂಕೀರ್ಣತೆಯನ್ನು ಕೊಡುವುದು ಮೊಪಾಸಾನನಿಂದ ಸಾಧ್ಯವಾಗಲಿಲ್ಲ ಕಾರಣ ಸಣ್ಣಕತೆ ಅವನಿಂದಲೇ ಒಂದು ರೂಪ ಪಡೆಯಿತು ೨೦ ನೇ ಶತಮಾನದಲ್ಲಿ ಅದು ಪರಿಪೂರ್ಣತೆ ಪಡೆದು ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ತುಂಬ ಜನಪ್ರಿಯವಾಯಿತು. ಮೊಪಾಸಾನ ಸಣ್ಣ ಕತೆಗಳಲ್ಲಿ ತೀಕ್ಷ್ಣವಾದ ನಿರೀಕ್ಷಣಾಶಕ್ತಿಯನ್ನು ಮಿತವಾದ ಶಬ್ದಗಳ ಬಳಕೆಯನ್ನು ನಿರ್ಲಿಪ್ತತೆಯನ್ನು ವಿಮರ್ಶಕರು ಗುರುತಿಸಿದ್ದಾರೆ. ನಾಟಕೀಯ ಪ್ರಜ್ಞೆಯನ್ನು ಕಂಡುಕೊಳ್ಳಬಹುದು ಮೊಪಾಸಾನ ಸಣ್ಣಕತೆಗಳು ಜಾನಪದ ಕತೆಗಳಂತೆ ಸರಳ ಹಾಗೂ ನೇರವಾಗಿವೆ.

ಮೊಪಾಸಾ ಚಿತ್ರಿಸಿದ ಸಮಾಜ

ಫ್ರಾನ್ಸದ ಜನ ರಾಜನನ್ನು ಕಿತ್ತಿಹಾಕಿ ಪ್ರಜಾಪ್ರಭುತ್ವ ಸ್ಥಾಪಿಸುತ್ತಿದ್ದರು ಶ್ರೀಮಂತರು ಐಷಾರಾಮದ ಜೀವನ ಸಾಗಿಸುತ್ತಿದ್ದರು. ಬೇಟೆಗಳನ್ನು ಆಡುತ್ತ ಕ್ಲಬ್ಬುಗಳಲ್ಲಿ ವೇಳೆ ಕಳೆಯುತ್ತ ನಾಟಕ, ಗೀತ ನಾಟಕ, ಸಂಗೀತಗಳಿಂದ ಮನರಂಜನೆ ಪಡೆಯುತ್ತಿದ್ದರು. ಮಾಧ್ಯಮ ವರ್ಗದ ಜನರು ಸಮಾಜದಲ್ಲಿ ಉನ್ನತ ಸ್ಥಾನ ಪಡೆಯಲು ಹಾತೊರೆಯುತ್ತಿದ್ದರು. ಹಣ ಜೀವನದ ಯಶಸ್ಸಿನ ಅಳತೆಗೋಲಾಗಿತ್ತು.೧ ಒಟ್ಟಿನಲ್ಲಿ ಸಮಾಜದಲ್ಲಿ ನೀತಿ ನಿಯಮಗಳ ಬಗ್ಗೆ ಹೆಚ್ಚಿನ ಕಟ್ಟಳೆಗಳಿರಲಿಲ್ಲ ಅದೊಂದು ಅವನತಿಗೀಡಾದ ಸಮಾಜವೆಂದು ಧಾರಾಳವಾಗಿ ಹೇಳಬಹುದು.

ಒಟ್ಟಿನಲ್ಲಿ ಮೊಪಾಸಾನ ಕತೆಗಳು ರೋಚಕವಾಗಿವೆ. ಕಥಾಂಶದಿಂದ ಪುಷ್ಟವಾಗಿವೆ. ಇಂದಿನ ಕನ್ನಡ ಕಥಾಸಾಹಿತ್ಯದ ಕಲಾತ್ಮಕ ಬೆಳವಣಿಗೆಯ ಹಿನ್ನಲೆಯಲ್ಲಿ ಮೊಪಾಸಾನಾ ಸಣ್ಣಕತೆಗಳು ಅತ್ಯಂತ ಬಾಲಿಶ್ ಹಾಗೂ ಸರಳವಾಗಿ ಕಂಡರೂ ತಮ್ಮ ಲವಲವಿಕೆಯ ಶೈಲಿಯಿಂದ, ಮಾನವೀಯ ಅನುಕಂಪದಿಂದ, ಘಟನೆಗಳ ನಾಟಕೀಯ ನಿರೂಪಣೆಯಿಂದ, ವಸ್ತು ನಿಷ್ಠ ಶೈಲಿಯಿಂದ ಇಂದಿಗೂ ನಮ್ಮ ಕನ್ನಡ ಕಥೆಗಳಿಗೆ ಹೊಸ ತಿರುವನ್ನು ತಂದು ಕೊಡಬಲ್ಲವು ಎಲ್ಲಕ್ಕಿಂತಲೂ ಹೆಚ್ಚಾಗಿ ಮೊಪಾಸಾನ ರಸಿಕತೆ ಜೀವನದ ಬಗ್ಗೆ ಇರುವ ಅಮಿತೋತ್ಸಾಹ. ಸಾಹಸಪ್ರಿಯತೆ ನಮ್ಮ ಇಂದಿನ ಸಿನಿಕತನದ ವಾತಾವರಣದಲ್ಲಿ ಒಂದು ಹೊಸಗಾಳಿಯನ್ನು ತರುವ ಶಕ್ತಿಯನ್ನು ಪಡೆದಿದೆ. ಸಾಹಸೀ ಕೃತ್ಯಗಳ ನಿರೂಪಣೆಯನ್ನೊಳಗೊಂಡ ಮೊಪಾಸಾನ ಸಣ್ಣಕತೆಗಳು ನಮ್ಮ ಕನ್ನಡ ಕತೆಗಾರರಿಗೆ ಇಂದಿಗೂ ಮಾದರಿಯಾಗಬಲ್ಲವು.

---

೧. ಪ್ರೊ. ವೀ.ಸಿಂಪಿ ಗಾಯ್.ಡಿ. ಮೊಪಾಸಾನಾ ಸಣ್ಣಕತೆಗಳು ಪುಟ–೨೬–೨೦೦೦

"ಶ್ರೀ ಅರವಿಂದರ ಸಮಗ್ರ ಸಾಹಿತ್ಯದ ಅನುವಾದ"

ಮಧುರಚೆನ್ನ, ಸಿಂಪಿಲಿಂಗಣ್ಣನವರ ಅರವಿಂದರ ಪ್ರಭಾವಕ್ಕೆ ಒಳಗಾದಂತೆ ಪ್ರೊ. ವೀರೇಂದ್ರ ಸಿಂಪಿಯವರೂ ಸಹಜವಾಗಿ ಅವರ ಪ್ರಭಾವಕ್ಕೆ ಒಳಗಾಗಿ ಅವರ ಸಾಹಿತ್ಯದ ಸಮಗ್ರ ಅನುವಾದಕ್ಕೆ ತೊಡಗಿದರು. ಬೇಂದ್ರೆ, ಗೋಕಾಕ, ಮುಗಳಿಯವರಂತೆ ಅಧಿಕಾರ ವಾಣಿಯಿಂದ ಮಾತನಾಡಬಲ್ಲ ಬರೆಯಬಲ್ಲ ಪ್ರತಿಭಾವಂತರಾಗಿದ್ದಾರೆ.

ಸಾಹಿತ್ಯ ಸಂಸ್ಕೃತಿಗೆ ಅರವಿಂದರ ಕೊಡುಗೆ ಅಪಾರ. ಅರವಿಂದರು ರಾಜಕೀಯ ಕ್ಷೇತ್ರದಲ್ಲಿ ಶ್ರಮಿಸಿದಾಗ ಅತ್ಯಂತ ಸ್ವಾರಸ್ಯಪೂರ್ಣ ಲೇಖನಗಳನ್ನು ಬರೆದು, ತನ್ಮೂಲಕ ರಚಿಸಿದ ಶ್ರೇಷ್ಠವಾದ ವಿಚಾರ ಸಾಹಿತ್ಯವೂ ಭಾರತೀಯ ಸಾಹಿತ್ಯಕ್ಕೆ ಅವರ ಅಮೂಲ್ಯ ಕೊಡುಗೆ. ಜನಜಾಗೃತಿಯನ್ನು ಹೆಚ್ಚಿಸುವುದಕ್ಕೆ ವಿಚಾರ ಸಾಹಿತ್ಯವೂ ದೊಡ್ಡ ಸಾಧನವಾಗಿದೆ. ಸಂಸ್ಕೃತಿಯ ದೃಷ್ಟಿಯಿಂದ ವೇದಗಳಿಗೂ. ಉಪನಿಷತ್ತುಗಳಿಗೂ. ಭಗವದ್ಗೀತೆಗೂ, ಹೋಲಿಸಬಹುದಾದ ಅಧ್ಯಾತ್ಮಿಕ ಗ್ರಂಥಗಳಾವವೂ ರಚಿತವಾಗಲಿಲ್ಲವೆಂಬ ಅಂಶ ಅವರ ಗ್ರಂಥದಲ್ಲಿ ವ್ಯಕ್ತವಾಗಿದೆ.

ಶ್ರೀ ಅರವಿಂದರು ಐತಿಹಿಕವಾಗಿ ರಾಜಕೀಯ ಕ್ಷೇತ್ರ ಪತ್ರಿಕೋದ್ಯಮ ಕ್ಷೇತ್ರ, ಸಾಹಿತ್ಯ ಕ್ಷೇತ್ರ ಮುಂತಾದವಕ್ಕೆ ಸಂಬಂಧಪಟ್ಟಂತೆ ಮಹತ್ತರ ಧ್ಯೇಯಗಳನ್ನಿಟ್ಟುಕೊಂಡು ಶ್ರಮಿಸಿ ಅತ್ಯಂತ ದೊಡ್ಡ ಗುರಿಗಳನ್ನು ಮುಟ್ಟಿದುದನ್ನು ನಾವು ಗಮನಿಸಿದರೂ ಸರಿ, "ನಾಲ್ಪೇ ಸುಖಮಸ್ತಿ, ಭೂಮೈವಸುಖಮ್ ಎಂಬ ಉಪನಿಷದ್ವಾಣಿ ಅರವಿಂದ ಮಹಾಯೋಗಿಯವರಿಗೆ ಬಹು ಚೆನ್ನಾಗಿ ಅನ್ವಯಿಸುತ್ತದೆ. ಅರವಿಂದರ ಜೀವನ ರೀತಿಯೆಲ್ಲ ಸಮಗ್ರವಾಗಿ ಪಾಶ್ಚಾತ್ಯ ಜೀವನ ರೀತಿಯ ಪಡಿಯಚ್ಚಿನಿಂದ. ರೂಪಿತವಾಗಿದೆ." [2]

ಅರವಿಂದರ ಸಮಸ್ತ ಗ್ರಂಥಗಳೂ ತಮ್ಮವೇ ಅದೊಂದು ವೈಶಿಷ್ಟ್ಯವನ್ನು ಪಡೆದಿವೆ. ಬಹುಮುಖವಾದ ಪ್ರತಿಭೆ, ಅಗಾಧ ಪಾಂಡಿತ್ಯ, ಭಾರತೀಯ ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ಹಿರಿಮೆಯ ಅನುಭವ, ನಿಷ್ಪಕ್ಷಪಾತ ಮನೋವೃತ್ತಿ, ಜನ್ಮಸಿದ್ಧವಾಗಿ ಲಭಿಸಿದ ಚಿಂತನ ಮಂಥನ ಸಾಮಾರ್ಥ್ಯವನ್ನು ಯೋಗಾಭ್ಯಾಸ ಯೋಗ ಸಿದ್ದಿಗಳ ನೆರವಿನಿಂದ ಸಾಣೆ ಹಿಡಿದು ಪ್ರಖರಗೊಳಿಸಿಕೊಂಡ ಪೂರ್ಣಸಿದ್ಧತೆ, ನಿರಾಸಕ್ತ ಧರ್ಮದಿಂದ ಕಳಕಳಿಸುತ್ತಿದ್ದ ಪ್ರೇಮ ಹೃದಯದ ಪವಿತ್ರಮಾನವೀಯತೆ ಅಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಪಡೆದ ಮಹಾಯೋಗಿಯ ಪಾವನ ಸ್ವರೂಪದ ಸಂಪತ್ತು ಇವುಗಳೆಲ್ಲಕ್ಕೂ ಅನುರೂಪವಾಗಿದೆ. ಅರವಿಂದರ ಕೃತಿಗಳು ಯೋಗ ಸಾಧನೆ ಮತ್ತು ದೈವೀ ಜೀವನವನ್ನು ಕುರಿತು ಅವರು ರಚಿಸಿರುವ ಗ್ರಂಥಗಳಿಂದ ಆಧ್ಯಾತ್ಮಿಕ ಸಾಧಕರಿಗೆ ಪರಮೋಪಕಾರವಾಗಿದೆ. ಎಲ್ಲಕ್ಕೂ ಮಿಗಿಲಾಗಿ ಯೋಗಾಭ್ಯಾಸದ ಸಂಬಂಧವಾಗಿ ರೂಢಿಯಲ್ಲಿದ್ದ ಹಿಂದಿನ ವಿಧಾನಗಳನ್ನೆಲ್ಲ ಸಮನ್ವಯಗೊಳಿಸಿ ಪೂರ್ಣಯೋಗವನ್ನು ರೂಪಿಸಿದವರು ಶ್ರೀ ಅರವಿಂದ ಯೋಗಿ

ಅರವಿಂದರ ವಿಚಾರಧಾರೆಯಲ್ಲಿ ವಿಶ್ವಸ್ಪರ್ಶಿಯಾದ ವ್ಯಾಪಕತೆ ಇದೆ ನಿರೂಪಣ ರೀತಿಯಲ್ಲಿ ಭಿನ್ನತೆಯಿದ್ದರೂ ಮೂಲಭೂತವಾದ ಏಕತೆಯಿರುತ್ತದೆ ಅರವಿಂದರ ವಾಙ್ಮಯವಂತೂ

---

೧. ಪ್ರೊ. ವೀರೇಂದ್ರ ಸಿಂಪಿ ಗಾಯ್.ಡಿ. ಮೊಪಾಸಾನ ಸಣ್ಣಕತೆಗಳು ಪುಟ-೪೮-೨೦೦೦

೨. ಸಿ.ಕೆ. ವೆಂಕಟರಾಮಯ್ಯ ಅರವಿಂದರ ವಿಚಾರಧಾರೆ ೧೯೬೨

ಆಳ ಅಗಲಗಳಲ್ಲಿ ಅಪ್ರತಿಮವಾಗಿದೆ. ಅವರ ಜೀವಿತ ಕಾರ್ಯದ ಮಹತ್ವವನ್ನು ಅರಿತುಕೊಳ್ಳಬೇಕಾದರೆ ಅವರ ವಿಚಾರಧಾರೆಯನ್ನು ನಿಲುಕುವಷ್ಟು ಮಟ್ಟಿಗೆ ಅರ್ಥಮಾಡಿಕೊಳ್ಳಬೇಕು. ಅವರ ವಿಚಾರಧಾರೆಯ ವಿಮರ್ಶಕರಾಗಲಿ ಅವರಲ್ಲಿ ನಂಬಿಗೆಯು ತಮ್ಮ ಬಾಳನ್ನು ಬೆಳಗಿಸುತ್ತಿರುವ ಸಾಧಕರಾಗಲಿ ತಿಳಿಯುವಷ್ಟರ ಮಟ್ಟಿಗೆ ಅವರ ಮೂಲಕೃತಿಗಳಿಂದಲೂ ಅವುಗಳ ಸಾರ ಸಂಗ್ರಹಗಳಿಂದಲೂ ತಿಳಿವಳಿಕೆಯನ್ನು ಪಡೆಯುವುದು ಅವಶ್ಯ ಅದಕ್ಕೆ ನೆರವಾಗಲು ಇಲ್ಲಿ ಪ್ರಯತ್ನವಿದೆ.೧ ಅರವಿಂದರ ವಿಚಾರಗಳನ್ನು ಕನ್ನಡಿಗರಿಗೆ ತಲುಪಿಸುವಲ್ಲಿ ವೀರೇಂದ್ರ ಸಿಂಪಿ ಅವರು ಸ್ತುತ್ಯಕಾರ್ಯ ಮಾಡಿದ್ದಾರೆ.

"ಯೋಗಾರಂಭ"

ಇದು ಪ್ರೊ. ವೀರೇಂದ್ರ ಸಿಂಪಿ ಅವರ ಪ್ರಥಮ ಪ್ರಕಟಿತ ಕೃತಿಯಾಗಿದೆ. ೧೯೬೬ ರಲ್ಲಿ ಶ್ರೀ ಅರವಿಂದರು ಬರೆದ 'Elements of yoga' ದ ಕನ್ನಡನುವಾದವಾಗಿದೆ. ಈ ಕೃತಿಯೂ ಹದಿನಾಲ್ಕು ವಿಭಾಗದಲ್ಲಿ ಹರಡಿಕೊಂಡಿದೆ. ಈ ಪುಸ್ತಕದಲ್ಲಿ ಹಲವಾರು ವಿಷಯಗಳ ಬಗ್ಗೆ ವಿವರಣೆಯನ್ನು ಕಾಣಬಹುದು. ಸಿಂಪಿಯವರು ಮೂಲತಃ ಆಂಗ್ಲ ಭಾಷೆಯ ಪ್ರಾಧ್ಯಾಪಕರಾಗಿರುವುದರಿಂದ ಸಹಜವಾಗಿ ಆ ಕಡೆಯ ಸಾಹಿತ್ಯಗಳ ಅಧ್ಯಯನ, ಅನುವಾದಗಳ ಕುರಿತು ಚಿಂತಿಸಿದರು ಪಾಶ್ಚಾತ್ಯ ಸಾಹಿತಿಗಳ ಉದ್ಧರಣೆಯೇ ಅಧಿಕವಾಗಿ ತಮ್ಮ ಕೃತಿಗಳಲ್ಲಿ ಬಳಸಿಕೊಂಡಿರುವುದು ಕಂಡುಬರುತ್ತದೆ.

ಯೋಗಾರಂಭದಲ್ಲಿ ಅಭೀಪ್ಸೆ ಯತಾರ್ಥತೆ, ಶ್ರದ್ಧೆ ಸಮರ್ಪಣೆ, ಪ್ರೀತಿ, ಚೈತ್ಯ ಪುರುಷನ ತೆರೆಯುವಿಕೆ, ಅನುಭವಗಳು, ಮತ್ತು ದರ್ಶನಗಳು ಕಾರ್ಯ ಪರಿವರ್ತನೆ, ಮುಂತಾದ ಅಧ್ಯಾತ್ಮಿಕ ವಿಷಯಗಳ ಕುರಿತು ಶಿಷ್ಯರು ಕೇಳಿದ ಪ್ರಶ್ನೆಗಳಿಗೆ ಶ್ರೀ ಅರವಿಂದರು ಉತ್ತರ ಕೊಟ್ಟದ್ದನ್ನು ಇಲ್ಲಿ ಕಾಣಬಹುದು. ಇದು ಪ್ರೊ. ವೀರೇಂದ್ರ ಸಿಂಪಿ ಅವರ ಉತ್ತಮ ಅನುವಾದ ಕೃತಿಯಾಗಿದೆ. ಜೀವನದ ಮೌಲ್ಯ ಕುರಿತಾದ ವಿವೇಚನೆ ಒಂದೆಡೆ ಕಂಡರೆ ಇನ್ನೊಂದೆಡೆ ಬದುಕಿನ ಬಹು ಮುಖ್ಯ ತಿರುವಾದ ಅಧ್ಯಾತ್ಮಿಕ ಸಾಧನೆಯ ದಿಗ್ದರ್ಶಿಸುವ ಪರಿ ಅಮೋಘವಾದದ್ದು.

---

೧. ರಂ. ಶ್ರೀ. ಮುಗಳಿ ಅರವಿಂದ ವಿಚಾರಧಾರೆ–೧೯೭೫

ವಿಚಾರ ಸಾಹಿತ್ಯ

ಪ್ರೊ. ವೀರೇಂದ್ರ ಸಿಂಪಿ ಅವರ ಬರಹಗಳಲ್ಲಿ ವೈಚಾರಿಕತೆ ತುಂಬಾ ಮನೋಜ್ಞವಾಗಿ ಅರ್ಥವಂತಿಕೆಯಿಂದ ತಾತ್ವಿಕತೆಯಿಂದ ಮೂಡಿಬಂದ ಅನುಭವವಾಗಿದೆ. ಓದುಗರನ್ನು ಅತ್ಯಂತ ಆತ್ಮೀಯವಾಗಿ ಸೆಳೆಯುವ ಅವರ ವೈಚಾರಿಕ ಲೋಕ ಅದ್ಭುತವಾದದ್ದು. ವೈಶಿಷ್ಟ್ಯಪೂರ್ಣ ಬರಹಗಳಿಂದ ವೈವಿಧ್ಯಮಯವಾದದ್ದು. ಇದು ಜ್ಞಾನದ ಪರಿಧಿಯನ್ನು ವಿಸ್ತರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಹೀಗಾಗಿ ವೈಚಾರಿಕ ಬರಹಗಳು, ಗ್ರಂಥಗಳು, ಮಾನವನ ಮನದ ಮಲಿನತೆ ತೊಳೆಯಲು ಪೂರಕ ಸಾಮಗ್ರಿ ಒದಗಿಸುತ್ತವೆ. ಪ್ರಮುಖವಾಗಿ ಬರ್ಟ್ರಂಡ್ ರಸೆಲ್‌ರ ವಿಚಾರಧಾರೆಗಳನ್ನಗ "ಸುಖ ಸಾದನ" ಎಂಬ ಶೀರ್ಷಿಕೆಯ ಅಡಿಯಲ್ಲಿ ಮೊದಲ ಬಾರಿಗೆ ಕನ್ನಡಕ್ಕೆ ತಂದುಕೊಟ್ಟ ಕೀರ್ತಿ ಪ್ರೊ. ವೀರೇಂದ್ರ ಸಿಂಪಿಯವರಿಗೆ ಸಲ್ಲಬೇಕು. ಈ ವಿಚಾರಗಳು ಮಾನವೀಯ ಮೌಲ್ಯಗಳ ಉದ್ದೀಪನಕ್ಕೆ ಮದ್ದಾಗಬೇಕು. ವಾಸ್ತವ ಬದುಕಿನ ಅನಾರೋಗ್ಯಕರ ಬೆಳವಣಿಗೆಗೆ ಮೂಲವಾಗಬೇಕು. ನಿಟ್ಟನಲ್ಲಿಯೇ ಅವರ ವಿಚಾರಗಳು ಹರಿದಾಡುತ್ತವೆ.

ವೈಚಾರಿಕತೆಯನ್ನುವುದು ಒಂದು ಪ್ರಬಲವಾದ ಅಸ್ತ್ರವಿದ್ದಂತೆ ಇದು ಯಾವ ವಿಷಯವನ್ನಾದರೂ ತನ್ನ ಗುರಿಗೆ ಒಳಪಡಿಸಬಲ್ಲದು. ಮಾನವ ಮೂಲತಃ ಪ್ರಾಣಿಯಂತಿದ್ದು ಕ್ರಮೇಣ ಅವನು ಬುದ್ಧಿಶಕ್ತಿ ಮತ್ತು ವಿಚಾರಶಕ್ತಿ ಬೆಳೆಸಿಕೊಂಡು ಹಾಲಿನ ಕೆನೆಯಂತೆ, ಕಾಳಿನ ತೆನೆಯಂತೆ ವಿಕಾಸ ಕ್ರಮದಲ್ಲಿ ನವಿರಾಗಿ ನಿಧಾನವಾಗಿ ವಿಕಾಸಗೊಂಡು ಅವನಲ್ಲಿ ವಿಚಾರಶಕ್ತಿ ಬೆಳೆದಿದೆ. ಇತಿಹಾಸಕ್ರಮದಲ್ಲಿ ಉತ್ಕ್ರಾಂತಿಯ ವಿಕಾಸ ಮಾರ್ಗದಲ್ಲಿ ಬುದ್ಧಿಯ ತರ್ಕದ ಉಪಾಯ, ಜ್ಞಾನದ ಸಹಾಯ ವಿಮರ್ಶೆಯಡಲ್ಲಿ ವಿಚಾರ ಸಾಹಿತ್ಯ ತನ್ನ ವಿಸ್ತಾರ ವ್ಯಾಪ್ತಿ ಬೆಳೆಸಿಕೊಂಡಿದೆ. ಆದರೂ ವಿಚಾರ ಶಕ್ತಿ ಇನ್ನೂ ಅರಗದ ಸಂಸ್ಕೃತಿಯಾಗಿದೆ.

ಅರುವಿನ ಆಳದಲ್ಲಿ ಉಂಟಾದ ಸಂದೇಹಗಳ ಸಂಘರ್ಷವೇ ವೈಚಾರಿಕತೆಯಾಗಿದೆ. ಪ್ರಸ್ತುತ ಸಮಾಜಕ್ಕೆ ಬೇಕಾದ ಮೌಲ್ಯಗಳನ್ನು ಅರ್ಥೈಸಿಕೊಳ್ಳುವುದು ವಾಸ್ತವಿಕತೆ ಹಿನ್ನಲೆಯಲ್ಲಿ ಜನಪರವಾಗಿ ಆಲೋಚಿಸುವುದೇ ವೈಚಾರಿಕತೆಯಾಗಿದೆ. ಸಮಾಜ ಜೀವನದಲ್ಲಿ ಉಂಟಾದ ವ್ಯತ್ಯಾಸವನ್ನು ಹೋಗಲಾಡಿಸುವ ಕ್ರಿಯಾತ್ಮಕ ಅರಿವು ವೈಚಾರಿಕತೆಯಾಗಿದೆ. ಅರಿವು ಅನುಭಾವದ ಸಂಗಮದಿಂದ ಕೂಡಿದಾಗ ಉಂಟಾದ ಸುಖವನ್ನು ವೈಚಾರಿಕತೆಯಿಂದಲೂ ಕಾಣಬಹುದು. ವೀರೇಂದ್ರ ಸಿಂಪಿ ಅವರ ಬರ್ಟ್ರಂಡ್ ರಸೆಲ್ ವಿಚಾರಧಾರೆ ವಸ್ತು ನಿಷ್ಠೆ ವಿಚಾರಗಳಿಂದ ಸಾಮಾಜಿಕ ಸ್ವಾಸ್ಥ್ಯವನ್ನು ಆಧರಿಸಿಕೊಂಡು ತಿಳಿಸಲು ಪ್ರಯತ್ನಿಸಲಾಗಿದೆ.

ವಿಶ್ವದ ತತ್ವಜ್ಞಾನಿಗಳಲ್ಲೇ ರಸೆಲ್‌ರ ಸ್ಥಾನ ಅದ್ವಿತಿಯ ಇವರು ಜಾಗತಿಕ ಶಾಂತಿಗಾಗಿ ತಮ್ಮನ್ನು ತಾವು ಮೀಸಲಾಗಿರಿಸಿದ್ದರು ಪ್ರಜಾಪ್ರಭುತ್ವ ಉಳಿವಿಗಾಗಿ ಅವರು ದುಡಿದದ್ದೇನೂ ಕಡಿಮೆಯಲ್ಲಿ ಮಹಿಳೆಯರ ಮತದಾನದ ಹಕ್ಕಿಗಾಗಿಯೂ ಅವರು ಹೋರಾಡಿದರು. ರಸೆಲ್‌ರು ಮೊಟ್ಟ ಮೊದಲಿಗೆ ಶಿಕ್ಷಣದ ಬಗೆಗೆ ತಮ್ಮ ಹೊಸ ಹೊಚ್ಚ ವಿಚಾರಗಳನ್ನು ಜನರ ಮುಂದೆ ಇಟ್ಟರು ಹಾಗೆ ಇವರು ಕಮ್ಯೂನಿಜಂನಲ್ಲಿ ಆಸಕ್ತಿ ಇಟ್ಟವರು. ಅವರಿಗೆ ಮಾನವ ಸ್ವಭಾವದಲ್ಲಿ ಹೆಚ್ಚಿನ ಶ್ರದ್ಧೆಯಿತ್ತು. ಅನಿಷ್ಟದ ಬೂದಿಯೊಳಗಿಂದ ಒಳ್ಳೆಯದು ಬರಲೇಬೇಕೆಂಬುದು ಅವರ ನಂಬಿಕೆಯಾಗಿತ್ತು.

ಪ್ರೊ. ವೀರೇಂದ್ರ ಸಿಂಪಿ ಅವರು ಬರ್ಟ್ರೆಂಡ್ ರಸೆಲ್‌ರ ವಿಚಾರ ದಾರೆಗಳನ್ನು ೧೩ ಸಣ್ಣ ಲೇಖನಗಳಲ್ಲಿ ಹುದುಗಿರಿಸಿರುವುದು ನಾವು ಕಾಣಬಹುದಾಗಿದೆ. ಈ ಲೇಖನಗಳಿಂದ ರಸೆಲ್ ವಿಚಾರವನ್ನು ದರ್ಶಿಸಿದ ಅನುಭಾವ ಉಂಟಾಗುವುದು. ಈ "ಸುಖ ಸಾದನವು" ವೀರೇಂದ್ರ ಸಿಂಪಿ ಅವರ ಒಳ್ಳೆಯ ವಿಶಿಷ್ಟಪೂರ್ಣ ವಿಚಾರ ಸಾಹಿತ್ಯವಾಗಿದೆ.

ಮಾನವ ಜನಾಂಗಕ್ಕೆ ಅಪಾಯ ತಂದ ವಿಚಾರಗಳು ಎಂಬುದರಲ್ಲಿ ವೀರೇಂದ್ರ ಸಿಂಪಿ ಅವರು ಅಸೊಯೆ, ಗರ್ವ, ಜನಾಂಗವನ್ನು ಕುರಿತ ವರ್ಗ, ಪುರುಷರು ಶ್ರೇಷ್ಠತ್ವವನ್ನು ಕುರಿತ ಅಭಿಮಾನ, ವರ್ಗ ಶ್ರೇಷ್ಠತ್ವದ ಹೆಮ್ಮೆ, ಧರ್ಮವನ್ನು ಕುರಿತು ದುರಾಭಿಮಾನ, ಈ ಎಲ್ಲಾ ಅಂಶಗಳು ಬದುಕಿಗೆ ಮಾರಕವಾಗುವಂತಹ ಅಂಶಗಳಾಗಿ ಆ ಕಾರಣ ಇವುಗಳಿಂದ ದೂರ ಇರುವುದೆ ಒಳ್ಳೆಯದು. ಈ ರೀತಿಯಾಗಿ ಕ್ರೀಯಾತ್ಮಕ ಆದರೆ ಸೊಗಸಾದ ವಿಚಾರಗಳಿಂದ ಭೂಮಿಯ ಮೇಲಿನ ನಮ್ಮ ಜೀವನದ ಹೋರಾಟಕ್ಕೆ ಸಿದ್ಧರಾಗುತ್ತೆವೆ ಆದರೆ ನಾವೆಲ್ಲರೂ ಸಮಾನರು ಎಂಬ ಭಾವನೆಯನ್ನಿರಿಸಿಕೊಂಡರೆ ಜೀವನವೊಂದು ಯುದ್ಧಭೂಮಿಯಾಗದೆ ಒಂದು ಆನಂದದ ಅನುಭವವಾಗಿ ಪರಿಣಮಿಸುತ್ತ ಎನ್ನುವ ವಿಚಾರವನ್ನು ಈ ಲೇಖನದ ಮೂಲಕ ದರ್ಶಿಸಬಹುದಾಗಿದೆ.

ಕೆಲಸವು ನಿಶ್ಚಿತವಾಗಿ ಸುಖದ ಸಾಧನ

ಎಂದ ಮೇಲೆ ಮಾರಯ್ಯ ಹೇಳಿದ ಕಾಯಕವೇ ಕೈಲಾಸ ಎನ್ನುವ ಮಾತು ನೆನಪಿಸಿಕೊಳ್ಳಬಹುದಾಗಿದೆ. ಕೆಲಸದಿಂದ ಕೆಲವೊಂದು ಪ್ರಯೋಜನಗಳಿದ್ದೇ ಇವೆ. ಕೆಲಸ ಅಥವಾ ಕಾಯಕವು ವ್ಯಕ್ತಿಯನ್ನು ಜಂಗಮರೂಪಿಯಾಗಿಸುವುದು. ಇದು ಪ್ರಥಮವಾಗಿ ಬೇಸರವನ್ನು ತಡೆಗಟ್ಟುವುದು, ಜೀವನದಲ್ಲಿ ಯಶಸ್ಸಿನ ಹತ್ತು ಹಲವು ಅವಕಾಶಗಳನ್ನು ಒದಗಿಸುವುದು ಮೊಟ್ಟ ಮೊದಲಿಗೆ ವೇಳೆಯ ಸದುಪಯೋಗವಾಗುವುದು. ಎಲ್ಲಕ್ಕಿಂತ ಹೆಚ್ಚಿಗೆ ಸಂತೋಷದಾಯಕ ಅನುಭವವನ್ನೇ ಕೊಡುವುದು. ಕೆಲಸವು ವ್ಯಕ್ತಿಯಲ್ಲಿ ಸ್ಪರ್ದಾ ಮನೋಭಾವನ್ನು ತುಂಬುವುದು. ಕಾರ್ಯಮಾಡುವುದರಿಂದ ಆನಂದವನ್ನು ಪಡೆಯಬಹುದು. ಉತ್ತಮ ಕಾರ್ಯದಲ್ಲಿ ಸಿಗುವ ಸಂತೋಷವನ್ನು ಜಗತ್ತಿನ ಯಾವ ಶಕ್ತಿಯೂ ಕಸಿದಿಕೊಳ್ಳಲಾರದು. ಯಾರ ಜೀವನದಲ್ಲಿ ಒಂದು ನಿಶ್ಚಿತ ಗುರಿಯಿರುವುದೋ ಅಂಥವರಿ ನಿಜವಾಗಿ ಸುಖಿಗಳಾಗಬಹುದು ಹೀಗೆ ಜೀವನವನ್ನು ಇಡಿಯಾಗಿ ನೋಡುವದು ಬುದ್ದಿವಂತಿಕೆಯ ಲಕ್ಷಣವಾಗಿದ್ದಂತೆ ಒಳ್ಳೆಯ ನೀತಿಯಾಗಿ ಆಗಿದೆ. ವ್ಯಕ್ತಿಯ ಸತತ ಪರಿಶ್ರಮಿಯಾಗಿರಬೇಕು. ಎಂಬ ಧೋರಣೆಯನ್ನು ನಾವು ಇಲ್ಲಿ ಕಂಡುಕೊಳ್ಳಬಹುದು.

ವಿದ್ಯಾರ್ಥಿಗಳು ಹಾಗೂ ಚಾರಿತ್ರ್ಯ ನಿರ್ಮಾಣ

ವಿದ್ಯೆಯ ಗುರಿಯು ಕೇವಲ ನಾನಾ ವಿಷಯಗಳ ಕುರಿತು ಜ್ಞಾನ ಸಂಗ್ರಹಮಾತ್ರವಲ್ಲ ಜ್ಞಾನ ಚಾರಿತ್ರ್ಯ ನಿರ್ಮಾಣವೂ ಮಹತ್ವದಾಗಿದೆ ಎಂಬ ಒತ್ತನ್ನು ಕಾಣಬಹುದಾಗಿದೆ. ಚಾರಿತ್ರ್ಯ ನಿರ್ಮಾಣದ ಜೊತೆಗೆ ಉತ್ಸಾಹವೇ ಪ್ರಾಣಶಕ್ತಿ ಇದು ಆರೋಗ್ಯವಿದ್ದಡೆಯಲ್ಲೆಲ್ಲ ಇರುತ್ತದೆ. ಎಂದು ಹೇಳಿದ್ದಾರೆ. ಜಗತ್ತಿನಲ್ಲಿ ಧೈರ್ಯಕ್ಕೆ ಸಮನಾದ ಯಾವ ಗುಣವು ಇಲ್ಲ ಧೈರ್ಯವು ಬೆಳೆಸಿಕೊಳ್ಳುವ ವಿಧಾನ ಧೈರ್ಯವು ನಮ್ಮ ಜೀವನದಲ್ಲಿ ಯಾವ ರೀತಿ ಕಾರ್ಯ ನಿರ್ವಹಿಸುತ್ತದೆ. ಸೂಕ್ಷ್ಮ ಸಂವೇದನೆ ವಿದ್ಯಾರ್ಥಿಗಳು

ಬೆಳೆಸಿಕೊಳ್ಳಬೇಕಾದ ಗುಣಗಳಲ್ಲಿ ಸೂಕ್ಷ್ಮ ಸಂವೇದನೆ ಮೂರನೆಯದು. ಭೂಮಿಯ ಮೇಲಿನ ಸಕಲ ಪ್ರಾಣಿಗಳ ನೋವಿನಲ್ಲಿ ನಮ್ಮ ನೋವನ್ನು ಕಂಡಾಗ ಮಾತ್ರ ಸೂಕ್ಷ್ಮ ಸಂವೇದನೆಯ ಅಂತಿಮ ಘಟ್ಟವನ್ನು ಮುಟ್ಟಿದಂತಾಗುತ್ತದೆ. ಅಂಥ ಸೂಕ್ಷ್ಮ ಸಂವೇದನೆಯ ನಮ್ಮ ಕ್ರೂರ ಹಾಗೂ ಹೃದಯ ಪರಿಸರದಲ್ಲಿ ಬೆಳೆದು ಬರುವರಿಗೆ ತುಂಬಾ ಅವಶ್ಯವಾಗಿದೆ. ಸಾಂಪ್ರದಾಯಿಕ ಸದ್ಗುಣಕ್ಕಿಂತ ಬುದ್ಧಿವಂತಿಕೆಗೆ ಹೆಚ್ಚಿನ ಮಹತ್ವವಿದೆ. ಬುದ್ಧಿವಂತಿಕೆಯನ್ನು ಗಳಿಸುವುದೇ ವಿದ್ಯೆಯ ಪರಮ ಗುರಿಯಾಗಿದೆ. ಕುತೂಹಲ ಅಥವಾ ಜ್ಞಾನದ ಹಂಬಲವನ್ನು ಕುದುರಿಸುವ ಶಿಕ್ಷಣ ನಮ್ಮ ವಿದ್ಯಾರ್ಥಿಗಳಿಗಿಂದು ಬೇಕಾಗಿದೆ.

ಮೂರ್ಖ ಅಭಿಪ್ರಾಯಗಳಿಂದ ಪಾರಾಗುವ ಬಗೆ

ಮಾನವ ಜನಾಂಗವು ಎಂದಿನಿಂದಲೂ ಕೆಲವೊಂದು ಮೂರ್ಖ ಅಭಿಪ್ರಾಯಗಳಿಗೆ ಬಲಿಯಾಗುತ್ತ ಎಂದಿದೆ. ಕೆಲ ಸರಳ ನಿಯಮಗಳ ಮೂಲಕ ನಾವು ತಪ್ಪು ಕಲ್ಪನೆಗಳಿಂದ ದೂರವಿರುವ ಮಾರ್ಗವನ್ನು ಸೂಚಿಸಿರುವುದು ಸೂಕ್ಷ್ಮ ನಿರೀಕ್ಷಣೆ ಆತ್ಮ ಪ್ರಶಂಸೆ ಭಯ ಈ ಅಂಶಗಳಿಂದ ತಪ್ಪು ಕಲ್ಪನೆಗಳು ಹುಟ್ಟುತ್ತವೆ. ಇವುಗಳಿಂಡ ಪಾರಾಗುವ ಸೂಚನೆಯನ್ನು ಕೊಟ್ಟಿರುವರು.

ಶಿಕ್ಷಣದಲ್ಲಿ ಮಕ್ಕಳಿಗೆಷ್ಟು ಸ್ವಾತಂತ್ರ್ಯ ಕೊಡಬೇಕು

ಜೀವನದ ಗುರಿಯ ಕಲ್ಪನೆಯ ಮೇಲೆ ಶಿಕ್ಷಣದ ಗುರಿಯು ಸ್ಥಾಪಿತವಾಗಿರುತ್ತದೆ. ಶಿಕ್ಷಣದಲ್ಲಿ ಮಕ್ಕಳಿಗೆಷ್ಟು ಸ್ವಾತಂತ್ರ್ಯ ಬೇಕು ಎನ್ನುವಲ್ಲಿ ಮಕ್ಕಳು ಎಷ್ಟು ಕೆಟ್ಟವರಿರಲಿ ಮಕ್ಕಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕು. ಅನ್ನುವುದು ಒಂದು ಪಂಥ ಸಾರಿದರೆ ಮಕ್ಕಳು ಎಷ್ಟೇ ಒಳ್ಳೆಯವರಿರಲಿ ಅವರನ್ನು ಸಂಪೂರ್ಣ ನಿಯಂತ್ರಣಕ್ಕೊಳಪಡಿಸಬೇಕು ಎಂದು ಇನ್ನೊಂದು ಪಂಥ ಹೇಳುತ್ತದೆ. ಮಕ್ಕಳಿಗೆ ಸ್ವಾತಂತ್ರ್ಯ ವಿರಬೇಕು. ಅಂಥ ಸ್ವಾತಂತ್ರ್ಯವಿದ್ದಾಗಲೂ ಅವರು ಒಳ್ಳೆಯವರಾಗತಕ್ಕದ್ದು ಎಂದು ಮೂರನೆಯ ಪಂಥ ಭಿನ್ನಾ ಭಿಪ್ರಾಯಗಳು ವ್ಯಕ್ತಪಡಿಸುತ್ತಾ ವಿದ್ಯಾರ್ಥಿಗಳನ್ನು ನಿಯಂತ್ರಣದಲ್ಲಿರಿಸಲು ಯಾವ ನಿಯಮಗಳೂ ಬೇಕಾಗಿಲ್ಲ ಯಾಕೆಂದರೆ ಎಂಥ ಒಳ್ಳೆಯ ನಿಯಮಗಳೂ ಕೂಡ ಪ್ರೀತಿ ಹಾಗೂ ಜಾಣ್ಮೆಗಳಿಗೆ ಸರಿಸಮಾನವಾಗಲಾರದು.

ಪಾಪ ಪ್ರಜ್ಞೆ ಹಾಗೂ ಸಾಂಪ್ರದಾಯಿಕ ನೈತಿಕ ಶಿಕ್ಷಣ

ಜೀವನದಲ್ಲಿ ಕೆಲವೊಂದು ಕೃತ್ಯಗಳಿಗೆ ನಾವು ಪಾಪಗಳೆಂದು ಕರೆಯುತ್ತೇವೆ. ಈ ಕೃತ್ಯಗಳನ್ನು ಮಾಡಿದಾಗ ಮಾನವನು ತಾನೇನೋ ಅಪರಾಧವನ್ನು ಮಾಡಿದೆನೆಂದು ಭಾವಿಸುತ್ತ ಇಡೀ ಜೀವನದುದ್ದಕ್ಕೂ ಕೊರಗುವನು. ಇದೇ ಪಾಪ ಪ್ರಜ್ಞೆ ಇದರಿಂದಾಗಿ ಬಹಳಷ್ಟು ಜನ ದುಃಖಿಗಳಾಗಿದ್ದಾರೆ. ಚಿಕ್ಕ ವಯಸ್ಸಿನಲ್ಲಿ ತಾಯಿಯಿಂದ ಕಲಿತ ನೈತಿಕ ಶಿಕ್ಷಣವೇ ಮಾನವನ ಪಾಪ ಪ್ರಜ್ಞೆಯ ಮೂಲವಾಗಿದೆ. ಪಾಪಪ್ರಜ್ಞೆ ಒಂದು ದೌರ್ಬಲ್ಯ ಅಥವಾ ಜಾಡ್ಯವಾಗಿದೆ. ಅದರಲ್ಲಿ ಆತ್ಮ ಗೌರವದ ಕೊರತೆಯಿದೆ. ನಮ್ಮ ವ್ಯಕ್ತಿತ್ವದ ಮೇಲೆ ನಮ್ಮ ತೀಕ್ಷ್ಣವನ್ನು ಕೇಂದ್ರಿಕರಿಸುವುದರಿಂದ ಪಾಪ ಪ್ರಜ್ಞೆ ಹೆಚ್ಚುತ್ತದೆ. ಅದರ ಬದಲಾಗಿ ನಮ್ಮ ಶಕ್ತಿಗಳನ್ನು ಬಾಹ್ಯ ಜಗತ್ತಿನೆಡೆಗೆ ಹೊರಳಿಸಿದರೆ ಮಾತ್ರ ಪಾಪಪ್ರಜ್ಞೆಯಿಂದ ಮುಕ್ತರಾಗುತ್ತೇವೆ. ವೈಚಾರಿಕತೆ ಹೆಚ್ಚು ಹೆಚ್ಚಾಗಿ ಬೆಳೆದಂತೆ ಅದು ದ್ವೇಷ ಹಾಗೂ ಅಸೂಯೆಗಳಿಂದ ಕೆಟ್ಟ ಭಾವನೆಗಳನ್ನು ದಮನಮಾಡುತ್ತಿದೆ. ಎನ್ನುವಲ್ಲಿ ಮಾತನ್ನು ಪೂರ್ಣಗೊಳಿಸುವರು.

ಜ್ಞಾನದಿಂದ ಚಾರಿತ್ರ್ಯ ನಿರ್ಮಾಣ

ಈ ಹಿಂದೆ ವಿದ್ಯಾರ್ಥಿಗಳು ಚಾರಿತ್ರ್ಯವನ್ನು ನಿರ್ಮಾಣ ಮಾಡಿಕೊಳ್ಳುವ ಕುರಿತು ತಿಳಿಸಲಾಗಿದೆ ಜ್ಞಾನದಿಂದ ಚಾರಿತ್ರ್ಯ ಹೇಗೆ ವಿಕಸಿತವಾಗುತ್ತಿದೆಂಬ ಅಂಶವನ್ನು ನಾವು ಈ ಭಾಗದಲ್ಲಿ ಕಾಣಬಹುದು. ಅನೇಕ ದೇಶಗಳಲ್ಲಿ ಜ್ಞಾನವನ್ನು ಕೇವಲ ಅದರ ಉಪಯುಕ್ತತೆಗಾಗಿ ಮಾತ್ರ ಅನ್ವೇಷಿಸಲಾಗಿದೆ. ಅದಕ್ಕಾಗಿ ಜ್ಞಾನಕ್ಕಾಗಿ ಜ್ಞಾನವನ್ನು ಅನ್ವೇಷಿಸಬೇಕೆಂಬ ಅಂಶ ನಾವು ಕಂಡುಕೊಳ್ಳಬಹುದು. ಜ್ಞಾನಾರ್ಜನೆಯಿಂದ ಲಭ್ಯವಾಗುವ ಸಂಸ್ಕೃತಿಯು ಮಾನವನಲ್ಲಿ ಒಳ್ಳೆಯ ಚಾರಿತ್ರ್ಯ ನಿರ್ಮಾಣ ಮಾಡುವದಲ್ಲದೆ ಅವರ ವಿಚಾರಗಳು ಹಾಗೂ ಬಯಕೆಗಳಲ್ಲಿ ಗಮನಾರ್ಹವಾದ ಬದಲಾವಣೆಯನ್ನು ತರುತ್ತೇವೆ.

ವ್ಯಕ್ತಿ ಹಾಗೂ ಸಾಮಾಜಿಕ ನೀತಿ

ವೈಯಕ್ತಿಕ ಶ್ರೇಷ್ಠತೆಯ ಅನ್ವೇಷಣೆಯೂ ಒಳ್ಳೆ ಜೀವನಕ್ಕೆ ಅಷ್ಟೇ ಅವಶ್ಯವಾಗಿದೆ. ಜೀವನವು ಸಹ್ಯವಾಗಬೇಕಾದರೆ ವಿಚಾರಗಳು, ಭಾವನೆಗಳು ಹಾಗೂ ಪ್ರೇರಣೆಗಳು ಒಳ್ಳೆಯವಿರಬೇಕು. ಮಾನವನಲ್ಲಿ ಹೋರಾಟ ಪ್ರವೃತ್ತಿಗಳಿರುವುದರಿಂದ ಅವನ ಸ್ವಭಾವವು ನಿರಂತರವಾಗಿ ಯುದ್ಧವನ್ನು ಇತರ ವಿದ್ವಾಂಸರ ತಿಕ್ಕಾಟವನ್ನೂ ಬಯಸುತ್ತದೆ. ಎಂದು ಹೇಳುವ ಮಾತಿನಲ್ಲಿ ಸತ್ಯಾಂಶವಿಲ್ಲ, ಹೋರಾಟ ಪ್ರವೃತ್ತಿಗಳಿಗೆ ಜೀವನದಲ್ಲಿ ಅವಶ್ಯಕವಾದ ಪಾತ್ರವಿದೆ. ಅವುಗಳ ಅಪಾಯಕಾರಿ ನೀತಿಗಳನ್ನು ಬಹುಮಟ್ಟಿಗೆ ಕಡಿಮೆ ಮಾಡಿಕೊಳ್ಳಬಹುದು. ಆತ್ಮ ನಿಯಂತ್ರಣ ಇಂದಿನ ಮುಖ್ಯ ವ್ಯವಸ್ಥೆಗಳಲ್ಲಿ ಒಂದಾಗಿದೆ. ಎಂದು ಹೇಳುತ್ತಾ ವ್ಯಕ್ತಿಯ ಹಾಗೂ ಸಮಾಜದ ವರ್ತನೆಗಳನ್ನು ಪರಿಚಯಿಸುತ್ತಾರೆ.

ಶಿಕ್ಷಕನ ಕರ್ತವ್ಯಗಳು

ಶಿಕ್ಷಕನ ವೃತ್ತಿಯು ಸಾರ್ವಜನಿಕ ಸೇವೆಯ ಒಂದು ಮಹತ್ವದ ಶಾಖೆಯಾಗಿ ಪರಿವರ್ತನೆಗೊಂಡಿದೆ. ಪ್ರಾಚೀನ ಕಾಲದಿಂದ ಇಲ್ಲಿಯವರೆಗಿನ ಅವಧಿಯಲ್ಲಿ ಈ ವೃತ್ತಿಗೆ ಗೌರವಯುತ ಪರಂಪರೆಯಿದ್ದುದು ಕಂಡು ಬರುತ್ತಿದೆ. ಆದರ್ಶ ಶಿಕ್ಷಕನು ಭೌತಿಕ ರೂಪದಲ್ಲಿರುವದಕ್ಕಿಂತಲೂ ಹೆಚ್ಚಾಗಿ ಪುಸ್ತಕ ರೂಪದಲ್ಲಿ ಇರಬಯಸುತ್ತಾನೆ. ಶಿಕ್ಷಕರೆಂದೂ ಸತ್ಯವನ್ನು ಮರೆಮಾಚಬಾರದು ಒಳ್ಳೆಯವರನ್ನು ಪ್ರಶಂಸಿಸುವದು ಅವಶ್ಯವಿದ್ದಂತೆ ದುಷ್ಟರ ದುಷ್ಟತನವನ್ನು ಮರೆಮಾಚಿ ಅವರನ್ನು ಹೊಗಳುವುದು ತಪ್ಪು. ಯಾವಾಗ ಶಿಕ್ಷಕನ ಕಲಾಕಾರ, ತತ್ವಜ್ಞಾನಿ, ಲೇಖಕನಂತೆ ತನ್ನ ಆಂತರಿಕ ಸೃಜನಶೀಲತೆಯಿಂದ ಪ್ರೇರಿತನಾಗಿರುತ್ತಾನೋ ಆಗ ಮಾತ್ರ ಅವನು ತನ್ನ ಕಾರ್ಯವನ್ನು ತೃಪ್ತಿಕರವಾಗಿ ಮಾಡಿ ಮುಗಿಸಬಲ್ಲನು ಆದರೆ ಇಷ್ಟು ಮಾತ್ರ ನಿಜ

ಜಾಗತಿಕ ಸಹಕಾರ

ರಸೆಲ್‌ರ ದೃಷ್ಟಿಯಿಂದ ಹೇಳಬೇಕೆಂದರೆ ಜಾಗತಿಕ ಸರಕಾರವು ಕೆಲವೊಂದು ವಿಭಾಗಗಳಲ್ಲಿ ಸರ್ವರ ಒಪ್ಪಿಗೆಯನ್ನು ಪಡೆದಿರಬಹುದು ಅದು ಯುದ್ಧದಲ್ಲಿ ಗಳಿಸಿದ ವಿಜಯದ ಮೂಲಕ ರಚಿತವಾಗಿರಬಹುದು. ಯುದ್ಧದ ವೈರವು ತಣ್ಣಗಾದಂತೆ ಸೋತ ದೇಶಗಳಿಗೂ ಕೂಡ ಜಾಗತಿಕ ಸರಕಾರದಲ್ಲಿ ಪಾಲನ್ನು ಕೊಡಬಹುದಾಗಿದೆ. ಸರ್ವರ ಒಪ್ಪಿಗೆಯ ಆಧಾರದ ಮೇಲೆ ಜಾಗತಿಕ ಸರಕಾರ ನಿರ್ಮಿಸಲು ಮಾನವ ಜನಾಂಗಕ್ಕೆ ಪರಸ್ಪರ ತಾಳ್ಮೆಯಾಗಲಿ ದೂರದರ್ಶಿತ್ವವಾಗಲಿ ಇಲ್ಲ. ಅಂತೆಯೇ ಬಲ

ಪ್ರಯೋಗದಿಂದ ಜಾಗತಿಕ ಸರಕಾರವನ್ನು ಕಟ್ಟಬೇಕಾಗುತ್ತದೆ. ಕಟ್ಟಿ ಬೆಳೆಸಬೇಕಾಗುತ್ತದೆ. ಜಾಗತಿಕ ಸರಕಾರ ಅಸ್ತಿತ್ವಕ್ಕೆ ಬರುವವರೆಗೆ ಮಹಾಯುದ್ಧಗಳನ್ನು ತಪ್ಪಿಸಲಿಕ್ಕಾಗುವುದಿಲ್ಲ. ಎಲ್ಲ ದೇಶಗಳಲ್ಲಿ ಅಚಲವಾದ, ಸ್ಥಿರವಾದ ಜನಸಂಖ್ಯೆಯಾಗುವವರೆಗೆ ಜಾಗತಿಕ ಸರಕಾರ ಸುಭದ್ರವಾಗುವುದು ಸಾಧ್ಯವಿಲ್ಲ.

ಮಾನವ ಶಕ್ತಿಯ ಮಿತಿಗಳು

ಮಾನವನೂ ದುರ್ಬಲನೂ ಆಗಿಲ್ಲ ಸರ್ವಶಕ್ತನೂ ಆಗಿಲ್ಲ ಅವನಲ್ಲಿ ಅವೆಷ್ಟೋ ಶಕ್ತಿಗಳಿದ್ದು ಅವು ಆಶ್ಚರ್ಯಕರವೆನಿಸುವಷ್ಟು ದೊಡ್ಡವಾಗಿವೆ. ಅದರ ಅವು ಅನಂತವಾದವು ಅಲ್ಲ ಎನ್ನುವ ವಿಚಾರ ವ್ಯಕ್ತಪಡಿಸಿದ್ದಾರೆ. ಈ ಭಾಗದಲ್ಲಿ ರಸೆಲ್‌ರ ಕೈಗಾರಿಕೆಗಳಿಗೆ ಸಂಬಂಧಿಸಿದ ಕಚ್ಚಾ ವಸ್ತುಗಳು ಹಾಗೂ ವಿಜ್ಞಾನಿಗಳ ಹೊಸ ಹೊಸ ಸಂಶೋಧನೆಗಳ ಬಗ್ಗೆ ಪರಿಶೀಲನೆ ನಡೆಸಿರುವ ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ.

ರಸೆಲ್‌ರ ಜೀವನ ಧೋರಣೆ

ರಸೆಲ್‌ರು ಶಾಂತಿವಾದಿಯಾದುದರಿಂದ ಸಮಾಜದ ಇಡೀ ವ್ಯವಸ್ಥೆಯ ವಿರುದ್ಧ ನಿಲ್ಲಬೇಕಾಯ್ತು. ಅದಕ್ಕಾಗಿ ಎಲ್ಲ ನೈತಿಕ ನಿಯಮಗಳನ್ನು ವಿರೋಧಿಸುವ ಧೋರಣೆಯನ್ನು ತಪ್ಪಿಸಿಕೊಳ್ಳುವುದು ಕಠಿಣವಾಯ್ತು ಅವರ ಧೋರಣೆಯಾದರೋ ನೈತಿಕ ನಿಯಮಗಳಿಗೆ ವಿರುದ್ಧವಾದುದಲ್ಲ. ಯೋಗ್ಯ ಕೆಲಸ ಮಾಡಲು ಅನುಕೂಲವಾದ ವಾತಾವರಣ ನಿರ್ಮಿಸಿಕೊಡುವ ಉದ್ದೇಶದಿಂದ ದುಷ್ಟ ಸಮಾಜವನ್ನು ನಾಶಮಾಡಲು ಅವರು ದೀರ್ಘಕಾಲವಧಿಯವರೆಗೆ ಕಾರ್ಯದಲ್ಲಿ ತೊಡಗಿದ್ದರು. ಯುದ್ಧದ ಬಗೆಗೆ ರಾಷ್ಟ್ರಗಳು ಹರಡಿದ ಸುಳ್ಳು ಪುರಾಣಗಳನ್ನು ರಸೆಲ್‌ರ ಬೌದ್ಧಿಕ ಪ್ರಾಮಾಣಿಕತೆಯು ಒಪ್ಪಲಿಲ್ಲ. ರಸೆಲ್‌ರು ಅಮೂರ್ತ ವಿಷಯಗಳಿಗಾಗಿ ತಮ್ಮ ವೇಳೆಯನ್ನು ಕಾದಿಡಬಾರದೆಂದು ಬಯಸಿದರು. ಅಂತರಾಷ್ಟ್ರೀಯ ಸರಕಾರ ಆರ್ಥಿಕ ವ್ಯವಹಾರಗಳ ಸಂಘಟನೆ ಹಾಗೂ ಜನನ ನಿಯಂತ್ರಣಗಳು ಜೀವನವನ್ನು ಸುಖಮಯವನ್ನಾಗಿ ಮಾಡಬಲ್ಲವು ಎಂಬ ವಿಚಾರ ಹೊಂದಿದವರಾಗಿದ್ದರು.

ನಮ್ಮ ಕಾಲದಲ್ಲಿ ತತ್ವಜ್ಞಾನ

ತತ್ವಜ್ಞಾನಕೊಂದು ಚಿರಂತನ ಮಹತ್ವವಿದೆ. ಅದು ಒಂದು ರೀತಿಯ ಹೊರತಾಗಿ ಉಳಿದೆಲ್ಲ ರೀತಿಗಳಲ್ಲಿ ಬದಲಾಗದೆ ಉಳಿಯುತ್ತದೆ. ಅದು ಹೇಗೆಂದರೆ ಕೆಲವೊಂದು ಅವಧಿಗಳು ಬುದ್ಧಿವಂತಿಕೆಯಿಂದ ಬಹುದೂರ ಸರಿಯುತ್ತದೆ. ಅಂಥ ಅವಧಿಗಳಲ್ಲಿ ತತ್ವಜ್ಞಾನದ ಅವಶ್ಯಕತೆ ಬಹಳವಿದೆ. ನಮ್ಮ ಕಾಲದಲ್ಲಿ ಬಹು ಕಡಿಮೆ ಬುದ್ಧಿವಂತಿಕೆಯಿದ್ದು ಅದು ತತ್ವಜ್ಞಾನದ ಶಿಕ್ಷಣದಿಂದ ಹೆಚ್ಚಿನ ಲಾಭಹೊಂದಬಹುದಾಗಿದೆ. ತತ್ವಜ್ಞಾನದ ವ್ಯಾಪಕವಾದ ಅಧ್ಯಯನದಿಂದ ವಸ್ತುನಿಷ್ಠ ಧೋರಣೆಯು ಸಂಪೂರ್ಣವಾಗಿ ಕೈವಶವಾಗುವವು. ಸಂಪೂರ್ಣವಾಗಿ ಸೃಷ್ಟಿಯನ್ನು ಅರಿಯಲೂ ತತ್ವಜ್ಞಾನ ನೆರವನ್ನು ಕೊಡುತ್ತದೆ. ಎನ್ನುವ ವಿಚಾರವನ್ನು ನಾವು ಕಂಡುಕೊಳ್ಳಬಹುದು.

ಹೀಗೆ ಈ ವಿಚಾರ ಸಾಹಿತ್ಯದಲ್ಲಿ ಮಾನವ ಜನಾಂಗದ ಕುರಿತ ವಿಚಾರ ಶಿಕ್ಷಣ, ತತ್ವಜ್ಞಾನ, ಜಾಗತೀಕರಣ, ಚಾರಿತ್ರ್ಯ ನಿರ್ಮಾಣ ಅನೇಕ ಜೀವನದ ಮೌಲ್ಯಗಳನ್ನು ಕುರಿತಾಗಿ ಚಿತ್ರಿಸಲಾಗಿದೆ.

ಅಂಕಣ ಬರಹ ಸಾಹಿತ್ಯ

ಬಹುಮಟ್ಟಿಗೆ ಪ್ರಬಂಧ ಸಾಹಿತ್ಯದ ಹತ್ತಿರಕ್ಕೆ ಬಂದು ನಿಲ್ಲುವಂತಿರುವ "ಅಂಕಣ ಬರಹ" ಡಾ॥ ಹಾ.ಮಾ. ನಾಯಕರಿಂದ ಪ್ರಸಿದ್ಧಿಗೆ ಬಂತು ಅವರ "ಸಂಪ್ರತಿ" ಮೊದಲು ಸಂಪುಟಕ್ಕೆ ೧೯೮೬ ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ನಂತರವೇ ಅಂಕಣ ಬರಹದ ಪ್ರಸ್ತುತತೆ, ಅದೂ ಒಂದು ಸಾಹಿತ್ಯ ಪ್ರಕಾರವೇ ಎಂಬಿತ್ಯಾದಿ ಚರ್ಚೆಗಳು ಆರಂಭವಾಗಿ ಕೊನೆಗೂ ಒಪ್ಪಲಾಯಿತು. ಕನ್ನಡದ ಉದ್ದಾಮ ಪಂಡಿತರೆಲ್ಲರೂ ಅಂಕಣ ಬರಹದಲ್ಲಿ ಬರೆದರೂ ಹಾ.ಮಾ. ನಾಯಕರು ಮಾತ್ರ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಅದಕೊಂದು ಶಾಶ್ವತ ಸ್ಥಾನ ತಂದು ಕೊಟ್ಟರು.

ಲಲಿತ ಪ್ರಬಂಧಗಳಂತೆ ಪ್ರೊ. ವೀರೇಂದ್ರ ಸಿಂಪಿ ಅವರು ೮೦ ರ ದಶಕದಲ್ಲಯೇ ಅಂಕಣ ಬರಹಗಳ ಕೃಷಿಗೂ ತೊಡಗಿಸಿಕೊಂಡರು. ಅಂದು "ವಿಶ್ವಕಲ್ಯಾಣ" ವಾರ ಪತ್ರಿಕೆಗೆ ಸುಮಾರು ೮೦ ಕ್ಕಿಂತಲೂ ಅಧಿಕ ಅಂಕಣ ಬರಹಗಳನ್ನು ಬರೆದು ಈ ಕ್ಷೇತ್ರದಲ್ಲಿಯೂ ಪ್ರಸಿದ್ಧಿ ಪಡೆದರು. ಅವರ ಅಂಕಣ ಬರಹದಿಂದಾಗಿಯೇ ಪತ್ರಿಕೆ ಪ್ರಸಿದ್ಧಿ ಪಡೆಯಿತೆಂದು ಹೇಳಬಹುದು. ನಂತರ ದಿಕ್ಸೂಚಿ ಮಾಸಿಕ ಪತ್ರಕೆಗೆ ಅಂಕಣವನ್ನು ಬರೆದರು ಅವುಗಳ ಒಂದು ಗುಚ್ಛವೇ "ಜೀವನವೆಂದರೇನು?" ಎಂಬ ಅಂಕಣ ಸಾಹಿತ್ಯ ಕೃತಿ.

ಜೀವನವೆಂದರೇನು ೭೯ ಅಂಕಣ ಬರಹಗಳಿಂದ ಅಪರೂಪದ ಕೃತಿ. ಬಾಲಕೃಷ್ಣನ ಬಾಯಲ್ಲಿ ಬ್ರಹ್ಮಾಂಡವೇ ಅಡಗಿದಂತೆ ಈ ಕೃತಿಯಲ್ಲಿ ಜಗತ್ತಿನ ಪ್ರಚಲಿತ ಸಮಸ್ಯೆ ಸವಾಲುಗಳ ನೋಟವಿದೆ. ವ್ಯವಸ್ಥೆಯ ಬೇಡಿಕೆಗೆ ಅಂಕಣ ಬರಹಗಳು ಸ್ಪಂದಿಸಿವೆ. ಈ ಸ್ಪಂದನದ ಒಳಪದರುಗಳನ್ನು ವಿವರವಾಗಿ ಎಳೆದು ನೋಡುವ ಪ್ರಯತ್ನದಿಂದ ಕೆಲ ಒಳವಿಭಾಗಳನ್ನಾಗಿ ವಿಂಗಡಿಸಿ ಅಧ್ಯಯನ ಕೈಕೊಳ್ಳಲಾಗಿದೆ.

ವ್ಯಕ್ತಿ ಸ್ವಭಾವ ಗುಣ ನಡತೆ, ಕುಟುಂಬ ಸಂಬಂಧ-ಸಮಸ್ಯೆ, ಸಮಾಜ, ಶಿಕ್ಷಣ, ಪರಿಸರ, ಬಂಡಾಯ ಪ್ರವೃತ್ತಿ ಮತಾಂಧತೆ ಕೋಮು ಸೌಹಾರ್ದತೆ, ಅನೇಕ ಮಹನಿಯರ ವಿಚಾರಗಳನ್ನು, ಸ್ತ್ರೀ ಸಮಾನತೆ ಸ್ತ್ರೀ ಮೀಸಲಾತಿ ಸಶಕ್ತೀರಣ-ಸ್ತ್ರೀಶಿಕ್ಷಣ, ವೈಚಾರಿಕತೆ ಸಮಾನತೆ ಸದ್ಭಾವ, ಉದಾರೀಕರಣ-ಖಾಸಗೀಕರಣ ಜಾಗತೀಕರಣ ಅಧ್ಯಯನದ ದೃಷ್ಟಿಯಿಂದ ವಿವಿಧ ಭಾಗಗಳಾಗಿ ವಿಂಗಡಿಸಿದರೂ ಒಂದು ಇನ್ನೊಂದಕ್ಕೆ ತೆಕ್ಕೆ ಬಿದ್ದಿವೆ. ಅವುಗಳ ಒಟ್ಟು ಆಶಯ, ಅಪೇಕ್ಷೆ ಜೀವನ ಹಸನುಗೊಳಿಸುವುದೇ ಆಗಿದೆ. ಪ್ರಚಲಿತ ಸಮಸ್ಯೆಗಳಿಂದ ವಿಮುಖರಾಗದಂತೆ ತಡೆದು ಅವುಗಳಿಗೆ ಪ್ರತಿಭಟನೆ ಅಸ್ತ್ರ ಒದಗಿಸುತ್ತಾರೆ. ಅದಕ್ಕಾಗಿಯೇ ಪಾಟೀಲ ಪುಟ್ಟಪ್ಪನವರು "ವಿಷಯ ವೈವಿಧ್ಯದ ದೃಷ್ಟಿಯಿಂದ ಈ ಸಂಗ್ರಹಕ್ಕೆ ಅಪೂರ್ವತೆ ಇದೆ. ಜನಮನವನ್ನು ತಿದ್ದಿ ತಿಳಿಗೊಳಿಸಲು ಅದರ ವಿಚಾರ ಕ್ರಿಯೆಯನ್ನು ಜಾಗೃತಗೊಳಿಸಲು ಬಹು ನಿಃಸ್ಪೃಹವಾದ ಅಭಿಪ್ರಾಯ ಪ್ರಾಮಾಣಿಕತೆ ಇಲ್ಲಿದೆ. ಜನಜೀವನವನ್ನು ಉತ್ತಮ ವಿಚಾರಗಳಿಂದ ಹಸನುಗೊಳಿಸಬೇಕೆನ್ನುವ ರಾಷ್ಟ್ರೋನ್ನತಿಯ ಪ್ರೇಮ ಈ ಲೇಖನಗಳಲ್ಲಿ ತುಂಬಿಕೊಂಡಿವೆ" ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇವರ ಅಂಕಣ ಬರಹಗಳು ಜೀವನದ ಒಟ್ಟು ಮೊತ್ತದ ಮೇಲಿನ ಪ್ರಭಾವ ಪ್ರಚಲಿತ ವಿದ್ಯಮಾನಗಳ ಸದೃಡ ಸಂಪದ್ಭರಿತ ಜಾಗೃತ ರಾಷ್ಟ್ರ ನಿರ್ಮಾಣಕ್ಕೆ ಪರಿಕರಗಳ ಪೂರೈಕೆಯ ಸಮರ್ಪಕ

ನಿರ್ವಹಣೆ, ವೈಜ್ಞಾನಿಕ ದೃಷ್ಟಿಕೋನದಿಂದ ಕೂಡಿದೆಯೇ ಹೇಗೆ? ಅವು ಇಂದಿನ ಸನ್ನಿವೇಶಕ್ಕೆ ತಳುಕು ಹಾಕಿ ತಾಳೆ ನೋಡುವ ನಿಟ್ಟಿನಲ್ಲಿ "ಜೀವನವೆಂರೇನು"? ಕೃತಿಯ ಪರಿಶೀಲನೆ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ.

ಒಟ್ಟು ಹೊಸಗನ್ನಡ ಸಾಹಿತ್ಯದ ಸಂದರ್ಭಕ್ಕಿಂತ ಭಿನ್ನ ಸವಾಲುಗಳು ಇಂದು ಬಂದೊದಗಿವೆ. ಹಿಂದಿನ ಸಮಸ್ಯೆಗಳಿಗೆ ವೈಯಕ್ತಿಕ ಮಟ್ಟದಲ್ಲಿಯೂ ಪರಿಹಾರಗಳನ್ನು ಒಂದು ಹಂತಕ್ಕೆ ಕಂಡುಕೊಳ್ಳಬಹುದಿತ್ತು. ಅವುಗಳ ವಿಶ್ಲೇಷಣೆ, ವಿಚಾರಣೆ, ಜನಾಂಗದಿಂದ ಜನಾಂಗಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಪರಿಸರದಿಂದ ಪರಿಸರಕ್ಕೆ ಮೀಸಲಿರುತ್ತಿದ್ದವು. ಪ್ರಾದೇಶಿಕ ಮನೋಧರ್ಮ ಬಹುಮಟ್ಟಿಗೆ ಮುಂಚೂಣಿಯಲ್ಲಿರುವ ಕಾಲವದು. ಹಿಂದೆಂದಿಗಿಂತಲೂ ಇದು ಭಿನ್ನವಾದ, ತೀವ್ರವಾದ ಜಾಗೃತ ಮನಸ್ಸುಗಳ ವಿಶಾಲ ಮನೋಭೂಮಿಕೆಯ ಅಗತ್ಯ ಹೆಚ್ಚಾಗಿದೆ ಪಕ್ಕದವರ ಜ್ವರಕ್ಕೆ ನಾವು ಔಷಧ ಪಡೆಯುವ, ಪಕ್ಕದ ಮನೆಯವರ ಶೀತಕ್ಕೆ ನಾವು ಶೀನುವ ಅವರ ದುರ್ದೆಸೆಗೆ ನಾವು ಬಲಿಯಾಗುವ ಬಹು ನಾಜೂಕಿನ ಕಾಲವಿದು. ಅದಕ್ಕಾಗಿಯೇ ಇಂದು ಕವಿಯ ಕವನಗಳ, ಬರಹಗಾರನ ಬರವಣಿಗೆಯ ವಿಚಾರಗಳ ಒಳಪದರುಗಳ ಒಟ್ಟು ನೋಟ ಸಂಪೂರ್ಣ ಬದಲಾವಣೆಯ ದಾಹಕ್ಕೆ ತುತ್ತಾಗುವ ಸಂದರ್ಭ, ಸಮಯ ಬಂದೊದಗಿದೆ. ಒಂದು ನೋಟ ಏಕಾಂತತೆಗಿಂತ ಸಾರ್ವತ್ರಿಕ ವರ್ಣನೆಗಿಂತ ವಾಸ್ತವ ವಿಚಾರಗಳ ಪ್ರಚೋದನೆಗೆ ತವಕಿಸುತ್ತದೆ.

ವ್ಯಕ್ತಿ ಸ್ವಭಾವ ಗುಣ ನಡತೆ

ವ್ಯಕ್ತಿಯ ಜೀವನದಲ್ಲಿ ಹಾಸ್ಯ ಎಷ್ಟು ಮುಖ್ಯ ದುಃಖ ನೋವಿನಿಂದ. ಕೂಡಿದ ಜೀವನಕ್ಕೆ ಇದು ಸಂಜೀವಿನಿ ಜೀವನದಲ್ಲಿ ಹಾಸ್ಯದ ದೃಷ್ಟಿಕೋನವಿದ್ದರೆ ಮನೆಯೆಂಬುದು ಹಿಗ್ಗಿನ ಹೂದೋಟವಾಗುತ್ತದೆ. ಇಂದಿನ ಉದ್ವೇಗದ ಯುಗದಲ್ಲಿ ಹಾಸ್ಯ ಪ್ರವೃತ್ತಿ ಜೀವನವನ್ನು ಸಹ್ಯವಾಗಿಸುತ್ತದೆ. ಉತ್ತಮ ನಡತೆಯನ್ನು ಅಳವಡಿಸಿಕೊಳ್ಳುವುದೇ ಜೀವನದ ಬಹುಮುಖ್ಯ ಗುರಿಯಾಗಿದೆ.

ವ್ಯಕ್ತಿಯ ಜೀವನದಲ್ಲಿ ಪ್ರೀತಿಯು ಅತಿ ದೊಡ್ಡ ಶಕ್ತಿಯಾಗಿದೆ. ದ್ವೇಷದಿಂದ ಒಡೆದುಹೋದ ಜಗತ್ತಿಗೆ ತಾಳ್ಮೆಗುಣ ವ್ಯವಹಾರಿಕವಾಗಿ ಪರಿಹಾರವನ್ನು ಒದಗಿಸಬಲ್ಲದು. ಸತ್ಯ ಜೀವನದಲ್ಲಿ ಶಿಸ್ತು ಅನಿವಾರ್ಯವಾಗಿದೆ. ಹಾಗೂ ಜೀವನದ ಪರಮೋದ್ದೇಶ ಪರಿಪೂರ್ಣತೆಯಾಗಿದೆ. ಸದ್ಭಾವನೆ ಜೀವನದ ಸಂಜೀವಿನಿಯಾಗಿದೆ. ಎಂದು ವ್ಯಕ್ತಿ ಸ್ವಭಾವದ ಗುಣ ನಡತೆಯನ್ನು ಕುರಿತು ವೀರೇಂದ್ರ ಸಿಂಪಿ ಅವರು ಜೀವನದ ಒಳಪದರಗಳನ್ನು ವಿವರವಾಗಿ ಎಳೆದು ನೋಡುವ ಪ್ರಯತ್ನವನ್ನು ಕಾಣಬಹುದು.

ಕುಟುಂಬ ಸಂಬಂಧ ಸಮಸ್ಯೆಗಳು

ಸಮಾಜದ ಅತ್ಯಂತ ಅಚ್ಚುಕಟ್ಟಾದ ಸಂಸ್ಥೆಯೆಂದರೆ ಕುಟುಂಬ ಇಂದು ಬಹಳಷ್ಟು ಕುಟುಂಬಗಳು ಕೇವಲ ಊಟ, ವಸತಿ, ಲೈಂಗಿಕ ತೃಪ್ತಿ, ಮಕ್ಕಳ ಪೋಷಣೆಯನ್ನು ಒದಗಿಸುವ ಸಂಸ್ಥೆಗಳಾಗಿವೆ. ಇಂದಿನ ಬಹುತೇಕ ತರುಣರಿಗೆ ಜೀವನದಲ್ಲಿ ಆದರ್ಶವಿಲ್ಲ ಆ ಕಾರಣ ಕುಟುಂಬ ವ್ಯವಸ್ಥೆ ಕುಸಿದು ಬೀಳುವ ಸಂಭವ ಇರುತ್ತದೆ. ಭಾರತೀಯರ ಪ್ರಥಮ ವೈರಿಯೆಂದರೆ ನಿಷ್ಕ್ರಿಯತೆ, ಭಾರತೀಯ ನರನಾಡಿಗಳಲ್ಲಿ ಜಾತೀಯತೆ ತುಂಬಿದೆ ಅದರ ಬೇರುಗಳ ಸಿಗುವುದಿಲ್ಲ ಧರ್ಮ. ಜಾತಿ. ಕೆಟ್ಟ ಸರಕಾರಗಳ ದುರಾಡಳಿತಕ್ಕೆ

ಕಾರಣೀಭೂತವಾಗುವುದರ ಜೊತೆಗೆ ಸಾಂಸ್ಕೃತಿಕ ಕ್ಷೇತ್ರಗಳನ್ನೂ ಪ್ರವೇಶಿಸಿ ಇಡೀ ವಾತಾವರಣವನ್ನೇ ಹದಗೆಡಿಸಿಬಿಟ್ಟಿವೆ. ಭ್ರಷ್ಟಾಚಾರ ಇದೊಂದು ಬೃಹತ್ ಪ್ರಕರಣವಾಗಿದೆ ಇದರಿಂದಲೆ ಇಂದಿನ ಪತ್ರಿಕೆಗಳು ತುಂಬಿ ಹೋಗಿವೆ. ರಾಜಕೀಯದಲ್ಲಿ ಅಪರಾಧಗಳು ಸಂಖ್ಯೆ ಗಣನೀಯವಾಗುತ್ತವೆ. ಹೆಣ್ಣು ಮಗುವಿನ ಮನಸ್ಸಿನಲ್ಲಿ ತಾನು ಭಾರವೆನ್ನುವ ನೋವು ತುಂಬಿಕೊಂಡಿದೆ. ಭಾರತೀಯ ಸಮಾಜದಲ್ಲಿ ಹೆಣ್ಣು ಮಗು ಎಲ್ಲಿ ಮೂಲಭೂತ ಹಕ್ಕುಗಳಿಂದ ವಂಚಿತಳು. ಅವಳೊಂದು ಬಲಿಪಶು ಹೀಗೆ ಹೆಣ್ಣು ಮಗುವಿಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳು ಉದ್ಭವಿಸಿವೆ. ನಮ್ಮ ದೇಶವು ಬಹು ದೊಡ್ಡ ದೇಶ. ಅದು ಎಷ್ಟು ದೊಡ್ಡದಿದೆಯೋ ಅಷ್ಟೇ ಅದರ ಸಮಸ್ಯೆಗಳು ದೊಡ್ಡವಿವೆ. ಜನಸಂಖ್ಯೆ ಸ್ಫೋಟ, ನಿರುದ್ಯೋಗ, ಹಸಿವೆ, ನಿರಕ್ಷರತೆ, ಸ್ತ್ರೀ ಶೋಷಣೆ, ಹೀಗೆ ಅನೇಕ ಸಮಸ್ಯೆಯನ್ನು ಕಾಣುತ್ತವೆ. ಬಾಲಕಾರ್ಮಿಕ ಸಮಸ್ಯೆ ವೃದ್ಧಾಪ್ಯ ಸಮಸ್ಯೆಗಳು ಕೂಡ ತಾಂಡವಾಡುತ್ತಿವೆ.

ಸಮಾಜ ಶಿಕ್ಷಣ ಪರಿಸರ

ಭಾರತೀಯರಲ್ಲಿನ ಅಜ್ಞಾನಕ್ಕೂ ಬಹುಮಟ್ಟಿಗೆ ಕಾರಣವಾಗಿರುವುದು ಮೂಢನಂಬಿಕೆಗಳು ಜ್ಞಾನದ ತವರುಮನೆಯಾಗಿರುವ ಭಾರತ ಅದೇ ಕಾಲಕ್ಕೆ ಮೂಢ ನಂಬಿಕೆಗಳ ನೆಲವೂ ಹೌದು ಇತ್ತೀಚಿಗೆ ಮನುಷ್ಯ ತನ್ನ ಒಡಲಾಳದಲ್ಲಿ ಅವನೊಬ್ಬ ಗ್ರಾಹಕನಾಗಿ ಈಗ ಭೋಗ ವಸ್ತುಗಳ ಬೆನ್ನು ಹತ್ತಿದ್ದಾನೆ. ಅದರಂತೆ ನಮ್ಮ ಜೀವನ ವಸ್ತುಗಳ ಸಂಗ್ರಹದಲ್ಲೇ ಸೋರಿ ಹೋಗಬಾರದು. ಜೀವನದಲ್ಲಿ ವಸ್ತುಗಳಿಗಿಂತಲೂ ವಿಚಾರಗಳು ಮಹತ್ವದ್ದಾಗಿವೆ. ಭಾರತೀಯ ಸಂವಿಧಾನದಲ್ಲಿ ಸಮಾನತೆ, ಸ್ವಾತಂತ್ರ, ಸಹೋದರತ್ವ ಹಾಗೂ ಸಾಮಾಜಿಕ ನ್ಯಾಯಗಳಿಗೆ ಹೆಚ್ಚಿನ ಒತ್ತು ಕೊಡಲಾಗಿದೆ.

ಶಿಕ್ಷಕರೆಂದರೆ ಜ್ಞಾನ ಬೋಧಕರು ಚಾರಿತ್ರ್ಯ ನಿರ್ಮಾಪಕರು, ನಾಗರಿಕತೆಯ ನಿರ್ಮಾಪಕರು, ಸಾಮಾಜಿಕ ಬದಲಾವಣೆಯ ಪ್ರೇರಕರು, ಪ್ರಗತಿಪರ ವಿಚಾರ ಪ್ರಚಾರಿಕರು ಎರಡನೇ ಸ್ವಾತಂತ್ರ್ಯ ಚಳುವಳಿಯ ಹರಿಕಾರರು ಸಂಸ್ಕೃತಿಯ ಪೋಷಕರು ಕೂಡ ಆಗಿದ್ದಾರೆ. ಶಿಕ್ಷಣದ ಉದ್ದೇಶ ಜ್ಞಾನವೆಂದಾಯ್ತು. ವ್ಯಕ್ತಿತ್ವದ ವಿಕಾಸವೆಂದರೆ ದೇಹ ಮನಸ್ಸು ಹಾಗೂ ಭಾವಗಳ ಶುದ್ಧೀಕರಣವಾಗಬೇಕು. ಚಾರಿತ್ರ್ಯ ನಿರ್ಮಾಣವೂ ಶಿಕ್ಷಣದ ಉದ್ದೇಶಗಳಲ್ಲಿ ಒಂದಾಗಿದೆ. ಶಿಕ್ಷಣ ಕೆಲ ವಿಚಾರಗಳ ಮೂಲಕ ಶಿಕ್ಷಣದ ಮಹತ್ತನ್ನು ಒತ್ತಿ ಸಾರಿರುವರು

ಬಂಡಾಯ ಪ್ರವೃತ್ತಿ ಮತಾಂಧತೆ ಕೋಮು ಸೌಹಾರ್ದತೆ

ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಆಚರಿಸುತ್ತಿರುವ ಈ ದೇಶದಲ್ಲಿ ಕೋಮು ದ್ವೇಷದ ಬದಲಾಗಿ ಪರಸ್ಪರ ಪ್ರೀತಿ ಗೌರವಗಳನ್ನು ಬೆಳಸಿಕೊಂಡರೆ ಇಂದಿನ ಬಿಕ್ಕಟ್ಟಿನ ಪರಸ್ಥಿತಿಯಿಂದ ಪಾರಾಗಬಹುದು. ಬಂಡಾಯ ಪ್ರವೃತ್ತಿಯನ್ನು ಇಂದು ಪ್ರತಿಯೊಬ್ಬ ತಂದೆ–ತಾಯಿ ಕಲಿಸಬೇಕಾದದು ಅನಿವಾರ್ಯವಾಗಿದೆ. ಬಂಡಾಯ ಪ್ರವೃತ್ತಿ ಮಗುವಿನಲ್ಲಿ ಬೆಳೆಯಬೇಕಾದರೆ ತಾಯಿ ತಂದೆಯರು ಮನೆಯಲ್ಲಿ ನಿರ್ಭೀತಿಯ ಸ್ವಾತಂತ್ರ್ಯ ವಾತಾವರಣವನ್ನು ನಿರ್ಮಿಸಬೇಕು. ಹಾಗೆಯೇ ಮತಾಂಧತೆ ದೇಶದ ಒಂದು ಪಿಡುಗಾಗಿ ಮಾರ್ಪಟ್ಟಿದೆ. ಶ್ರೀ ಅರವಿಂದರು, ಗಾಂಧೀಜಿ ಲೋಹಿಯಾ, ಅಂಬೇಡ್ಕರ. ವಿವೇಕಾನಂಡ, ವಿಚಾರ ವಾಣಿಯನ್ನು ಮಹಿಮಾನ್ವಿತರ ಪರಿಚಯವನ್ನು ಮಾಡಿಕೊಳ್ಳಬಹುದಾಗಿದೆ.

ಅರವಿಂದರು ಗಾಂಧೀಜಿ ಲೋಹಿಯಾ ಅಂಬೇಡ್ಕರ ಹಾಗೂ ವಿವೇಕಾನಂದರು

ಅರವಿಂದರು ಶಿಕ್ಷಣವನ್ನು ಕುರಿತು ಮನಸ್ಸಿನ ತರಬೇತಿಯೇ ಶಿಕ್ಷಣವಾಗಿದೆ. ಮಕ್ಕಳಲ್ಲಿ ಜ್ಞಾನದ ಬಗ್ಗೆ ಆಸಕ್ತಿ ಹುಟ್ಟಿಸುವುದೇ ಶಿಕ್ಷಣದ ಗುರಿಯಾಗಿದೆ ಎಂದು ಹೇಳಿದ್ದಾರೆ. ಭಾರತವೂ ಗಾಂಧೀವಾದದಿಂದ ಬಹುದೂರ ಸಾಗುತ್ತ ನಡೆದಿದೆ ಗಾಂಧೀಜಿಯವರು ಅಂದು ಕೈಗಾರಿಕರಣ ಹಾಗೂ ಯಾಂತ್ರಿಕರಣಗಳ ದುಷ್ಪರಿಣಾಮಗಳು ಕುರಿತು ಹೇಳಿದ ಮಾತುಗಳು ನಿಜವಾಗಿವೆ. ಕೈಗಾರಿಕೀರಣವೇ ಇಂಧನ ಎಲ್ಲ ಸಾಮಾಜಿಕ ಹಾಗೂ ಪರಿಸರ ಸಂಬಂಧಿತ ಸಮಸ್ಯೆಗಳ ಮೂಲವಾಗಿದೆಯೆಂದು ಹೇಳುವ ಪಾಶ್ಚಾತ್ಯ ಪರಿಸರವಾದಿಗಳ ಮಾತು ಗಾಂಧೀಜಿಯವರ ವಿಚಾರಗಳನ್ನೇ ಪುಷ್ಟೀಕರಿಸುತ್ತದೆ. ಗಾಂಧೀಜಿ ಅವರು ಸಾಧನೆ ಮಾಹನವಾಗಿದ್ದು ಬಸವಣ್ಣನವರ ನಂತರ, ತಮ್ಮ ವಿಚಾರ ಕೃತಿ ಹಾಗೂ ಜನರ ಮೇಲೆ ಬೀರಿದ ಪ್ರಭಾವಗಳ ದೃಷ್ಟಿಯಿಂದ ಅವರಿಗೆ ಸಮಾನರಾದ ವ್ಯಕ್ತಿ ಬೇರೊಬ್ಬರಿಲ್ಲ ಭಾರತದ ಪುನರ್ ನಿರ್ಮಾಣ ಕಾರ್ಯದಲ್ಲಿ ಸ್ವಾಮಿ ವಿವೇಕಾನಂದರ ಪಾತ್ರ ಬಹುಮುಖ್ಯವಾದದ್ದು. ದೇಶದ ಪುನರ್ ನಿರ್ಮಾಣದಲ್ಲಿ ಯುವಕರ ಪಾತ್ರ ದೊಡ್ಡದು ಅಂತೆಯೇ ಭಾರತೀಯರು ತಮ್ಮ ದೈಹಿಕ, ಮಾನಸಿಕ ದೌರ್ಬಲ್ಯಗಳನ್ನು ಕಳೆದುಕೊಂಡಾಗಲೇ ತಮ್ಮ ದೇಶವನ್ನು ನಿರ್ಮಿಸಬಲ್ಲರೆಂದರು.

ಸ್ತ್ರೀ ಸಮಾನತೆ ಸ್ತ್ರೀ ಮೀಸಲಾತಿ ಸಶಕ್ತೀರಣ ಸ್ತ್ರೀ ಶಿಕ್ಷಣ

ಸ್ತ್ರೀಗೆ ಶಿಕ್ಷಣ ಕೊಟ್ಟರೆ ಎಲ್ಲ ಸ್ತರಗಳಲ್ಲೂ ಹಬ್ಬಿರುವ ಪುರುಷ ದೌರ್ಜನ್ಯವನ್ನು ಎದುರಿಸುವ ಆತ್ಮ ವಿಶ್ವಾಸ ಹೊಂದಬಲ್ಲಳು. ಸ್ತ್ರೀಗೆ ಶಿಕ್ಷಣ ಕೊಡುವುದರಿಂದ ವರದಕ್ಷಣೆಯಂತಹ ಅನೇಕ ಸಮಸ್ಯೆಗಳಿಂದ ಪಾರಾಗಬಲ್ಲಳು ಮಹಿಳೆಯನ್ನು ಸಶಕ್ತೀಕರಣಗೊಳಿಸಲು ಕೆಲ ಉಪಾಯಗಳನ್ನು ಇಲ್ಲಿ ಸೂಚಿಸಲಾಗಿದೆ ಅವುಗಳೆಂದರೆ ನಿರಕ್ಷತಾ ನಿವಾರಣೆ, ಆರ್ಥಿಕ ಭದ್ರತೆ, ಆರೋಗ್ಯ ರಕ್ಷಣೆ, ಸಾಮಾಜಿಕ ದೃಷ್ಟಿಕೋನದಲ್ಲಿ ಬದಲಾವಣೆ, ಸಾಂಸ್ಕೃತಿಕ ದೃಷ್ಟಿಕೋನ ಲೈಂಗಿಕ ದೌರ್ಜನ್ಯಗಳಿಂದ ಮುಕ್ತಿ, ರಾಜಕೀಯ ಮೀಸಲಾತಿ, ಸ್ತ್ರೀ ಮೀಸಲಾತಿ ಇಂದಿಗೂ ವಿವಾದಾಸ್ಪದ ವಿಷಯವಾಗಿ ಉಳಿದುದು ಖೇದಕರ ವಿಷಯವಾಗಿದೆ. ಸ್ತ್ರೀವಾದಿ ಸಂಘ ಸಂಸ್ಥೆ ಸಹಕಾರ ಮಂಡಳಿಗಳು ಹುಟ್ಟುಕೊಂಡು ಸ್ತ್ರೀ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿವೆ. ಸ್ತ್ರೀ ಶಕ್ತಿಗಳೂ ದಲಿತ ಹಾಗೂ ಮುಂದುವರೆದ ಜಾತಿಗಳ ಸೇರಿದ ಶಕ್ತಿಗಳೂ ತಮ್ಮ ಭೇದ ಭಾವಗಳನ್ನು ಮರೆತು ಸ್ತ್ರೀಯ ರಾಜಕೀಯ ಅಧಿಕಾರಕ್ಕಾಗಿ ಹೋರಾಡುವ ಕಾಲ ಇದೀಗ ಬಂದಿದೆ.

ಸಮಾನತೆ ವೈಚಾರಿಕತೆ

ಸಮಾನತೆ ಜೀವನದ ಅತ್ಯಂತ ಉಚ್ಚ ಆದರ್ಶವಾಗಿದೆ. ಹೆಣ್ಣು-ಗಂಡುಗಳ ನಡುವಿನ ಅಸಮಾನತೆ ಅತ್ಯಂತ ಕ್ರೂರವಾದ ಅಸಮಾನತೆಯಾಗಿದೆ. ವರ್ಗಭೇದ, ವರ್ಣಭೇದ, ಸಾಕ್ಷರರ ಹಾಗೂ ನಿರಕ್ಷರಿಗಳ ನಡುವಿನ ಅಸಮಾನತೆ ಸಾಂಸ್ಕೃತಿಕ ಅಸಮಾನತೆಯಾಗಿದೆ. ಮತಿಯ ಶಕ್ತಿಯಿಂದಲೇ ಮನುಷ್ಯನಿಂದು ಪ್ರಕೃತಿಯ ಮೇಲೆ ತನ್ನ ಪ್ರಭುತ್ವ ಸಾಧಿಸುತ್ತ ನಡೆದಿದ್ದಾನೆ, ವೈಚಾರಿಕತೆಯ ಬೆಳಕಿನಲ್ಲೇ ನಮ್ಮ ಜೀವನ ಸುಸಂಬದ್ಧವೂ ಉಪಯುಕ್ತವೂ ಆಗುವುದರಲ್ಲಿ ಸಂದೇಹವಿಲ್ಲ

ಉದಾರೀಕರಣ ಜಾಗತೀಕರಣ ನಗರೀಕರಣ

೨೧ ನೇ ಶತಮಾನದ ಬಹು ದೊಡ್ಡ ಸಮಸ್ಯೆಯೆಂದರೆ ನಗರೀಕರಣ, ಒಂದು ನೂರು ವರ್ಷಗಳ ಅವಧಿಯಲ್ಲಿ ನಗರವಾಸಿಗಳ ಸಂಖ್ಯೆ ಭಾರತದಲ್ಲಿ ಮೂರು ಪಟ್ಟು ಬೆಳೆದಿದೆ ದೊಡ್ಡ ಪ್ರಮಾಣದಲ್ಲಿ ಹಳ್ಳಿಗಳಿಂದ ಜನ ಪಟ್ಟಣಗಳಿಗೆ ವಲಸೆ ಬಂದಂತೆ ವಿವಿಧ ಭಾಷೆಗಳನ್ನಾಡುವ ಬೇರೆ ಬೇರೆ ರಾಜ್ಯಗಳ ಜನರೂ ವಿವಿಧ ಧರ್ಮಗಳ ಜನರೂ ಒತ್ತಟ್ಟಿಗೇ ವಾಸವಾಗಿದ್ದಾರೆ. ಹೀಗಾಗಿ ಕ್ಷುಲ್ಲಕ

ಕಾರಣಗಳಿಗಾಗಿ ವಿವಿಧ ಭಾಷಿಕ ಜನರ ನಡುವೆ ಜಗಳಗಳು ನಡೆದಂತೆ ಕೋಮು ಗಲಭೆಗಳೂ ಹೆಚ್ಚಾಗುತ್ತವೆ. ಹೀಗಾಗಿ ಮಹಾ ನಗರಗಳ ಮೂಲೆ ಮೂಲೆಗಳಲ್ಲಿ ಒಂದು ರೀತಿ ಸ್ಫೋಟಕ ವಾತಾವರಣ ಕಂಡು ಬರುತ್ತದೆ. ಜಾಗತಿಕ ದೃಷ್ಟಿಕೋನವು ಆಶಾವಾದ ಹಾಗೂ ಗಟ್ಟಿ ನೈತಿಕತೆಯಿಂದ ಕೂಡಿರುತ್ತದೆ. ಜಾಗತಿಕ ದೃಷ್ಟಿಕೋನವು ಆಶಾವಾದದಿಂದ ಕೂಡಿದಾಗ ಮಾತ್ರ ಜೀವನವು ಮಹತ್ವಪೂರ್ಣವಾಗಿ ಕಾಣುತ್ತದೆ. ಜಾಗತಿಕ ದೃಷ್ಟಿಕೋನ, ಆಶಾವಾದ ಹಾಗೂ ನೈತಿಕತೆಗಳಿಂದ ನಾಗರಿಕತೆಯ ಪ್ರಗತಿಗೆ ಸಹಾಯಕಾರಿಯಾಗುತ್ತದೆ.

ಹೀಗೆ ಪ್ರೊ. ವೀರೇಂದ್ರ ಸಿಂಪಿ ಅವರು ಪರಿಸರದ ಏರು ಪೇರು ಸಾಮಾಜಿಕ ಅಸಮಾನತೆ, ಪ್ರಸಕ್ತ ಸನ್ನಿವೇಶದ ಅವಾಂತರಗಳ ಕಡೆಗೆ ಹೆಚ್ಚು ಮನಬಿಚ್ಚುತ್ತಾರೆ ಈ ಅಂಕಣಬರಹಗಳು ಓದುಗರನ್ನೇ ನೇರವಾಗಿ ಪ್ರತಿನಿಧಿಸುತ್ತವೆ. ಹಾಗೂ ಪ್ರವೇಶಿಸುತ್ತವೆ. ಈ ಗುಣವೇ ಅವರ ಅಂಕಣ ಸಾಹಿತ್ಯದ ಜೀವ ಜೀವಾಳವಾಗಿದೆ.

ಇತರೆ ಸಾಹಿತ್ಯ ಕೃತಿಗಳು

"ಇಂಡಿ ತಾಲ್ಲೂಕು ದರ್ಶನ"

ಇದು ಸಂಕ್ಷಿಪ್ತವಾದ ಇಡೀ ತಾಲೂಕಿನ ಮಾಹಿತಿಯನ್ನು ಕೊಡುವ ಸಂಗ್ರಹವೇ ಆಗಿದೆ. ಈ ಕೃತಿ ಇಂಡಿ ತಾಲ್ಲೂಕಿನ ಒಟ್ಟು ದರ್ಶನವನ್ನು ದಿಗ್ದರ್ಶಿಸುವುದು ಆದರೂ ನಾವು ಪ್ರಸ್ತುತವಾಗಿ ಆಧುನೀಕರಣದಿಂದ ಕೆಲವು ಪರಿವರ್ತನೆಯನ್ನು ಕಂಡುಕೊಳ್ಳಬಹುದಾಗಿದೆ. ಈ ಇಂಡಿ ತಾಲ್ಲೂಕು ಕರ್ನಾಟಕದ ಗಂಡುಮೆಟ್ಟಿನ ಭೂಮಿ ಬಿಜಾಪೂರ ಜಿಲ್ಲೆ, ಈ ಜಿಲ್ಲೆಯ ೧೧ ತಾಲ್ಲೂಕುಗಳಲ್ಲಿ ಇಂಡಿಯೂ ಒಂದು. ಇದು ಪೌರಾಣಿಕವಾಗಿ, ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಗಮನಾರ್ಹವಾದ ತಾಲ್ಲೂಕು ಈ ತಾಲ್ಲೂಕು ಭೀಮಾನದಿಯೊಂದಿಗೆ ಐದು ದೊಡ್ಡ ಹಳ್ಳಗಳು ಹರಿದಿದ್ದರೂ ನೀರಿನ ಕೊರತೆ ಅಪಾರ. ಹಸಿರು ಗಿಡಗಂಟಿಗಳಿಲ್ಲದ ವೃಕ್ಷ ಬಯಲು ೧೨ ತಿಂಗಳೂ ರಣಗುಡುವ ಬಿಸಿಲು ಇಂಡಿ ತಾಲ್ಲುಕು ಆಧ್ಯಾತ್ಮಿಕ ಸಂಪತ್ತಿಗೆ ಹೆಸರಾಗಿದೆ. "ಭೀಮ ಮಹಾತ್ಮ್ಯ" "ಪಯಕ್ಷೇತ್ರ" ಎಂಬ ಹೆಸರೂ ಇದೆ.

೧೨೨ ಹಳ್ಳಿಗಳಿಂದ ಕೂಡಿದ ಇಂಡಿ ತಾಲ್ಲೂಕು ರಾಜ್ಯದಲ್ಲಿ ಶಾಶ್ವತ ಬರಗಾಲದ ತಾಲ್ಲೂಕೆಂದು ಹೆಸರಾಗಿರುವ ತಾಲ್ಲೂಕು ಭಾರತವೂ ವೈವಿಧ್ಯತೆಯಿಂದ ಕೂಡಿದ ಐಕ್ಯತೆಯನ್ನು ಹೊಂದಿದಂತೆ ಇಂಡಿ ತಾಲ್ಲೂಕಿನಲ್ಲಿ ಎಲ್ಲ ವರ್ಗದ, ಜನಾಂಗದ, ಜನರು ವಾಸಿಸುತ್ತಿದ್ದಾರೆ. ಇಂಡಿ ತಾಲ್ಲೂಕಿನ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಚಡಚಣಕ್ಕೆ ಅಗ್ರಪಟ್ಟ. ಇಂಡಿ ತಾಲ್ಲೂಕು ದರ್ಶನ ತಾಲ್ಲೂಕಿನ ಸ್ಥೂಲನೋಟ ಎನ್ನಬಹುದು. ಅನೇಕ ರಾಜಕೀಯ ಧುರೀಣರು, ಸ್ವತಂತ್ರ ಹೋರಾಟಗಾರರು ಉದಯಿಸಿದ ಭೂಮಿ ಇದಾಗಿದೆ. ವಿಜಾಪೂರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಗೆ ಶ್ರೀಕಾರ ಹಾಕಿದವರೆಂದರೆ ಶ್ರೀನಿವಾಸ ಕೌಜಲಗಿ ಜಿಲ್ಲೆಯ ಹಳ್ಳಿ ಪಟ್ಟಣದಲ್ಲಿ ಖಾದಿಯನ್ನು ಜನಪ್ರಿಯಗೊಳಿಸಿಸದ ಹನುಮಂತರಾವ್ ಕೌಜಲಗಿ ಅವರು. "ಕರ್ನಾಟಕ ವೈಭವ" ಪತ್ರಿಕೆಯ ಮೂಲಕ ಜನರಲ್ಲಿ ರಾಷ್ಟ್ರೀಯ ಭಾವನೆ ಹುಟ್ಟಿಸಿದ ಹನುಮಂತರಾಯ ಮೊಹರೆ, ಹರಿಜನೋದ್ಧಾರದ ದೀಕ್ಷೆ ತೊಟ್ಟ ಕಾಕಾಕಾರಖಾನೀಸ ಮೊದಲಾದವರು ದೇಶಭಿಮಾನದ ಕಿಚ್ಚನ್ನು ಜಿಲ್ಲೆಯ ತುಂಬೆಲ್ಲ ಹರಡಿದರು. ಇಂಡಿ ಭಾಗದಲ್ಲಿ ಸುರಪುರ ಮಲ್ಲಪ್ಪ, ಜೀವರಾಜ ದೋಶಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ೧೯೧೮ ರಲ್ಲಿ ಮುಂಬೈ ಪ್ರಾಂತಿಕ ಸಭೆ ಇಂಡಿ ತಾಲ್ಲೂಕಿನಲ್ಲಿಯೂ ಹರಡಿತು. ಚಡಚಣದ ಕಾರ್ಯಕರ್ತರು "ಇಂಡಿ" ಜನರಿಗೆ ಸ್ವಾತಂತ್ರ್ಯ ಚಳುವಳಿಯ ದೀಕ್ಷೆ ಕೊಟ್ಟರು. ೧೯೩೦ ರ ಸುಮಾರಿಗೆ ಚಡಚಣದಲ್ಲಿ ಪ್ರಾರಂಭವಾದ ಚಳುವಳಿ ೧೯೪೨ ರ ಹೊತ್ತಿಗೆ ಇಂಡಿ, ಸಾಲೋಟಗಿ, ಅಥರ್ಗಾ, ಬೂಚಿಯಾರ, ಹಲಸಂಗಿ ಊರುಗಳಿಗೂ ಹಬ್ಬಿತ್ತು. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇಂಡಿ ತಾಲ್ಲೂಕು ವಹಿಸಿದ ಪಾತ್ರ ಉಲ್ಲೇಖನೀಯ.

ಇಂಡಿ ತಾಲ್ಲೂಕು ಉತ್ತಮವಾದ ನಗರರಚನೆ ಹೊಂದಿದ ತಾಲ್ಲೂಕು ಇಲ್ಲಿ ಇರುವ ಶ್ರೀ ಶಾಂತೇಶ್ವರ ದೇವಾಲಯ ಬಹು ಪುರಾತನವಾದದ್ದು. ಇಂಡಿ ತಾಲ್ಲೂಕಿನಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳು ಇವೆ. ಸಾಲೋಟಗಿಯ ಶಿವಯೋಗೀಶ್ವರ ಪುರಾತನ ಗುಡಿ. ಅಗರಖೇಡ (ಅಗ್ರಖೇಟ) ಭೀಮಾ ನದಿಯ ದಂಡೆಯ ಮೇಲೆ ಇರುವ ಬಿಳಿ ಅಮೃತ ಶಿಲೆಯ ಲಿಂಗವಿದೆ. ಧೂಳಖೇಡದ ಶಂಕರಲಿಂಗನ ಗುಡಿ, ಹೊರ್ತಿ ಸಿದ್ದೇಶ್ವರ ಮಲ್ಲಿಕಾರ್ಜುನ ಈಶ್ವರ ಈ ಮೂರು ಗುಡಿಗಳ ಮೇಲೆ ಗಣಪತಿಯ ಮೂರ್ತಿ ಇದೆ.

ಹಲಸಂಗಿ ಆದಿಲಶಾಹಿ ಸರದಾರನೊಬ್ಬನ ವಾಸಸ್ಥಳ ಇಲ್ಲಿ ಒಂದು ಹಳೆಯ ಕೋಟೆ ಇದೆ. ಇಂಚಗೇರಿ ಇದು ಪ್ರಸಿದ್ಧ ತೀರ್ಥಸ್ಥಳ ದೇವರ ನಿಂಬರಗಿ ಇಲ್ಲಿ ಬಲಭೀಮನ ಗುಡಿಯು ಪ್ರಸಿದ್ಧವಾಗಿದೆ. ಇದಕ್ಕೆ ರಾಮದೇವರ ಗುಡಿಯೆಂದೂ ಕರೆಯುತ್ತಾರೆ. ನಿಂಬಾಳ ಕರ್ನಾಟಕದ ಗುರುದೇವರೆಂದು ಹೆಸರುವಾಸಿಯಾಗಿರುವ ಅನುಭಾವಿ ರಾನಡೆಯವರ ಆಶ್ರಮವಿದೆ. ಲಚ್ಯಾಳ ಸಿದ್ಧಲಿಂಗ ಮಹಾರಾಜರ ಆಶ್ರಮವಿದೆ. ಲೋಣಿ, ಬೋಳೆಗಾವ್, ಬಂಥನಾಳ, ಹಾವಿನಾಳ, ರೇವತಗಾವ ಚಡಚಣ ಪ್ರಮುಖವಾದ ಪ್ರೇಕ್ಷಣಿಯ ಸ್ಥಳಗಳಾಗಿವೆ.

ಇಂಡಿ ತಾಲ್ಲೂಕು ಭೀಮಾ ತೀರದ ಪ್ರದೇಶವಾದ್ದರಿಂದ ಒಕ್ಕಲುತನಕ್ಕೆ ಹೇಳಿ ಮಾಡಿಸಿದಂತಹುದು. ಕೃಷಿ ಮಳೆಯ ಮೇಲೆ ಅವಲಂಬಿತವಾದುದು. ಕೆಲವೊಂದು ಕಡೆ ಏತದ ನೀರಾವರಿ ಜಾರಿಯಲ್ಲಿದೆ. ಇಂಡಿ ತಾಲ್ಲೂಕಿನ ಪ್ರಮುಖ ಬೆಳೆ ಬಿಳಿ ಜೋಳ ಸಜ್ಜೆ ಜವೆಗೋಧಿ ಹಾಗೂ ಹತ್ತಿ ಬೋಳೆಗಾವಗಳಲ್ಲಿ ದ್ರಾಕ್ಷಿ ಬೆಳೆಯುತ್ತಾರೆ. ಹೂ, ಹಣ್ಣು, ತರಕಾರಿಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯುವುದು ಈ ವಿಭಾಗದ ಮುಖ್ಯ ಗುರಿ. ಇಂಡಿ ತಾಲ್ಲೂಕಿನಲ್ಲಿ ಸಣ್ಣ ಹಿಡುವಳಿದಾರರ ಸಂಖ್ಯೆಯೇ ಹೆಚ್ಚು ರೇಷ್ಮೆ ಬೆಳೆಯನ್ನು ಇತ್ತೀಚೆಗೆ ಉತ್ಸಾಹದಿಂದ ಬೆಳೆಯಲಾಗುತ್ತದೆ. ತಾಲ್ಲೂಕಿನಲ್ಲಿ ಒಟ್ಟು ೪೪, ೩೬೨ ವ್ಯವಸಾಯ ಸಲಕರಣೆ ಮತ್ತು ಯಂತ್ರ ಸಾಮಗ್ರಿಗಳಿವೆ ಎಂದು ಅಂದಾಜು ಮಾಡಲಾಗಿದೆ.

ಇಂಡಿ ತಾಲ್ಲುಕಿನಲ್ಲಿ ಒಕ್ಕಲುತನ ಮುಖ್ಯವಾದ್ದರಿಂದ ಪಶುಸಂಗೋಪನೆ ಗಮನಾರ್ಹವಾದ್ದು. ಮೀನುಗಾರಿಕೆ, ಕೈಗಾರಿಕೆಗಳು ಅಷ್ಟೊಂದು ಇಲ್ಲವೆಂದೆ ಹೇಳಬೇಕು. ಇಂದು ಇಂಡಿ ತಾಲೂಕಿನಲ್ಲಿ ವಿದ್ಯಾಭ್ಯಾಸಕ್ಕೆ ಒಳ್ಳೆಯ ಅನುಕೂಲಗಳನ್ನು ಕಾಣಬಹುದು. ಇಂಡಿ ತಾಲ್ಲುಕಿನಲ್ಲಿ ಹಲವಾರು ಸಾಹಿತಿ ಕಲಾವಿದರಿಗೆ ಹೆಸರಾಗಿದೆ. ಈ ದಿಶೆಯಲ್ಲಿ ಹಲಸಂಗಿ ಗೆಳೆಯರ ಸಾಧನೆ ಅದ್ವಿತಿಯ ಇಂಡಿ ತಾಲ್ಲೂಕಿನಲ್ಲಿ ಕೈಗೊಂಡ ಸಾಂಸ್ಕೃತಿಕ ಆಧ್ಯಾತ್ಮಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳು ಅನುಪಮವಾದವು, ಅದರಲ್ಲೂ ಜನಪದ ಸಾಹಿತ್ಯಿ ಕಲೆಗಳ ರಂಗಗಳಲ್ಲಿಯೂ ಇಂಡಿ ತಾಲ್ಲೂಕಿನ ಸಾಧನೆ ಕಣ್ಣು ಕುಕ್ಕಿಸುವಂತಿದೆ. ಜನಪದ ಸಾಹಿತ್ಯದ ಕಣಜದಂತಿರುವ ಇಂಡಿ ಜನಪದರ ಹಾಡುಗಳಲ್ಲಿ ಲಾವಣಿಗಳಿಗೆ, ಗರತಿಯ ತ್ರಿಪದಿಗಳಿಗೆ ಸಿಂಹಪಾಲು. ಡಪ್ಪಿನ ಹಾಡುಗಳನ್ನು ಕಾಣಬಹುದಾಗಿದೆ. ಡೊಳ್ಳಿನ ಪದಗಳು ಕೂಡ ನೋಡುತ್ತೇವೆ.

ಇಂಡಿ ತಾಲ್ಲೂಕು ಶರಣ ಸಂತರಿಂದ ಪಾವನಗೊಂಡ ನಾಡು ಹಾವಿನಾಳ ಕಲ್ಲಯ್ಯ, ಶಾಬಿತಯ್ಯಶರಣ, ಶಿವಯೋಗೇಶ್ವರ ಇವರುಗಳು ಅಪ್ರತಿಮ ಆಧ್ಯಾತ್ಮಿಕ ಕವಿಗಳು. ಕರ್ನಾಟಕದ ಆಧ್ಯಾತ್ಮಿಕ ರಂಗಕ್ಕೆ ಇಂಡಿ ತಾಲ್ಲೂಕಿನ ಕೊಡುಗೆ ಅಪಾರ.

ಇಂಡಿಯ ಶಾಂತೇಶ್ವರ ಜಾತ್ರೆ, ನಿಂಬರಗಿಯ ಬಲಭೀಮ ದೇವರಜಾತ್ರೆ, ಹೊರ್ತಿ ಸಿದ್ದರಾಮೇಶ್ವರ ಜಾತ್ರೆ, ಸಾಲೋಟಗಿಯ ಶಿವಯೋಗಿಶ್ವರ ಜಾತ್ರೆ, ಚಡಚಣದಲ್ಲಿ ಶ್ರೀ ಸಂಗಮೇಶ್ವರ ಜಾತ್ರೆಯಾಗುತ್ತದೆ. ಜಾತ್ರೆಯಲ್ಲ ಕಂಪನಿ ನಾಟಕಗಳು, ಸರ್ಕಸ್ಸು ಸಾಕಷ್ಟು ಜನರಿಗೆ ಮನರಂಜನೆ ಒದಗಿಸುತ್ತವೆ. ಇಂಡಿ ತಾಲ್ಲೂಕಿನಲ್ಲಿ ಸಾಮಾಜಿಕ ಸೇವೆಗಾಗಿ ಅನೇಕ ಸಂಘ ಸಂಸ್ಥೆಗಳಿವೆ. ಒಳ್ಳೆಯ ವೈದ್ಯಕೀಯ ಸೌಲಭ್ಯದ ಸಲುವಾಗಿ ಪ್ರಾಥಾಮಿಕ ಆರೋಗ್ಯ ಕೇಂದ್ರಗಳಿವೆ.. ಹಾಗೆಯೇ ಅನೇಕ ಕಡೆ ಪ್ರಾಥಾಮಿಕ ಆರೋಗ್ಯ

ಘಟಕಗಳಿವೆ. ಅಲ್ಲದೆ ಉತ್ತಮವಾದ ಸಾರಿಗೆ ವ್ಯವಸ್ಥೆ ಹೊಂದಿದೆ. ಅಂಚೆ ತಂತಿ ಸೌಕರ್ಯ ಇದೆ. ತಾಲ್ಲೂಕಿನಲ್ಲಿ ಒಟ್ಟು ೭೩ ನ್ಯಾಯಬೆಲೆ ಅಂಗಡಿಗಳಿವೆ ವಿದ್ಯುಚ್ಛಕ್ತಿ ಸೌಕರ್ಯ ಒದಗಿಸಲಾಗಿದೆ. ಸಹಕಾರ ಆಂದೋಲನ ತಾಲ್ಲುಕಿನಲ್ಲಿ ಚೆನ್ನಾಗಿ ನಡೆದಿದೆ. ಉತ್ತಮವಾದ ಆಡಳಿತ ಕಾನೂನ ವ್ಯವಸ್ಥೆ ಇದೆ. ಒಟ್ಟಿನಲ್ಲಿ ಇಂಡಿ ತಾಲ್ಲುಕಿನ ಜನ ಸಾಹಸ್ಸಿಗ್ಗರು ಇಲ್ಲಿಯ ಭೂಮಿ ಫಲವತ್ತಾದುದು ಇಲ್ಲಿಯ ಹಿಂಗಾರಿ ಬಿಳಿಜೋಳ ಪಂಜಾಬದ ಗೋಧಿಗೆ ಸಮ. ಹೀಗೆ ಪ್ರೊ. ವೀರೇಂದ್ರ ಸಿಂಪಿ ಅವರು ಸಮಗ್ರವಾಗಿ ಇಂಡಿ ತಾಲ್ಲುಕನಲ್ಲಿ ತಮ್ಮ ಬರಹದ ಮೂಲಕ ದರ್ಶಿಸಿರುವುದನ್ನು ಮನಗಾಣಬಹುದಾಗಿದೆ.

"ಬಣ್ಣಗಾರಿಕೆ"

"ಬಣ್ಣಗಾರಿಕೆ" ಕೃತಿಯು ಪ್ರೊ. ವೀರೇಂದ್ರ ಸಿಂಪಿ ಅವರ ಎಲ್ಲಾ ಕೃತಿಗಳಲ್ಲೇ ಬಹು ವಿಶಿಷ್ಟವಾದದ್ದು. ದೇಶಿಯ ನೆಲೆಗೆ, ಕೃಷಿ ಕಾರ್ಮಿಕರಿಗೆ, ಭದ್ರ ಬುನಾದಿ ಹಾಕಿಕೊಡಬಲ್ಲ ಬಣ್ಣಗಾರಿಕೆ ಇದಕ್ಕಿದೆ. ಇಂದು ಹತ್ತಿಬಟ್ಟೆ, ಗುಡಿ ಕೈಗಾರಿಕೆಗಳು, ಬಹು ರಾಷ್ಟ್ರಿಯ ಕಂಪನಿಗಳ ಬಿರುಗಾಳಿಗೆ ಪತಂಗಗಳಂತಾಗಿವೆ. ವಸ್ತ್ರ ವಿನ್ಯಾಸಗಳ ನವೀನ ಪ್ರಯೋಗಕ್ಕೆ ದೇಶಿಯ ಮಾರುಕಟ್ಟೆಯ ಹೊಸ ಹೊಸ ಸಾಧ್ಯತೆಗಳ ಸೃಷ್ಟಿಗೆ ಮೂಲ ಒದಗಿಸುತ್ತದೆ. ಉದಾರೀಕರಣ ಮತ್ತು ಖಾಸಗೀಕರಣಗಳ ಚಿಂತೆಗೆ ಸೂಕ್ತ ಸಲಹೆ ಒದಗಿಸುವ ನಿಟ್ಟಿನಲ್ಲಿ ಇದೊಂದು ಅದ್ಭುತ ಪ್ರಯೋಗ ಕನ್ನಡ ಅನುವಾದ ಕೃತಿಗಳಲ್ಲಿಯೇ ಬಹು ವಿಶಿಷ್ಟವಾಗಿದೆ.

ಬಣ್ಣಗಾರಿಕೆ ಉದ್ಯಮದ ಕುರಿತ ಮಹತ್ವದ ಕೃತಿ ಇದಾಗಿದೆ. ಉದ್ಯಮಗಾರರು ಎದುರಿಸುವ ಸವಾಲುಗಳ ಮಾಲೆಯನ್ನು ಕಾಣಬಹುದಾಗಿದೆ. ದೇಶಿಯ ಪದ್ದತಿಯಿಂದ ನೂಲಿಗೆ ಬಣ್ಣ ಕೊಟ್ಟು ಬಣ್ಣಗಾರರು ನೂಲನ್ನು ಸಿದ್ದಪಡಿಸುತ್ತಾರೆ. ಅದನ್ನು ಮುಂದೆ ನೇಕಾರರು ನೈಯ್ದು ಬಟ್ಟೆಗಳನ್ನು ಸೀರೆಗಳನ್ನು ಮಾರಾಟ ಮಾಡುತ್ತಾರೆ. ಜಾಗತೀಕರಣದ ಹಿನ್ನೆಲೆಯಲ್ಲಿ ಸ್ವದೇಶಿ ಪದ್ದತಿಯ ಉದ್ದಿಮದ ಬಗ್ಗೆ ಸಿಂಪಿ ಅವರು ಒಳ್ಳೆಯ ಪರಿಚಯವನ್ನು ಬಣ್ಣಗಾರಿಕೆಯಲ್ಲಿ ಕಾಣಬಹುದು.

"ಹತ್ತು ಪಾಶ್ಚಾತ್ಯ ಕಾದಂಬರಿಕಾರರು"

ಇದು ಪ್ರೊ. ವೀರೇಂದ್ರ ಸಿಂಪಿ ಅವರ ಅಪ್ರಕಟಿತ ಕೃತಿಯಾಗಿದೆ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಪಾಶ್ಚಾತ್ಯದ ಪ್ರಭಾವ ಬಹುದೊಡ್ಡದು ಈ ನಿಟ್ಟಿನಲ್ಲಿ ಪ್ರೊ. ವೀರೇಂದ್ರ ಸಿಂಪಿ ಅವರು ಹತ್ತು ಪಾಶ್ಚಾತ್ಯ ಕಾದಂಬರಿಕಾರರ ಸಂಕ್ಷಿಪ್ತ ಜೀವನ ಹಾಗೂ ಅವರ ಪ್ರಮುಖ ಕಾದಂಬರಿಗಳ ಸೂಕ್ಷ್ಮ ವಿಶ್ಲೇಷಣೆ ಮಾಡಿದ್ದಾರೆ.

ಆ ಹತ್ತು ಜನ ಕಾದಂಬರಿಕಾರರು ವಿಶ್ವ ವಿಖ್ಯಾತರು ಅವರ ಕುರಿತು ಕನ್ನಡ ಓದುಗರಿಗೆ ಸ್ಥೂಲ ಪರಿಚಯ ಮಾಡಿಕೊಡುವುದು ಲೇಖಕರ ಪ್ರಮುಖ ಉದ್ದೇಶಗಳಲ್ಲೊಂದು ಆ ಕಾದಂಬರಿಕಾರರೆಂದರೆ

ಕ್ರ. ಸಂ.	ಹೆಸರುಗಳು	ಸಾಹಿತಿಗಳು
೧.	ಲಿಯೋಟಾಲ್‌ಸ್ಟಾಯ್	ರಷ್ಯಾ ಸಾಹಿತಿ
೨.	ಡಾಸ್ಟೋವೇಸ್ಕಿ	ರಷ್ಯಾ
೩.	ಚೆಖೋವ್ಹ್	ರಷ್ಯಾ

೬.	ಎಮಿಲಿ ಜೋಲಾ	ಫ್ರೆಂಚ
೫.	ಪ್ಲಾಬೆ	ಫ್ರೆಂಚ
೬.	ಗಾಯ್ ಡಿ ಮೊಪಾಸಾ	ಫ್ರೆಂಚ
೭.	ಬಾಲ್ ಜಾಕ್	ಫ್ರೆಂಚ
೮.	ಜೇನ್ ಆಸ್ಕಿನ್	ಇಂಗ್ಲೆಂಡ್
೯.	ಚಾರ್ಲೆಸ್ ಡಿಕೆನ್ಸ್	ಇಂಗ್ಲೆಂಡ್
೧೦.	ಮಾರ್ಕಟ್ರೇನ್	ಅಮೇರಿಕಾ

ಹೀಗೆ ಹತ್ತು ಪಾಶ್ಚಾತ್ಯ ಕಾದಂಬರಿಕಾರರ ಪರಿಚಯವನ್ನು ಮಾಡಿರುವುದನ್ನು ನಾವು ಕಾಣುತ್ತೇವೆ.

ಅಧ್ಯಾಯ – ನಾಲ್ಕು

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರೊ. ವೀರೇಂದ್ರ ಸಿಂಪಿ ಅವರ ಸಾಹಿತ್ಯದ ಸ್ಥಾನಮಾನ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರೊ. ವೀರೇಂದ್ರ ಸಿಂಪಿ ಅವರ ಸಾಹಿತ್ಯದ ಸ್ಥಾನಮಾನ

ಪ್ರೊ. ವೀರೇಂದ್ರ ಸಿಂಪಿ ಅವರು ಕನ್ನಡ ಸಾಹಿತ್ಯವನ್ನು ಅಭಿಮಾನ ಪೂರ್ವಕವಾಗಿ ಆರಾಧಿಸಿದ ಅಪೂರ್ವ ಬರಹಗಾರರು ಕನ್ನಡ ಸಾಹಿತ್ಯಕ್ಕೆ ಅವರ ಕೊಡುಗೆ ಸದಾ ಹಸಿರಾದದ್ದು. ಬೀದರ ಜಿಲ್ಲೆಯ ಹೆಮ್ಮೆಯ ಬರಹಗಾರರಾದಂತಹ ಪ್ರೊ. ವೀರೇಂದ್ರ ಸಿಂಪಿ ಅವರು ಬಳಸುವ ಭಾಷಾ ಶೈಲಿ, ಪದಬಂಧಗಳ ಜೋಡಣೆ, ಅರ್ಥಗರ್ಭಿತ ವಿವರಣೆ ಮನೋಜ್ಞವಾದದ್ದು. ಲಲಿತ ಪ್ರಬಂಧ ಸಾಹಿತ್ಯದಲ್ಲಿನ ಅವರ ಕೊಡುಗೆ ತುಂಬಾ ವಿಶಿಷ್ಟವಾದದ್ದು. ಅವರ ಬರಹದಲ್ಲಿನ ದೇಶಿಯತೆಯ ಕಲ್ಪನೆ ವಿಶಿಷ್ಟವಾಗಿ ಮೂಡಿ ಬಂದಿದೆ. ಇವರು ಸ್ವಂತಿಕೆಯನ್ನು ರೂಪಿಸಲು ಹೆಣಗುತ್ತಿದ್ದರು. ಸಾಮಾಜಿಕ ಸಂದರ್ಭಗಳನ್ನು ತಮ್ಮ ಬರಹಕ್ಕೆ ಸೆಳೆದುಕೊಂಡವರು. ವಿಡಂಬನೆ, ತಿಳಿಹಾಸ್ಯ ವ್ಯಂಗ್ಯ ಅನ್ಯೋಕ್ತಿ ವ್ಯಕ್ತಿಗಳ ಆತ್ಮಶೋಧನೆ, ಅಂತರ್ಮುಖತೆ ತಾತ್ವಿಕ ಚಿಂತನೆ ಇವರ ಸಾಹಿತ್ಯಕ್ಕೆ ಜನ್ಮಕೊಟ್ಟಿದೆ. ಲಲಿತ ಪ್ರಬಂಧ, ಅಂಕಣಬರಹದಂತಹ ಸಾಹಿತ್ಯದ ವಸ್ತುವನ್ನು ಆರಿಸುವಾಗ ಒಂದು ಉದ್ದೇಶಿತ ಗುರಿ ಸಂಕಲ್ಪ ಇವರಲ್ಲಿದೆ. ಸಾಹಿತ್ಯದ ಅಗಾಧತೆಯನ್ನು ಪ್ರಜ್ಞಾಪೂರ್ವಕವಾಗಿ ಪರಿಭಾವಿಸಿ ಸಾಹಿತ್ಯ ಕಟ್ಟುವ ಛಲದಿಂದ ಸೆಣೆಸಿದ್ದಾರೆ. ಹೊಸಗನ್ನಡ ಸಾಹಿತ್ಯದಲ್ಲಿ ಪ್ರಬಂಧ ಸಾಹಿತ್ಯ ಅಂಕಣಬರಹ, ವಿಚಾರ, ಅನುವಾದ, ಸಂಪಾದನೆ ಮುಂತಾದವುಗಳ ಯಶಸ್ವಿಯಾಗಿ ತರುವ ಮುಖಾಂತರ ಪ್ರೊ. ವೀರೇಂದ್ರ ಸಿಂಪಿ ಅವರು ಮಹತ್ವದ ಬರಹಗಾರರಾಗಿ ಕಂಡುಬರುತ್ತಾರೆ.

ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಶೈಲಿಯಿಂದ ಗಮನ ಸೆಳೆಯುವ ವೀರೇಂದ್ರ ಸಿಂಪಿ ಅವರು ಹೊಸಗನ್ನಡ ಸಾಹಿತ್ಯದ ರೂಪರೇಷೆಗಳಿಂದ ತಮ್ಮ ಬರಹಕ್ಕೆ ವಿಶಿಷ್ಟ ಮೆರಗು ನೀಡಿದವರು. ವೀರೇಂದ್ರ ಸಿಂಪಿ ಅವರ ಸಾಹಿತ್ಯ ತುಂಬಾ ಪ್ರಭಾವ ಪೂರ್ಣವಾದದ್ದು, ಆಕರ್ಷಕವಾದದ್ದು. ಪ್ರಮುಖ ಲಲಿತ ಪ್ರಬಂಧ ಸಾಹಿತ್ಯ ರಚನಾಕಾರರ ಸಾಲಿನಲ್ಲಿ ನಿಲ್ಲುವ ಗಮನಾರ್ಹ ವ್ಯಕ್ತಿಯಾಗಿ ಕಂಡು ಬರುತ್ತಾರೆ. ಇವರ ಸಾಹಿತ್ಯಿಕ ಕೊಡುಗೆ ಸ್ಮರಣೀಯವಾದದ್ದು.

ಪ್ರೊ. ವೀರೇಂದ್ರ ಸಿಂಪಿ ಅವರು ಅಪ್ರತಿಮ ಬರಹಗಾರರು ಇವರು ಲಲಿತ ಪ್ರಬಂಧ ಹಾಗೂ ಅಂಕಣಬರಹಗಳ ರಚನೆಯಿಂದ ಗಮನ ಸೆಳೆಯುತ್ತಾರೆ. ಅವರ ಪ್ರಬಂಧಗಳ ರಚನೆಯು ಎಂತಹ ನಿರ್ಜಿವ ವಸ್ತುವಿನಲ್ಲೂ ಸಹ ಜೀವ ತುಂಬುವಂತಹದ್ದು. ತಮ್ಮದೇ ಆದ ವಿಸಿಷ್ಟ ಕಲಾತ್ಮಕತೆಯಿಂದ ಸೊಬಗಿನಿಂದ ಗಮನ ಸೆಳೆಯುತ್ತಿದೆ. ಅಂಕಣಬರಹಗಳು ಲಲಿತ ಪ್ರಬಂಧಗಳು ಓದುಗರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿವೆ. ಅಂತೆಯೇ ಬರ್ಟ್ರಂಡ್ ರಸೆಲ್, ಗಾಯ್ ಡಿ ಮೊಪಾಸಾನ ವಿಚಾರಧಾರೆಗಳನ್ನು, ಹಾಗೂ ಶ್ರೀ ಅರವಿಂದರ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸುವುದರ ಮೂಲಕ ಅಪ್ರತಿಮ ಬರಹಗಾರರಾಗಿ ಗಮನಸೆಳೆಯುತ್ತಾರೆ. ಹೊಸಗನ್ನಡ ಸಾಹಿತ್ಯದಲ್ಲಿ ಅವರ ಕೃತಿಗಳನ್ನು ಅವಲೋಕಿಸಿದಾಗ ತಮ್ಮ ಗಟ್ಟಿತನ, ಆಕರ್ಷಕ ಬರವಣಿಗೆಯಿಂದಾಗಿ ಗಮನ ಸೆಳೆಯುತ್ತಾರೆ.

ಪ್ರೊ. ವೀರೇಂದ್ರ ಸಿಂಪಿ ಅವರು ಹೊಸಗನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಶೈಲಿಯಿಂದ ಪ್ರಭಾವಗೊಳಿಸಿದವರು. ಲಲಿತ ಪ್ರಬಂಧ ಸಾಹಿತ್ಯಕ್ಕೆ ತನ್ನದೆ ಆದ ಪ್ರತಿಭೆಯಿಂದ ಜನಮನ ಸೂರೆಗೊಂಡವರು. ಲಲಿತ ಪ್ರಬಂಧಕಾರರಾಗಿ,ಅಂಕಣ ಬರಹಗಾರರಾಗಿ ಸಂಪಾದನಕಾರರಾಗಿ,

ಅನುವಾದಕಾರರಾಗಿ ಮುಂತಾದ ಸಾಹಿತ್ಯಿಕ ಪ್ರಕಾರಗಳಲ್ಲಿ ವಿಶಿಷ್ಟರಾಗಿ ಕಂಡು ಬರುವರು. ಇವರ ಬರಹ ಗಮನಾರ್ಹವಾದದ್ದು. ಇವರು ಆರು ಪ್ರಮುಖವಾದ ಲಲಿತ ಪ್ರಬಂಧಗಳನ್ನು ರಚಿಸಿ, ಕನ್ನಡದ ಲಲಿತ ಪ್ರಬಂಧ ಸಾಹಿತ್ಯದಲ್ಲಿ ಸ್ಮರಣಾರ್ಹ ವ್ಯಕ್ತಿಯಾಗಿದ್ದಾರೆ. ಇವರ ಪ್ರಬಂಧಕ್ಕೆ ಅಂಕಣ ಬರಹಕ್ಕೆ ಜನ ಜೀವನದಲ್ಲಿ ಜ್ವಲಿಸುವ ಜೀವಂತ ಸಮಸ್ಯೆ ಹಾಗೂ ನಿತ್ಯ ಸತ್ಯತೆಗಳನ್ನು ಕಾಣಬಹುದು.

ಪ್ರೊ. ವೀರೇಂದ್ರ ಸಿಂಪಿ ಅವರು ತಮ್ಮ ಪ್ರಬಂಧ ಸಾಹಿತ್ಯದ ನಾದಕ್ಕೆ ಓದುಗರನ್ನು ತಲೆದೂಗಿಸುವಂತೆ ಮಾಡುತ್ತಾರೆ. ಅವರ ಅಂಕಣ ಬರಹದ ಹಿಡಿತ ಅದ್ಭುತವಾದ್ದು. ಅವರ ಶೈಲಿ ತನ್ನದೇ ಆದ ಮೊನಚಿನಿಂದ ಕೂಡಿ ಅಪ್ರತಿಮವಾಗಿ ಮೂಡಿಬಂದದ್ದು. ಇವರ ಸಾಹಿತ್ಯ ಕೃಷಿಯು ಕನ್ನಡ ಸಾಹಿತ್ಯದಲ್ಲಿಯೆ ಒಂದು ವಿಶಿಷ್ಟ ಅಭಿವ್ಯಕ್ತಿಯಾಗಿ ರೂಪುಗೊಂಡಿದೆ. ಇದು ಸ್ಥಿತ್ಯಂತರಗಳನ್ನು ಸಾಧಿಸಿಕೊಂಡು ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ಇಂದಿಗೂ ಹೊಸತನವನ್ನು ಕಾಪಾಡಿಕೊಂಡಿದೆ. ಇವರ ಸಾಹಿತ್ಯದಲ್ಲಿ ಜೀವನ ಮೌಲ್ಯಗಳ ಅರಿವಿದೆ. ಇವರ ಸಾಹಿತ್ಯದಲ್ಲಿ ಅಗಾಧವಾದ ರಸಾನುಭವವನ್ನುಂಟು ಮಾಡುವ ತುಂಬು ನದಿಯ ಗಾಂಭೀರ್ಯವನ್ನು ನಾನು ಕಂಡಿದ್ದೇನೆ. ಅವರ ಹಾಸ್ಯ ವ್ಯಂಗ್ಯಗಳಲ್ಲಿ ಸಾತ್ವಿಕಸಿಟ್ಟಿನ ಸತ್ವವಿದೆ. ಶೈಲಿಯಲ್ಲಿ ನಾವಿನ್ಯವಿದೆ. ಹೃದಯವನ್ನು ಮುಟ್ಟುವ ಅವರ ಅಂತರ್ಮುಖತೆಗೆ ಎಲ್ಲರು ಮನ ಸೋಲುತ್ತಾರೆ. ಹೀಗೆ ಪ್ರೊ. ವೀರೇಂದ್ರ ಸಿಂಪಿ ಅವರು ಕನ್ನಡ ಸಾಹಿತ್ಯದಲ್ಲಿ ತಮ್ಮ ವಿಶಿಷ್ಟ ಬರಹಗಾರರಾಗಿ ಅತ್ಯಂತ ಮನೋಜ್ಞವಾಗಿ ಗಮನಸೆಳೆಯುತ್ತಾರೆ.

ಪ್ರೊ. ವೀರೇಂದ್ರ ಸಿಂಪಿ ಅವರು ಕನ್ನಡ ಸಾರಸ್ವತ ಲೋಕಕ್ಕೆ ತಮ್ಮ ಅಮೂಲ್ಯ ಕೃತಿಗಳ ಕಾಣಿಕೆಯನ್ನು ನೀಡುವುದರ ಮುಖಾಂತರ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇಂತಹ ಅಪ್ರತಿಮ ಬರಹಗಾರರು ಸಿಗುವುದು ತೀರಾ ವಿರಳ ಇಂಗ್ಲೀಷ ಪ್ರಾಧ್ಯಾಪಕರಾಗಿ ಕನ್ನಡ ಸಾಹಿತ್ಯವನ್ನು ತುಂಬು ಒಲವಿನಿಂದ ತಮ್ಮ ಬರಹದಲ್ಲಿ ತೊಡಗಿಸಿ ಕೊಂಡಿದ್ದಾರೆ. ವಿಶೇಷವಾಗಿ ನಾಡು ನುಡಿ ಬಗೆಗೆ ವಚನ ಸಾಹಿತ್ಯ, ಪ್ರಬಂಧ, ಜಾನಪದ, ಕುರಿತು ಸುದೀರ್ಘವಾಗಿ ಅಧಿಕಾರವಾಣಿಯಿಂದ ಮಾತನಾಡಬಲ್ಲ ಅಪೂರ್ವ ವಾಗ್ಮಿಗಳು ಇವರು. ಈ ಇಳಿವಯಸ್ಸಿನಲ್ಲಿಯೂ ಇನ್ನೂ ಮಾನಸಿಕವಾಗಿ ನಿಜ ಯೌವನದ ಕೆಚ್ಚನ್ನೆ ಇಟ್ಟುಕೊಂಡಿದ್ದಾರೆ. ಅರಿವು ಮರೆವುನಲ್ಲಿದ್ದರೂ ಹಿಡಿದ ಛಲವನ್ನು ಕೈ ಬಿಡದಿರುವುದು ಅವರ ವ್ಯಕ್ತಿತ್ವದ ವೈಶಿಷ್ಟ್ಯತೆಗೆ ಹಿಡಿದ ಕೈಗನ್ನಡಿ. ಪ್ರೊ. ವೀರೇಂದ್ರ ಸಿಂಪಿ ಅವರ ಸಾಹಿತ್ಯ ರಚನೆ ಇಂದಿಗೂ ಅವ್ಯಾಹತವಾಗಿ ಮುಂದುವರೆದಿದೆ. ಇವರ ಸಾಹಿತ್ಯಿಕ ಕೃಷಿ ನಿರಂತರವಾಗಿ ಮುಂದುವರೆದಿದ್ದು ಸಂತೋಷ ಹಾಗೂ ಹೆಮ್ಮೆಯ ಸಂಗತಿಯಾಗಿದ್ದು ಆಧುನಿಕ ಕನ್ನಡ ಸಾಹಿತ್ಯಕ್ಕೆ ಮತ್ತು ಲಲಿತ ಪ್ರಬಂಧ ಅಂಕಣಬರಹದಂತಹ ಸಾಹಿತ್ಯ ಪ್ರಕಾರಗಳಿಗೆ ಇವರ ಸೇವೆ ಗಮನಾರ್ಹವಾದುದು.

ವೀರೇಂದ್ರ ಸಿಂಪಿ ಅವರ ಸಾಹಿತ್ಯವು ನೇರವಾಗಿ ಸಮಾಜಕ್ಕೆ ಸಂಬಂಧಿಸಿದ್ದು, ವರ್ತಮಾನದ ವಿಚಾರಗಳಿಗೆ ತೀವ್ರವಾಗಿ ಮತ್ತು ನೇರವಾಗಿ ತಾಗುತ್ತವೆ. ಆದ್ದರಿಂದ ವೀರೇಂದ್ರ ಸಿಂಪಿ ಅವರ ಬರಹವು ಪ್ರಸ್ತುತ ಸಾಮಾಜಿಕ ಸಮಸ್ಯೆಗಳೊಂದಿಗೆ ನಿಕಟವಾಗಿರುವಂತೆ ತೋರುತ್ತಿವೆ. ಹಾಗೂ ಇವರು ಯಾವುದೇ ಸಾಹಿತ್ಯ ಪ್ರಕಾರವನ್ನು ಆಯ್ದುಕೊಂಡು ವೈವಿಧ್ಯಮಯವಾದ ವಸ್ತುವನ್ನು ಚಿತ್ರಿಸಿದರೂ ಅವರ ಲಲಿತ ಪ್ರಬಂದ ಹಾಗೂ ಅಂಕಣಬರಹದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಕಳಕಳಿ

ನುಸುಳಿಕೊಂಡಿರುವುದನ್ನು ನಾವು ಕಾಣುತ್ತೇವೆ. ಸಾಮಾಜಿಕ ಸಮಸ್ಯೆಗಳನ್ನು ಕುರಿತು ವಿಶ್ಲೇಷಿಸುವುದು ಅವುಗಳನ್ನು ಹೇಗೆ ನಿರೂಪಿಸಿದರೆ ಓದುಗರ ಮನಸ್ಸು ತೀಕ್ಷ ಪರಿವರ್ತನೆಯಾಗಲು ಸಾಧ್ಯ ಎಂಬುದನ್ನು ಮನಗೊಂಡು ವೀರೇಂದ್ರ ಸಿಂಪಿ ಅವರು ತಮ್ಮ ಬರಹದಲ್ಲಿ ಸಮಾಜದ ದೇಶದ ಸಮಸ್ಯೆಯನ್ನೇ ಎತ್ತಿ ತೋರಿಸಿದ್ದಾರೆ.

ಆಧುನಿಕ ಕನ್ನಡ ಲಲಿತ ಪ್ರಬಂಡಕಾರರಾಗಿರುವ ರಾ.ಯ ಧಾರವಾಡಕರ ಎ.ಎನ್. ಮೂರ್ತಿರಾವ, ಎಚ್ಚೆಸ್ಕೆ, ಬಿ.ಆರ್. ವಾಡಪ್ಪ ಹೀಗೆ ಮೊದಲಾದ ಪ್ರತಿಭಾವಂತ ಪ್ರಬಂಧಕಾರರಂತೆ ವೀರೇಂದ್ರ ಸಿಂಪಿ ಅವರು ಸಹ ತನ್ನದೇ ಆದ ಗದ್ಯ ಶೈಲಿಯನ್ನು ನಿರ್ಮಿಸಿಕೊಂಡವರು ವೀರೇಂದ್ರ ಸಿಂಪಿ ಅವರು ಯಾವತ್ತು ಕನ್ನಡದ ಹಿರಿಯ ಪ್ರಬಂಧಕಾರರ ಸಾಲಿಗೆ ಸೇರುತ್ತಾರೆ. ಅವರು ಕನ್ನಡ ಪ್ರಬಂಧ ಸಾಹಿತ್ಯದಲ್ಲಿ ತಮ್ಮದೆ ಆದ ಸ್ಥಾನವನ್ನು ಗಳಿಸಿಕೊಂಡಿದ್ದಾರೆ.

ಭಾಷೆಯ ದೃಷ್ಟಿಯಿಂದ ಇವರ ಲಲಿತ ಪ್ರಬಂಧಗಳು ದೇಶೀಯವಾಗಿ ಮನದ ಹತ್ತಿರಕ್ಕೆ ಬಂದು ನಿಲ್ಲುತ್ತವೆ. ಓದುಗ ಮತ್ತು ಪ್ರಬಂಧಗಳ ನಡುವೆ ಒಂದು ರೀತಿಯ ತಾದಾತ್ಮ್ಯ ಏರ್ಪಡುವಂತೆ ಕಾಳಜಿ ವಹಿಸುತ್ತವೆ. ಹೀಗಾಗಿ ಇವರ ಪ್ರಬಂಧಗಳು ತಮ್ಮ ಜೀವನದ ಒಂದು ಭಾಗವೇ ಇರಬಹುದೆಂಬಷ್ಟರ ಮಟ್ಟಿಗೆ ಆತ್ಮೀಯ ಬೆಸುಗೆ ಏರ್ಪಡಿಸುತ್ತವೆ. ಈ ಗುಣ ಒಂದು ಕೃತಿಯ ಕೃತಿಕಾರನ ಪರಮೋಚ್ಚ ಗುರಿ ಸಾಧನೆಗಳಾಗಿವೆ. ಇದಕ್ಕಿಂತ ಹೆಚ್ಚಿಗೆ ಒಂದು ಕೃತಿ ಇನ್ನೇನು ಬಯಸಲು ಸಾಧ್ಯ?

ಲಲಿತ ಪ್ರಬಂಧ ಸಾಹಿತ್ಯವು ನವೋದ್ಭವು ಸಂದರ್ಭದ ಸಕಲ ಸತ್ವ ಮತ್ತೆ ಪಡೆಯುವಂತೆ ಮಾಡುವಲ್ಲಿ ಪ್ರೊ. ವೀರೇಂದ್ರ ಸಿಂಪಿ ಅವರು ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ಈ ಕಾರಣದಿಂದಲೇ ಅವರೊಬ್ಬ ಪ್ರಮುಖ ಪ್ರಬಂಧಕಾರರೆಂದು ಪರಿಗಣಿಸಲ್ಪಡುವರು. ಗೊರೂರು ರಾಮಸ್ವಾಮಿ ಅಯ್ಯಂಗಾರರು ಹೇಳುವಂತೆ ಲಲಿತ ಪ್ರಬಂಧಗಳ ವಿಷಯ ನಿರೂಪಣೆಯಲ್ಲಿ ಸ್ಪಷ್ಟತೆ, ಮರ್ಯಾದೆಯನ್ನು ಮೀರಿದ ಹಾಸ್ಯ ಕೃತಕವಲ್ಲದ ಚಮತ್ಕಾರ, ಸಹಾನುಭೂತಿ, ಸರಸತೆ, ಸಜ್ಜನಿಕೆ, ಆಕರ್ಷಿಕ ದೃಷ್ಟಿ, ಆಳವಾದ ಜ್ಞಾನಕ್ಕೆ ಸ್ವಂತ ವ್ಯಕ್ತಿತ್ವವೆಂಬ ಮೆರಗು ಬರಬೇಕು. ಎಂದು ಲಕ್ಷಣಗಳ ಪಟ್ಟಿ ಮಾಡಿ ಕೊಡುತ್ತಾರೆ. ಈ ಎಲ್ಲಾ ಲಕ್ಷಣಗಳನ್ನು ಸಿಂಪಿಯವರ ಪ್ರಬಂಧಗಳಲ್ಲಿ ಕಾಣಬಹುದು.

ಅಧ್ಯಾಯ–ಐದು

ಸಮಾರೋಪ

ಸಮಾರೋಪ

ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯದಷ್ಟೇ ಸಾಹಿತ್ಯದ ಸೃಷ್ಟಿಕಾಯ ಜನಪ್ರಿಯ ಅಧ್ಯಾಯನಾಸಕ್ತರಿಗೆ ಸಾಹಿತ್ಯ ಕೃತಿಯಂತೆ ಸಾಹಿತಿಯೂ ಹತ್ತಿರವಾಗಬೇಕು. ಸಾಹಿತ್ಯದ ಜೊತೆ ಜೊತೆಗೆ ಕವಿಯ ಬದುಕು ಮಿಳಿತಗೊಳ್ಳಬೇಕು. ನುಡಿದಂತೆ ನಡೆದವರು, ಬರೆದಂತೆ ಬದುಕಿದವರು ನಮ್ಮ ಕನ್ನಡ ಕವಿಗಳು. ಆದ್ದರಿಂದ ಕನ್ನಡ ಸೃಜನ ಸಾಹಿತ್ಯದ ಸೃಷ್ಟಿಕಾರರು ಸಾಹಿತ್ಯ ಕ್ಷೇತ್ರದಲ್ಲಿ ಅಷ್ಟೇ ಮುಖ್ಯವಾಗಿಬಿಡುತ್ತಾರೆ. ಕವಿ. ಸಾಹಿತಿ ಲೇಖಕ ಮುಂತಾದವರ ಬದುಕಿನೊಂದಿಗೆ, ಅವರ ಸಾಹಿತ್ಯಾಧ್ಯಯನವು ನಡೆದರೆ ಸಮಗ್ರತೆಗೆ ಇಂಬು ಬರುತ್ತದೆ.

ಈ ನಿಟ್ಟಿನಲ್ಲಿ ಜನಪ್ರಿಯ ಲಲಿತ ಪ್ರಬಂಧಕಾರರಾದ ಪ್ರೊ. ವೀರೇಂದ್ರ ಸಿಂಪಿ ಅವರ ಬದುಕು ಹಾಗೂ ಅವರ ಸಾಹಿತ್ಯ, ಸಂಪಾದನೆ, ಅನುವಾದ, ಮುಂತಾದ ಸೃಜನ ಕಾರ್ಯಗಳನ್ನು ಅಧ್ಯಯನ ಮಾಡುವುದರೊಂದಿಗೆ ಅದರ ಹಿನ್ನಲೆಯಲ್ಲಿ ಅವರು ಹುಟ್ಟಿ ಬೆಳೆದ ಪರಿಸರ. ಅವರ ಮನೋಭಾವ, ಶೈಕ್ಷಣಿಕ ತೊಡಕುಗಳು ಹೀಗೆ ಹಲವಾರು ವೈಪರೀತ್ಯಗಳಿಂದ ಕೂಡಿದ ಬದುಕಿನೊಂದಿಗೆ ಸಾಹಿತ್ಯದ ಉಗಮವನ್ನು ಗುರುತಿಸಲಾಗಿದೆ.

ಪ್ರೊ. ವೀರೇಂದ್ರ ಸಿಂಪಿ ಅವರು "ಖೊಟ್ಟಿ ನಾಣ್ಯ" ಎಂಬ ಕಥೆಯನ್ನು ಬರೆಯುವುದರ ಮೂಲಕ ಸಾಹಿತ್ಯ ಲೊಕಕ್ಕೆ ಪಾದಾರ್ಪಣೆ ಮಾಡಿ ಮುಂದೆ ಲಲಿತ ಪ್ರಬಂಧ ಅಂಕಣ ಬರಹ, ಅನುವಾದ, ಸಂಪಾದನೆ, ವಿಚಾರ ಸಾಹಿತ್ಯ, ಕ್ಷೇತ್ರಕ್ಕೆ ಧುಮುಕಿದರು. ವಿಶಾಲವಾದ ಕನ್ನಡ ಸಾಹಿತ್ಯ ಸಾಗರದಲ್ಲಿ ತಲೆ ಎತ್ತಿ ನಿಂತ ದ್ವೀಪಗಳಲ್ಲಿ ವೀರೇಂದ್ರ ಸಿಂಪಿ ಅವರು ಒಬ್ಬರು. ಅವರ ಸಮಗ್ರ ಸಾಹಿತ್ಯವನ್ನು ಇಲ್ಲಿಯವರೆಗೆ ಒರಗೆ ಹಚ್ಚಲಾಗಿದೆ. ನಿರಾಡಂಬರತೆ ಇವರ ಬದುಕಿನ ಪ್ರಮುಖ ಅಂಶಗಳಲ್ಲೊಂದು

ಪ್ರೊ. ವೀರೇಂದ್ರ ಸಿಂಪಿ ಅವರು ಒಬ್ಬ ವಿಶಿಷ್ಟ ಬರಹಗಾರರಾಗಿ ಕನ್ನಡ ಸಾಹಿತ್ಯದಲ್ಲಿ ಕಂಡುಬರುತ್ತಾರೆ. ವಿಶಿಷ್ಟವಾದ ಪ್ರತಿಭೆಯಿಂದ ಕೃತಿ ರಚನೆಮಾಡಿ ತಮ್ಮದೇ ಆದ ಸ್ವಂತಿಕೆಯನ್ನು ಉಳಿಸಿಕೊಂಡು ಗಮನಸೆಳೆದವರು. ವೃತ್ತಿಯಲ್ಲಿ ಇಂಗ್ಲಿಷ ಪ್ರಾಧ್ಯಾಪಕರಾದರೆ ಪ್ರವೃತ್ತಿಯಲ್ಲಿ ಕನ್ನಡ ಸಾಹಿತಿಯಾಗಿ ಅಪೂರ್ವ ವ್ಯಕ್ತಿತ್ವದಿಂದ ಸಮಸ್ತ ಕನ್ನಡಿಗರ ಮನಸೂರೆಗೊಂಡವರು. ಅವರ ಸುಧೀರ್ಘವಾದ ಬರಹದ ಲೋಕ ಅದ್ಬುತವಾದದ್ದು ಬೆರಗುಗೊಳಿಸುವಂಥದ್ದು ಇಂತಹ ಅಪ್ರತಿಮ ವ್ಯಕ್ತಿಯಾದ ಪ್ರೊ. ವೀರೇಂದ್ರ ಸಿಂಪಿ ಅವರ ಜೀವನ ಹಾಗೂ ಸಾಹಿತ್ಯಿಕ ಸಾಧನೆಯ ಕುರಿತಾಗಿ ಬೆಳಕು ಚೆಲ್ಲುವ ದೃಷ್ಟಿಯಿಂದಲೇ ಈ ಸಂಶೋಧನೆ ಕೈಕೊಳ್ಳಲಾಯಿತು. ಅವರ ವೃತ್ತಿ ಪ್ರವೃತ್ತಿ ಮಾತ್ರವಲ್ಲದೆ ಅವರ ವ್ಯಕ್ತಿತ್ವದ ಕಿರುಪರಿಚಯ ಮಾಡಿಕೊಡಲಾಗಿದೆ. ಸಾಹಿತ್ಯ ಸೃಷ್ಟಿಸುವ ಕಲೆಯಲ್ಲಿ ನಿಷ್ಣಾತರಾದಂತಹ ವೀರೇಂದ್ರ ಸಿಂಪಿಯವರ ಬರಹವು ಅರ್ಥವತ್ತಾಗಿದೆ.

ಪ್ರೊ. ವೀರೇಂದ್ರ ಸಿಂಪಿ ಅವರು ಗದ್ಯ ಸಾಹಿತ್ಯವನ್ನು ಬರೆಯುವಲ್ಲಿ ಸಮರ್ಥರೆಂಬುದನ್ನು ಸಾಬೀತುಗೊಳಿಸಿದ್ದಾರೆ. ಇದರಲ್ಲಿ ವೈಚಾರಿಕತೆ, ಸಂಪಾದನ, ಅನುವಾದ, ಕೃತಿಗಳು ಸೇರಿವೆ. ಪ್ರಸ್ತುತ ಪ್ರಬಂಧದಲ್ಲಿ ಪ್ರಾತಿನಿಧಿಕವಾಗಿ ಸಂಕ್ಷಿಪ್ತವಾಗಿ ಇವರ ಸಾಹಿತ್ಯವನ್ನು ಅವಲೋಕನ ಕ್ರಮದಿಂದ ವಿಶಿಷ್ಟ

ತಾಳೆ ನೋಡುವ ರೀತಿಯೇ ಅನನ್ಯ ಈ ಗುಣವೇ ನಾಡಿನ ಹೆಸರಾಂತ ಪ್ರಬಂಧಕಾರರ ಸಾಲಿಗೆ ಇವರನ್ನು ಎಣಿಸುವಂತೆ ಮಾಡಿದ್ದು.

ಪ್ರೊ. ವೀರೇಂದ್ರ ಸಿಂಪಿ ಅವರು ಈ ವರೆಗೆ ಅತ್ಯಮೂಲ್ಯವಾದ ಒಟ್ಟು ಆರು ಲಲಿತ ಪ್ರಬಂಧಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಅವರ ಪ್ರಬಂಧಗಳ ಒಳ ತಿರುಳು ಜನರ ಜೀವಕ್ಕಾಗಿ ಬದುಕಿನ ಬವಣೆಗಳ ಮೂಲಕ ಜೀವಸತ್ವದ ಬೋಧಕ್ಕಾಗಿ ನಿರಂತರ ಚಿಂತೆಗೀಡು ಮಾಡುವುದೇ ಆಗಿದೆ. ಸಮಾಜದ ಪ್ರತಿಯೊಂದು ಜಡ್ಡಿಗೂ ತಾವೇ ರೋಗಿಯಾಗಿ ಔಷಧಗಳನ್ನು ತಮ್ಮ ಮೇಲೆಯೇ ಪ್ರಯೋಗಿಸಿ ನೋಡುವ ಪ್ರವೃತ್ತಿಯೇ ಇಂದಿಗೂ ನಾವು ಅವರನ್ನು ಹಿಂದಿರುಗಿ ನೋಡುವಂತೆ ಮಾಡಿದೆ.

ಇಲ್ಲಿ ವೀರೇಂದ್ರ ಸಿಂಪಿ ಅವರ ಬದುಕು ಹಾಗೂ ಬರಹ ಸಾಹಿತ್ಯವನ್ನು ಸೈದ್ಧ್ಯಾಂತಿಕ ಸಂಶೋಧನ ದೃಷ್ಟಿಯಿಂದ ಅವಲೋಕಿಸಿ ಸಮಗ್ರ ಚಿತ್ರಣವನ್ನು ಕೊಡಲು ಪ್ರಯತ್ನಿಸಿದ್ದೇನೆ. ಸಿಂಪಿ ಅವರ ಬಗ್ಗೆ ಇದೇ ಅಂತಿಮ ಅಧ್ಯಯನವೆಂದು ಹೇಳಿಕೊಳ್ಳುವ ಹಮ್ಮು ನನಗಿಲ್ಲ. ವೀರೇಂದ್ರ ಸಿಂಪಿ ಅವರನ್ನು ಅವರ ಸಾಹಿತ್ಯವನ್ನು ಕುರಿತು ಬೇರೊಂದು ದೃಷ್ಟಿಕೋನದಿಂದ ನೋಡಿ ಅಧ್ಯಯನಕ್ಕೆ ತೊಡಗಲು ಅವಕಾಶವಿದೆ. ಅಲ್ಲದೆ ಅವರು ಇನ್ನೂ ಸೃಜನಶೀಲರಾಗಿರುವುದರಿಂದ ಇನ್ನಷ್ಟು ಉತ್ತಮ ಕೃತಿಗಳನ್ನು ನಿರೀಕ್ಷಿಸಬಹುದಾಗಿದೆ. ಪ್ರಸ್ತುತ ಪ್ರಬಂಧ ವೀರೇಂದ್ರ ಸಿಂಪಿ ಅವರ ಬದುಕನ್ನು ಸಮಗ್ರ ಸಾಹಿತ್ಯವನ್ನು ಹೇಳುವ ಮೊಟ್ಟ ಮೊದಲ ಕೃತಿ ಎಂಬುದು ಮಾತ್ರ ನಿಜ. ಆದ್ದರಿಂದ ಆಗಿದ್ದು ಅಲ್ಪ ಆಗಬೇಕಾದದ್ದು ಅಪಾರ. ಎಂದು ಭಾವಿಸಿರುವ ನಾನು ನನ್ನ ಅಧ್ಯಯನದ ಅನುಭವದ ಮಿತಿಯಲ್ಲಿ ನನ್ನ ಸಂಶೋಧನೆಯು ವಿಚಾರಗಳನ್ನಿಲ್ಲಿ ಸಾದರಪಡಿಸಿದ್ದೇನೆ.

ಅನುಬಂಧ

ಪ್ರೊ. ವೀರೇಂದ್ರ ಸಿಂಪಿ (ವೈಯಕ್ತಿಕ ಪರಿಚಯ)

ಜನನ :
- ೧೪ ನೇಯ ಅಕ್ಟೋಬರ ೧೯೩೮
- ಚಡಚಣ, ತಾಲುಕಾ ಇಂಡಿ, ಜಿಲ್ಲಾ ವಿಜಾಪೂರ

ವಿದ್ಯಾಭ್ಯಾಸ :
- ಪ್ರಾಥಾಮಿಕ ಮುಲ್ಕಿ ೧೯೫೨ ಸರಕಾರಿ ಪ್ರಾ.ಶಾಲೆ ಚಡಚಣ.
- ಮಾಧ್ಯಮಿಕ ಎಸ್.ಎಸ್.ಎಲ್.ಸಿ. ೧೯೫೬
- ಶ್ರೀ ಸಂಗಮೇಶ್ವರ ಮಾಧ್ಯಮಿಕ ಶಾಲೆ ಚಡಚಣ.
- ಬಿ.ಎ. ೧೯೬೦ ರಲ್ಲಿ ತೇರ್ಗಡೆ
- ವಿಜಯ ಕಾಲೇಜು, ವಿಜಾಪೂರ
- ಎಂ.ಎ. (ಇಂಗ್ಲೀಷ) ೧೯೬೨ ರಲ್ಲಿ ತೇರ್ಗಡೆ
- ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

ಬೋಧನೆ :
- ೧೯೬೨-೬೩, ಇಂಗ್ಲೀಷ ಅಧ್ಯಾಪಕ ಸಾಂಗಲಿ ಕಾಲೇಜು, ಸಾಂಗಲಿ
- ೧೯೬೩-೧೯೯೭, ಇಂಗ್ಲೀಷ ಅಧ್ಯಾಪಕ ಬಿ.ವ್ಹಿ. ಭೂಮರೆಡ್ಡಿ ಕಾಲೇಜ, ಬೀದರ
- ೧೯೯೯-೨೦೦೪ ಪ್ರಾಚಾರ್ಯರು, ಶ್ರೀ ಚಂದ್ರಪ್ಪಾ ಗೌರಶೆಟ್ಟಿ ಕಾಲೇಜ, ಬೀದರ.

ಮೊದಲ ಲೇಖನಗಳು

೧. ೧೯೫೫ ರಲ್ಲಿ ಚಡಚಣ ಪ್ರೌಢ ಶಾಲೆಯಲ್ಲಿ ಕಲಿಯುತ್ತಿದ್ದಾಗ ಖೊಟ್ಟಿ ನಾಣ್ಯ ಎಂಬ ಕಥೆಯನ್ನು "ಸಂಗಮ" ಕೈಬರಹ ಪತ್ರಿಕೆಯಲ್ಲಿ ಪ್ರಕಟಿಸಿದ್ದು.

೨. ೧೯೫೬ ರಲ್ಲಿ "ಏಕಲವ್ಯ" ವೆಂಬ ಹಿಂದಿ ಏಕಾಂಕ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದು.

೩. ೧೯೫೯ ರಲ್ಲಿ "ಇಂದಿನ ವಿದ್ಯಾರ್ಥಿಗಳಲ್ಲಿ ಅಸಂತೋಷವೇಕೆ" ಎಂಬ ವಿಷಯದ ಮೇಲೆ ನಿಬಂಧ ಬರೆದು ಕರ್ನಾಟಕ ವಿಶ್ವವಿದ್ಯಾಲಯ ಮಟ್ಟದ ಅಂತರ ಕಾಲೇಜು ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದದ್ದು, ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟವಾದದ್ದು.

೪. ೧೯೫೯ ರಲ್ಲಿ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಜಯಂತಿಯಲ್ಲಿ ಕಥೆಗಳ ಕುರಿತು ರಸ ವಿಮರ್ಶೆ ಬರೆದದ್ದು.

೫. ೧೯೬೧ ರಲ್ಲಿ ಶ್ರೀನಿವಾಸರ ಸಣ್ಣ ಕಥೆಗಳ ಬಗ್ಗೆ ಕರ್ನಾಟಕ ವಿಶ್ವವಿದ್ಯಾಲಯದ ಹಾಸ್ಟೆಲ್ ಮ್ಯಾಗಝೀನನಲ್ಲಿ ಲೇಖನ ಪ್ರಕಟಿಸಿದ್ದು.

ಕ್ರ. ಸಂ.	ಕೃತಿಗಳು	
೧.	ಯೋಗಾರಂಭ	೧೯೬೬ ರಲ್ಲಿ ಶ್ರೀ ಅರವಿಂದರು ಬರೆದ Element of Yoga ದ ಕನ್ನಡಾನುವಾದ
೨.	ಕಾಗದದ ಚೂರು	೧೯೬೭ ರಲ್ಲಿ (ಲಲಿತ ಪ್ರಬಂಧಗಳ ಸಂಕಲನ) ಪ್ರೊ. ವಿ.ಕೃ ಗೋಕಾಕರ ಮುನ್ನುಡಿಯೊಂದಿಗೆ.
೩.	ಕನ್ನಡದಲ್ಲಿ ಲಲಿತ ಪ್ರಬಂಧಗಳು	೧೯೭೨ ರಲ್ಲಿ (ಕನ್ನಡದಲ್ಲಿ ಲಲಿತ ಪ್ರಬಂಧ ಸಾಹಿತ್ಯ ಪ್ರಕಾರದ ಸಮೀಕ್ಷೆ) ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗದ ಪ್ರಕಟಣೆ.
೪.	ಭಾವ ಮೈದುನ	೧೯೮೧ ರಲ್ಲಿ (ಲಲಿತ ಪ್ರಬಂಧಗಳ ಸಂಕಲನ)
೫.	ಸ್ವಚ್ಛಂದ ಮನದ ಸುಳಿದಾಟ	೧೯೮೪ ರಲ್ಲಿ (ಲಲಿತ ಪ್ರಬಂಧಗಳ ಸಂಕಲನ)
೬.	ಇಂಡಿ ತಾಲ್ಲೂಕು ದರ್ಶನ	೧೯೮೪ (ಪರಿಚಯ) ಇಂಡಿಯಾ ಬುಕ್ ಹೌಸ್ ಬೆಂಗಳೂರಿನ ಪ್ರಕಟಣೆ.
೭.	ಗಾಯ್ ಡಿ ಮೊಪಾಸಾನ ಕಥೆಗಳು	೧೯೮೪ ರಲ್ಲಿ (ಸಮೀಕ್ಷೆ) ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣಾ ವಿಭಾಗದ ಪ್ರಕಟಣೆ.

ಪ್ರಬಂಧಗಳ ಸಂಕಲನ (ಪ್ರಬಂಧಗಳು)

೮.	ಪ್ರಬಂಧಗಳು	೧೯೮೫ (ಸಂಪಾದಿತ) ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ.
೯.	ಪರಿಸರ ಸ್ಪಂದನ	೧೯೮೮ ರಲ್ಲಿ (ನಾಲ್ಕನೇ ಲಲಿತ ಪ್ರಬಂಧಗಳ ಸಂಕಲನ)
೧೦.	ಸಿಂಪಿ ಲಿಂಗಣ್ಣನವರ ಸಾಹಿತ್ಯ	೧೯೯೨ ರಲ್ಲಿ (ಒಂದು ಸಮೀಕ್ಷೆ)
೧೧.	ಮಾಸ್ತಿ ವೆಂಕಟೇಶ ಅಯ್ಯಂಗಾರ	೧೯೯೬ ರಲ್ಲಿ (ಜೀವನ ಹಾಗೂ ಸಾಧನೆ) ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣಾ ವಿಭಾಗದ ಪ್ರಕಟಣೆ.
೧೨.	ಸುಖ ಸಾಧನ	೧೯೯೭ ರಲ್ಲಿ ಬರ್ಟ್ರೆಂಡ್ ರಸೆಲ್‌ರ ವಿಚಾರ ಧಾರೆ ಸಮಾಜ ಪುಸ್ತಕಾಲಯ ಧಾರವಾಡ ಪ್ರಕಟಣೆ
೧೩.	ಚನ್ನಬಸವಣ್ಣ	೧೯೯೭ ರಲ್ಲಿ ಜೀವನ ಚರಿತ್ರೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪ್ರಕಟಣೆ.
೧೪.	ಆರ್.ವ್ಹಿ.ಬೀಡಪ್	೧೯೯೯ ರಲ್ಲಿ (ಜೀವನ ಚರಿತ್ರೆ)
೧೫.	ಚನ್ನಬಸವಣ್ಣನವರ ವಚನಗಳು	೧೯೯೮ (ಸಂಪಾದನೆ)
೧೬.	ಬೀದರ ಜಿಲ್ಲಾ ದರ್ಶನ	೧೯೯೮ ರಲ್ಲಿ (ಬೀದರ ಜಿಲ್ಲೆಯ ಸಾಂಸ್ಕೃತಿಕ ಮತ್ತು ಸಾಮಾಜಿಕ ವಿಷಯಗಳ ಕುರಿತು ಲೇಖನಗಳ ಸಂಗ್ರಹ, ಸಂಪಾದಿತ)
೧೭.	ಬೀದರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು	೧೯೯೮ ರಲ್ಲಿ ಬೀದರ ಜಿಲ್ಲೆಯ ೧೮೦ ಸ್ವಾತಂತ್ರ್ಯ ಯೋಧರ ಕುರಿತು ಲೇಖನಗಳ ಸಂಗ್ರಹ (ಸಂಪಾದಿತ)

೧೮.	ಬಣ್ಣಗಾರಿಕೆ	೧೯೯೮ ರಲ್ಲಿ (ಒಂದು ಉದ್ಯಮ)
೧೯.	ವಿಶ್ವ ಕಲ್ಯಾಣ ವಾರ ಪತ್ರಿಕೆಯಲ್ಲಿ ೮೦ ಅಂಕಣ ಬರಹಗಳು	
೨೦.	ಹತ್ತು ಪಾಶ್ಚಾತ್ಯ ಕಾದಂಬರಿಕಾರರು	ಜೀವನ ಹಾಗೂ ಸಾಧನೆಗಳ ಕುರಿತು ಸಮೀಕ್ಷಾ ರೂಪದ ಪುಸ್ತಕ (ಅಚ್ಚಿನಲ್ಲಿ)
೨೧.	ಆಯ್ದಕ್ಕಿ ಮಾರಯ್ಯ	ಜೀವನ ಚರಿತ್ರೆ
೨೨.	ಜೀವನವೆಂದರೇನು	ದಿಕ್ಸೂಚಿ ಕನ್ನಡ ಮಾಸ ಪತ್ರಿಕೆಯಲ್ಲಿ ಪ್ರಕಟವಾದ ೬೦ ಸುಮಾರು ೮೦ ವೈಚಾರಿಕ ಲೇಖನಗಳ ಅಂಕಣ ಬರಹ
೨೩.	ಲಲಿತ ಪ್ರಬಂಧಗಳು	೨೦೦೦ ರಲ್ಲಿ (೩ನೇ ಲಲಿತ ಪ್ರಬಂಧಗಳ ಸಂಕಲನ)
೨೪.	ಮಾದಾರ ಚೆನ್ನಯ್ಯ	ಜೀವನ ಚರಿತ್ರೆ

ದಿಕ್ಸೂಚಿಯಲ್ಲಿ ಪ್ರಕಟವಾದ ಅಂಕಣ ಬರಹ ಲೇಖನಗಳು

೧. ಸಾಮಾಜಿಕ ನ್ಯಾಯ.
೨. ಕನ್ನಡ ಕಾವ್ಯ ಪರಂಪರೆ.
೩. ಆಧುನಿಕ ಭಾರತ ಎತ್ತ ಸಾಗಿದೆ ?
೪. ಹೆಣ್ಣು ಮಗುವಿನ ಸಮಸ್ಯೆ.
೫. ನಮ್ಮ ದೇಶದ ಸಮಸ್ಯೆ.
೬. ಜನಸಂಖ್ಯಾ ಹೆಚ್ಚಳ.
೭. ವಿಜ್ಞಾನ ತಂತ್ರಜ್ಞಾನ.
೮. ಭಾರತದಲ್ಲಿ ಕಂಡುಬರುವ ಅಸಮಾನತೆ.
೯. ಮಕ್ಕಳ ಶಿಕ್ಷಣ
೧೦. ಗಾಂಧಿಜಿ ಮಹಾತ್ಮರಾದದ್ದು ಹೇಗೆ?
೧೧. ಅಂಬೇಡ್ಕರ
೧೨. ಆಸ್ತಿಯ ಒಡೆತನ
೧೩. ಸ್ವಾತಂತ್ರ್ಯೋತ್ತರ ಜೀವನ ಮೌಲ್ಯಗಳು.
೧೪. ಭಾರತೀಯರು–ಒಂದು ವಿಶ್ಲೇಷಣೆ
೧೫. ವಚನಾಭಿರುಚಿ
೧೬. ಪರಿಶ್ರಮ
೧೭. ಶರಣರು ಹಾಗೂ ಪರ್ಯಾಯ ಸಂಸ್ಕೃತಿ.
೧೮. ಪರಿಪೂರ್ಣತೆ.
೧೯. ಸ್ತ್ರೀ ಶಿಕ್ಷಣ
೨೦. ತಂತ್ರಜ್ಞಾನ ಹಾಗೂ ಮಾನವ ಜನಾಂಗ
೨೧. ಬಾಲ ಕಾರ್ಮಿಕರ ಸಮಸ್ಯೆ
೨೨. ವೃದ್ಧ ಮತ್ತು ಸಮಸ್ಯೆ
೨೩. ಜೀವನದಲ್ಲಿ ಹಾಸ್ಯ
೨೪. ವೈಚಾರಿಕತೆ
೨೫. ಸಮಾನತೆ
೨೬. ಲೋಹಿಯಾರ ವಿಚಾರಧಾರೆ
೨೭. ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವ
೨೮. ಯುವಕರು ಹಾಗೂ ಜೀವನದ ಮೌಲ್ಯಗಳು
೨೯. ಪರಿಶುದ್ಧ ಜೀವನ
೩೦. ಮೂಢ ನಂಬಿಕೆ
೩೧. ಭಾರತೀಯ ಸಾಮಾಜಿಕ ದೌರ್ಬಲ್ಯಗಳು
೩೨. ಬದುಕಿನ ಮೌಲ್ಯಗಳು
೩೩. ಪುಸ್ತಕಗಳು
೩೪. ಶಿಸ್ತು
೩೫. ಉಪಭೋಗವಾದ
೩೬. ಶಿಕ್ಷಣ ಉದೇಶ
೩೭. ಕೋಮು ಸೌಹಾರ್ದತೆ
೩೮. ರಾಜಕೀಯದಲ್ಲಿ ವಿರೋಧ ಪಕ್ಷಗಳ ಪಾತ್ರ

೩೯. ಸೇವೆ
೪೦. ಕುಸಿದು ಬಿದ್ದ ಕುಟುಂಬ ವ್ಯವಸ್ಥೆ
೪೧. ಜಾತೀಯತೆ
೪೨. ಸ್ವಾತಂತ್ರ್ಯ
೪೩. ಬಂಡಾಯ ಪ್ರವೃತ್ತಿ
೪೪. ಸರ್ವೋದಯ
೪೫. ವಿಜ್ಞಾನವೆಂದರೇನು.
೪೬. ನಾಗರೀಕತೆ
೪೭. ಕುವೆಂಪು ಅವರ ಸಪ್ತಸೂತ್ರಗಳು
೪೮. ನಿತ್ಯ ಜೀವನದಲ್ಲಿ ಶಿಸ್ತು
೪೯. ಪರಿಪೂರ್ಣತೆಯ ದಾರಿಯಲ್ಲಿ
೫೦. ಶ್ರೀ ಅರವಿಂದರ ದೃಷ್ಟಿಯಲ್ಲಿ ಶಿಕ್ಷಣ
೫೧. ಜಾಗತಿಕ ದೃಷ್ಟಿಕೋನ
೫೨. ವಿರಾಮ ಹಾಗೂ ಕಾರ್ಯ
೫೩. ಭಾರತೀಯರು
೫೪. ಭ್ರಷ್ಟಾಚಾರ ಜೀವನ ಮಾರ್ಗವೇ ಆದಾಗ
೫೫. ಗಾಂಧೀಜಿ ಹಾಗೂ ಕೈಗಾರಿಕೀಕರಣ
೫೬. ರಾಜಕೀಯದಲ್ಲಿ ಅಪರಾಧೀಕರಣ
೫೭. ವಿವೇಕಾನಂದರು
೫೮. ಸಹಸ್ರ ಮಾನದ ಶ್ರೇಷ್ಠ ವ್ಯಕ್ತಿ ಬಸವಣ್ಣ
೫೯. ಶಿಕ್ಷಕರಲ್ಲಿರಬೇಕಾದ ಗುಣಗಳು
೬೦. ಮಹಿಳೆಯರು ಹಾಗೂ ಸಮಾಜ ಸುಧಾರಣೆ
೬೧. ಅಸ್ಪೃಶ್ಯತೆಯ ಉಗಮ
೬೨. ಯುವಕರು
೬೩. ನಗರೀಕರಣದ ಸಮಸ್ಯೆ
೬೪. ಮತಾಂಧತೆ ಇಂದಿನ ಸಮಸ್ಯೆ
೬೫. ಪ್ರಜಾಪ್ರಭುತ್ವದ ವಿರುದ್ಧ ಮನೋಭಾವ
೬೬. ಯಶಸ್ಸಿನ ಏಳು ಸೋಪಾನಗಳು
೬೭. ಜೀವನವೆಂದರೇನು
೬೮. ಮಹಿಳಾ ಸಶಕ್ತೀಕರಣ
೬೯. ಗಾಂಧೀಜಿ ಹಾಗೂ ಇಂದಿನ ವೈಭವೋಪೇತ ಜೀವನ
೭೦. ಶಿಕ್ಷಣ ಕೆಲ ವಿಚಾರಗಳು
೭೧. ವಿಜ್ಞಾನ ಹಾಗೂ ತಂತ್ರಜ್ಞಾನಗಳಿಗೆ ಮಾನವ ಮುಖ
೭೨. ಜನಸಂಖ್ಯಾ ಹೆಚ್ಚಳ ಕೆಲ ಸ್ವಾರಸ್ಯಕರ ಅಂಶಗಳು
೭೩. ಸೇವೆ ಹಾಗೂ ಜೀವನ ಸಾರ್ಥಕತೆ
೭೪. ಶಿಕ್ಷಣದ ಉದ್ದೇಶ

ಬಹುಮಾನ ಪ್ರಶಸ್ತಿಗಳು

೧. ಭಾವ ಮೈದುನ	ಲಲಿತ ಪ್ರಬಂಧಗಳ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೮೧ ರಲ್ಲಿ ಬಹುಮಾನ
೨. ಸ್ವಚ್ಛಂದ ಮನದ ಸುಳಿದಾಟ	೧೯೮೪ ರಿಂದ ೧೯೮೬ ರವರೆಗೆ, ೧೯೮೭ ರಿಂದ ೧೯೯೦ ರವರೆಗೆ ಕರ್ನಾಟಕ ವಿಶ್ವವಿದ್ಯಾಲಯ, ಶಿವಾಜಿ ವಿಶ್ವವಿದ್ಯಾಲಯ, ಶಿವಾಜಿ ಬಿ.ಎ.–೧ ಹಾಗೂ ಬಿ.ಎಸ್.ಸ್ಸಿ–೧ ವಿದ್ಯಾರ್ಥಿಗಳಿಗೆ ಕಡ್ಡಾಯದ ಪಠ್ಯ ಪುಸ್ತಕ.
೩. ಪರಿಸರ ಸ್ಪಂದನ	೧೯೮೮ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪ್ರೋತ್ಸಾಹ ಬಹುಮಾನ.
೪. ಕಾಯಕ ಸಮ್ಮಾನ ಪ್ರಶಸ್ತಿ	೨೦೦೦ ಉದಯೋನ್ಮುಖ ಯುವ ಬರಹಗಾರರ ಬಳಗ ಗುಲಬರ್ಗಾದವರಿಂದ

೫. ಪ್ರಭುರಾವ ಕಂಬಳಿವಾಲೆ ಪ್ರಶಸ್ತಿ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘ ಬೀದರ

೬. ಗೌರವ ಪ್ರಶಸ್ತಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ೧೯೯೬ ರ ಗೌರವ ಪ್ರಶಸ್ತಿ.

೭. ೧೯೯೦ ರಲ್ಲಿ ಬೀದರ ಜಿಲ್ಲಾ ೩ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ.

೮. ೨೦೦೧ ರಲ್ಲಿ ವಿಜಾಪೂರ ಜಿಲ್ಲಾ ೭ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ.

೯. ೧೯೯೨ ರಿಂದ ೧೯೯೫ ರವರೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ

೧೦. ೧೯೯೮ ರಿಂದ ೨೦೦೧ ರವರೆಗೆ ೨ನೇ ಸಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ

೧೧. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಗೌರವಾಧ್ಯಕ್ಷ ಬೀದರ ಜಿಲ್ಲಾ.

೧೨. ಅಖಿಲ ಕರ್ನಾಟಕ ಶಕ್ತಿ ಕೇಂದ್ರದ ಬೀದರ ಜಿಲ್ಲಾ ಗೌರವಾಧ್ಯಕ್ಷ.

೧೩. ಶರಣ ಸಾಹಿತ್ಯ ಸಮ್ಮೇಳನದಲ್ಲಿ ಚಿತ್ರದುರ್ಗದ ಶ್ರೀ ಮುರಘರಾಜೇಂದ್ರ ಸ್ವಾಮಿಗಳಿಂದ ಗೌರವ ಸನ್ಮಾನ

ಕುಟುಂಬ

ವಿವಾಹ	:	೧೯೬೬ ಚಿ.ಸೌ. ಪಾರ್ವತಿಯೊಂದಿಗೆ
ತಂದೆ	:	ಸಿಂಪಿ ಲಿಂಗಣ್ಣ
ತಾಯಿ	:	ಸೋಲಬವ್ವ
ಅಕ್ಕಂದಿರು	:	ಭುವನೇಶ್ವರಿ, ಕತೆಗಾರ್ತಿ ಬಾಗಲಕೋಟೆ ಸೊಲ್ಲಾಪುರ
	:	ಭವತಾರಿಣಿ ಕೇಶೆಟ್ಟಿ ಚಡಚಣ
ತಂಗಿಯರು	:	ಮಹಾದೇವಿ ಲೋಣಿ ವಿಜಾಪೂರ
	:	ಸರೋಜನಿ ಭೈರಾಮಡಗಿ ಗುಲಬರ್ಗಾ
ತಮ್ಮಂದಿರು	:	ಆಯ್. ಎನ್. ಸಿಂಪಿ ಲೇಖಕರು ಹಾಗೂ ಪ್ರಾಚಾರ್ಯರು ಎಂ.ಜಿ.ವಿ.ಜಿ. ಕಾಲೇಜ ಮುದ್ದೆಬಿಹಾಳ.
	:	ರಾಜೀವ ಸಿಂಪಿ ಪ್ರಾಧ್ಯಾಪಕರು ಸಂಗಮೇಶ್ವರ ಕಾಲೇಜ ಚಡಚಣ
	:	ಅರುಣ ಸಿಂಪಿ ಇಂಜಿನಿಯರ್ ಬಿಜಾಪೂರ
	:	ಪ್ರಿಯದರ್ಶಿ ಸಿಂಪಿ, ಲೆಕ್ಚರರ್ ಪಾಲಿಟೆಕ್ನಿಕ್ ಬಾಗಲಕೋಟೆ
ಮಕ್ಕಳು	:	ರೇಖಾ ಕೇಶೆಟ್ಟಿ ಬಿ.ಎ. ಬಿ.ಇಡ್. ಚಡಚಣ
	:	ಅಳಿಯ ಮಲ್ಲಪ್ಪಾ ಕೇಶೆಟ್ಟಿ ಬಿ.ಕಾಂ. ಬಿ.ಪಿ.ಇಡ್. ಚಡಚಣ
ಮೊಮ್ಮಕ್ಕಳು	:	ತೇಜಸ್ವಿನಿ ಹಾಗೂ ದೀಪಕ್
ಮಗ	:	ಡಾ. ಪ್ರವೀಣ ಸಿಂಪಿ ಎಂ.ಡಿ. ಬೀದರ.
ವಿಳಾಸ	:	ಮಾತೃ ಕೃಪಾ, ಮನೆ ನಂ:೯-೧೨-೬೮೯, ವಿದ್ಯಾನಗರ ಕಾಲೋನಿ, ಬೀದರ-೫೮೫೪೦೧.
ದೂರವಾಣಿ	:	೦೮೪೮೨-೨೨೪೬೭೩



ಧರ್ಮಪತ್ನಿಯೊಂದಿಗೆ ಪ್ರೊ. ವೀರೇಂದ್ರ ಸಿಂಪಿ



ಸಹಪರಿವಾರದೊಂದಿಗೆ ಪ್ರೊ. ವೀರೇಂದ್ರ ಸಿಂಪಿ

ಗ್ರಂಥ ಸೂಚಿ

ಕ್ರ. ಸಂ.	ಲೇಖಕರು	ಪುಸ್ತಕದ ಹೆಸರು	ಪ್ರಕಾಶನ ಸಂಸ್ಥೆ	ವರ್ಷ
೧.	ಕಡೆಂಗೋಡ್ಲುಶಂಕರಭಟ್	ವಾಙ್ಮಯ ತಪಸು	ಕ.ಸ.ಪ್ರ.ಮ. ಬೆಂಗಳೂರು	೧೯೬೭
೨.	The Conise Columbia encylopedia		Columbia University Newyark	೧೯೮೨
೩.	Websters new Twentieth century Dictionary 2nd edition (೧೯೦೪)			೧೯೭೮
೪.	ಡಾ॥ ಗುರುಲಿಂಗ ಕಾಪಾಸೆ	ಸಿಂಪಿ ಲಿಂಗಣ್ಣ ಅಪ್ಪಟ್ಟ ಜಾನಪದ ಪ್ರತಿಭೆ	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೇಂಗಳೂರು	೨೦೦೪
೫.	ಸಿ.ಕೆ. ವೆಂಕಟರಾಮಯ್ಯ	ಅರವಿಂದರ ವಿಚಾರಧಾರೆ	ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು	೧೯೭೨
೬.	ಶ್ರೀಮತಿ ಶಕುಂತಲಾ ಶೆಟ್ಟಿ	ಆಯ್ದಕ್ಕಿ ಲಕ್ಕಮ್ಮ	ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ	೧೯೯೬
೭.	ಡಾ॥ ಎಂ. ಎಂ. ಕಲಬುರ್ಗಿ	ಚೆನ್ನಬಸವಣ್ಣನವರ ಷಟ್‌ಸ್ಥಲವಚನ ಮಹಾಸಂಪುಟ	ವೀರಶೈವ ಅಧ್ಯಯನ ಸಂಸ್ಥೆ ಗದಗ	೧೯೯೦
೮.	ಪ್ರೊ. ವೀರೇಂದ್ರ ಸಿಂಪಿ	ಕನ್ನಡದಲ್ಲಿ ಲಲಿತ ಪ್ರಬಂಧಗಳು	ಕರ್ನಾಟಕ ವಿಶ್ವವಿದ್ಯಾಲಯ ವ್ಯಾಸಂಗ ವಿಸ್ತರಣಾ ವಿಭಾಗದ ಪ್ರಕಟಣೆ	೧೯೭೨
೯	ರಂ. ಶ್ರೀ. ಮುಗಳಿ	ಅರವಿಂದ ಮಕರಂದ	ಉಷಾ ಸಾಹಿತ್ಯ ಮಾಲೆ ಮೈಸೂರು	೧೯೭೫